ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ



ರಾಷ್ಟ್ರಸೇವೆಯಲ್ಲಿ 60 ವರ್ಷ
1965-2025
ಸ್ವಸ್ಥ-ಸುಸ್ಥಿರ ಸಮಾಜನಿರ್ಮಾಣ

ಭಾರತೀಯ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿರುವ, ಸ್ವಸ್ಥ - ಸುಸ್ಥಿರ ಸಮಾಜವನ್ನು ರೂಪಿಸುವುದಕ್ಕಾಗಿ 1965ರಲ್ಲಿ ಸ್ಥಾಪನೆಯಾಗಿರುವ ಸಮಾಜಸೇವಾ ಸಂಸ್ಥೆ ರಾಷ್ಟ್ರೋತ್ಥಾನ ಪರಿಷತ್. ಅದೀಗ 60 ಸಂವತ್ಸರಗಳನ್ನು ಪೂರೈಸುತ್ತಿದೆ.

ರಾಷ್ಟ್ರೋತ್ಥಾನ @60

ಸೇವಾ ಸಂಭ್ರಮದ ಸಾರ್ಥಕತೆ



ರಾಷ್ಟ್ರೋತ್ಥಾನ ಪರಿಷತ್

ರಾಷ್ಟ್ರೋತ್ಥಾನ ಪರಿವಾರ ಸಂಗಮ 2026

ಶತಮಾನಗಳ ವಸಾಹತುಶಾಹಿ ಆಳ್ವಿಕೆಯ ವಿರುದ್ಧ ನಡೆದ ಸುದೀರ್ಘ ಹೋರಾಟದ ಪರಿಣಾಮವಾಗಿ ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು; ತನ್ನ ಮಹೋನ್ನತ ಚರಿತ್ರೆ, ಭವ್ಯ ಪರಂಪರೆ ಹಾಗೂ ಅನನ್ಯ ಸಾಂಸ್ಕೃತಿಕ ಸ್ವರೂಪ – ಇವುಗಳಲ್ಲಿ ಬೇರೂರಿದ ರಾಷ್ಟ್ರವೊಂದನ್ನು ಪುನರ್ನಿರ್ಮಿಸುವ ಅವಕಾಶ ಭಾರತೀಯರಿಗೆ ಒದಗಿಬಂತು. ಆದರೆ, ವರ್ಷಗಳು ಉರುಳುತ್ತಿದ್ದಂತೆ ಆಡಳಿತ–ಆರ್ಥಿಕತೆ–ಶಿಕ್ಷಣ–ಸರ್ಕಾರೀ ಸಾಮಾಜಿಕ ಸಂಸ್ಥೆಗಳು–ಸಾಮಾಜಿಕ ವ್ಯವಸ್ಥೆಗಳು – ಈ ಎಲ್ಲ ಕ್ಷೇತ್ರಗಳಲ್ಲಿ ವಿದೇಶೀ ಮಾದರಿಗಳನ್ನು ಅನುಕರಿಸುವ ಪ್ರವೃತ್ತಿಯ ಕರಿನೆರಳು ಭಾರತದ ಆಶೋತ್ತರಗಳನ್ನು ಮತ್ತೆ ಮತ್ತೆ ಮರೆಮಾಚತೊಡಗಿತು. ಅಂತಹದ್ದೊಂದು ಸಂದಿಗ್ಧತೆ ದೇಶದಲ್ಲಿ ಮನೆಮಾಡತೊಡಗಿದ ಸಂದರ್ಭದಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಉದಯವಾಯಿತು.

ರಾಷ್ಟ್ರಕ್ಕಾಗಿ ರಾಷ್ಟ್ರೋತ್ಥಾನ ಪರಿಷತ್ತಿನ ಸ್ಥಾಪನೆ

ಸದೃಢ ವ್ಯಕ್ತಿತ್ವ ನಿರ್ಮಾಣದ ಮೂಲಕ ಸಮಾಜಪರಿವರ್ತನೆಯನ್ನು ಸಾಧಿಸುವುದಕ್ಕೆ ಒಂದು ಸಾಂಸ್ಥಿಕ ವ್ಯವಸ್ಥೆ ಬೇಕು. ಈ ನಿಟ್ಟಿನಲ್ಲಿ ದೇಶಭಕ್ತಿ, ಪ್ರಾಮಾಣಿಕತೆ, ನಿಷ್ಠೆ, ಪ್ರೀತಿಗಳಂತಹ ಸನಾತನ ಮೌಲ್ಯಗಳನ್ನು ಅಭಿವ್ಯಕ್ತಿಸುವ ಸಂಸ್ಥೆಯೊಂದರ ಸ್ಥಾಪನೆ ಆವಶ್ಯಕವೆನಿಸಿ, ಸಮಾಜಕಾರ್ಯಕ್ಕಾಗಿಯೇ ತಮ್ಮ ಜೀವನವನ್ನು ಸಮರ್ಪಿಸಿದ್ದ ಯಾದವರಾವ್ ಜೋಶಿ, ಹೊ.ವೆ. ಶೇಷಾದ್ರಿ, ನಂ. ಮಧ್ವರಾವ್, ಎಂ. ಗೋವಿಂದ ರಾವ್, ಅರಕಲಿ ನಾರಾಯಣ, ಮೈ.ಚ. ಜಯದೇವ ಮೊದಲಾದ ಪ್ರಾಜ್ಞರ ಯೋಚನೆ–ಯೋಜನೆಗಳ ಫಲವಾಗಿ ರಾಷ್ಟ್ರೋತ್ಥಾನ ಪರಿಷತ್ತಿನ ಯಾತ್ರೆ ಪ್ರಾರಂಭವಾಯಿತು. ರಾಷ್ಟ್ರದೇವೋ ಭವ ಪರಿಷತ್‌ನ ಧ್ಯೇಯವಾಕ್ಯವಾಗಿದೆ. ಕಾರ್ಯಸಾಧನೆಯ ದೃಷ್ಟಿಯಿಂದ ರಾಷ್ಟ್ರೋತ್ಥಾನ ಪರಿಷತ್ ತನ್ನೆಲ್ಲ ಚಟುವಟಿಕೆಗಳನ್ನು ಸಾಹಿತ್ಯ, ಶಿಕ್ಷಣ, ಆರೋಗ್ಯ ಹಾಗೂ ಸಮಾಜ ಸಬಲೀಕರಣ ಎನ್ನುವ ನಾಲ್ಕು ವಿಭಾಗಗಳಲ್ಲಿ ವಿಂಗಡಿಸಿ, ಅನುಷ್ಠಾನಗೊಳಿಸುತ್ತದೆ.

ಪರಿಷತ್ ಸೇವೆಯ ಮಹತ್ವದ ಮೈಲಿಗಲ್ಲುಗಳು

- **18**ಕ್ಕೂ ಅಧಿಕ ಪ್ರಕಲ್ಪಗಳು (ಯೋಜನೆಗಳು)
- **50**ಕ್ಕೂ ಹೆಚ್ಚಿನ ಚಟುವಟಿಕೆಗಳು
- **1,100**ಕ್ಕೂ ಹೆಚ್ಚು ಸಾಹಿತ್ಯ ಪ್ರಕಟಣೆಗಳು ಹಾಗೂ ಉತ್ಥಾನ ಮಾಸಪತ್ರಿಕೆ
- **9** ನಗರ ಮತ್ತು ಗ್ರಾಮೀಣ ಪ್ರದೇಶಗಳ ಹಿಂದುಳಿದ ಮಕ್ಕಳಿಗಾಗಿ ರಾಜ್ಯ ಪಠ್ಯಕ್ರಮದ ರಾಷ್ಟ್ರೋತ್ಥಾನ ವಿದ್ಯಾಲಯಗಳು
- **20** ಪಂಚಮುಖೀ ಶಿಕ್ಷಣದ ಮೂಲಕ ಮಕ್ಕಳ ಸರ್ವಾಂಗೀಣ ವಿಕಾಸಕ್ಕೆ ಶ್ರಮಿಸುತ್ತಿರುವ ಸಿಬಿಎಸ್‌ಇ ಪಠ್ಯಕ್ರಮದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳು

- ◆ ಉನ್ನತ ಶಿಕ್ಷಣದ ಸಮರ್ಥ ಸೋಪಾನವಾಗಿ ದಾವಣಗೆರೆ, ಉಡುಪಿ ಮತ್ತು ಧಾರವಾಡದಲ್ಲಿ 3 ಪದವಿಪೂರ್ವ ಕಾಲೇಜುಗಳು
- ◆ ಭಾರತ ಕೇಂದ್ರಿತ ಶೈಕ್ಷಣಿಕ ಸಂಪನ್ಮೂಲಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶ ಹೊಂದಿರುವ ಸಂವಿತ್ ಸಂಶೋಧನಾ ಪ್ರತಿಷ್ಠಾನ
- ◆ ದೈಹಿಕ, ಮಾನಸಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಸಹಕರಿಸುವ 20ಕ್ಕೂ ಮಿಕ್ಕಿದ ಯೋಗ ಕೇಂದ್ರಗಳು
- ◆ ಬೆಂಗಳೂರಿನಲ್ಲಿ ಆಧುನಿಕ ವೈದ್ಯಕೀಯ ಪದ್ಧತಿ, ಆಯುರ್ವೇದ, ಹೋಮಿಯೋಪತಿ, ಯೋಗ ಮತ್ತು ಪ್ರಕೃತಿ ಚಿಕಿತ್ಸೆಗಳನ್ನೊಳಗೊಂಡ ಸಮಗ್ರ ಚಿಕಿತ್ಸೆಯ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ
- ◆ ದೇಹ–ಬುದ್ಧಿ–ಮನಸ್ಸುಗಳು ಯಾವುದೇ ದೋಷ, ಅನಾರೋಗ್ಯಗಳಿಲ್ಲದೇ ಚೈತನ್ಯಪೂರ್ಣವಾಗಿ ಮಾಡುವ ಸಲುವಾಗಿ ಸ್ವಾಸ್ಥ್ಯಭಾರತಿ ಪ್ರಕಲ್ಪ
- ◆ 200ಕ್ಕೂ ಹೆಚ್ಚಿನ ಸೇವಾವಸತಿಗಳಲ್ಲಿ 360ಕ್ಕೂ ಅಧಿಕ ಶಾಲಾ ನಂತರದ ಕಲಿಕಾ ತರಬೇತಿ ಕೇಂದ್ರಗಳು ಹಾಗೂ 30 ಸೇವಾವಸತಿಗಳ ಸಮಗ್ರ ಅಭಿವೃದ್ಧಿ





ಪರಿಷತ್ತಿನ ಆರಂಭಿಕ ಹೆಜ್ಜೆಗಳು

1967ರಲ್ಲಿ ರಾಷ್ಟ್ರೋತ್ಥಾನ ಪರಿಷತ್‌ನ ಕೇಂದ್ರ ಕಚೇರಿ ಕೆಂಪೇಗೌಡನಗರದಲ್ಲಿ (ಬೆಂಗಳೂರು) ತನ್ನದೇ ಕಟ್ಟಡಕ್ಕೆ ಸ್ಥಳಾಂತರಗೊಂಡಿತು

- ◆ ಸಂಸ್ಥೆಯ ಆರಂಭಿಕ ವರ್ಷಗಳಲ್ಲಿ ಕಲೆಸಾಹಿತ್ಯ ಕ್ಷೇತ್ರದ ದಿಗ್ಗಜರು, ಉದ್ಯಮಿಗಳು ಹಾಗೂ ಸಮಾಜಸೇವಕರು ಸೇರಿ, ಇಡೀ ಸಮಾಜದಿಂದಲೇ ಪರಿಷತ್ತಿನ ಪೋಷಣೆಯಾಯಿತು
- ◆ ರಾಷ್ಟ್ರೋತ್ಥಾನ ಸಾಹಿತ್ಯ ಮತ್ತು ಉತ್ಥಾನ ಕನ್ನಡ ಮಾಸಪತ್ರಿಕೆಗಳು ಪರಿಷತ್ತಿನ ಪ್ರಾರಂಭಿಕ ಚಟುವಟಿಕೆಗಳಾಗಿದ್ದವು
- ◆ ಈ ಪ್ರಕಲ್ಪಗಳು ಸಾಹಿತ್ಯಸಿಂಧು ಪ್ರಕಾಶನ ಮತ್ತು ಭಾರತಭಾರತಿ ಪುಸ್ತಕ ಸಂಪದಗಳ ಮೂಲಕ ತಮ್ಮ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿಕೊಂಡವು
- ◆ ಪ್ರಕಾಶನ ಚಟುವಟಿಕೆಗಳಿಗೆ ಪೂರಕವಾಗಿ ರಾಷ್ಟ್ರೋತ್ಥಾನ ಮುದ್ರಣಾಲಯ ಆರಂಭವಾಯಿತು
- ◆ 1984ರ ವೇಳೆಗೆ, ಆರು ಅಂತಸ್ತುಗಳ ಕಟ್ಟಡ ಮತ್ತು 600 ಆಸನಗಳ ಸಭಾಂಗಣದೊಂದಿಗೆ ಪರಿಷತ್ತಿನ ಕೇಂದ್ರ ಕಚೇರಿ ಕೇಶವಶಿಲ್ಪ ಸಜ್ಜಾಯಿತು
- ◆ 2004ರಲ್ಲಿ ಕೇಶವಶಿಲ್ಪಕ್ಕೆ ಸೇರಿಕೊಂಡಂತೆ ಮತ್ತೊಂದು ಕಟ್ಟಡವಾದ ಸೇವಾಸೌಧ ನಿರ್ಮಾಣಗೊಂಡಿತು
- ◆ ಕಾಲಕ್ರಮೇಣ ಪರಿಷತ್ತಿನ ಹಲವು ಚಟುವಟಿಕೆಗಳು ತಮ್ಮ ವಿಶಿಷ್ಟ ಸ್ವರೂಪ ಮತ್ತು ಕಾರ್ಯವ್ಯಾಪ್ತಿಯ ಕಾರಣದಿಂದ ಸ್ವತಂತ್ರ ವಿಭಾಗಗಳಾಗಿ ಬೆಳೆದವು

ಸಾಮಾಜಿಕ ಪರಿವರ್ತನೆಯ ಸಾಗರದಲ್ಲಿ ಒಂದು ಬಿಂದು

ದಿಗಂತ ಸಂದರ್ಶನ

ಸಮಾಜದಲ್ಲಿ ಕಾಲಕಾಲಕ್ಕೆ ಸಕಾರಾತ್ಮಕ ಬದಲಾವಣೆಯನ್ನು ತರುವುದಕ್ಕಾಗಿ ಪ್ರಾರಂಭವಾದ ರಾಷ್ಟ್ರೋತ್ಥಾನ ಪರಿಷತ್‌ಗೆ ಈಗ 60ನೇ ವರ್ಷದ ಸಂಭ್ರಮ. ಇಂತಹ ಸೇವಾಸಂಭ್ರಮದ ಸುಸಂದರ್ಭದಲ್ಲಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ನಾ. ದಿನೇಶ್ ಹೆಗ್ಡೆ ಅವರು ಹೊಸ ದಿಗಂತಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಪರಿಷತ್ತಿನ ಆರಂಭ, ವರ್ತಮಾನ ಮತ್ತು ಭವಿಷ್ಯದ ಕುರಿತಾಗಿ ಮಾತನಾಡಿದ್ದಾರೆ.

▸60 ವರ್ಷಗಳಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನ ಸಾರ್ಥಕತೆ ಏನು?

ರಾಷ್ಟ್ರೋತ್ಥಾನ ಪರಿಷತ್‌ಗೆ 60 ವರ್ಷ ತುಂಬಿದೆ ಎಂದರೆ, ಅದರಲ್ಲಿ ಅನೇಕ ರೀತಿಯ ಸಮಾಧಾನ, ಸಂತೋಷ ಮತ್ತು ಸಾರ್ಥಕತೆಯಿದೆ. ನಾವು ಇಟ್ಟುಕೊಂಡಿರುವ ಗುರಿಯತ್ತ ಹೋಗುವುದಕ್ಕೆ ಸಮಾಜ ನಮಗೆ ಸಹಕರಿಸುತ್ತಿದೆ. ಸಮಾಜದ ಸ್ಪಂದನೆ ನಮಗೆ ಬಹಳ ಪ್ರೇರಕವಾಗಿದೆ. ಪ್ರಾರಂಭದ ದಿನಗಳಲ್ಲಿ ನಮ್ಮ ಧ್ಯೇಯಕ್ಕೆ ಅನುಗುಣವಾಗಿ ಬಂಡವಾಳ ಮತ್ತು ಮಾನವ ಸಂಪನ್ಮೂಲ ನಮ್ಮಲ್ಲಿರಲಿಲ್ಲ. ಆದರೆ, ನಮ್ಮ ಕೆಲಸವನ್ನು ಅನುಕರಣೀಯ ಮಾದರಿಯಾಗಿ ಮಾಡಿದ್ದೇವೆ. ಸಮಾಜದ ಕೆಲಸವನ್ನು ರಾಷ್ಟ್ರೋತ್ಥಾನ ಮಾತ್ರ ಮಾಡುವುದಲ್ಲ. ಸಮಾಜದಲ್ಲಿ ಬೇರೆ ಬೇರೆಯವರು ಮಾಡುತ್ತಾರೆ. ಪ್ರಸಕ್ತ 60 ವರ್ಷಗಳನ್ನು ಪೂರೈಸಿದ ನಾವು ಎಲ್ಲವನ್ನು ಮಾಡಿ ಮುಗಿಸಿದ್ದೇವೆ ಎಂದಲ್ಲ. ಒಂದು ಹಂತವನ್ನು ತಲುಪಿದ್ದೇವೆ ಎಂಬ ಸಾರ್ಥಕತೆಯಿದೆ. ನಾವು ಯಾವುದೇ ಕಾರಣಕ್ಕೆ ಗುರಿ, ಸಿದ್ಧಾಂತ ಮತ್ತು ಮೌಲ್ಯಗಳಿಂದ ವಿಚಲಿತರಾಗಿಲ್ಲ. ನಮ್ಮ ಉದ್ದೇಶದ ಜೊತೆಗೆ ರಾಜಿ ಮಾಡಿಕೊಂಡಿಲ್ಲ.

▸ಸಮಾಜದ ಇತರೆ ಸಂಘಟನೆಗಳಿಂದ ಪರಿಷತ್ ಹೇಗೆ ಭಿನ್ನವಾಗಿ ನಿಲ್ಲುತ್ತದೆ?

ರಾಷ್ಟ್ರೋತ್ಥಾನವು ಸಾಹಿತ್ಯ, ಶಿಕ್ಷಣ, ಆರೋಗ್ಯ ಮತ್ತು ಸಮಾಜ ಸಬಲೀಕರಣ (ಸೇವೆ) ಈ ನಾಲ್ಕು ಆಯಾಮಗಳಲ್ಲಿ ಕೆಲಸ ಮಾಡುತ್ತದೆ. ಸಾಹಿತ್ಯವನ್ನು ಸಮಾಜಕ್ಕೆ ಕೊಡಬೇಕಾದರೆ ಸಮಾಜದಲ್ಲಿ ಒಂದು ಜಾಗೃತಿಯಾಗಬೇಕೆಂಬ ಚಿಂತನೆಯಿಂದ ಪ್ರಾರಂಭವಾಗಿತ್ತು. ಇತಿಹಾಸ, ಜ್ಞಾನ ಪರಂಪರೆ, ಸಂಸ್ಕೃತಿ ಯಾವುದನ್ನೇ ಕೊಡುವಾಗಲೂ ಜಾಗೃತಿ ಮೂಡಿಸಬೇಕು. ರಾಷ್ಟ್ರೋತ್ಥಾನ ಸಾಹಿತ್ಯವು ನಮ್ಮ ದೇಶ ಎಷ್ಟು ಸತ್ವಭರಿತವಾಗಿದೆ ಎಂದು ತೋರಿಸುತ್ತದೆ. 610 ಮರೆಯಬಾರದ ಮಹಾಪುರುಷರ ಜೀವನ ಚರಿತ್ರೆಗಳನ್ನು ಭಾರತ ಭಾರತಿಯ ಪುಟ್ಟ ಪುಸ್ತಕಗಳು ಅನನ್ಯವಾಗಿ ಕಟ್ಟಿಕೊಟ್ಟಿವೆ. ಈ ಮೂಲಕ ಭಾರತ ಮಹಾಪುರುಷರು, ಇತಿಹಾಸಕಾರರು, ಸಂಸ್ಕೃತಿ, ಪರಂಪರೆಗಳ ಬಗೆಗೆ ನಮ್ಮ ಪೀಳಿಗೆಯು ಹೆಮ್ಮೆ ಪಡುವಂತಹ ಕೆಲಸಗಳನ್ನು ನಾವು ಮಾಡಿದ್ದೇವೆ.

ಶಿಕ್ಷಣ ಕ್ಷೇತ್ರದಲ್ಲಿ ಎಲ್ಲರೂ ತುಂಬಾ ಕೆಲಸ ಮಾಡುತ್ತಿದ್ದಾರೆ. ಆದರೆ, ಭಾರತದ ನೆಲದ ಮೂಲ ಅಂಶಗಳು ಮತ್ತು ಮಣ್ಣಿನ ಸೊಗಡನ್ನು ಮೈಗೂಡಿಸಿಕೊಂಡು ಶಿಕ್ಷಣದಲ್ಲಿ ಅತ್ಯಂತ ಎತ್ತರಕ್ಕೆ ಹೋಗುವ ಅಂಶಗಳು ಬೇಕೆಂದು ನಾವು ಪ್ರತಿಪಾದಿಸುತ್ತಿದ್ದೇವೆ. ಗುರುಕುಲ ಮಾದರಿಯಲ್ಲಿ ಭಾರತೀಯ ಶಿಕ್ಷಣ ಕೊಡಲು ಈಗಿನ ಕಾಲಘಟ್ಟದಲ್ಲಿ ಸಾಧ್ಯವಿಲ್ಲ, ಆದ್ದರಿಂದ ಶಿಕ್ಷಣದಲ್ಲಿ ಭಾರತೀಯತೆ ತರಬೇಕಿದೆ. ಇದಕ್ಕಾಗಿ ಪಂಚಮುಖಿ ಶಿಕ್ಷಣ (ಮಕ್ಕಳ ದೈಹಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆ) ಪದ್ಧತಿಯನ್ನು ರೂಪಿಸಲಾಗಿದೆ. ಇದರಿಂದ ವ್ಯಕ್ತಿಯೊಬ್ಬ ಪರಿಪೂರ್ಣವಾಗಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ನಮ್ಮಲ್ಲಿ ಇದು ನಿರಂತರವಾಗಿ ನಡೆಯುತ್ತದೆ.

ಭಾರತದಲ್ಲಿ ಸೇವೆ ಎಂಬುದು ಜೀವನದ ಅವಿಭಾಜ್ಯ ಅಂಗ. ಇಲ್ಲಿ ಯಾರಿಗೂ ಅದನ್ನು ಹೇಳಿಕೊಡಬೇಕಾಗಿಲ್ಲ. ಅದಕ್ಕೆ ಅವಕಾಶ ಕೊಡಬೇಕು, ವ್ಯವಸ್ಥೆಗಳನ್ನು ಮಾಡಬೇಕು. ಅದಕ್ಕಾಗಿ ಕೆಲವು ಮಾದರಿಯಾದ ಸೇವಾಚಟುವಟಿಕೆಗಳನ್ನು ಮಾಡಿದ್ದೇವೆ. ಬೆಂಗಳೂರು ಮಹಾನಗರ ಸೇವಾವಸತಿ(ಕೊಳಗೇರಿ)ಯ ಮಕ್ಕಳು ಮುಖ್ಯವಾಹಿನಿಗೆ ಸೇರಬೇಕು.



ಇದಕ್ಕಾಗಿ ಅವರಿಗೆ ಉಚಿತ ಟ್ಯೂಷನ್ ಸಹಿತ ವಿದ್ಯಾಭ್ಯಾಸ ನೀಡಲಾಗುತ್ತದೆ. ಕೊಳಗೇರಿಯಲ್ಲಿ ಕಿಶೋರರು, ಕಿಶೋರಿಯರು, ಹೆಣ್ಣುಮಕ್ಕಳಿಗೆ ಹೆಚ್ಚಿನ ಗಮನ ಕೊಡುತ್ತೇವೆ. ಅವರ ಆರೋಗ್ಯ, ಕೌಶಲ ಅಭಿವೃದ್ಧಿ, ಸ್ವಸಹಾಯ ಗುಂಪುಗಳಂತಹ ನಾನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುತ್ತೇವೆ. ಅವರನ್ನು ಸ್ವಾವಲಂಬಿಗಳಾಗಿಸಲು ಪ್ರಯತ್ನಿಸುತ್ತೇವೆ. ಮೂವತ್ತು ವರ್ಷಗಳಿಂದ ನಿರಂತರವಾಗಿ ಕೆಲಸ ಮಾಡಿದ್ದರಿಂದ ಅಲ್ಲಿ ಸಣ್ಣ ಬದಲಾವಣೆ ಕಾಣುವುದಕ್ಕೆ ಸಾಧ್ಯವಾಗಿದೆ. ದೇಸಿ ಗೋತಳಿಗಳ ಸಂರಕ್ಷಣೆಗಾಗಿ ಘಾಟಿಸುಬ್ರಹ್ಮಣ್ಯದ ಬಳಿ ಮಾಧವಸೃಷ್ಟಿ ಗೋಶಾಲೆ ಸ್ಥಾಪಿಸಲಾಗಿದೆ. ಸೇವೆ ಎಂಬುದೊಂದು ಸಾಮಾಜಿಕ ಜಾಗೃತಿಯ ಕೆಲಸ.

ಆರೋಗ್ಯ ದೃಷ್ಟಿಯಿಂದ 1972ರಲ್ಲಿ ಯೋಗವನ್ನು ಚಳವಳಿ ರೂಪದಲ್ಲಿ ಆರಂಭಿಸಿದ್ದು ನಾವು. ಇಲ್ಲಿಯವರೆಗೆ ಲಕ್ಷಾಂತರ ಮಂದಿಗೆ ಯೋಗ ಕಲಿಸಿದ್ದೇವೆ. ನಮ್ಮ ರಕ್ತನಿಧಿ ಕೇಂದ್ರವು ಮಾದರಿಯಾಗಿದೆ. ನಾವು 1993ರಲ್ಲಿ ರಕ್ತನಿಧಿ ಕೇಂದ್ರ ಪ್ರಾರಂಭಿಸುವುದಕ್ಕೂ ಮೊದಲು ರಕ್ತ ಸಿಗಬೇಕಾದರೆ ಬಹಳಷ್ಟು ಸಮಸ್ಯೆಯಾಗುತ್ತಿತ್ತು. ರಕ್ತ ಮಾರಾಟ ಮಾಡಬಾರದು ಎಂದು ಕೇಂದ್ರ ಶುರು ಮಾಡಿದೆವು. ಆಗ ತಲಸ್ಸೆಮಿಯಾ ಪೀಡಿತರ ಬಗ್ಗೆ ಗೊತ್ತಾಗಿ ಅವರಿಗಾಗಿ ಉಚಿತ ಡೇ ಕೇರ್ ಸೆಂಟರ್ ತೆರೆದಿದ್ದೇವೆ. ಅನಾರೋಗ್ಯ ಆದಾಗ ರೋಗಿಗಳಿಗೆ ಕೈಗೆಟಕುವ ದರದಲ್ಲಿ ಒಳ್ಳೆಯ ಚಿಕಿತ್ಸೆ ಕೊಡಬೇಕು ಎಂದು ರಾಷ್ಟ್ರೋತ್ಥಾನ ಆಸ್ಪತ್ರೆ ಮಾಡಿದ್ದೇವೆ. ಆದರೆ, ಅನಾರೋಗ್ಯ ಆಗಲೇಬಾರದು ಎಂದು ಜನರಿಗೆ ಮಾಹಿತಿ ನೀಡುವುದಕ್ಕಾಗಿ ಆಸ್ಪತ್ರೆಯ ಜೊತೆಗೆ ಜೀವನಶೈಲಿ ವಿಭಾಗವನ್ನು ತೆರೆದಿದ್ದೇವೆ. ಇದೆಲ್ಲವೂ ಬೇರೆಯವರಿಗಿಂತ ನಾವು ಭಿನ್ನ ಎಂಬುದನ್ನು ತೋರಿಸುತ್ತದೆ.

▸ಪರಿಷತ್‌ನ ಮುಂದಿನ ಯೋಜನೆಗಳೇನು?

ಈಗಿರುವ ಚಟುವಟಿಕೆಗಳು ಮುಂದುವರೆಸಿಕೊಂಡು ಹೋಗಬೇಕು ಮತ್ತು ಅವುಗಳಲ್ಲಿ ಗುಣಮಟ್ಟವನ್ನು ತರಬೇಕು. ಜಿಲ್ಲೆಗೊಂದು ಮಾದರಿ ಶಾಲೆ ಸ್ಥಾಪನೆ ಮಾಡಬೇಕು, ಯೋಗ ಕೇಂದ್ರಗಳನ್ನು ವಿಸ್ತರಿಸಬೇಕೆಂಬ ಯೋಚನೆಯಿದೆ. ಆಸ್ಪತ್ರೆಯನ್ನು ಹೆಚ್ಚಿಸುವ ಯೋಚನೆಯಿಲ್ಲ, ಆದರೆ, ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ರಾಜ್ಯಾದ್ಯಂತ ಸ್ವಸ್ಥ ಜೀವನಶೈಲಿ ವಿಭಾಗವನ್ನು ವಿಸ್ತರಿಸುವ ಚಿಂತನೆಯಿದೆ. ರಾಜ್ಯಾದ್ಯಂತ ನಮ್ಮ ಸಾಹಿತ್ಯ ಕೃತಿಗಳು ಜನರಿಗೆ ಸುಲಭದಲ್ಲಿ ಸಿಗುವಂತೆ ಮಾಡಲು ಜಿಲ್ಲಾ ಕೇಂದ್ರಗಳಲ್ಲಿ ರಾಷ್ಟ್ರೋತ್ಥಾನ ಬಳಗ ರಚಿಸಿ, ಅದರ ಮೂಲಕ ಸಾಹಿತ್ಯವನ್ನು ದೊಡ್ಡ ಪ್ರಮಾಣದಲ್ಲಿ ಸಮಾಜಕ್ಕೆ ತಲುಪಿಸಬೇಕಾಗಿದೆ. ಈಗಿರುವ ಕಾರ್ಯವನ್ನು ವಿಸ್ತಾರ ಮಾಡುವ ಜೊತೆಗೆ ಹೊಸ ಸವಾಲುಗಳಿಗೆ ಸಮಾಜವನ್ನು ಸದೃಢಗೊಳಿಸುವ ಕೆಲಸವನ್ನೂ ರಾಷ್ಟ್ರೋತ್ಥಾನ ಮಾಡಬೇಕಿದೆ.

▸ರಾಷ್ಟ್ರೋತ್ಥಾನ ಪರಿಷತ್‌ನ ವಿಶೇಷತೆ ಏನು?

ಸಮಾಜವನ್ನು ಒಳಗೊಂಡು ಸಮಾಜಕ್ಕಾಗಿ ಕೆಲಸ ಮಾಡಿದ ಸಂಸ್ಥೆ ರಾಷ್ಟ್ರೋತ್ಥಾನ ಪರಿಷತ್. ಅದರ ವಿಶೇಷತೆಯೆಂದರೆ, ಕಳೆದ 60 ವರ್ಷದಲ್ಲಿ ಒಂದು ಕೆಲಸವನ್ನು ತೆಗೆದುಕೊಂಡು ಸಮಾಜಕ್ಕೆ ಪೂರಕವಾಗಿ ಅದು ಕಾರ್ಯವನ್ನು ವಿಸ್ತಾರ ಮಾಡುತ್ತಾ ಬಂದಿದೆ. ನಾವು ಮಾತ್ರ ಮಾಡಿದ್ದೇವೆ ಎಂದು ಹೇಳುವುದಿಲ್ಲ. ಸಮಾಜ ಸುಧಾರಣೆಗೆ ಅಗಣಿತ ಸಜ್ಜನರು ಕೆಲಸ ಮಾಡುತ್ತಲೇ ಇದ್ದಾರೆ. ಈ ಸಮಾಜಸೇವಾ ಸಾಗರದಲ್ಲಿನ ಒಂದು ಹನಿಯಂತೆ ರಾಷ್ಟ್ರೋತ್ಥಾನವು ಸಮಾಜದ ಅಗತ್ಯಗಳಿಗೆ ಸ್ಪಂದಿಸುತ್ತಿರುವ ಬಗೆಗೆ ಧನ್ಯತೆ ಇದೆ.

▸ರಾಷ್ಟ್ರೋತ್ಥಾನ ಬೇರೆ ಬೇರೆ ರೀತಿಯ ಚಟುವಟಿಕೆಗಳನ್ನು ಮಾಡುತ್ತಿದೆ, ವೃದ್ಧಾಶ್ರಮ ಮಾಡುವ ಯೋಚನೆಯಿದೆಯೇ?

ವೃದ್ಧಾಶ್ರಮ ತೆರೆಯುವುದಕ್ಕೆ ನಾಲ್ಕೈದು ಅವಕಾಶಗಳು ನಮಗೆ ಬಂದವು. ಅಂದರೆ, ಬೇಕಾದ ಸಂಪನ್ಮೂಲ ಮತ್ತು ಮೂಲಸೌಕರ್ಯ ನೀಡುವುದಕ್ಕೆ ಮುಂದೆ ಬಂದಿದ್ದರು. ಈ ವೇಳೆ ನಾವು ಸ್ಪಷ್ಟವಾಗಿ ಹೇಳಿದ್ದೆವು, ವೃದ್ಧಾಶ್ರಮದ ಸಮಸ್ಯೆಯ ಮೂಲ ಬಗೆಹರಿಸಲು ಯೋಚಿಸಬೇಕೇ ವಿನಾ ತಾತ್ಕಾಲಿಕ ಪರಿಹಾರವಲ್ಲ. ವೃದ್ಧಾಶ್ರಮದ ಪರಿಕಲ್ಪನೆಯೇ ಸಮಾಜದಲ್ಲಿ ಬರಬಾರದು. ನಮ್ಮ ಶಾಲೆ, ಯೋಗ ಕೇಂದ್ರ, ಹೀಗೆ ನಮ್ಮ ಸಂಪರ್ಕಕ್ಕೆ ಬಂದವರು ತಮ್ಮ ಅವಲಂಬಿತರನ್ನು ಯಾವುದೇ ಕಾರಣಕ್ಕೂ ವೃದ್ಧಾಶ್ರಮಕ್ಕೆ ಕಳುಹಿಸಬಾರದು. ಈ ಜಾಗೃತಿ ಮಾಡಿದರೆ ವೃದ್ಧಾಶ್ರಮ ಮಾಡುವ ಅಗತ್ಯ ಯಾಕೆ ಬರುತ್ತದೆ? ಪೋಷಕರನ್ನು ವೃದ್ಧಾಶ್ರಮಕ್ಕೆ ಕಳುಹಿಸುವ ಮಕ್ಕಳನ್ನು ನಾವು ತಯಾರು ಮಾಡುವುದಿಲ್ಲ. ನಮ್ಮ ಚಿಂತನೆ ಮೂಲಕ್ಕೆ ಹೋಗುವುದಾಗಿದೆ.

ಅಖಿಲ ಭಾರತ ಅಂತರ್ ವಿಶ್ವವಿದ್ಯಾನಿಲಯ ಮಹಿಳಾ ಗುಡ್ಡಗಾಡು ಓಟ

ಮಂಗಳೂರು ವಿವಿ ಪ್ರತಿನಿಧಿಸಿದ್ದ ಆಳ್ವಾಸ್‌ನ ಮಹಿಳೆಯರ ತಂಡ ಸಮಗ್ರ ಚಾಂಪಿಯನ್ಸ್



• ಮೂಡುಬಿದಿರೆ: ಅಖಿಲ ಭಾರತ ಅಂತರ್ ವಿವಿ ಮಹಿಳಾ ಕ್ರಾಸ್‌ಕಂಟ್ರಿ ಚಾಂಪಿಯನ್ ಶಿಪ್‌ನಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿದ್ದ ಆಳ್ವಾಸ್‌ನ ಮಹಿಳೆಯರ ತಂಡ ಸಮಗ್ರ ಚಾಂಪಿಯನ್ಸ್ ಪಟ್ಟ ಪಡೆಯಿತು. ಮಹಿಳೆಯರ ತಂಡವು ನಾಲ್ಕನೇ ಬಾರಿ ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದುಕೊಂಡಿತು. ಮಂಗಳೂರು ವಿವಿ ಪ್ರತಿನಿಧಿಸಿದ ಮಹಿಳೆಯರ ತಂಡದಲ್ಲಿದ್ದ 6 ಜನ ಕ್ರೀಡಾಳುಗಳು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ವಿದ್ಯಾರ್ಥಿಗಳಾಗಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ಮಂಗಳೂರು ವಿವಿ 26 ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದರೆ, ಪುಣೆಯ ಸಾವಿತ್ರಿ ಭಾಯಿಫುಲೆ ವಿವಿ 67 ಅಂಕಗಳೊಂದಿಗೆ ದ್ವಿತೀಯ ಸ್ಥಾನ, 73 ಅಂಕ ಗಳೊಂದಿಗೆ ರೋಹ್ಟಕ್ ವಿವಿ ತೃತೀಯ ಸ್ಥಾನ ಗಳಿಸಿತು.

ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಆಳ್ವಾಸ್‌ನ ತಾಮ್ಸಿ ಪ್ರಥಮ ಸ್ಥಾನ, ಯಾಶಿ ಸಾಚನ್ ತೃತೀಯ ಸ್ಥಾನ, ಜ್ಯೋತಿ ಒಂಬತ್ತನೇ ಸ್ಥಾನ, ಭಾಗೀರಥಿ ಹದಿಮೂರನೇ ಸ್ಥಾನ ಪಡೆದರು.

ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟೀಸ್ ಸಹಯೋಗದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಆಳ್ವಾಸ್ ಕಾಲೇಜಿನ ಆಶ್ರಯದಲ್ಲಿ ಅಖಿಲ ಭಾರತ ಅಂತರ್ ವಿವಿ ಮಹಿಳೆಯರ ಕ್ರಾಸ್‌ಕಂಟ್ರಿ ಚಾಂಪಿಯನ್‌ಶಿಪ್ ಶುಕ್ರವಾರ ನಡೆಯಿತು. ಈ ಕ್ರೀಡಾಕೂಟಕ್ಕೆ ದೇಶದ 133 ವಿವಿಗಳಿಂದ 680ಕ್ಕೂ ಅಧಿಕ ಕ್ರೀಡಾಪಟುಗಳು ಹಾಗೂ 210ಕ್ಕೂ ಅಧಿಕ ಕೋಚ್‌ಗಳು, ಮ್ಯನೇಜರ್ಸ್ ಹಾಗೂ ದೈಹಿಕ ಶಿಕ್ಷಕರು ಭಾಗಿಯಾಗಿದ್ದರು.

ಸಮಾರೋಪ ಸಮಾರಂಭದಲ್ಲಿ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ. ಎಂ. ಮೋಹನ್ ಆಳ್ವ, ಎಐಯು ವೀಕ್ಷಕ ಗುಲಾಬ್ ಸಿಂಗ್, ಕ್ರೀಡಾಕೂಟದ ತಾಂತ್ರಿಕ ನಿರ್ದೇಶಕ ಪ್ರೊ. ಸುಂದರ್, ಮಂಗಳೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಜೆರಾಲ್ಡ್ ಸಂತೋಷ್ ಡಿಸೋಜ, ಆಳ್ವಾಸ್ ಕಾಲೇಜಿನ ಪ್ರಾಂಶುಪಾಲ ಡಾ. ಕುರಿಯನ್ ಉಪಸ್ಥಿತರಿದ್ದರು. ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ರಾಜೇಶ್ ಡಿಸೋಜ ಕಾರ್ಯಕ್ರಮ ನಿರೂಪಿಸಿದರು.

ರಾಷ್ಟ್ರ ಮಟ್ಟದ ಕ್ಲಾರೆಟ್ ಕಾವ್ಯ ಪ್ರಶಸ್ತಿ–2025: ಜ್ಯೋತಿರ್ಲಕ್ಷ್ಮಿಗೆ ಪ್ರಥಮ ಬಹುಮಾನ



• ಕಾಸರಗೋಡು: ಬೆಂಗಳೂರಿನ ಸೈಂಟ್ ಕ್ಲಾರೆಟ್ ಕಾಲೇಜು (ಸ್ವಾಯತ್ತ) ಹಮ್ಮಿಕೊಂಡ 'ರಾಷ್ಟ್ರಮಟ್ಟದ ಕ್ಲಾರೆಟ್ ಕಾವ್ಯ ಪ್ರಶಸ್ತಿ–2025' ಸ್ಪರ್ಧೆಯಲ್ಲಿ ಕೇರಳ ಕೇಂದ್ರೀಯ ವಿಶ್ವ ವಿದ್ಯಾಲಯದ ಕನ್ನಡ ವಿಭಾಗದ ಸಂಶೋಧಕಿ ಜ್ಯೋತಿರ್ಲಕ್ಷ್ಮಿ ಅವರು ಪ್ರಥಮ ಬಹುಮಾನ ಪಡೆದಿದ್ದಾರೆ.

ಬಹುಮಾನವು 5000 ನಗದು ಮತ್ತು ಪ್ರಮಾಣ ಪತ್ರವನ್ನು ಒಳಗೊಂಡಿದ್ದು, ಗುರುವಾರ ಬೆಂಗಳೂರಿನ ಸೈಂಟ್ ಕ್ಲಾರೆಟ್ ಕಾಲೇಜಿನ ಮದರ್ ತೆರೆಸಾ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಜರಗಿತು. ಈ ಸ್ಪರ್ಧೆಗೆ 130 ಕವನಗಳು ಪ್ರವೇಶವಾಗಿ ಬಂದಿದ್ದು, ಪ್ರಸಿದ್ಧ ವಿಮರ್ಶಕರಾದ ಎಚ್.ದಂಡಪ್ಪ ಅವರು ತೀರ್ಪುಗಾರರಾಗಿದ್ದರು.

ಇಂದು ಪ್ರತಿಷ್ಠಾ ವರ್ಧಂತಿ

• ಕಿನ್ನಿಗೋಳಿ: ಶ್ರೀ ಧರ್ಮಶಾಸ್ತಾರ ಮತ್ತು ರಕ್ತೇಶ್ವರೀ ಕ್ಷೇತ್ರ ಶರಣ ಕೆಮ್ರಾಲ್ ಇಲ್ಲಿನ ವಾರ್ಷಿಕ ಮಹೋತ್ಸವ ಹಾಗೂ ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆ ಫೆ. 28 ರಂದು ನಡೆಯಲಿದೆ. ಬೆಳಿಗ್ಗೆ ಕಲ್ಲಾಜೆ ರಾಘವೇಂದ್ರ ಉಡುಪರ ನೇತೃತ್ವದಲ್ಲಿ ನಾಗಬನದಲ್ಲಿ ನಾಗತಂಬಿಲ, ಧರ್ಮ ಶಾಸ್ತಾರ ಮತ್ತು ರಕ್ತೇಶ್ವರಿ ದೇವಿಗೆ ಸೀಯಾಳಾಭಿಷೇಕ, ನಂತರ ಪ್ರತಿಷ್ಠಾ ವರ್ಧಂತಿ ಸಂಜೆ ಭಜನಾ ಕಾರ್ಯಕ್ರಮ ನಂತರ ವಾರ್ಷಿಕ ಮಹಾಪೂಜೆ, ಸಾರ್ವಜನಿಕ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ ಮತ್ತು ಅನ್ನ ಸಂತರ್ಪಣೆ ನಡೆಯಲಿದೆ ಎಂದು ಕ್ಷೇತ್ರದ ಪ್ರಕಟನೆ ತಿಳಿಸಿದೆ.

ಇಂದು ಎಸ್‌ಸಿ, ಎಸ್‌ಟಿ ವಿದ್ಯಾರ್ಥಿಗಳಿಗೆ 'ಪ್ರೇರಣಾ ಉದ್ಯಮಶೀಲ' ಸಮಾವೇಶ



• ಮಂಗಳೂರು: ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಉದ್ಯಮಶೀಲತೆಯತ್ತ ಸೆಳೆಯುವ ಹಾಗೂ ಅವರಿಗೆ ಭವಿಷ್ಯದಲ್ಲಿ ಸ್ವಂತ ಉದ್ಯಮ ಸ್ಥಾಪಿಸಲು ಬೇಕಾಗುವ ಅಗತ್ಯ ಮಾರ್ಗದರ್ಶನ ನೀಡುವ ದೃಷ್ಟಿಯಿಂದ ಮಂಗಳೂರಿನಲ್ಲಿ ಫೆ.28ರಂದು 'ಪ್ರೇರಣಾ–2026' ಉದ್ಯಮಶೀಲತಾ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ತಿಳಿಸಿದ್ದಾರೆ.

ಮಂಗಳೂರಿನ ಎಸ್‌ಡಿಎಂ ಕಾನೂನು ಪದವಿ ಕಾಲೇಜಿನಲ್ಲಿ ಈ ಸಮಾವೇಶ ನಡೆಯಲಿದ್ದು, ದಕ್ಷಿಣ ಕನ್ನಡ ಜಿಲ್ಲೆಯ ಎಸ್‌ಸಿ, ಎಸ್‌ಟಿ ಯುವ ಸಮುದಾಯದಲ್ಲಿ ಸ್ವಂತ ಉದ್ಯಮ ಸ್ಥಾಪಿಸುವ ಕನಸು, ಕೌಶಲ್ಯ, ಸಾಮರ್ಥ್ಯ ಹೊಂದಿರುವ ಅನೇಕ ಐಟಿಐ, ಡಿಪ್ಲೋಮಾ ಹಾಗೂ ಎಂಜಿನಿಯರಿಂಗ್ ಓದುತ್ತಿರುವ ವಿದ್ಯಾರ್ಥಿಗಳಿದ್ದಾರೆ. ಅಂಥವರಿಗೆ ಉದ್ಯಮ ಸ್ಥಾಪಿಸುವುದಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಹಲವು ಯೋಜನೆ–ಸವಲತ್ತುಗಳು ಲಭ್ಯವಿದೆ. ಈ ಯೋಜನೆಗಳ ಬಗ್ಗೆ ಅಗತ್ಯ ಮಾಹಿತಿ, ಬ್ಯಾಂಕ್‌ನಿಂದ ಲಭ್ಯವಿರುವ ಸಾಲ–ಸೌಲಭ್ಯಗಳ ಬಗ್ಗೆ ಪ್ರೇರಣಾ ಸಮಾವೇಶದಲ್ಲಿ ಮಾರ್ಗದರ್ಶನ ನೀಡಲಾಗುವುದು. ಈ ಹಿನ್ನಲೆಯಲ್ಲಿ ಹೆಚ್ಚಿನ ಸಂಖ್ಯೆಯ ಎಸ್‌ಸಿ, ಎಸ್‌ಟಿ ಸಮುದಾಯದ ವಿದ್ಯಾರ್ಥಿಗಳು ಈ ಸಮಾವೇಶದಲ್ಲಿ ಭಾಗವಹಿಸಬೇಕೆಂದು ಅವರು ಹೇಳಿದ್ದಾರೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ 'ಆತ್ಮನಿರ್ಭರ ಭಾರತ'ದ ಕನಸಿನಿಂದ ಪ್ರೇರಿತರಾಗಿ, ನಮ್ಮ ನೆಲದ ಉದ್ಯಮಶೀಲತೆಯ ಉತ್ಸಾಹಕ್ಕೆ ಮರುಜೀವ ನೀಡುವ ಪ್ರಯತ್ನವಾಗಿರುವ 'ಬೊಲ್ಪು' ಮತ್ತು ಎಸ್‌ಸಿ, ಎಸ್‌ಟಿ ಅಧ್ಯಯನ ಹಾಗೂ ಅಭಿವೃದ್ಧಿ ಟ್ರಸ್ಟ್ ಸಹಯೋಗದೊಂದಿಗೆ ಈ ಪ್ರೇರಣಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ನಮ್ಮ ಊರಿನ ಯುವಕರು ಉದ್ಯೋಗಾಕಾಂಕ್ಷಿಗಳಾಗುವ ಬದಲು ಉದ್ಯೋಗದಾತರನ್ನಾಗಿ ರೂಪಿಸುವುದು ಈ ಸಮಾವೇಶದ ಪ್ರಮುಖ ಗುರಿ.

ಈ ಪ್ರೇರಣಾ ಸಮಾವೇಶವನ್ನು ಮಂಗಳೂರು ವಿ.ವಿ ಕುಲಪತಿ ಪ್ರೊ. ಪಿ.ಎಲ್. ಧರ್ಮ ಉದ್ಘಾಟಿಸಲಿದ್ದಾರೆ. ಶಾಸಕ ವೇದವ್ಯಾಸ ಕಾಮತ್, ಎಸ್‌ಡಿಎಂ ವಿದ್ಯಾ ಸಂಸ್ಥೆ ಸಿಇಒ ಪೂರಣ್ ವರ್ಮಾ, ಎಸ್‌ಸಿ ಎಸ್‌ಟಿ ಅಧ್ಯಯನ ಮತ್ತು ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಮೋಹನಾಂಗಯ್ಯ ಸ್ವಾಮಿ, ವಾದಿರಾಜ್ ಸಾಮರಸ್ಯ, ದಲಿತ ಉದ್ದಿಮೆದಾರರ ಸಂಘದ ಕಾರ್ಯಾಧ್ಯಕ್ಷ ಸಿಜಿ ಶ್ರೀನಿವಾಸ್ ಮುಂತಾದವರು ಭಾಗವಹಿಸಲಿದ್ದಾರೆ ಎಂದರು. ಹೆಚ್ಚಿನ ಮಾಹಿತಿಗೆ ಸಾರ್ವಜನಿಕರು 91414 41144 ಅಥವಾ 97431 20044 ಮೊಬೈಲ್‌ಗೆ ಸಂಪರ್ಕಿಸಬಹುದು.

ಮಕ್ಕಳ ಕಳ್ಳತನ: ವೈರಲ್ ಆದ ಸುದ್ದಿ!

• ಮಂಗಳೂರು: ಮಕ್ಕಳ ಕಳ್ಳರಿದ್ದಾರೆ ಎಂಬ ವಾಯ್ಸ್ ಮೆಸೇಜ್ ವೈರಲ್ ಆಗಿ ನಗರದಲ್ಲಿ ಶುಕ್ರವಾರ ಬೆಳಗ್ಗಿನಿಂದ ಮಧ್ಯಾಹ್ನ ವರೆಗೆ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ನಗರದ ಕುಂಟಿಕಾನ ಪರಿಸರದಿಂದ 5 ವರ್ಷದ ಮಗುವನ್ನು ಓಮ್ನಿಯಲ್ಲಿ ಬಂದ ತಂಡ ಕದ್ದೊಯ್ದಿದೆ ಎನ್ನುವ ವದಂತಿಯ ಸಂದೇಶ ಶುಕ್ರವಾರ ಭಾರಿ ವೈರಲ್ ಆಗಿದ್ದು, ಪೋಷಕರು ತಮ್ಮ ಮಕ್ಕಳ ಬಗ್ಗೆ ಆತಂಕಕ್ಕೆ ಒಳಗಾಗಿದ್ದರು. ಈ ಹಿನ್ನೆಲೆಯಲ್ಲಿ ಕದ್ರಿ ಪೊಲೀಸರು ಸ್ಥಳಕ್ಕೆ ತೆರಳಿ ತನಿಖೆ ನಡೆಸಿದಾಗ ಇದೊಂದು ವದಂತಿ ಎನ್ನುವುದು ಸ್ಪಷ್ಟವಾಯಿತು.

ಮಕ್ಕಳ ಕಳ್ಳತನ ಬಗ್ಗೆ ಸ್ಥಳೀಯ ಮಹಿಳೆಯೊಬ್ಬರು ಆಡಿಯೋ ಸಂದೇಶವನ್ನು ಪರಿಸರದ ಅಂಗನವಾಡಿ ಶಿಕ್ಷಕಿಗೆ ಕಳುಹಿಸಿದ್ದರು. ಅದನ್ನು ನಂಬಿದ ಶಿಕ್ಷಕಿ ಮಕ್ಕಳ ಪೋಷಕರಿದ್ದ ವಾಟ್ಸ್‌ಆಪ್ ಗುಂಪಿಗೆ ವಾಯ್ಸ್ ಮೆಸೇಜ್ ಹಾಕಿ, ಮಕ್ಕಳು ಕಳ್ಳರಿದ್ದಾರಂತೆ, ಜಾಗೃತೆ ಇರುವಂತೆ ಹೇಳಿದ್ದರು. ಈ ಎರಡೂ ವಾಯ್ಸ್ ಮೆಸೇಜ್ ಭಾರೀ ವೈರಲ್ ಆಗಿದ್ದು ಕುಂಟಿಕಾನದಲ್ಲಿ ಮಕ್ಕಳು ಕಳ್ಳರಿದ್ದಾರೆ ಎಂಬ ಸಂದೇಶ ಜನತೆಗೆ ಹೋಗಿತ್ತು. ಜನತೆ ಇದನ್ನು ಹೌದೋ ಅಲ್ಲವೋ ಎಂದು ಪರಿಶೀಲಿಸುವ ಮೊದಲು ಭಯಕ್ಕೆ ಒಳಗಾಗಿದ್ದರು.

ವಿಷಯ ತಿಳಿದ ಕದ್ರಿ ಪೊಲೀಸರು ಸ್ಥಳಕ್ಕೆ ತೆರಳಿ ತನಿಖೆ ನಡೆಸಿದ್ದು ಮಧ್ಯಾಹ್ನವರೆಗೂ ಸ್ಥಳೀಯ ಸಾರ್ವಜನಿಕರಿಂದ ಮಾಹಿತಿ ಸಂಗ್ರಹಿಸಿದ್ದಾರೆ. ಅಂಗನವಾಡಿ ಶಿಕ್ಷಕಿಯಲ್ಲೂ ಮಾಹಿತಿ ಕೇಳಿದ್ದಾರೆ. ಯಾರೋ ಪೋಷಕರು ಹಾಕಿದ್ದಕ್ಕೆ ಜಾಗ್ರತೆ ಇರುವಂತೆ ಸಂದೇಶ ಹಾಕಿದ್ದೆ ಎಂದು ಶಿಕ್ಷಕಿ ತಿಳಿಸಿದ್ದಾರೆ. ಬೆಳಗ್ಗೆ ಸೈಂಟ್ ಆನ್ಸ್ ಶಾಲೆಯ ಬಳಿ ಮಗುವೊಂದು ಆಟೋದಲ್ಲಿ ಕುಳಿತು ಅಳುತ್ತಿರುವುದನ್ನು ನೋಡಿದ ಮಕ್ಕಳು ಒಬ್ಬರಿಗೊಬ್ಬರು ಹೇಳುತ್ತಾ 'ಮಕ್ಕಳ ಕಳ್ಳರು ಬಂದಿದ್ದಾರೆ' ಎಂದು ಹೇಳಿಕೊಂಡಿದ್ದಾರೆ. ಅದೇ ಮಾತು ಮುಂದೆ ವದಂತಿಗೆ ಕಾರಣವಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಕಮಿಷನರ್ ಸುಧೀರ್ ರೆಡ್ಡಿ, ವಾಯ್ಸ್ ಮೆಸೇಜ್ ಗಮನಿಸಿ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಹಲವರ ಜತೆ ಮಾಹಿತಿ ಕೇಳಿದ್ದಾರೆ. ಬಳಿಕ ಅದು ವದಂತಿ ಎಂಬುದು ಗೊತ್ತಾಗಿದೆ ಎಂದರು.

ಮಂಗಳೂರು
ಶನಿವಾರ, 28 ಫೆಬ್ರವರಿ 2026
ಸಂಪುಟ 47, ಸಂಚಿಕೆ 331, ಪುಟಗಳು 14+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ವ್ಯಾಪಾರ ವೃದ್ಧಿಸಲು ಭಾರತ ಭೇಟಿ |೦೪
ಭಾರತದ ಪ್ರತಿಷ್ಠೆಗೆ ಧಕ್ಕೆ ತರುವ ಯತ್ನ |೦೪
ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ನಿಶಾನೆ|೦೪

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪುನರ್ವಸು

ದಿನದ ಮಾತು

ಮನುಷ್ಯನಿಗೆ ಬೇಕಾಗಿರುವುದು ವಿವೇಕ ಮತ್ತು ಎಚ್ಚರ. ಮೂಢನಂಬಿಕೆ, ಅಂಧ ಶ್ರದ್ಧೆಗಳಲ್ಲ.
▲ ಲೋಕೋಕ್ತಿ

ವಿಶುದ್ಧ ಚಕ್ರ ನಿಮಗೊಲಿದರೆ...

ಪೂರ್ಣ ಪರಿಪೂರ್ಣ
• ಪೂರ್ಣಪ್ರಜ್ಞ ಬೇಲೂರು

• ಪುಟ ೬

ಕಿರುಸುದ್ದಿ

ಇಂದಿನಿಂದ ದ್ವಿತೀಯ ಪಿಯುಸಿ-1 ಪರೀಕ್ಷೆ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ–1 ರಾಜ್ಯಾದ್ಯಂತ ಶನಿವಾರದಿಂದ (ಫೆ.28) ಆರಂಭವಾಗಲಿದ್ದು, 7,10,363 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಈ ಪೈಕಿ 6,46,801 ಹೊಸಬರು, 50,540 ಪುನರಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ಸೇರಿದ್ದಾರೆ. ರಾಜ್ಯದ 1,217 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಪ್ರತಿ ಪರೀಕ್ಷಾ ಕೇಂದ್ರದಲ್ಲೂ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಪರೀಕ್ಷಾರ್ಥಿಗಳು ಕೆಎಸ್ಆರ್‌ಟಿಸಿ, ಬಿಎಂಟಿಸಿ ಬಸ್‌ಗಳಲ್ಲಿ ಪರೀಕ್ಷಾ ಪ್ರವೇಶ ಪತ್ರ ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು.

• ಪುಟ ೭

85 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

• ಪುಟ ೫

ಯುದ್ಧೋನ್ಮಾದ ಸ್ಥಿತಿ ತಲುಪಿದ ಡುರಾಂಡ್ ಗಡಿರೇಖೆ ಬಿಕ್ಕಟ್ಟು

ಅಫ್ಘಾನ್-ಪಾಕ್ ಸಮರ



ಎಫ್ 16 ವಿಮಾನ ಹೊಡೆದುರುಳಿಸಿದ ತಾಲಿಬಾನ್?

ಪಾಕಿಸ್ತಾನ ವಾಯುದಾಳಿ ನಡೆಸುವ ವೇಳೆ ಅದರ ಎಫ್ 16 ಯುದ್ಧ ವಿಮಾನ ಹೊಡೆದುರುಳಿಸಿದ್ದಾಗಿ ಅಫ್ಘಾನಿಸ್ತಾನ ಹೇಳಿಕೊಂಡಿದೆ. ಪಾಕ್ ಸೇನೆಯ ಎಫ್ 16 ಎನ್ನಲಾದ ಯುದ್ಧ ವಿಮಾನವೊಂದು ಬೆಂಕಿ ತಗುಲಿ ಹೊತ್ತಿ ಉರಿಯುತ್ತಿರುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

• **ಕಾಬೂಲ್:** ಕಳೆದ ಎರಡು ದಿನಗಳಿಂದ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವಿನ ಗಡಿ ಉದ್ವಿಗ್ನತೆ ಭಾರೀ ತೀವ್ರತೆ ಪಡೆದುಕೊಂಡಿದ್ದು, ಅಫ್ಘಾನ್ ಮೇಲೆ ಯುದ್ಧ ಸಾರುವುದಾಗಿ ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಶುಕ್ರವಾರ ಬೆದರಿಕೆಯೊಡ್ಡಿದ್ದಾರೆ. ಉಭಯ ದೇಶಗಳ ಮಧ್ಯೆ ಸಂಧಾನ ಮಾತುಕತೆಗೆ ಸಿದ್ಧವೆಂದು ಇರಾನ್ ಹೇಳಿದರೆ, ಯುದ್ಧ ನಿಲ್ಲಿಸಬೇಕೆಂದು ಚೀನಾ ಮತ್ತು ರಷ್ಯಾ ಕರೆನೀಡಿವೆ.



ಪಾಕಿಸ್ತಾನ ನಡೆಸಿದ ಹೊಸ ದಾಳಿಗೆ 274 ತಾಲಿಬಾನಿ ಹೋರಾಟಗಾರರು ಬಲಿಯಾಗಿದ್ದು, 12 ಪಾಕ್ ಸೈನಿಕರಷ್ಟೇ ಮೃತಪಟ್ಟಿದ್ದಾರೆಂದು ಪಾಕ್ ಹೇಳಿದೆ. ಗುರುವಾರ ಅಫ್ಘಾನ್ ನಡೆಸಿದ ಪ್ರತಿ ದಾಳಿಗೆ 55 ಪಾಕ್ ಸೈನಿಕರು ಬಲಿಯಾಗಿದ್ದರೆಂಬು ದಾಗಿ ಅಫ್ಘಾನ್ ವಕ್ತಾರ ಹೇಳಿದ್ದಾರೆ. ಆದರೆ ಇವು ಯಾವುವೂ ಪರಿಶೀಲಿಸಲ್ಪಟ್ಟ ಮಾಹಿತಿಯಲ್ಲ.

ಆಪರೇಷನ್ ಘಜಬ್ ಲಿಲ್ ಹಕ್: ಫೆ.26ರಂದು ಪಾಕ್ ವಾಯುದಾಳಿಗೆ ತಾಲಿಬಾನ್ ಪ್ರತಿ ದಾಳಿ ನಡೆಸಿದ್ದು, 55 ಪಾಕ್ ಸೈನಿಕರು ಹತರಾಗಿದ್ದರೆಂದು ಹೇಳಿಕೊಂಡಿದೆ. 12 ಸೈನಿಕರು ಮೃತಪಟ್ಟಿರುವುದನ್ನು ಪಾಕಿಸ್ತಾನ ಒಪ್ಪಿದೆ. ಗುರುವಾರ ರಾತ್ರಿ ಅಫ್ಘಾನ್ ನೀಡಿದ ಪ್ರತ್ಯುತ್ತರಕ್ಕೆ ಕುಪಿತಗೊಂಡ ಪಾಕ್ ಆಡಳಿತ ಶುಕ್ರವಾರ ಯುದ್ಧ ನಡೆಸುತ್ತೇವೆಂದು ಬೆದರಿಕೆಯೊಡ್ಡಿದ್ದಲ್ಲದೆ, ಮತ್ತೆ ಆಪರೇಷನ್ ಘಜಬ್ ಲಿಲ್ ಹಕ್ ಹೆಸರಿನ ಕಾರ್ಯಾಚರಣೆ ನಡೆಸಿರುವುದಾಗಿ ಹೇಳಿಕೊಂಡಿದೆ. 274 ತಾಲಿಬಾನಿ ಹೋರಾಟಗಾರರನ್ನು ಹೊಡೆದುರುಳಿಸಿದ್ದಾಗಿ ಹೇಳಿದೆ. ➡ಪುಟ ೭

- ಪಾಕ್ ದಾಳಿಗೆ 274 ತಾಲಿಬಾನ್ ಹೋರಾಟಗಾರರ ಬಲಿ
- ಅಫ್ಘಾನ್ ದಾಳಿಗೆ 55 ಪಾಕ್ ಸೈನಿಕರ ಸಾವು
- 12 ಸೈನಿಕರಷ್ಟೇ ಸಾವು ಎಂದ ಪಾಕ್
- ಕಾಬೂಲ್, ಕಂದಹಾರ್, ಪಾಕ್ಟಿಯಾ ಮೇಲೆ ಪಾಕ್ ದಾಳಿ

ಭಾರತದ ಈವರೆಗಿನ ನಿಲುವು?

ಡುರಾಂಡ್ ಗಡಿರೇಖೆ ವಿವಾದವು ಪಾಕ್, ಅಫ್ಘಾನಿಸ್ತಾನದ ದ್ವಿಪಕ್ಷೀಯ ಭಿನ್ನಾಭಿಪ್ರಾಯ ಎಂಬುದು ಭಾರತದ ಈವರೆಗಿನ ತಟಸ್ಥ ನಿಲುವಾಗಿದೆ. ➡ಪುಟ ೭

ಏನಿದು ಡುರಾಂಡ್ ಗಡಿರೇಖೆ?



ಖೈಬರ್ ಪಖ್ತುನ್‌ಖ್ವಾ, ಪಾಕ್ ಮತ್ತು ಅಫ್ಘಾನ್ ನಡುವಿನ ಗಡಿ ಪ್ರದೇಶವಾಗಿದ್ದು, ಇಲ್ಲಿ 2,611 ಕಿ.ಮೀ. ಉದ್ದದ ಡುರಾಂಡ್ ಗಡಿ ರೇಖೆಯಿದೆ. ಇದು 1893ರಲ್ಲಿ ಸಹಿ ಮಾಡಿದ ಒಪ್ಪಂದವಾಗಿದೆ. ಬ್ರಿಟಿಷ್ ಆಳ್ವಿಕೆ ಸಮಯದಲ್ಲಿ ಭಾರತದ ವಿದೇಶಾಂಗ ಕಾರ್ಯದರ್ಶಿ ಮೋರ್ಟಿಮೆರ್ ಡುರಾಂಡ್, ಅಫ್ಘಾನಿಸ್ತಾನದ ಆಮಿರ್ ಅಬ್ದುರ್ ರೆಹಮಾನ್ ಖಾನ್ ಡುರಾಂಡ್ ಗೆರೆ ಒಪ್ಪಂದಕ್ಕೆ ಸಹಿ ಮಾಡಿದ್ದರು. ಈ ಒಪ್ಪಂದವು ಪಶ್ತೂನ್ ಬುಡಕಟ್ಟು ಸಮುದಾಯವನ್ನು ಪ್ರತ್ಯೇಕಿಸಿತು. 1947ರಲ್ಲಿ ಪಾಕಿಸ್ತಾನ ಪ್ರತ್ಯೇಕ ರಾಷ್ಟ್ರವಾದ ಬಳಿಕ ಡುರಾಂಡ್ ಗೆರೆಯನ್ನು ತನ್ನ ಪಶ್ಚಿಮದ ಗಡಿ ರೇಖೆಯೆಂದು ಪರಿಗಣಿಸಿತು. ➡ಪುಟ ೭

ಜಿಎಎಫ್‌ಎಕ್ಸ್‌ನ 7ನೇ ಆವೃತ್ತಿ ಉದ್ಘಾಟನೆ

ಬೆಂಗಳೂರು ಸೃಜನಶೀಲ ರಾಜಧಾನಿ ಆಗಲಿ: ಸಿಎಂ



• **ಬೆಂಗಳೂರು:** ಕರ್ನಾಟಕವನ್ನು ಭಾರತದ ಸಿಲಿಕಾನ್ ಸಿಟಿ ವ್ಯಾಲಿ ಎಂದು ಪರಿಗಣಿಸುವುದು ಮಾತ್ರವಲ್ಲದೆ, ಪ್ರಪಂಚದ ಸೃಜನಶೀಲ ರಾಜಧಾನಿ ಎಂದು ಕರೆಯುವಂತಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆ ನೀಡಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಶುಕ್ರವಾರ ನಡೆದ ಜಿಎಎಫ್‌ಎಕ್ಸ್‌ನ ಏಳನೇ ಆವೃತ್ತಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಂಗಳೂರು ಕೇವಲ ಭಾರತದ ತಂತ್ರಜ್ಞಾನ ರಾಜಧಾನಿಯಲ್ಲ. ಸೃಜನಶೀಲ ಬಂಡವಾಳವನ್ನು ಕಂಡುಕೊಳ್ಳುವ ಸ್ಥಳ. ಸಾಫ್ಟ್‌ವೇರ್‌ನಿಂದ ಬಾಹ್ಯಾಕಾಶ ಸಂಶೋಧನೆಯವರೆಗೆ, ಬಯೋಟೆಕ್‌ನಿಂದ ಡೀಪ್-ಟೆಕ್‌ವರೆಗೆ ಬೆಂಗಳೂರು ಯಾವಾಗಲೂ ಕ್ರಾಂತಿಗಳ ಗಡಿಯಲ್ಲಿ ನಿಂತಿದೆ ಎಂದರು.

ಗೇಮ್ಸ್, ಅನಿಮೇಷನ್ ಮತ್ತು ವಿಷುವಲ್ ಎಫೆಕ್ಟ್ ವಲಯವು ಇನ್ನು ಮುಂದೆ ಸಣ್ಣ ಸೃಜನಶೀಲ ಉದ್ಯಮವಲ್ಲ. ಡಿಜಿಟಲ್ ಕ್ರಾಂತಿ, ತಲ್ಲೀನಗೊಳಿಸುವ ಮಾಧ್ಯಮ, ಸ್ಟ್ರೀಮಿಂಗ್ ಪ್ಲಾಟ್‌ಫಾರ್ಮ್‌ಗಳು, ಇ-ಸ್ಪೋರ್ಟ್ಸ್ ಮತ್ತು ವಾಸ್ತವದ ಯುಗದಲ್ಲಿ, ಜಿಎಎಫ್‌ಎಕ್ಸ್ ಮಾನವೀಯತೆಯು ಕಥೆಗಳು, ಸಂಸ್ಕೃತಿ, ಶಿಕ್ಷಣ ಮತ್ತು ಆಡಳಿತವನ್ನು ಹೇಗೆ ಅನುಭವಿಸುತ್ತದೆ ಎಂಬುದನ್ನು ರೂಪಿಸುತ್ತಿದೆ ಎಂದು ಸಿದ್ದರಾಮಯ್ಯ ಹೇಳಿದರು. ➡ಪುಟ ೭

ಪ್ರತಿಭಾವಂತರಿಗೆ ಕರ್ನಾಟಕ ಕಾಯಕ ಭೂಮಿ: ಡಿಸಿಎಂ

ಕರ್ನಾಟಕ ರಾಜ್ಯ ಸಂಶೋಧನೆಗೆ, ನೂತನ ಆವಿಷ್ಕಾರಗಳಿಗೆ, ಉದ್ಯೋಗಗಳಿಗೆ ಹಾಗೂ ಪ್ರತಿಭಾವಂತರಿಗೆ ಕಾಯಕ ಭೂಮಿಯಾಗಿದೆ. ಕರ್ನಾಟಕವು 875 ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು (ಜಿಸಿಸಿ) ಹೊಂದಿದೆ. ಡಿಜಿಟಲ್ ಮಾಧ್ಯಮ ಕಂಪನಿಗಳಿಗೆ ನೆಲೆಯಾಗಿ ನಮ್ಮ ರಾಜ್ಯ ರೂಪುಗೊಂಡಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬಣ್ಣಿಸಿದರು. ಬೆಂಗಳೂರು ಜಿಎಎಫ್ ಎಕ್ಸ್ ಸಮ್ಮಿಟ್‌ನಲ್ಲಿ ಮಾತನಾಡಿದ ಅವರು, ಆರೆಂಜ್ ಎಕಾನಮಿ ಬಗ್ಗೆ ಪ್ರಧಾನಮಂತ್ರಿ ಈಗ ಮಾತನಾಡಿದ್ದಾರೆ. ➡ಪುಟ ೭

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿಶ್ವಾಸ

ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರುವೆ

• **ಶಿವಮೊಗ್ಗ:** ರಾಜ್ಯಾದ್ಯಂತ ಪ್ರವಾಸ ಮಾಡಿ ಬಿಜೆಪಿಯನ್ನು ಮತ್ತೊಮ್ಮೆ ಅಧಿಕಾರಕ್ಕೆ ತರುವುದೇ ಮುಖ್ಯ ಗುರಿಯಾಗಿದ್ದು, ಇದಕ್ಕೆ ರಾಜ್ಯದ ಜನರ ಸಹಕಾರ ನೀಡಬೇಕೆಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮನವಿ ಮಾಡಿದರು. ಶಿಕಾರಿಪುರದಲ್ಲಿ ಶುಕ್ರವಾರ ಆಯೋಜಿಸಿದ್ದ ತಮ್ಮ 84ನೇ ಹುಟ್ಟುಹಬ್ಬದ ಸಮಾರಂಭದಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಭ್ರಷ್ಟ ಸರ್ಕಾರವಾಗಿದೆ. ಇದನ್ನು ಕಿತ್ತೊಗೆದು ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕಿದೆ. ರೈತರು, ಬಡವರು ನೆಮ್ಮದಿಯಿಂದ ಬದುಕಲು ಬೇಕಾದ ವಾತಾವರಣ ಮತ್ತೆ ನಿರ್ಮಿಸಬೇಕಿದೆ ಎಂದರು.

ಬಡವರ ಕಣ್ಣೀರು ಒರೆಸಿದ್ದೇನೆ: ರಾಜಕೀಯ ಜೀವನದುದ್ದಕ್ಕೂ ಶೋಷಿತ, ಪೀಡಿತ, ಬಡವರ ಏಳಿಗೆಗಾಗಿ ಹೋರಾಟ ನಡೆಸಿಕೊಂಡು ಬಂದಿದ್ದೇನೆ. ಅಧಿಕಾರ ಸಿಕ್ಕಾಗ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಬಡವರ ಕಣ್ಣೀರು ಒರೆಸುವ ಕೆಲಸ ಮಾಡಿದ್ದೇನೆ ಎಂದರು. ಭಾಗ್ಯಲಕ್ಷ್ಮೀ ಯೋಜನೆ ಮೂಲಕ ಕೋಟ್ಯಂತರ ಹೆಣ್ಣುಮಕ್ಕಳು ಸೌಲಭ್ಯ ಪಡೆದಿದ್ದಾರೆ. ➡ಪುಟ ೭



ನಾನು ಇಂದು ಏನೇ ಆಗಿದ್ದರೂ ಅದಕ್ಕೆ ಶಿಕಾರಿಪುರ ಜನತೆ ಕಾರಣ. ಅವರು ನೀಡಿದ ಶಕ್ತಿಯಿಂದಾಗಿಯೇ ಎಲ್ಲವೂ ಸಾಧ್ಯವಾಗಿದ್ದು, ನನ್ನಂತೆ ನನ್ನ ಮಕ್ಕಳನ್ನೂ ಬೆಂಬಲಿಸುತ್ತಿರುವ ಕ್ಷೇತ್ರದ ಜನತೆಗೆ ನಾನೆಂದಿಗೂ ಚಿರಋಣಿಯಾಗಿರುತ್ತೇನೆ.
■ ಬಿ.ಎಸ್. ಯಡಿಯೂರಪ್ಪ, ಮಾಜಿ ಮುಖ್ಯಮಂತ್ರಿ

ಕಾಂಗ್ರೆಸ್ ವಿರುದ್ಧ ಪ್ರಧಾನಿ ಮೋದಿ ಕಿಡಿ

ಭಾರತದ ಪ್ರತಿಷ್ಠೆಗೆ ಧಕ್ಕೆ ತರುವ ಯತ್ನ

• **ಹೊಸದಿಲ್ಲಿ:** ಎಐ ಇಂಪ್ಯಾಕ್ಟ್ ಸಮಿಟ್ ವೇಳೆ ನಡೆದ ಯುವ ಕಾಂಗ್ರೆಸ್ ಶರ್ಟ್‌ರಹಿತ ಪ್ರತಿಭಟನೆ ಸಂಬಂಧ ಮತ್ತೊಮ್ಮೆ ಕಿಡಿಕಾರಿರುವ ಪ್ರಧಾನಿ ನರೇಂದ್ರ ಮೋದಿ ಅವರು. ದೇಶದ ಅತಿಹಳೆಯ ಪಕ್ಷವೇ ಭಾರತದ ಚಿತ್ರವನ್ನು ಹಾಳು ಮಾಡಲು ಯತ್ನಿಸಿದೆ ಎಂದು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಖಾಸಗಿ ವಾಹಿನಿಯೊಂದು ಆಯೋಜಿಸಿದ್ದ ರೈಸಿಂಗ್ ಭಾರತ ಎಂಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಫೆ.21ರಂದು ಮುಕ್ತಾಯವಾದ ಎಐ ಶೃಂಗಸಭೆ ದೇಶದ ಹೆಮ್ಮೆಯ ಕ್ಷಣವಾಗಿತ್ತು. ಕೃತಕ ಬುದ್ಧಿಮತ್ತೆಯ ಯುಗದಲ್ಲಿ ಭಾರತ ಜಾಗತಿಕ ಚರ್ಚೆಯನ್ನು ರೂಪಿಸುತ್ತಿರುವ ಸಂದರ್ಭದಲ್ಲಿ ಈ ರೀತಿಯ ಪ್ರತಿಭಟನೆ 'ಕೀಳು ತಂತ್ರ' ಎಂದು ಪ್ರಧಾನಿ ಟೀಕಿಸಿದರು. ವಿದೇಶಿ ಅತಿಥಿಗಳ ಸಮ್ಮುಖದಲ್ಲಿ ಕಾಂಗ್ರೆಸ್ ತನ್ನ 'ಸೈದ್ಧಾಂತಿಕ ದಿವಾಳಿತನ' ಬಯಲು ಮಾಡಿಕೊಂಡಿದೆ ಎಂದು ಹೇಳಿದರು.

'ಕಾಂಗ್ರೆಸ್ ಎಷ್ಟೇ ಶರ್ಟ್ ಹರಿದರೂ ನಾವು ನಮ್ಮ ಕೆಲಸ ಮಾಡುತ್ತೇವೆ,' ಎಂದು ಸ್ಪಷ್ಟಪಡಿಸಿದ ಪ್ರಧಾನಿ, ವಿಫಲತೆಗಳಿಂದ ಹುಟ್ಟಿದ ನಿರಾಶೆ ಮತ್ತು ಅಹಂಕಾರವೇ ಅವರ ಇಂಥ ಅಂಥ ವಿರೋಧಗಳಿಗೆ ಕಾರಣ ಎಂದು ಕಿಡಿಕಾರಿದರು.

ಬಾಪು ಹೆಸರಿನಿಂದ ತಪ್ಪು ಮುಚ್ಚುವ ಪ್ರಯತ್ನ:

ಪ್ರತಿಭಟನೆಗೆ ಸಂಬಂಧಿಸಿ ಮಹಾತ್ಮ ಗಾಂಧಿಯ ಹೆಸರನ್ನು ಮುಂದಿಟ್ಟಿರುವ ಕುರಿತು ಮಾತನಾಡಿದ ಪ್ರಧಾನಿ, ಕಾಂಗ್ರೆಸ್ ತನ್ನ ತಪ್ಪುಗಳನ್ನು ಮುಚ್ಚಲು ಸದಾ ಬಾಪು ಹೆಸರನ್ನು ಬಳಸುತ್ತದೆ, ಆದರೆ ಶ್ರೇಯಸ್ಸು ಬಂದಾಗ ಒಂದೇ ಕುಟುಂಬಕ್ಕೆ ನೀಡುತ್ತದೆ ಎಂದು ಆರೋಪಿಸಿದರು.

370 ವಿಧಿ ರದ್ದು, ತ್ರಿವಳಿ ತಲಾಖ್ ನಿಷೇಧ, ಸಿಎಎ, ಮಹಿಳಾ ಮೀಸಲು ಮಸೂದೆ, ಯುಪಿಐ, ಸರ್ಜಿಕಲ್ ಸ್ಟ್ರೈಕ್, ಅಶೋಕ ಸ್ತಂಭ ಸೇರಿದಂತೆ ಹಲವು ವಿಚಾರಗಳಲ್ಲಿ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿದೆ ಎಂದು ಉಲ್ಲೇಖಿಸಿದ ಅವರು, 'ಸಿದ್ಧಾಂತದ ಹೆಸರಿನಲ್ಲಿ ಕಾಂಗ್ರೆಸ್ ಈಗ ಕೇವಲ ಟೂಲ್‌ಕಿಟ್ ಆಗಿ ಕುಗ್ಗಿದೆ,' ಎಂದು ಟೀಕಿಸಿದರು.



ಪ್ರತಿಪಕ್ಷ ಪರ್ಯಾಯ ದೃಷ್ಟಿಕೋನ ನೀಡಲಿ

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಪ್ರತಿಪಕ್ಷದ ಪಾತ್ರ ಅಂಧವಿರೋಧವಲ್ಲ; ಪರ್ಯಾಯ ದೃಷ್ಟಿಕೋನ ಮಂಡಿಸುವುದಾಗಿದೆ ಎಂದು ಪ್ರಧಾನಿ ತಿಳಿಸಿದರು. 2047ರೊಳಗೆ ಆತ್ಮನಿರ್ಭರ, ಶಕ್ತಿಶಾಲಿ ಭಾರತ ನಿರ್ಮಾಣ ನಮ್ಮ ಗುರಿ. ಕಾಂಗ್ರೆಸ್ ಎಷ್ಟೇ ವಿರೋಧಿಸಿ ದರೂ ನಾವು ನಿರಂತರವಾಗಿ ಕೆಲಸ ಮುಂದು ವರಿಸಿಕೊಂಡು ಹೋಗುತ್ತೇವೆ ಎಂದು ಹೇಳಿದರು.

ಆತ್ಮವಿಶ್ವಾಸಿ ಭಾರತವೇ ವ್ಯಾಪಾರ ಒಪ್ಪಂದಗಳ ಆಧಾರ: ಕಳೆದ 11 ವರ್ಷಗಳಲ್ಲಿ ಭಾರತ ತನ್ನ ಶಕ್ತಿಯನ್ನು ಮರು ಅನ್ವೇಷಿಸಿಕೊಂಡು ವಸಾಹತು ಮನೋಭಾವದಿಂದ ಹೊರಬಂದಿದೆ ಎಂದು ಪ್ರಧಾನಿ ಹೇಳಿದರು. ಒಂದು ಕಾಲದಲ್ಲಿ ವಿದೇಶಿ ತಂತ್ರಜ್ಞಾನವನ್ನು ನಕಲಿಸುತ್ತಿದ್ದ ಭಾರತ, ಇಂದು ಅಭಿವೃದ್ಧಿಹೊಂದಿದ ರಾಷ್ಟ್ರಗಳೇ ವ್ಯಾಪಾರ ಒಪ್ಪಂದಕ್ಕೆ ಮುಂದಾಗುವ ಮಟ್ಟಿಗೆ ಬೆಳೆದಿದೆ. ಕೆಲವರಿಗೆ ಇದು ನಂಬಲಾಗದ ಸಂಗತಿ ಎಂದರು.

ಬ್ಯಾಂಕಿಂಗ್ ವ್ಯವಸ್ಥೆ ಬಲಪಡಿಸುವುದು, ದರ ಏರಿಕೆಯನ್ನು ನಿಯಂತ್ರಿಸುವುದು, ಭಾರತವನ್ನು ಜಾಗತಿಕ ಬೆಳವಣಿಗೆಯ ಎಂಜಿನ್ ಆಗಿ ರೂಪಿಸುವುದು ದೇಶದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದೆ ಎಂದು ಹೇಳಿದರು.

ವ್ಯಾಪಾರ ವೃದ್ಧಿಸಲು ಪ್ರವಾಸ: ಕಾರ್ನಿ

• **ಮುಂಬೈ:** ಭಾರತ ವಿಶ್ವದಲ್ಲಿಯೇ ಅತಿ ವೇಗದಲ್ಲಿ ಮುನ್ನುಗ್ಗುತ್ತಿರುವ ಆರ್ಥಿಕತೆಯಾಗಿದ್ದು, ಕೆನಡಾದ ಕಾರ್ಮಿಕರು ಮತ್ತು ಉದ್ಯಮಗಳಿಗೆ ಹೊಸ ವ್ಯಾಪಾರ ಅವಕಾಶಗಳನ್ನು ಸೃಷ್ಟಿಸಬಲ್ಲ ಪಾಲುದಾರಿಕೆ ಸಂಬಂಧ ಬೆಸೆಯುವುದಕ್ಕಾಗಿ ಭಾರತಕ್ಕೆ ಭೇಟಿ ನೀಡಿದ್ದೇನೆ ಎಂದು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಶುಕ್ರವಾರ ಹೇಳಿದ್ದಾರೆ.

ತಮ್ಮ ನಾಲ್ಕು ದಿನಗಳ ಭಾರತ ಪ್ರವಾಸದ ಹಿನ್ನೆಲೆ ಶುಕ್ರವಾರ ಮುಂಬೈಗೆ ಬಂದಿಳಿದ ಕೆನಡಾ ಪ್ರಧಾನಿಗೆ ಕೆಂಪು ಹಾಸಿನ ಸ್ವಾಗತವನ್ನು ನೀಡಲಾಯಿತು.

ಕಾರ್ನಿ ತಮ್ಮ ನಿಯೋಗದೊಂದಿಗೆ ಸೋಮವಾರ ದಿಲ್ಲಿಗೆ ಪ್ರಯಾಣಿಸಲಿದ್ದು, ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಚರ್ಚೆ ನಡೆಸಲಿದ್ದಾರೆ.

ಮೋದಿ ಜತೆ ವ್ಯಾಪಾರ, ಹೂಡಿಕೆ ಮತ್ತು ಖಲಿಸ್ತಾನಿ ಉಗ್ರ ಸಂಘಟನೆಯ ನಿಗ್ರಹ ಸೇರಿ ಹಲವು ಕ್ಷೇತ್ರಗಳಲ್ಲಿನ ದ್ವಿಪಕ್ಷೀಯ ಸಹಯೋಗದ ಕುರಿತು ಕಾರ್ನಿ ಚರ್ಚೆ ನಡೆಸಲಿದ್ದಾರೆ.

ಟ್ರುಡೊ ಕುತಂತ್ರ ಮರೆಸುವ ಯತ್ನ: ಕೆನಡಾ ಮಾಜಿ ಪ್ರಧಾನಿ ಜಸ್ಟಿನ್ ಟ್ರುಡೊಯಿಂದಾಗಿ ಹಳಸಿದ ಭಾರತದೊಂದಿಗಿನ ಸಂಬಂಧ ಸುಧಾರಣೆಗೆ ಕಾರ್ನಿ ಉತ್ತೇಜನ ನೀಡುತ್ತಿದ್ದು, ಖಲಿಸ್ತಾನಿ ವಿಚಾರದಲ್ಲಿ ಟ್ರುಡೊಯ ಭಾರತ ವಿರೋಧಿ ನಿಲುವನ್ನು ಕಾರ್ನಿ ಬದಲಿಸುವ ನಿರೀಕ್ಷೆಯಿದೆ.

ತಾಜ್ ಹೋಟೆಲ್‌ನಲ್ಲಿ ಕಾರ್ನಿ: ಮುಂಬೈಗೆ ಬಂದಿಳಿದ ಪ್ರಧಾನಿ ಕಾರ್ನಿ ಮತ್ತು ಅವರ ಪತ್ನಿ ಡಯಾನಾ ಫಾಕ್ಸ್ ಕಾರ್ನಿ ತಾಜ್ ಹೋಟೆಲ್‌ನಲ್ಲಿ ವಿಶ್ರಾಂತಿ ಪಡೆದಿದ್ದಾರೆ.

ಭಾರತದ ನೆರೆಯ ಇಸ್ಲಾಮಿಕ್ ರಾಷ್ಟ್ರಗಳೆರಡರ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಅಫ್ಘಾನಿಸ್ತಾನದ ವಿರುದ್ಧ ಪಾಕಿಸ್ತಾನ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಯುದ್ಧ ಘೋಷಿಸಿದ್ದಾರೆ. ಅಫ್ಘಾನ್ ಇಂದಿಗೂ ಒಪ್ಪಿಕೊಳ್ಳದ ಖೈಬರ್ ಪಖ್ತುನ್‌ಖ್ವಾದಲ್ಲಿನ 2,611 ಕಿ.ಮೀ. ವ್ಯಾಪ್ತಿಯ ಡುರಾಂಡ್ ರೇಖೆ ಗಡಿ ಪ್ರದೇಶದಲ್ಲಿ ಉದ್ವಿಗ್ನವಾಗಿದೆ. ಇತ್ತೀಚೆಗೆ ಪಾಕಿಸ್ತಾನ ನಡೆಸಿದ್ದ ವಾಯುದಾಳಿಯಿಂದಾಗಿ ಈ ಪ್ರದೇಶದಲ್ಲಿ ಮತ್ತೊಮ್ಮೆ ದೊಡ್ಡ ಮಟ್ಟದ ಅಶಾಂತಿ ಸೃಷ್ಟಿಯಾಗಿದೆ. ಪಾಕಿಸ್ತಾನ ನಡೆಸಿದ ದಾಳಿಗೆ ಪ್ರತ್ಯುತ್ತರವಾಗಿ ಗುರುವಾರ ಅಫ್ಘಾನಿಸ್ತಾನ ಪ್ರತಿದಾಳಿ ನಡೆಸಿದ್ದು, ಶುಕ್ರವಾರ ಮುಂಜಾನೆ ಪಾಕಿಸ್ತಾನವು ಕಾಬೂಲ್ ಸೇರಿದಂತೆ ಇನ್ನೆರಡು ಅಫ್ಘಾನ್ ಪ್ರಾಂತ್ಯಗಳಲ್ಲಿ ವಾಯುದಾಳಿ ನಡೆಸಿರುವುದಾಗಿ ತಾಲಿಬಾನ್ ಸರ್ಕಾರದ ವಕ್ತಾರ ಆರೋಪಿಸಿದ್ದಾರೆ. ಕತಾರ್ ಮಧ್ಯಸ್ಥಿಕೆಯಲ್ಲಿ ನಡೆದಿದ್ದ ಕದನವಿರಾಮ ಒಪ್ಪಂದವನ್ನು ಪಾಕ್ ಉಲ್ಲಂಘಿಸಿತ್ತು. ತಕ್ಷಣ ಕದನವಿರಾಮ ಘೋಷಿಸಲು ಚೀನಾ, ರಷ್ಯಾ ಸಲಹೆ ನೀಡಿವೆ. ಪಾಕ್-ಅಫ್ಘಾನ್ ನಡುವಿನ ಗಡಿ ಬಿಕ್ಕಟ್ಟಿನ ಹಿನ್ನೆಲೆ ಕುರಿತ ಸಂಕ್ಷಿಪ್ತ ಮಾಹಿತಿ ಇಲ್ಲಿದೆ.

ಪಾಕ್ ವಾಯುದಾಳಿ; ಅಫ್ಘಾನ್ ಪ್ರತೀಕಾರ

ಕಳೆದ ಭಾನುವಾರ ಅಫ್ಘಾನ್ ಗಡಿ ಪ್ರದೇಶಗಳ ಮೇಲೆ ನಡೆದ ಪಾಕಿಸ್ತಾನದ ಮಾರಕ ವಾಯುದಾಳಿಗೆ ಪ್ರತೀಕಾರವಾಗಿ ಅಫ್ಘಾನಿಸ್ತಾನವು ಗುರುವಾರ ರಾತ್ರಿ ಗಡಿದಾಟಿ ಪಾಕಿಸ್ತಾನದ ವಿರುದ್ಧ ದಾಳಿ ನಡೆಸಿತ್ತು. ಪಾಕ್ ಸೈನ್ಯದ ಹನ್ನೆರಡುಕ್ಕೂ ಹೆಚ್ಚು ಚೌಕಿಗಳನ್ನು ವಶಪಡಿಸಿಕೊಂಡಿದ್ದಾಗಿ ಅಫ್ಘಾನ್ ಅಧಿಕಾರಿಗಳು ತಿಳಿಸಿದ್ದಾರೆ. ಭಾನುವಾರದ ವಾಯುದಾಳಿ ಉಗ್ರರ ಮೇಲೆ ನಡೆಸಿದ ದಾಳಿ ಎಂದು ಪಾಕ್ ಸರ್ಕಾರ ಹೇಳಿದ್ದು, ಗುರುವಾರದ ಅಫ್ಘಾನ್ ದಾಳಿ ಯಾವುದೇ ಪ್ರಚೋದನೆಯಿಲ್ಲದೆ ಮಾಡಿದ ದಾಳಿ ಎಂದು ಹೇಳಿದೆ. ಸೈನಿಕ ಚೌಕಿಗಳು ವಶ ಆಗಿರುವುದನ್ನು ಪಾಕ್ ತಳ್ಳಿ ಹಾಕಿದೆ.



ಶುಕ್ರವಾರ ಮತ್ತೆ ಪಾಕ್ ವಾಯುದಾಳಿ

ಅಫ್ಘಾನಿಸ್ತಾನದ ಕಾಬೂಲ್, ಕಂದಹಾರ್ ಮತ್ತು ಪಾಕ್ಟಿಯಾ ಪ್ರದೇಶಗಳ ಮೇಲೆ ಪಾಕಿಸ್ತಾನ ಶುಕ್ರವಾರ ವಾಯುದಾಳಿ ನಡೆಸಿದೆ. ಕಾಬೂಲ್‌ನಲ್ಲೇ ಮೂರು ಸ್ಫೋಟಗಳ ಶಬ್ದ ಕೇಳಿಸಿದೆ. ಆದರೆ ಸ್ಫೋಟದ ಪರಿಣಾಮ, ಹಾನಿ ಕುರಿತು ಯಾವುದೇ ಸ್ಪಷ್ಟತೆಯಿಲ್ಲ.

ಯಾಕಿದು ಅಪಾಯಕಾರಿ?

- **ಇಬ್ಬರು ನೆರೆ ರಾಷ್ಟ್ರಗಳ ಮಧ್ಯೆ ನೇರ ಮಿಲಿಟರಿ ಸಂಘರ್ಷ**
- **ಪ್ರಾದೇಶಿಕ ಅಸ್ಥಿರತೆಯ ಅಪಾಯ**
- **ಕದನವಿರಾಮ ಉಲ್ಲಂಘನೆ, ಯುದ್ಧ ಸಾಧ್ಯತೆ**
- **ಪ್ರಾದೇಶಿಕ ಶಕ್ತಿಗಳ ಮತ್ತು ಕತಾರ್ ಮಧ್ಯೆ ಬಿರುಕು ಮೂಡುವ ಸಾಧ್ಯತೆ**

ಭಾರತದ ನಿಲುವು ಏನಿರಲಿದೆ?

ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ ನಡುವೆ ಹೋಲಿಸಿದರೆ, ಭಾರತ ಅಫ್ಘಾನಿಸ್ತಾನದ ಪರ ಮೃದು ಧೋರಣೆ ಹೊಂದಿದೆ. ಪಾಕ್ ಹೊರತುಪಡಿಸಿ ಅಫ್ಘಾನಿಸ್ತಾನ ಹಾಗೂ ಇತರ ನೆರೆ ರಾಷ್ಟ್ರಗಳೊಂದಿಗೆ ಭಾರತ ನೆರೆಹೊರೆಯವರು ಮೊದಲು ಎಂಬ ನಿಲುವು ಹೊಂದಿದೆ. 2025ರ ಏಪ್ರಿಲ್‌ನಲ್ಲಿ ಪಾಕ್ ಉಗ್ರರು ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ಕುಕೃತ್ಯ ನಡೆಸಿದ ಬಳಿಕವಂತೂ ಭಾರತ-ಪಾಕ್ ನಡುವಿನ ಸಂಬಂಧ ಇನ್ನಷ್ಟು ಹಳಸಿತು. ಪಹಲ್ಗಾಮ್ ದಾಳಿಗೆ ಪ್ರತೀಕಾರವಾಗಿ ಭಾರತ ಆಪರೇಷನ್ ಸಿಂದೂರ ನಡೆಸಿತು. 2021ರಿಂದಲೇ ಪ್ರಧಾನಿ ನರೇಂದ್ರ ಮೋದಿ, ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ನೇತೃತ್ವದಲ್ಲಿ ಭಾರತ-ಅಫ್ಘಾನ್ ಸ್ನೇಹ ಇನ್ನಷ್ಟು ಸುಧಾರಿಸಿದ್ದು, ತಾಲಿಬಾನ್ ಸಹ ತಲೆಬಾಗಿದೆ. ಸದ್ಯ ನೆರೆಯ ರಾಷ್ಟ್ರ ಭಾರತದ ನಿಲುವು ಬಹಳ ನಿರ್ಣಾಯಕ ಪಾತ್ರ ವಹಿಸಲಿದೆ.

ಅಧಿಕಪ್ರಸಂಗಿ ಪಾಕ್ ತಾಲಿಬಾನ್ ಅಟ್ಯಾಕ್

ಕದನವಿರಾಮ ಉಲ್ಲಂಘಿಸಿದ ಪಾಕ್‌ಗೆ ಅಫ್ಘಾನ್ ಪ್ರತ್ಯುತ್ತರ 2,611 ಕಿ.ಮೀ. ಉದ್ದದ ಡುರಾಂಡ್ ರೇಖೆ ಬಳಿ ಕಿತ್ತಾಟ ಅಫ್ಘಾನ್ ವಿರುದ್ಧ ಯುದ್ಧ ಘೋಷಿಸಿದ ಪಾಕಿಸ್ತಾನ

ಪ್ರಮುಖ ಬೆಳವಣಿಗೆಗಳು

1. ಕಾಬೂಲ್ ಮತ್ತು ಕಂದಹಾರ್ ಸೇರಿ ಅಫ್ಘಾನಿಸ್ತಾನದ ಪ್ರಮುಖ ನಗರಗಳ ಮೇಲೆ ಪಾಕಿಸ್ತಾನ ವಾಯುದಾಳಿ ನಡೆಸಿದ್ದರಿಂದ ತಾಲಿಬಾನ್ ಸರ್ಕಾರವೂ ಪ್ರತೀಕಾರ ನಡೆಸಿದೆ.
2. ಪಾಕ್ ವಾಯುದಾಳಿಗೆ ಪ್ರತೀಕಾರವಾಗಿ ಅಫ್ಘಾನ್ ಪಡೆಗಳು ಗಡಿ ದಾಟಿ ಹೋಗಿ ಪಾಕ್ ಸೈನಿಕರ ಮೇಲೆ ದಾಳಿ ನಡೆಸಿದೆ.
3. ಡುರಾಂಡ್ ರೇಖೆ ಸಮೀಪ ನಡೆಸಿದ 4 ಗಂಟೆಗಳ ಕಾರ್ಯಾಚರಣೆಯಲ್ಲಿ 55 ಪಾಕ್ ಸೈನಿಕರು ಬಲಿಯಾಗಿದ್ದಾರೆ. ಎರಡು ಮಿಲಿಟರಿ ಬೇಸ್ ಮತ್ತು 19 ಚೌಕಿಗಳನ್ನು ವಶಪಡಿಸಿದ್ದಾಗಿ ಕಾಬೂಲ್ ತಿಳಿಸಿದೆ.
4. ಪಾಕ್ ದಾಳಿಗೆ 8 ಅಫ್ಘಾನ್ ಯೋಧರು ಬಲಿಯಾಗಿದ್ದಾರೆ. 11 ಸೈನಿಕರಿಗೆ ಗಾಯಗೊಂಡಿದ್ದಾಗಿ ತಾಲಿಬಾನ್ ಸರ್ಕಾರ ಆರೋಪಿಸಿದೆ. ನಂಗರ್‌ಹಾರ್ ಎಂಬಲ್ಲಿನ ನಿರಾಶ್ರಿತರ ಶಿಬಿರದ ಮೇಲೆ ಪಾಕ್ ನಡೆಸಿದ ವಾಯುದಾಳಿಗೆ 13 ನಾಗರಿಕರು ಮೃತಪಟ್ಟಿದ್ದಾರೆ ಎಂದು ಅಫ್ಘಾನ್ ಹೇಳಿದೆ.
5. ಪಾಕ್ ಈ ಅಂಕಿಅಂಶಗಳನ್ನು ತಳ್ಳಿ ಹಾಕಿ, ಮಾಹಿತಿ ಸಚಿವ ಅತ್ತಾವುಲ್ಲಾ ತರಾರ್ ಹೇಳಿಕೆ ಪ್ರಕಾರ, ಕೇವಲ ಇಬ್ಬರು ಪಾಕ್ ಸೈನಿಕರು ಬಲಿಯಾಗಿದ್ದು, ಮೂವರು ಗಾಯಗೊಂಡಿದ್ದಾರೆ.
6. ಕನಿಷ್ಠ 133 ಅಫ್ಘಾನ್ ಯೋಧರು ಮೃತಪಟ್ಟಿದ್ದು, 200ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. 27 ಅಫ್ಘಾನ್ ಚೌಕಿಗಳನ್ನು ಧ್ವಂಸಗೊಳಿಸಿದ್ದು, 9 ಚೌಕಿಗಳನ್ನು ವಶಪಡಿಸಿದ್ದಾಗಿ ಪಾಕ್ ಹೇಳಿದೆ.
7. ಪಾಕ್ ಆಪರೇಷನ್ ಘಜಬ್ ಲಿಲ್ ಹಕ್ ಪ್ರಾರಂಭಿಸಿದ್ದು, ಗಡಿ ಚೌಕಿಗಳ ಮೇಲೆ ನಡೆದ ತಾಲಿಬಾನ್ ದಾಳಿಗಳಿಗೆ ಪ್ರತೀಕಾರವೆಂದು ಹೇಳಿದೆ.
8. ರಕ್ಷಣಾ ಸಚಿವ ಖ್ವಾಜಾ ಆಸಿಫ್ ಮುಖಾಮುಖಿ ಸಂಘರ್ಷ ಘೋಷಿಸಿದ್ದು, ನಮ್ಮ ಸಹನೆ ಮಿತಿ ತಲುಪಿದೆ. ಇದು ನಮ್ಮ ಮತ್ತು ನಿಮ್ಮ ನಡುವಿನ ಮುಕ್ತ ಯುದ್ಧವೆಂದು ಘೋಷಿಸಿದರು.
9. ಯಾವುದೇ ಆಕ್ರಮಣವನ್ನು ಮಟ್ಟಹಾಕುವ ಮಾಡುವ ಸಾಮರ್ಥ್ಯ ಪಾಕ್ ಪಡೆಗಳಿಗೆ ಇದೆ ಎಂದು ಪಾಕ್ ಪ್ರಧಾನಿ ಷರೀಫ್ ಹೇಳಿದ್ದು, ತಕ್ಕ ಪ್ರತಿಕ್ರಿಯೆ ನೀಡುವುದಾಗಿ ಗೃಹ ಸಚಿವ ಮೊಹ್ಸಿನ್ ನಖ್ವಿ ಹೇಳಿದ್ದಾರೆ.
10. ಉದ್ವಿಗ್ನತೆ ಹೆಚ್ಚುತ್ತಲೇ, ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಆಂಟೋನಿಯೋ ಗುಟೆರಸ್ ಉಭಯ ರಾಷ್ಟ್ರಗಳು ಅಂತಾರಾಷ್ಟ್ರೀಯ ಕಾನೂನು ಪಾಲಿಸಿ ತಮ್ಮ ನಾಗರಿಕರನ್ನು ರಕ್ಷಿಸಿ, ಬಿಕ್ಕಟ್ಟು ಶಮನಕ್ಕಾಗಿ ರಾಜತಾಂತ್ರಿಕ ಮಾರ್ಗ ಕಂಡುಕೊಳ್ಳಲು ಮನವಿ ಮಾಡಿದ್ದಾರೆ.



ಅಫ್ಘಾನ್ ದಾಳಿಗೆ 55 ಪಾಕ್ ಸೈನಿಕರ ಸಾವು

ಪಾಕ್ ವಾಯುದಾಳಿಗೆ ಪ್ರತೀಕಾರವಾಗಿ ಗುರುವಾರ ರಾತ್ರಿ ಅಫ್ಘಾನಿಸ್ತಾನ ನಡೆಸಿ ಪ್ರತಿದಾಳಿಗೆ 55 ಪಾಕ್ ಸೈನಿಕರು ಬಲಿಯಾಗಿದ್ದಾರೆಂದು ಹೇಳಿದೆ. ಆದರೆ ಅಫ್ಘಾನ್ ಹೇಳಿಕೆಯನ್ನು ಪಾಕ್ ನಿರಾಕರಿಸಿದೆ.

- 55 **ಪಾಕ್ ಸೈನಿಕರ ಸಾವು**
- **ಹಲವು ಪಾಕ್ ಸೈನಿಕರ ಬಂಧನ**
- 19 **ಪಾಕ್ ಸೇನಾ ಚೌಕಿಗಳು,** 2 **ಸೇನಾ ನೆಲೆಗಳ ನಾಶ**
- **ಈ ವೇಳೆ** 8 **ಅಫ್ಘಾನ್ ಸೈನಿಕರು ಬಲಿ,** 11 **ಗಾಯ**

ಕಿರುಸುದ್ದಿ

ಸಬ್‌ಮೆರೀನ್ ನಿಗ್ರಹಿಸಬಲ್ಲ ಡಾಲ್ಫಿನ್ ಹಂಟರ್‌ಗೆ ಚಾಲನೆ

• **ಚೆನ್ನೈ:** ಜಲಾಂತರ್ಗಾಮಿ ನಿಗ್ರಹ ಸಮರ ಸಾಮರ್ಥ್ಯವುಳ್ಳ ಡಾಲ್ಫಿನ್ ಹಂಟರ್ ಐಎನ್‌ಎಸ್ ಅಂಜದೀಪ್ ಯುದ್ಧನೌಕೆಗೆ ಭಾರತೀಯ ನೌಕಾಪಡೆ ಶುಕ್ರವಾರ ಚಾಲನೆ ನೀಡಿತು. ಅತ್ಯಾಧುನಿಕ ಸಮರ ಸಾಮರ್ಥ್ಯ ಹೊಂದಿರುವ ಡಾಲ್ಫಿನ್ ಹಂಟರ್ ಯುದ್ಧನೌಕೆ ಕರಾವಳಿಯ ಕಣ್ಗಾವಲು ಸಾಮರ್ಥ್ಯವನ್ನೂ ಹೊಂದಿದೆ. ನೌಕಾ ಸಿಬ್ಬಂದಿ ಮುಖ್ಯಾಧಿಕಾರಿ ಅಡ್ಮಿರಲ್ ದಿನೇಶ್ ಕೆ.ತ್ರಿಪಾಠಿ ಚೆನ್ನೈ ಬಂದರಿನಲ್ಲಿ ಡಾಲ್ಫಿನ್ ಹಂಟರ್‌ಗೆ ಚಾಲನೆ ನೀಡಿದರು. ಕರಾವಳಿ ಪ್ರದೇಶಗಳಲ್ಲಿ ಸಂಶಯಾಸ್ಪದವಾಗಿ ಸಂಚರಿಸುವ ಶತ್ರು ಜಲಾಂತರ್ಗಾಮಿ ನೌಕೆಗಳನ್ನು ಪತ್ತೆ ಮಾಡಿ, ಧ್ವಂಸಗೊಳಿಸಬಲ್ಲ ಸಾಮರ್ಥ್ಯವನ್ನು ಡಾಲ್ಫಿನ್ ಹಂಟರ್ ಹೊಂದಿದೆ. 77 ಮೀಟರ್ ಉದ್ದದ ಡಾಲ್ಫಿನ್ ಹಂಟರ್ ಹೈಸ್ಪೀಡ್ ವಾಟರ್ ಜೆಟ್ ಪ್ರೊಪಲ್ಶನ್ ಸಿಸ್ಟಮ್ ಅನ್ನು ಹೊಂದಿದೆ. ಜಲಾಂತರ್ಗಾಮಿ ಶತ್ರು ಸಬ್‌ಮರೈನ್‌ಗಳನ್ನು ನಿಗ್ರಹಿಸಬಲ್ಲ 8 ಯುದ್ಧನೌಕೆಗಳ ನಿರ್ಮಾಣ ಯೋಜನೆ ಅನ್ವಯದಲ್ಲಿ ನಿರ್ಮಾಣಗೊಂಡ ತೃತೀಯ ನೌಕೆ ಇದಾಗಿದೆ.

ಟ್ರಂಪ್ ಕೊಲೆಗೆ ಸಂಚು; ಪಾಕ್ ಪ್ರಜೆ ವಿಚಾರಣೆ

• **ನ್ಯೂಯಾರ್ಕ್;** 2024ರ ಅಧ್ಯಕ್ಷೀಯ ಚುನಾವಣಾ ಪ್ರಚಾರದ ಸಮಯದಲ್ಲಿ ಅಮೆರಿಕದ ರಾಜಕಾರಣಿ, ಡೊನಾಲ್ಡ್ ಟ್ರಂಪ್ ಅವರ ಹತ್ಯೆಯನ್ನು ಸಂಘಟಿಸಲು ಪ್ರಯತ್ನಿಸಿದ ಆರೋಪದ ಮೇಲೆ ಪಾಕಿಸ್ತಾನದ ವ್ಯಕ್ತಿಯೊಬ್ಬನನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಆಸಿಫ್ ಮರ್ಚೆಂಟ್ ಎಂಬವರು ವಿಚಾರಣೆಗೆ ಒಳಪಟ್ಟವನಾಗಿದ್ದಾನೆ. ನ್ಯೂಯಾರ್ಕ್‌ನಲ್ಲಿ ಆತನನ್ನು ವಿಚಾರಣೆಗೆ ಒಳಪಡಿಸಲಾಗಿದ್ದು, ಈತ ರಹಸ್ಯ ಕೊಲೆಗೆ ನಿಯೋಜಿಸಿದ ವ್ಯಕ್ತಿಯನ್ನು ಭೇಟಿಯಾಗಿ 5,000 ಡಾಲರ್ ಪಾವತಿಸಿದ್ದ. ಆದರೆ, ಅವರು ರಹಸ್ಯ ಎಫ್‌ಬಿಐ ಏಜೆಂಟ್ ಆಗಿದ್ದರು ಎಂದು ಪ್ರಾಸಿಕ್ಯೂಟರ್ ವಾದಿಸಿದ್ದಾರೆ.

ಡಿಎಂಕೆ ಸೇರಿದ ಜಯಾ ಆಪ್ತ ಒ.ಪನ್ನೀರ್‌ಸೆಲ್ವಂ

• **ಚೆನ್ನೈ:** ತಮಿಳುನಾಡಿನ ರಾಜಕೀಯದಲ್ಲಿ ದೊಡ್ಡ ಬೆಳವಣಿಗೆಯಾಗಿದ್ದು, ಎಐಎಡಿಎಂಕೆ ಪಕ್ಷದ ಪ್ರಮುಖ ನಾಯಕ ಮತ್ತು ಮೂರು ಬಾರಿ ಮುಖ್ಯಮಂತ್ರಿಯಾಗಿದ್ದ ಒ.ಪನ್ನೀರ್‌ಸೆಲ್ವಂ (ಒಪಿಎಸ್) ಶುಕ್ರವಾರ ಅಧಿಕೃತವಾಗಿ ಆಡಳಿತಾರೂಢ ಡಿಎಂಕೆಗೆ ಸೇರ್ಪಡೆಯಾದರು. ಡಿಎಂಕೆ ಕೇಂದ್ರ ಕಚೇರಿಯಲ್ಲಿ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಒಪಿಎಸ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಜಯಲಲಿತಾ ಅವರ ಅತ್ಯಂತ ಆಪ್ತ, ನಂಬಿಕಸ್ತ ನಾಯಕರಾಗಿದ್ದ ಒಪಿಎಸ್, ಎಐಎಡಿಎಂಕೆಯಿಂದ ಉಚ್ಚಾಟನೆಗೊಂಡ ನಂತರ ಸುದೀರ್ಘ ಕಾನೂನು ಹೋರಾಟ ನಡೆಸಿದ್ದರು.

ಚಿನ್ನ, ಬೆಳ್ಳಿಗೆ ಏ.1ರಿಂದ ದೇಶೀಯ ದರ ಅನ್ವಯ

• **ಹೊಸದಿಲ್ಲಿ:** ಚಿನ್ನ ಮತ್ತು ಬೆಳ್ಳಿ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳ(ಇಟಿಎಫ್) ಮೌಲ್ಯಮಾಪನಕ್ಕಾಗಿ ಹೊಸ ನಿಯಮವನ್ನು ಭಾರತೀಯ ಷೇರು ಮಾರುಕಟ್ಟೆ ನಿಯಂತ್ರಕ ಸಂಸ್ಥೆ (ಸೆಬಿ) ಪ್ರಕಟಿಸಿದೆ. ಏ.1ರಿಂದ ಈ ಮ್ಯೂಚುವಲ್ ಫಂಡ್ ಯೋಜನೆಗಳಲ್ಲಿರುವ ಚಿನ್ನ ಮತ್ತು ಬೆಳ್ಳಿಯ ಮೌಲ್ಯವನ್ನು ನಿರ್ಧರಿಸಲು ಅಂತಾರಾಷ್ಟ್ರೀಯ ದರಗಳ ಬದಲಿಗೆ ದೇಶೀಯ ಮಾರುಕಟ್ಟೆಯ ದರಗಳನ್ನು ಬಳಸಲಾಗುವುದು.

ಅಂತಾರಾಷ್ಟ್ರೀಯ ದರಗಳ ಬದಲಾವಣೆ: ಪ್ರಸ್ತುತ, ಚಿನ್ನ ಮತ್ತು ಬೆಳ್ಳಿ ಇಟಿಎಫ್‌ಗಳ ಮೌಲ್ಯವನ್ನು ಲಂಡನ್ ಬುಲಿಯನ್ ಮಾರ್ಕೆಟ್ ಅಸೋಸಿಯೇಷನ್(ಎಲ್‌ಬಿಎಂಎ) ನಿಗದಿಪಡಿಸುವ ಬೆಲೆಗಳ ಆಧಾರದ ಮೇಲೆ ಲೆಕ್ಕ ಹಾಕಲಾಗುತ್ತಿತ್ತು. ಈ ಬೆಲೆಗಳಿಗೆ ಆಮದು ಸುಂಕ, ತೆರಿಗೆ ಮತ್ತು ಸಾರಿಗೆ ವೆಚ್ಚಗಳನ್ನು ಸೇರಿಸಿ ಅಂತಿಮ ದರವನ್ನು ನಿರ್ಧರಿಸಲಾಗುತ್ತಿತ್ತು. ಆದರೆ, ಇನ್ನು ಮುಂದೆ ಮಾನ್ಯತೆ ಪಡೆದ ಭಾರತೀಯ ಷೇರು ವಿನಿಮಯ ಕೇಂದ್ರಗಳು ಪ್ರಕಟಿಸುವ ಸ್ಪಾಟ್ ಬೆಲೆಯನ್ನು (ಸ್ಪಾಟ್ ಪ್ರೈಸ್) ಬಳಸಲಾಗುತ್ತದೆ ಎನ್ನಲಾಗಿದೆ.

ಪಾರದರ್ಶಕತೆ ಮತ್ತು ಏಕರೂಪತೆ: ಸ್ಥಳೀಯ ಮಾರುಕಟ್ಟೆಯ ಪರಿಸ್ಥಿತಿಗೆ ಅನುಗುಣವಾಗಿ ನಿಖರ ಬೆಲೆಯನ್ನು ಗ್ರಾಹಕರಿಗೆ ಒದಗಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಭಾರತೀಯ ಷೇರು ವಿನಿಮಯ ಕೇಂದ್ರಗಳು ಸರ್ಕಾರದ ನಿಯಂತ್ರಣದಲ್ಲಿ ಕೆಲಸ ಮಾಡುವುದರಿಂದ, ಈ ಪ್ರಕ್ರಿಯೆ ಹೆಚ್ಚು ಪಾರದರ್ಶಕವಾಗಿರುತ್ತದೆ. ಈ ಬದಲಾವಣೆಯನ್ನು ಸುಗಮವಾಗಿ ಜಾರಿಗೆ ತರಲು ಭಾರತೀಯ ಮ್ಯೂಚುವಲ್ ಫಂಡ್ ಸಂಘಟನೆಯ(ಎಎಂಎಫ್‌ಐ) ಜತೆಗೂಡಿ ಏಕರೂಪದ ನೀತಿಯನ್ನು ರೂಪಿಸುವುದಾಗಿ ಸೆಬಿ ತಿಳಿಸಿದೆ.

3ನೇ ತ್ರೈಮಾಸಿಕದಲ್ಲಿ 7.8% ಆರ್ಥಿಕ ವೃದ್ಧಿ

• **ಹೊಸದಿಲ್ಲಿ:** 2025-26ನೇ ಹಣಕಾಸು ವರ್ಷದ ಅಕ್ಟೋಬರ್-ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಆರ್ಥಿಕತೆ ಶೇ.7.8 ಬೆಳವಣಿಗೆ ದಾಖಲಿಸಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಈ ಪ್ರಮಾಣ ಶೇ.7.4 ಇತ್ತು. 2022-23ಅನ್ನು ಆಧಾರ ವರ್ಷವಾಗಿ ಪರಿಗಣಿಸಿರುವ ಹೊಸ ರಾಷ್ಟ್ರೀಯ ಖಾತೆಗಳ ಸರಣಿಯ ಮಾಹಿತಿ ಈ ಸಂಗತಿಯನ್ನು ಸ್ಪಷ್ಟಪಡಿಸಿದೆ.

- **ಪ್ರಸ್ತುತ ಸಾಲಿನ ಬೆಳವಣಿಗೆ ಅಂದಾಜು ಶೇ.7.6ಕ್ಕೆ ಏರಿಕೆ**

ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಜಾರಿ ಸಚಿವಾಲಯವು ಶುಕ್ರವಾರ 2022-23 ಆಧಾರ ವರ್ಷದ ವಾರ್ಷಿಕ ಹಾಗೂ ತ್ರೈಮಾಸಿಕ ರಾಷ್ಟ್ರೀಯ ಖಾತೆಗಳ ಹೊಸ ಸರಣಿಯನ್ನು ಪ್ರಕಟಿಸಿದೆ. ಇದರಿಂದಾಗಿ 2011-12 ಆಧಾರ ವರ್ಷ ಹೊಂದಿದ್ದ ಹಳೆಯ ಸರಣಿಯನ್ನು ಅಧಿಕೃತವಾಗಿ ಬದಲಾಯಿಸಲಾಗಿದೆ.

ಹೊಸ ಸರಣಿಯ ಪ್ರಕಾರ, ಪ್ರಸ್ತುತ ಹಣಕಾಸು ವರ್ಷದಲ್ಲಿ ಒಟ್ಟು ದೇಶೀಯ ಉತ್ಪನ್ನ (ಜಿಡಿಪಿ) ಶೇ.7.6 ಪ್ರಮಾಣದಲ್ಲಿ ಬೆಳೆಯುವ ನಿರೀಕ್ಷೆಯಿದೆ. ಜನವರಿಯಲ್ಲಿ ಬಿಡುಗಡೆ ಮಾಡಿದ್ದ ಮುಂಗಡ ಅಂದಾಜಿನಲ್ಲಿ ಶೇ.7.4 ಬೆಳವಣಿಗೆ ಎಂದು ಹೇಳಲಾಗಿತ್ತು. ಇದೀಗ ಅದನ್ನು ಮೇಲ್ಮಟ್ಟಕ್ಕೆ ಪರಿಷ್ಕರಿಸಲಾಗಿದೆ. 2025-26ರ ಜುಲೈ-ಸೆಪ್ಟೆಂಬರ್ ಅವಧಿಯ ಬೆಳವಣಿಗೆ ದರವನ್ನು ಶೇ.8.2ರಿಂದ ಶೇ.8.4ಗೆ ಏರಿಸಲಾಗಿದೆ. ಆದರೆ, ಮೊದಲ ತ್ರೈಮಾಸಿಕದ ಬೆಳವಣಿಗೆ ದರವನ್ನು ಶೇ.7.8ರಿಂದ ಶೇ.6.7ಕ್ಕೆ ಇಳಿಸಲಾಗಿದೆ. ಹೊಸ ಆಧಾರ ವರ್ಷದ ಜಿಡಿಪಿ ಸರಣಿ ದೇಶದ ಆರ್ಥಿಕ ಚಟುವಟಿಕೆಗಳ ನಿಖರ ಚಿತ್ರಣ ನೀಡಲಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಹಣ ಅಕ್ರಮ ವರ್ಗಾವಣೆ: ಪಿ.ಚಿದಂಬರಂಗೆ ಸಂಕಷ್ಟ

• **ಹೊಸದಿಲ್ಲಿ:** ಕಾಂಗ್ರೆಸ್ ಹಿರಿಯ ನಾಯಕ ಪಿ.ಚಿದಂಬರಂ ವಿರುದ್ಧದ ಐಎನ್‌ಎಕ್ಸ್ ಮೀಡಿಯಾ ಹಾಗೂ ಏರ್‌ಸೆಲ್-ಮ್ಯಾಕ್ಸಿಸ್ ಹಣಕಾಸು ಅಕ್ರಮ ಪ್ರಕರಣಗಳಲ್ಲಿ ಕಾನೂನುಬದ್ಧವಾಗಿ ಅಗತ್ಯವಿರುವ ದೋಷಾರೋಪಣೆ ಅನುಮೋದನೆಯನ್ನು ಇಡಿ ಪಡೆದಿದೆ. ಇದರಿಂದ ಪ್ರಮುಖ ಕಾನೂನು ಅಡೆತಡೆ ನಿವಾರಣೆಯಾಗಿದ್ದು, ವಿಚಾರಣೆ ವೇಗವಾಗಿ ಮುಂದು ವರಿಸಲು ದಾರಿ ಸುಗಮವಾಗಿದೆ. ಈ ಎರಡೂ ಪ್ರಕರಣಗಳು ಚಿದಂಬರಂ ಅವರು ಕೇಂದ್ರ ಹಣಕಾಸು ಸಚಿವರಾಗಿದ್ದ ಅವಧಿಯ ಹಣಕಾಸು ಅಕ್ರಮ ಆರೋಪಗಳಿಗೆ ಸಂಬಂಧಿಸಿದ್ದಾಗಿವೆ. ಅವರು ಮತ್ತು ಇತರ ಆರೋಪಿಗಳು ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದಾರೆ.

ಪಿಎಂಎಲ್‌ಎ(ಹಣಕಾಸು ಅಕ್ರಮಗಳ ತಡೆ ಕಾಯ್ದೆ) ಅನ್ವಯ ಜನ ಪ್ರತಿನಿಧಿಗಳ ವಿರುದ್ಧ ದೋಷಾರೋಪಣೆ ಮಾಡುವ ಮೊದಲು ಪೂರ್ವಾನುಮತಿ ಕಡ್ಡಾಯ ಎಂದು 2024ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪಿನಿಂದ ಹಲವು ಪ್ರಕರಣಗಳಲ್ಲಿ ಪ್ರಕ್ರಿಯಾತ್ಮಕ ಸವಾಲುಗಳು ಉದ್ಭವಿಸಿದ್ದವು. ಇದೀಗ ಫೆ.10ರಂದು ಸಂಬಂಧಿತ ಪ್ರಾಧಿಕಾರ ಅನುಮೋದನೆ ನೀಡಿರುವುದಾಗಿ ಇಡಿ ರೋಸ್ ಅವೆನ್ಯೂ ನ್ಯಾಯಾಲಯಕ್ಕೆ ತಿಳಿಸಿದೆ. ಐಎನ್‌ಎಕ್ಸ್ ಮೀಡಿಯಾ ಪ್ರಕರಣದಲ್ಲಿ, ವಿದೇಶಿ ಹೂಡಿಕೆ ಪ್ರೋತ್ಸಾಹ ಮಂಡಳಿ (ಎಫ್‌ಐಪಿಬಿ) ಅನುಮೋದನೆಯನ್ನು ಲಾಭಕ್ಕಾಗಿ ನೀಡಲಾಗಿದೆ ಎಂದು ಆರೋಪಿಸಲಾಗಿದೆ. ಸುಮಾರು 65.88 ಕೋಟಿ ರೂ. ಅಕ್ರಮ ಆದಾಯವನ್ನು ಶೆಲ್ ಕಂಪನಿಗಳ ಮೂಲಕ ವರ್ಗಾಯಿಸಲಾಗಿದೆ ಎಂದು ಇಡಿ ಹೇಳಿದೆ. ಏರ್‌ಸೆಲ್-ಮ್ಯಾಕ್ಸಿಸ್ ಪ್ರಕರಣದಲ್ಲಿ 2006ರಲ್ಲಿ 3,565 ಕೋಟಿ ರೂ. ವಿದೇಶಿ ಹೂಡಿಕೆ ಅನುಮೋದನೆಯಲ್ಲಿ ಅಕ್ರಮ ನಡೆದಿದೆ ಎಂದು ತನಿಖಾಧಿಕಾರಿಗಳು ಆರೋಪಿಸಿದ್ದಾರೆ.

ಕೇರಳ ಸ್ಟೋರಿ 2 ಬಿಡುಗಡೆಗೆ ಹೈ ಹಸಿರು ನಿಶಾನೆ

• **ಕೊಚ್ಚಿ:** ದಿ ಕೇರಳ ಸ್ಟೋರಿ 2-ಗೋಸ್ ಬಿಯಾಂಡ್ ಚಿತ್ರದ ಬಿಡುಗಡೆಗೆ ಇದ್ದ ತಡೆಯನ್ನು ಕೇರಳ ಹೈಕೋರ್ಟ್ ಶುಕ್ರವಾರ ತೆರವುಗೊಳಿಸಿದೆ. ಚಿತ್ರದ ಪ್ರದರ್ಶನಕ್ಕೆ 15 ದಿನಗಳ ಕಾಲ ತಡೆ ನೀಡಿದ್ದ ಏಕ ಸದಸ್ಯ ಪೀಠದ ಆದೇಶಕ್ಕೆ ವಿಭಾಗೀಯ ಪೀಠ ತಡೆಯಾಜ್ಞೆ ನೀಡಿದೆ. ನ್ಯಾಯಮೂರ್ತಿ ಎಸ್.ಎ.ಧರ್ಮಾಧಿಕಾರಿ ಮತ್ತು ನ್ಯಾಯಮೂರ್ತಿ ಪಿ.ವಿ.ಬಾಲಕೃಷ್ಣನ್ ಅವರನ್ನೊಳಗೊಂಡ ಪೀಠ, ನಿರ್ಮಾಪಕ ವಿಪುಲ್ ಅಮೃತಲಾಲ್ ಶಾ ಸಲ್ಲಿಸಿದ ತುರ್ತು ಮೇಲ್ಮನವಿಯ ನಂತರ ಈ ಮಧ್ಯಂತರ ಆದೇಶ ಹೊರಡಿಸಿದೆ. ಕೇವಲ ಚಿತ್ರದ ತುಣುಕುಗಳನ್ನು ನೋಡಿ ಇಡೀ ಸಿನಿಮಾದ ಬಿಡುಗಡೆಗೆ ತಡೆ ನೀಡುವುದು ಸರಿಯಲ್ಲ ಎಂದು ಪೀಠ ಅಭಿಪ್ರಾಯಪಟ್ಟಿದೆ. ಸೆನ್ಸಾರ್ ಮಂಡಳಿ (ಸಿಬಿಎಫ್‌ಸಿ) ಚಿತ್ರವನ್ನು ಪರಿಶೀಲಿಸಿ, ಅಗತ್ಯ ಬದಲಾವಣೆಗಳನ್ನು ಸೂಚಿಸಿದ ನಂತರವೇ ಪ್ರಮಾಣಪತ್ರ ನೀಡಿದೆ.



ಪ್ರಚಂಡ ಲಘು ಹೆಲಿಕಾಪ್ಟರ್‌ನಲ್ಲಿ ಹಾರಾಟ ನಡೆಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು.

ಐಎಎಫ್‌ನ ವಾಯುಶಕ್ತಿ ತಾಲೀಮು | ಸಾಕ್ಷಿಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು, ರಾಜನಾಥ್

ಪೋಖ್ರಾನ್‌ನಲ್ಲಿ ಸಿಂದೂರ ಯುದ್ಧ ಪರಾಕ್ರಮ

• **ಜೈಸಲ್ಮೇರ್:** ಆಪರೇಷನ್ ಸಿಂದೂರ್ ನೋಟಗಳು, ಯುದ್ಧ ಪರಾಕ್ರಮ, ತನ್ನ ಗುಂಡಿನ ದಾಳಿ ಸಾಮರ್ಥ್ಯಗಳನ್ನು ಭಾರತೀಯ ವಾಯುಪಡೆ ಶುಕ್ರವಾರ ಪೋಖ್ರಾನ್ ಫೀಲ್ಡ್‌ನ ಫೈರಿಂಗ್ ರೇಂಜ್‌ನಲ್ಲಿ 'ವಾಯುಶಕ್ತಿ-26' ಕವಾಯತು ಮುಖೇನ ಪ್ರದರ್ಶಿಸಿತು. ಈ ಕವಾಯತಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಸಾಕ್ಷಿಯಾಗಿದ್ದರು.

ಭಾರತ-ಪಾಕ್ ಗಡಿಗೆ ಸಮೀಪ ಪಶ್ಚಿಮ ರಾಜಸ್ಥಾನದ ಥಾರ್ ಮರುಭೂಮಿಯಲ್ಲಿನ, ಪ್ರಸ್ತುತ ಹಗಲು-ರಾತ್ರಿವರೆಗಿನ ವೀರೋಚಿತ ಕವಾಯತನ್ನು ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಜಸ್ಥಾನ ರಾಜ್ಯಪಾಲ ಹರಿಭಾವು ಬಾಗಡೆ, ಕೇಂದ್ರ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಸಹಿತ ಗಣ್ಯರು ವೀಕ್ಷಿಸಿದರು. ಸುಮಾರು ಮೂರು ಕಿಮೀ ವ್ಯಾಪ್ತಿ ಪ್ರದೇಶದಲ್ಲಿ ಸಂಪನ್ನಗೊಂಡ ಕವಾಯತಿನ ಆರಂಭದಲ್ಲಿ ಭಾರತೀಯ ವಾಯುಪಡೆ ಆಪರೇಷನ್ ಸಿಂದೂರ್ ಕುರಿತು ಆಕರ್ಷಕ ಕವಾಯತು ಪ್ರದರ್ಶಿಸಿತು.

ಬಂಕರ್‌ಗಳು, ರಾಡಾರ್ ಸೈಟ್‌ಗಳು: ಶತ್ರು ರನ್‌ವೇ, ಪೆಟ್ರೋಲಿಯಂ ದಾಸ್ತಾನು ಸೌಲಭ್ಯ, ಬಂಕರ್‌ಗಳು, ರಾಡಾರ್ ಸೈಟ್‌ಗಳು, ಟ್ಯಾಂಕ್ ಮತ್ತು ಸಶಸ್ತ್ರ ಬೆಂಗಾವಲು ಪಡೆ, ಸಂಪರ್ಕ ಕೇಂದ್ರ, ಭಯೋತ್ಪಾದಕರ ಶಿಬಿರ, ಶಸ್ತ್ರಾಸ್ತ್ರ ಕೋಠಿ, ಕಮಾಂಡ್ ಅಂಡ್ ಕಂಟ್ರೋಲ್ ಸೆಂಟರ್‌ಗಳ ತದ್ರೂಪಗಳ ನಿರ್ಮಿಸಲಾಗಿತ್ತು.

ಆಪರೇಷನ್ ಸಿಂದೂರ್‌ನಲ್ಲಿ ಸಮನ್ವಯ ನೆಲೆಯಲ್ಲಿ ಅಥವಾ ಜಂಟಿಯಾಗಿ ದಾಳಿ ನಡೆಸಿದ ಮಾದರಿಯಲ್ಲಿ ಜಾಗ್ವರ್ ಮತ್ತು ಮಿರಾಜ್ ಸಮರ ವಿಮಾನಗಳು ನಿರ್ದಿಷ್ಟ ನೆಲೆಗಳಿಗೆ ಏಕಕಾಲಕ್ಕೆ ದಾಳಿ ನಡೆಸಿದವು. ಸುಖೋಯ್ ಸಮರ ವಿಮಾನವು ಉಗ್ರರ ಶಿಬಿರಗಳ ಮೇಲೆ ದಾಳಿಯನ್ನು ಪ್ರದರ್ಶಿಸಿತು.

ಶತ್ರುಗಳ ನಿಗಾ ವ್ಯವಸ್ಥೆಗಳ ನಾಶಪಡಿಸುವ ಯತ್ನವಾಗಿ ರಾಡಾರ್ ಕ್ಲಸ್ಟರ್ ಒಂದನ್ನು ದಾಳಿ ಮುಖೇನ ನಿಷ್ಕ್ರಿಯಗೊಳಿಸಲಾಯಿತು. ತುರ್ತಾಗಿ ಸಮರ ವಿಮಾನಗಳ ನಿಯೋಜನೆ, ವಾಯುನೆಲೆ ಟಾರ್ಗೆಟ್‌ನ್ನು ಯಶಸ್ವೀ ಗುರುತಿಸಿ ನಾಶಪಡಿಸುವ ಕಾರ್ಯಾಚರಣೆಯನ್ನು ಐಎಎಫ್ ಸಮರ ವಿಮಾನಗಳು ಪ್ರದರ್ಶಿಸಿದವು.

ಇಂಧನ ಮರುಪೂರಣ ಕೇಂದ್ರದ ಮೇಲೆ ದಾಳಿ ಮಾಡುವ ಸಾಮರ್ಥ್ಯವನ್ನು ದೇಶಿಯವಾಗಿ ಎಚ್‌ಎಎಲ್ ಅಭಿವೃದ್ಧಿಪಡಿಸಿದ ಲಘು ಸಮರ ಹೆಲಿಕಾಪ್ಟರ್ ಪ್ರಚಂಡ್ ಪ್ರದರ್ಶಿಸಿತು. ಮಿರಾಜ್ ಸಮರ ಜೆಟ್‌ಗಳು ಹಾಗೂ ಮಿಗ್-17 ವಿ 5 ಹೆಲಿಕಾಪ್ಟರ್‌ಗಳೂ ಸಂಘಟಿತ ಆಣಕು ಕಾರ್ಯಾಚರಣೆಗಳಲ್ಲಿ ಭಾಗವಹಿಸುವ ಮೂಲಕ ಐಎಎಫ್‌ನ ಬಹು ಆಯಾಮಗಳ ಸಮಗ್ರ ಸಾಮರ್ಥ್ಯವನ್ನು ಅನಾವರಣಗೊಳಿಸಿದವು.



ಜಾಣ್ಮೆ ಪ್ರದರ್ಶನ

ಆರಂಭದಿಂದಲೆ ಕಾರ್ಯಾಚರಣಾ ಪರಿಸರದ ಮೇಲೆ ಹಿಡಿತ ಸಾಧಿಸುವ ಸಾಮರ್ಥ್ಯ, ತಂತ್ರಪೂರ್ಣ ನಡೆಗಳನ್ನು ವ್ಯೂಹಾತ್ಮಕ ಫಲಿತಾಂಶಗಳಾಗಿ ಪರಿವರ್ತಿಸುವ ಜಾಣ್ಮೆಯನ್ನು ಐಎಎಫ್ ಪ್ರದರ್ಶಿಸಿತು. ಮಾನವೀಯ ನೆರವು ನೀಡಿಕೆ, ವಿಕೋಪ ನಿರ್ವಹಣೆ, ದೇಶ ವಿದೇಶಗಳಿಂದಲೂ ಸಂಘರ್ಷಪೀಡಿತ ವಲಯಗಳಿಂದ ಜನರನ್ನು ತ್ವರಿತವಾಗಿ ಏರ್‌ಲಿಫ್ಟ್ ಮಾಡಿ ರಕ್ಷಿಸುವ ಕಾರ್ಯಾಚರಣೆಗಳನು ವಾಯುಶಕ್ತಿ ಪ್ರದರ್ಶಿಸಿತು.

ಸರ್ಕಾರದಿಂದ ಮೀಸಲಾತಿ ಗೊಂದಲ ಸೃಷ್ಟಿ: ಕಾರಜೋಳ

ಚಿತ್ರದುರ್ಗ: ರಾಜ್ಯ ಸರ್ಕಾರ ತನ್ನ ಎಡವಟ್ಟುಗಳನ್ನು ಮತ್ತು ದಿವಾಳಿಯಾದ ಖಜಾನೆ ಮುಚ್ಚಿಕೊಳ್ಳಲು ಮೀಸಲಾತಿ ಗೊಂದಲ ಸೃಷ್ಟಿಸಿ ವಿದ್ಯಾರ್ಥಿ, ಯುವಜನರ ಕನಸು, ನಿರೀಕ್ಷೆಗಳಿಗೆ ಮಣ್ಣು ಸುರಿಯುತ್ತಿದೆ. ಇದರ ಬಗ್ಗೆ ಸರ್ವ ಪಕ್ಷಗಳ ಪ್ರಮುಖರ ಸಭೆ ಕರೆದು ಚರ್ಚಿಸಲಿ ಎಂದು ಸಂಸದ ಗೋವಿಂದ ಕಾರಜೋಳ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸರ್ಕಾರಕ್ಕೆ ಬದ್ಧತೆಯ ಕೊರತೆ


ಪರಿಶಿಷ್ಟ ಜಾತಿ, ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಕೊಡಬೇಕಾದ ಮೀಸಲಾತಿಗೆ ಸಾಂವಿಧಾನಿಕವಾದ ಮಾನ್ಯತೆ ಇದೆ. ಇದನ್ನು ಸಮರ್ಥವಾಗಿ ಹೈಕೋರ್ಟಿನಲ್ಲಿ ಮಂಡಿಸುವಲ್ಲಿ ಸೋತಿರುವ ರಾಜ್ಯಸರ್ಕಾರ ಒಳ ಮೀಸಲಾತಿಯಿಂದ ಹಿಂದೆ ಸರಿದು ನೇಮಕ ಪ್ರಕ್ರಿಯೆ ಆರಂಭಿಸಲು ಹೊರಟಿರುವುದು ಸಾಮಾಜಿಕ ನ್ಯಾಯದ ವಿಷಯದಲ್ಲಿ ಸರ್ಕಾರಕ್ಕೆ ಬದ್ಧತೆಯ ಕೊರತೆ ಇರುವುದನ್ನು ಸ್ಪಷ್ಟಪಡಿಸಿದೆ ಎಂದು ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗುರುವಾರ ನಡೆದ ಮಂತ್ರಿಮಂಡಲದ ಸಭೆಯಲ್ಲಿ ಕರ್ನಾಟಕ ಸರ್ಕಾರ 56,422 ಹುದ್ದೆಗಳ ಭರ್ತಿಗೆ, ಮುಂದಿನ 30 ದಿನಗಳಲ್ಲಿ ಪ್ರಕ್ರಿಯೆ ಆರಂಭಿಸುವುದಾಗಿ ಪ್ರಕಟಿಸಲಾಗಿದೆ. ಆದರೆ ಈ ಪ್ರಕ್ರಿಯೆ ಶೇ.56ರ ಮೀಸಲಾತಿ, ಒಳಮೀಸಲಾತಿ ಎರಡನ್ನೂ ಹೊರಗಿಟ್ಟು ಮಾಡುತ್ತಿರುವುದು.

ಪರಿಶಿಷ್ಟಜಾತಿ, ಪಂಗಡಗಳಿಗೆ ಮಾಡುತ್ತಿರುವ ಘೋರ ನ್ಯಾಯವಾಗಿದೆ ಎಂದರು. ಪೌರ ಕಾರ್ಮಿಕರು ಅಂಗನವಾಡಿ ಕಾರ್ಯಕರ್ತರಿಂದ ಹಿಡಿದು ಅನೇಕ ಇಲಾಖೆ ಉದ್ಯೋಗಿಗಳಿಗೆ ತಿಂಗಳ ಸಂಬಳ ಕೊಡಲಾಗದೆ ಪರದಾಡುತ್ತಿದೆ. ಸಾರಿಗೆ ಆರೋಗ್ಯ ಇಲಾಖೆಯ ನೌಕರರಿಗೆ ಪಾವತಿಸಬೇಕಾದ ನೂರಾರು ಕೋಟಿ ರೂ.ಗಳನ್ನು ಬಾಕಿ ಉಳಿಸಿಕೊಂಡಿದೆ ಎಂದು ದೂರಿದರು.

ಬಿಎಸ್‌ವೈಗೆ ಶುಭಾಶಯ



ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರ ಹುಟ್ಟುಹಬ್ಬದ ಪ್ರಯುಕ್ತ ಶುಕ್ರವಾರ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷರಾದ ಜಿ. ಮರಿಸ್ವಾಮಿರವರು ಶಿಕಾರಿಪುರದಲ್ಲಿ ಯಡಿಯೂರಪ್ಪ ಅವರ ಸ್ವಗೃಹದಲ್ಲಿ ಹುಟ್ಟು ಹಬ್ಬದ ಶುಭಾಶಯವನ್ನು ಕೋರಿದರು. ಈ ವೇಳೆ ಸಂಸದ ಬಿ.ವೈ.ರಾಘವೇಂದ್ರ ಇದ್ದರು.

ವಿನಯ್ ಕುಲಕರ್ಣಿಗೆ ಜಾಮೀನು

ಬೆಂಗಳೂರು: ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ. ಈ ಮೂಲಕ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ವಿನಯ್ ಕುಲಕರ್ಣಿ ಅವರು ಬಿಡುಗಡೆ ಆಗಲಿದ್ದಾರೆ.



ಪ್ರಕರಣದ ವಿವರ: ಯೋಗೇಶ್ ಗೌಡ ಅವರನ್ನು 2016ರ ಜೂ.15ರಂದು ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರ ಬಳಿಕ ಸಿಬಿಐ ಕೈಗೆತ್ತಿಕೊಂಡು ಶಾಸಕ ವಿನಯ್ ಕುಲಕರ್ಣಿ ಅವರನ್ನು ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಿತ್ತು. ಬಳಿಕ ಹೈಕೋರ್ಟ್ ಜಾಮೀನು ಮಂಜೂರು ಮಾಡಿತ್ತು. ಈ ಆದೇಶವನ್ನು ಸಿಬಿಐ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲಾಗಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಸುಪ್ರೀಂಕೋರ್ಟ್, ಷರತ್ತುಗಳನ್ನು ಉಲ್ಲಂಘಿಸಿದ ಆರೋಪದಲ್ಲಿ ಜಾಮೀನು ರದ್ದುಪಡಿಸಿದ್ದರಿಂದ 2025ರ ಜೂ.13ರಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದರು.

ಬಳಿಕ ಜಾಮೀನು ಕೋರಿ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯನ್ನು ಜನಪ್ರತಿನಿಧಿಗಳ ನ್ಯಾಯಾಲಯ ಕಳೆದ ಡಿ.8ರಂದು ವಜಾಗೊಳಿಸಿತ್ತು. ಬಳಿಕ ಹೈಕೋರ್ಟ್ ಕೂಡ ಜಾಮೀನು ಅರ್ಜಿ ವಜಾಗೊಳಿಸಿತ್ತು. ನಂತರ ಸುಪ್ರೀಂಕೋರ್ಟ್ ಮೆಟ್ಟಿಲೇರಿ ದ್ದರು. ವಿನಯ್ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂ ಕೋರ್ಟ್ 2025 ಜೂ.6ರಂದು ರದ್ದುಗೊಳಿಸಿತ್ತು. ಇದೇ ವೇಳೆ ವಿಚಾರಣಾ ನ್ಯಾಯಾಲಯದ ಎದುರು ಶರಣಾಗಲು ಒಂದು ವಾರಗಳ ಕಾಲಾವಕಾಶ ಕೂಡಾ ನೀಡಿತ್ತು.

ಒಂದು ವಾರದ ಅವಧಿಯಲ್ಲಿ ಸಂಬಂಧಪಟ್ಟ ವಿಚಾರಣಾ ನ್ಯಾಯಾಲಯ /ಜೈಲು ಪ್ರಾಧಿಕಾರದ ಮುಂದೆ ಶರಣಾಗುವಂತೆ ಶಾಸಕ ವಿನಯ್ ಕುಲಕರ್ಣಿಗೆ ಸುಪ್ರೀಂಕೋರ್ಟ್ ಸೂಚಿಸಿತ್ತು.

ಕುಲಕರ್ಣಿ ಮತ್ತು ಇತರ ಆರೋಪಿಗಳು ತಮ್ಮ ಮೇಲೆ ವಿಧಿಸಲಾದ ಷರತ್ತುಗಳನ್ನು ಉಲ್ಲಂಘಿಸಿ ಸಾಕ್ಷಿಗಳನ್ನು ಸಂಪರ್ಕಿಸಲು ಮತ್ತು ಪ್ರಭಾವ ಬೀರಲು ಪ್ರಯತ್ನಿಸಿದ್ದಾರೆ ಎಂಬುದನ್ನು ಸುಪ್ರೀಂ ಕೋರ್ಟ್ ಗಮನಿಸಿತ್ತು.

ಬೆಂಬಲಿಗರಿಂದ ಸಂಭ್ರಮಾಚರಣೆ: ಧಾರವಾಡ ಗ್ರಾಮೀಣ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಜಾಮೀನು ನೀಡಿದ ಹಿನ್ನೆಲೆ ಕಾಂಗ್ರೆಸ್ ಕಾರ್ಯಕರ್ತರು ಧಾರವಾಡದಲ್ಲಿ ಸಂಭ್ರಮಾಚರಿಸಿದರು.

ಕಿರುಸುದ್ದಿ

ನಿಧಿ ನೀಡಿದ ಪ್ರಜ್ವಲ್ ರಿತ್ತಿಗೆ ನಿವೇಶನ

ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದಲ್ಲಿ ಕಳೆದ ತಿಂಗಳು ತನ್ನ ಮನೆ ನಿರ್ಮಾಣದ ಸಂದರ್ಭದಲ್ಲಿ ಚಿನ್ನಾಭರಣಗಳ ನಿಧಿ ಸಿಕ್ಕಿದ್ದನ್ನು ಸರ್ಕಾರಕ್ಕೆ ಒಪ್ಪಿಸಿದ್ದ ಬಾಲಕ ಪ್ರಜ್ವಲ್ ರಿತ್ತಿ ಕುಟುಂಬಕ್ಕೆ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ನಿವೇಶನ ವಿತರಿಸಿದರು. ಈ ಕುರಿತು ವಿಷಯ ತಿಳಿಸಿದ ಅಭಿವೃದ್ಧಿ ಅಧಿಕಾರಿ ಅಮೀರನಾಯಕ ಅವರು, ಮಾರುತಿ ನಗರದ 7 ಎಕರೆ ಕ್ಷೇತ್ರದಲ್ಲಿಯ 274/ 4ರ ಸರ್ವೇಯಲ್ಲಿ ನಿವೇಶನ ವಿತರಿಸಲಾಗಿದ್ದು, ಸ್ಥಳದಲ್ಲಿ ಜಿ.ಪಿ.ಎಸ್ ಭಾವಚಿತ್ರವನ್ನು ತೆಗೆಯಲಾಗಿದೆ ಎಂದು ತಿಳಿಸಿದರು. ಕಳೆದ ಜ.22ರಂದು ಗ್ರಾಮ ಪಂಚಾಯುತಿಯು ವಿಶೇಷ ಗ್ರಾಮ ಸಭೆಯನ್ನು ಕರೆದು ಪ್ರಜ್ವಲ್‌ನ ತಾಯಿ ಗಂಗವ್ವಳನ್ನು ಫಲಾನುಭವಿ ಅಂತ ಆಯ್ಕೆ ಮಾಡಲಾಗಿತ್ತು. ನಂತರ ಗಣರಾಜ್ಯೋತ್ಸವದಂದು ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರು ಸರ್ಕಾರದಿಂದ 5 ಲಕ್ಷ ರೂ. ಬಹುಮಾನದೊಂದಿಗೆ ನಿವೇಶನ ನೀಡುವ ಪತ್ರವನ್ನು ನೀಡಿದ್ದರು. ಅದರಂತೆ ರಿತ್ತಿ ಕುಟುಂಬಕ್ಕೆ ನಿವೇಶನವನ್ನು ನೀಡಿದ್ದಾರೆ. ನಿವೇಶನವನ್ನು ನೀಡಿರುವುದಕ್ಕೆ ಪ್ರಜ್ವಲ್ ರಿತ್ತಿ ಕುಟುಂಬವು ಸಂತಸ ವ್ಯಕ್ತಪಡಿಸಿದೆ.

ಎಫ್‌ಐಆರ್ ರದ್ದತಿ ಕೋರಿ ಮುತ್ಯಾ ಹೈಕೋರ್ಟ್ ಮೊರೆ

ಕಲಬುರಗಿ: ತಮ್ಮ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣದ ಎಫ್‌ಐಆರ್ ರದ್ದತಿ ಕೋರಿ ಯಾದಗಿರಿ ಜಿಲ್ಲೆಯ ಮಹಲ್ ರೋಜಾ ಮಠದ ಮಲ್ಲಿಕಾರ್ಜುನ ಮುತ್ಯಾ ಕರ್ನಾಟಕ ವಿಭಾಗೀಯ ಹೈಕೋರ್ಟ್ ಪೀಠಕ್ಕೆ ಮೊರೆ ಹೋಗಿದ್ದಾರೆ. ಲೈಂಗಿಕ ಕಿರುಕುಳ ನೀಡಿಲ್ಲ. ದುರುದ್ದೇಶದಿಂದ ದೂರು ದಾಖಲಿಸಲಾಗಿದೆ. ಹೀಗಾಗಿ ಎಫ್‌ಐಆರ್ ರದ್ದುಗೊಳಿಸುವಂತೆ ಮಲ್ಲಿಕಾರ್ಜುನ ಮುತ್ಯಾ ಕಲಬುರಗಿ ಹೈಕೋರ್ಟ್‌ನ ಏಕ ಸದಸ್ಯತ್ವದ ಪೀಠಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಅರ್ಜಿ ಸ್ವೀಕಾರವಾಗಿದ್ದು, ಸೋಮವಾರ ಫೆ.2ರಂದು ವಿಚಾರಣೆಗೆ ಬರುವ ಸಾಧ್ಯತೆವಿದೆ.



ಆಡಳಿತಗಾರರಿಗೆ ಬಿಎಸ್‌ವೈ ಸ್ಫೂರ್ತಿ: ಬೊಮ್ಮಾಯಿ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ನಾಡು ಕಂಡ ಅತ್ಯಂತ ಶ್ರೇಷ್ಠ, ಧೀಮಂತ ನಾಯಕರು. ಅವರು ಮುಖ್ಯಮಂತ್ರಿಯಾಗಿ ಮಾಡಿರುವ ಕಾರ್ಯಗಳು ಆಡಳಿತಗಾರರಿಗೆ ಸ್ಫೂರ್ತಿಯಾಗಿವೆ ಎಂದು ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ. ಯಡಿಯೂರಪ್ಪ ಅವರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣದ ಮೂಲಕ ಹುಟ್ಟುಹಬ್ಬದ ಶುಭಾಶಯ ತಿಳಿಸಿರುವ ಅವರು, ಯಡಿಯೂರಪ್ಪ ಅವರು ರೈತ ಪರ ಜನ ಪರ ಹೋರಾಟದ ಮೂಲಕ ರಾಜ್ಯದ ಜನರ ಮನ ಗೆದ್ದವರು. ಅವರು ಮುಖ್ಯಮಂತ್ರಿಯಾಗಿ ಮಕ್ಕಳಿಗೆ, ಯುವಕರಿಗೆ, ಮಹಿಳೆಯರಿಗೆ ಮಾಡಿರುವ ಕೆಲಸ ಸದಾ ಕಾಲ ಆಡಳಿತಗಾರರಿಗೆ ಸ್ಫೂರ್ತಿಯಾಗುತ್ತದೆ. ರಾಜ್ಯದಲ್ಲಿ ಬಿಜೆಪಿ ಕಟ್ಟಿ ಬೆಳೆಸಿರುವ ಅವರು ನಾಲ್ಕು ಬಾರಿ ಮುಖ್ಯಮಂತ್ರಿಯಾಗಿ ನಾಡಿನ ಸೇವೆ ಮಾಡಿರುವುದು ಚಿರಸ್ಮರಣೀಯ ಎಂದಿದ್ದಾರೆ. ಯಡಿಯೂರಪ್ಪ ಅವರಿಗೆ ಭಗವಂತ ಹೆಚ್ಚಿನ ಆರೋಗ್ಯ, ಆಯುಷ್ಯ ಶಕ್ತಿಯನ್ನು ಕೊಟ್ಟು ಇನ್ನಷ್ಟು ನಾಡ ಸೇವೆ ಮಾಡುವ ಅವಕಾಶ ಕೊಡುವಂತೆ ಭಗವಂತನಲ್ಲಿ ಪ್ರಾರ್ಥಿಸುತ್ತೇನೆ. ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು ಎಂದು ತಿಳಿಸಿದ್ದಾರೆ.

ಯಾವ ಶಕ್ತಿ ಪ್ರದರ್ಶನ ಇಲ್ಲ: ಡಿಸಿಎಂ ಡಿ.ಕೆ.ಶಿವಕುಮಾರ್

ನನ್ನ ಪರ ಯಾರೂ ದಿಲ್ಲಿಗೆ ಹೋಗೋದು ಬೇಡ

ಬೆಂಗಳೂರು: ನನ್ನ ಪರವಾಗಿ ಯಾರೂ ಹೊಸದಿಲ್ಲಿಗೆ ಹೋಗುವುದು ಬೇಡ. ನಿಮ್ಮ ಸಮಸ್ಯೆ ಗಳು ಇದ್ದರೆ, ಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರೆ, ಅಧಿಕಾರ, ಹುದ್ದೆ ಬೇಕು ಎಂದರೆ ಹೋಗಿ ಮನವಿ ಮಾಡಿಕೊಳ್ಳಿ. ನನ್ನ ವಿಚಾರಕ್ಕೆ ಹೋಗುವುದು ಬೇಡ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮನವಿ ಮಾಡಿದ್ದಾರೆ.

ಶುಕ್ರವಾರ ಮಾಧ್ಯಮಗಳ ಜತೆಗೆ ಮಾತನಾಡಿದ ಅವರು, ಕೆಲವು ಸಚಿವರು, ಶಾಸಕರು ದೆಹಲಿಗೆ ಹೋಗಿ ನನ್ನ ಪರವಾಗಿ ಮವಿ ಮಾಡುವುದು ಬೇಡ. ನಾನು ಸಿಎಂ ಆಗಬೇಕು ಎಂದು ಕೆಲಸ ಶಾಸಕರು ಹೇಳಿಕೆ ನೀಡಿದ್ದಾರೆ ಎಂಬುದರ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಜತೆಗೆ ಅವರು ಯಾರು ಮಾತನಾಡಿಲ್ಲ. ಕೆಲವರು ಆಸೆ ಇಟ್ಟುಕೊಂಡಿದ್ದಾರೆ ಎಂದರು.

40ಕ್ಕೂ ಹೆಚ್ಚು ಶಾಸಕರು ಖಾಸಗಿ ಹೋಟೆಲ್‌ನಲ್ಲಿ ಸೇರಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಶಾಸಕರು ಸೇರಿರುವುದು ಯಾವ ಶಕ್ತಿ ಪ್ರದರ್ಶನವೂ ಇಲ್ಲ. ಕೆಲವರು ವಿಶ್ರಾಂತಿ, ಅಧ್ಯಯನಕ್ಕೆ ವಿದೇಶಕ್ಕೆ ಹೋಗುತ್ತಾರೆ. ಕೆಲವರು ದೆಹಲಿಗೆ ಹೋದರೆ, ಮತ್ತೆ ಕೆಲವರು ಭೋಜನ ಕೂಟ ಸೇರುತ್ತಾರೆ. ಅವರ ವೈಯಕ್ತಿಕ ವಿಚಾರಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂದು ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.

ನಾವು ಹಳಬರಾಗಿದ್ದೇವೆ, ಹೊಸಬರಿಗೆ ಮಂತ್ರಿ ಆಸೆ ಇದೆ: ಹೊಸಬರಿಗೆ ಮಂತ್ರಿ ಆಗುವ ಆಸೆ ಇರುತ್ತದೆ. ನಾನು, ಪರಮೇಶ್ವರ್, ಎಚ್.ಕೆ. ಪಾಟೀಲ್, ಮಹದೇವಪ್ಪ, ಸಿದ್ದರಾಮಯ್ಯ ಸೇರಿ ನಾವೀಗ ಹಳಬರಾದೆವು. ಚಿಕ್ಕ ವಯಸ್ಸಿನಲ್ಲೇ ಮಂತ್ರಿಯಾದವರು. ಈಗ ಹೊಸಬರು ಮಂತ್ರಿ ಆಗಬೇಕು ಎಂಬ ಆಸೆ ವ್ಯಕ್ತಪಡಿಸುತ್ತಿದ್ದಾರೆ. ನೋಡೋಣ, ನಾನು ಈ ವಿಚಾರವನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ ಎಂದು ತಿಳಿಸಿದರು.

ಹಳೆ ಮೀಸಲಾತಿ ಅನ್ವಯ ನೇಮಕಾತಿ: ನಾವು ಹೊಸ ಮೀಸಲಾತಿ ಮಾಡಿದ್ದರೂ 2022ರ ನ್ಯಾಯಾಲಯ ಆದೇಶ ಅನುಸಾರ ಹಳೆ ಮೀಸಲಾತಿ ಮೇಲೆ ಮೊದಲ ಹಂತದಲ್ಲಿ 56 ಸಾವಿರ ನೇಮಕಾತಿ ಮಾಡಲು ತೀರ್ಮಾನಿಸಲಾಗಿದೆ. ಉದ್ಯೋಗ ನೀಡುವುದಾಗಿ ನಾವು ಯುವಕರಿಗೆ ಮಾತು ನೀಡಿದ್ದು, ಅದರಂತೆ ನೇಮಕಾತಿ ಮಾಡುತ್ತೇವೆ. 1 ಲಕ್ಷಕ್ಕೂ ಹೆಚ್ಚು ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಎಲ್ಲವನ್ನೂ ಏಕಕಾಲಕ್ಕೆ ಮಾಡಿದರೆ ಕೆಲವರಿಗೆ ಅವಕಾಶ ಸಿಗುವುದಿಲ್ಲ ಎಂಬ ಕಾರಣಕ್ಕೆ ಹಂತ ಹಂತವಾಗಿ ಮಾಡುತ್ತೇವೆ ಎಂದರು.

ಕಾವೇರಿ ಆರನೇ ಹಂತಕ್ಕೆ ಒಪ್ಪಿಗೆ

ಸಚಿವ ಸಂಪುಟ ಸಭೆಯಲ್ಲಿ ಕಾವೇರಿ ಆರನೇ ಹಂತದ ಕುಡಿಯುವ ನೀರಿನ ಯೋಜನೆಗೆ ಒಪ್ಪಿಗೆ ನೀಡಿರುವುದು ಐತಿಹಾಸಿಕ ನಿರ್ಧಾರ. ಭವಿಷ್ಯದಲ್ಲಿ ಬೆಂಗಳೂರು ಬೆಳೆಯುವುದನ್ನು ಗಮನದಲ್ಲಿಟ್ಟುಕೊಂಡು 7 ಸಾವಿರ ಕೋಟಿ ವೆಚ್ಚದಲ್ಲಿ ಈ ಯೋಜನೆ ಮಾಡಲಾಗುತ್ತಿದೆ. ಇದಕ್ಕೆ ಜೈಕಾ ಸಂಸ್ಥೆ ನೆರವು ಪಡೆಯಲಾಗುತ್ತಿದೆ. ನಾನು ಸಚಿವನಾದ ಬಳಿಕ ಕಾವೇರಿಯ 6 ಟಿಎಂಸಿ ನೀರನ್ನು ಬೆಂಗಳೂರಿಗೆ ನೀಡಲು ಅನುಮೋದನೆ ನೀಡಿದ್ದೆ ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.



85 ಅಭ್ಯರ್ಥಿಗಳಿಗೆ ನೇಮಕ ಪತ್ರ ವಿತರಣೆ

ಬೆಂಗಳೂರು: ಕಾರ್ಮಿಕ ಇಲಾಖೆಯ ವ್ಯಾಪ್ತಿಯ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವಿವಿಧ ಹುದ್ದೆಗಳಿಗೆ ಆಯ್ಕೆಯಾದ 85 ಅಭ್ಯರ್ಥಿಗಳಿಗೆ ಶುಕ್ರವಾರ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸಚಿವ ಸಂತೋಷ್ ಲಾಡ್ ನೇಮಕಾತಿ ಪತ್ರ ವಿತರಿಸಿದರು.

ಈ ವೇಳೆ ಮಾತನಾಡಿದ ಸಚಿವರು, ಮಂಡಳಿಯು 2007ರಲ್ಲಿ ಸ್ಥಾಪನೆಯಾಗಿದೆ. ಸರ್ಕಾರದ 2020ರ ಅಧಿಸೂಚನೆಯನ್ವಯ ಮಂಡಳಿಯ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಒಟ್ಟು 643 ಹುದ್ದೆಗಳನ್ನು ಸೃಜಿಸಲಾಗಿದೆ. 2022ರಲ್ಲಿ ಉಳಿಕೆ ಮೂಲ ವೃಂದದ 128 ಹುದ್ದೆಗಳು ಮತ್ತು ಕಲ್ಯಾಣ ಕರ್ನಾಟಕ ವೃಂದದ 58 ಹುದ್ದೆಗಳು ಸೇರಿ ಒಟ್ಟು 191 ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿಸಿತ್ತು.

ಈ ಪೈಕಿ 186 ಹುದ್ದೆಗಳನ್ನು ಭರ್ತಿ ಮಾಡಲು 2023ರಲ್ಲಿ ಅಧಿಸೂಚನೆ ಹೊರಡಿಸಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ 2024ರಲ್ಲಿ ಅರ್ಹತಾ ಪಟ್ಟಿಯನ್ನೂ ಪ್ರಕಟಿಸಿತ್ತು. ಅದನ್ನು ಬಳಿಕ ತಡೆ ಹಿಡಿದ್ದರಿಂದ ಆಯ್ಕೆ ಪಟ್ಟಿ ತಡೆ ಹಿಡಿಯಲಾಗಿತ್ತು ಎಂದರು.



ಕಳೆದ ವರ್ಷ ಮಂಡಳಿಯಿಂದ ಸರ್ಕಾರಕ್ಕೆ ಪತ್ರ ಬರೆದು ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿರಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡಲು ಪಾಲಿಸಬೇಕಾದ ವಿಧಿ ವಿಧಾನಗಳ ಬಗ್ಗೆ ಸ್ಪಷ್ಟೀಕರಣ ಕೇಳಿತ್ತು. ಸ್ಪಷ್ಟೀಕರಣ ನೀಡಿದ್ದರಿಂದ ಕಳೆದ ಅಕ್ಟೋಬರ್‌ನಲ್ಲಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ.

ಅಂತಿಮವಾಗಿ ಎಲ್ಲಾ ದಾಖಲೆಗಳನ್ನು ಸಲ್ಲಿಸಿದ 85 ಅಭ್ಯರ್ಥಿಗಳಿಗೆ ಸ್ಥಳ ನಿಯೋಜನೆಗೆ ಫೆ.18ರಂದು ಮಂಡಳಿಯಲ್ಲಿ ಪಾರದರ್ಶಕವಾಗಿ ಕೌನ್ಸಲಿಂಗ್ ನಡೆಸಲಾಗಿದೆ. ಇಂದು ಅವರಿಗೆಲ್ಲ ನೇಮಕಾತಿ ಪತ್ರ ಹಸ್ತಾಂತರಿಸಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕರಾದ ಕೆ.ಎಂ. ಶಿವಲಿಂಗೇಗೌಡ, ಬಿಲ್ಕೀಸ್ ಬಾನು, ಕಾರ್ಮಿಕ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾನಪದ ಅಕಾಡೆಮಿಗೆ ಅನುದಾನ: ತಂಗಡಗಿ

ಬೆಂಗಳೂರು: ಜಾನಪದ ಅಕಾಡೆಮಿಗೆ ಶಕ್ತಿ ತುಂಬಲು ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ತಿಳಿಸಿದರು.

ಕರ್ನಾಟಕ ಜಾನಪದ ಅಕಾಡೆಮಿಯು ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಹಾಗೂ ಪ್ರಶಸ್ತಿ ಪುರಸ್ಕೃತರ ಪರಿಚಯ ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲೇ ಉತ್ತರ ಕರ್ನಾಟಕ ಭಾಗದಲ್ಲಿ ಜಾನಪದ ಮಹಿಳಾ ಉತ್ಸವ ಹಮ್ಮಿಕೊಳ್ಳಲಾಗುತ್ತದೆ. ಉತ್ಸವಕ್ಕೆ ಬೇಕಾದ ಅನುದಾನವನ್ನು ನೀಡಲಿದ್ದೇನೆ. ಜಾನಪದ ಮಹಿಳಾ ಉತ್ಸವವು ಅಕಾಡೆಮಿಯ ಬಹು ದಿನದ ಬೇಡಿಕೆ ಆಗಿತ್ತು. ಹಾಗಾಗಿ ಉತ್ತರ ಕರ್ನಾಟಕದ ಬೀದರ್, ಕಲಬುರಗಿ ಹಾಗೂ ರಾಯಚೂರು ಸೇರಿದಂತೆ ಒಂದು ಜಿಲ್ಲೆಯನ್ನು ಆಯ್ಕೆಗೊಳಿಸಿದರೆ, ಅಲ್ಲಿ ದೊಡ್ಡ ಮಟ್ಟದಲ್ಲಿ ಜಾನಪದ ಮಹಿಳಾ ಉತ್ಸವ ಮಾಡೋಣ ಎಂದರು.

ಜಾನಪದ ಅಕಾಡೆಮಿಗೆ ಶಕ್ತಿ ತುಂಬಲು ಸರ್ಕಾರದಿಂದ ಹೆಚ್ಚಿನ ಅನುದಾನ ಕೊಡಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ. ಈ ಕುರಿತಂತೆ ಮುಖ್ಯಮಂತ್ರಿಗಳಿಗೂ ಮನವಿ ಸಲ್ಲಿಸಿದ್ದೇನೆ. ಅವರು ಸಹ ಸಾಹಿತ್ಯ, ಕಲೆ, ಜಾನಪದ ಸಂಸ್ಕೃತಿಯ ಬಗ್ಗೆ ವಿಶೇಷ ಆಸಕ್ತಿ ಹೊಂದಿದ್ದರಿಂದ ಅಕಾಡೆಮಿಗಳಿಗೆ ಶಕ್ತಿ ತುಂಬುವ ಕೆಲಸ ಸರ್ಕಾರದಿಂದ ಆಗಲಿದೆ ಎಂದು ಹೇಳಿದರು. ಜಾನಪದ ಅಕಾಡೆಮಿಯ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್ ಮಾತನಾಡಿ, ಜಾನಪದ ಕಲೆ ಹಾಗೂ ಕಲಾವಿದ ಕಲಾವಿದರನ್ನು ಪೋಷಿಸುವ, ಪ್ರೋತ್ಸಾಹಿಸುವ ಮತ್ತು ಗೌರವಿಸುವ ಕಾರ್ಯವನ್ನು ಜಾನಪದ ಅಕಾಡೆಮಿ ಮಾಡುತ್ತಿದೆ ಎಂದರು.

ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 30 ಜನ ಕಲಾವಿದರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿ ಹಾಗೂ ಇಬ್ಬರು ಜಾನಪದ ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ನೀಡಲಾಯಿತು.



> **ಆಧುನಿಕ ದಿನಗಳಲ್ಲಿ ಜಾನಪದ ಕಲೆ ಹಾಗೂ ಪರಂಪರೆಯನ್ನು ಉಳಿಸಿಕೊಳ್ಳಬೇಕಿದ್ದು, ಈ ನಿಟ್ಟಿನಲ್ಲಿ ಜಾನಪದ ಅಕಾಡೆಮಿ ಸೇರಿದಂತೆ ಎಲ್ಲಾ ಅಕಾಡೆಮಿಗಳ ಕಾರ್ಯಕ್ರಮಗಳು ರಾಜ್ಯಾದ್ಯಂತ ಪಸರಿಸಬೇಕಿದೆ.**
> ■ **ಶಿವರಾಜ್ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ**

ದಲಿತ ಸಚಿವರು ರಾಜೀನಾಮೆ ನೀಡಲಿ

ಬೆಂಗಳೂರು: ದಲಿತರ ಕುರಿತು ತಮಗೆ ಬದ್ಧತೆ, ಸಾಮಾಜಿಕ ಕಳಕಳಿ ಇದ್ದರೆ ದಲಿತ ಸಚಿವರು ತಕ್ಷಣ ರಾಜೀನಾಮೆ ಕೊಡಬೇಕು. ಮಾನವೀಯತೆ ಇದ್ದರೆ, ಮೀಸಲು ಕ್ಷೇತ್ರದಿಂದ ಗೆದ್ದಿದ್ದರೆ 54 ಶಾಸಕರು ಮುಂದಿನ ವಿಧಾನಸಭಾ ಕಲಾಪಗಳಲ್ಲಿ ಭಾಗವಹಿಸಬಾರದು; ರಾಜೀ ನಾಮೆ ಕೊಡಿ ಎಂದು ಕೇಂದ್ರದ ಮಾಜಿ ಸಚಿವ ಎ. ನಾರಾಯಣಸ್ವಾಮಿ ಆಗ್ರಹಿಸಿದ್ದಾರೆ.



ಬಿಜೆಪಿ ರಾಜ್ಯ ಕಾರ್ಯಾಲಯದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, ಪರಿಶಿಷ್ಟ ಜಾತಿ ಮತ್ತು ಪಂಗಡದ 54 ಜನ ಶಾಸಕರಿದ್ದಾರೆ. ಶಿಕ್ಷಣದಲ್ಲಿ ಕ್ರಾಂತಿ ಆಗಿದೆ. ಆದರೆ, ಈ 54 ಜನರು ಮಾತನಾಡುತ್ತಿಲ್ಲ. ಸಚಿವ ಸಂಪುಟ ಸಭೆಯಲ್ಲಿ ಸಚಿವರು ಮಾತನಾಡುವುದಿಲ್ಲ. ಯಾಕೆ ನೀವು ಸಚಿವ ಸ್ಥಾನದಲ್ಲಿ ಇದ್ದೀರಿ? ನಾವು ಹೋರಾಟದ ಕಡೆ ಹೆಜ್ಜೆ ಇಡಲಿದ್ದೇವೆ ಎಂದು ಪ್ರಕಟಿಸಿದರು.

ರಾಜ್ಯದ ಮುಖ್ಯಮಂತ್ರಿಗಳೂ ರಾಜೀನಾಮೆ ನೀಡಬೇಕು. 35 ವರ್ಷ ಹೋರಾಟ ಮಾಡಿದ ಮಾದಿಗರಿಗೆ ಸಿದ್ದರಾಮಯ್ಯ ಅವರು ತಿರುಪತಿ ನಾಮ ಇಟ್ಟಿದ್ದಾರೆ. ರಾಜ್ಯದ ಇಡೀ ದಲಿತರಿಗೆ ಚೆಂಬು ಕೊಟ್ಟಿದ್ದಾರೆ. ಒಳ ಮೀಸಲಾತಿ ವಿಚಾರದಲ್ಲಿ 101 ಜಾತಿಗೂ ಅವರು ಚೆಂಬು ನೀಡಿದ್ದಾರೆ. ಉದ್ಯೋಗಾಕಾಂಕ್ಷಿ ಯುವಜನರ ಕಿವಿಗೆ ಚೆಂಡು ಹೂವನ್ನು ಇಟ್ಟಿದ್ದಾರೆ ಎಂದು ಆರೋಪಿಸಿದರು. ರಾಜ್ಯ ಎಸ್‌ಸಿ ಮೋರ್ಚಾ ಉಪಾಧ್ಯಕ್ಷ ಹೂಡಿ ಮಂಜುನಾಥ್ ಇದ್ದರು.

ಕಾಂಗ್ರೆಸ್‌ನಿಂದ ಅಭಿವೃದ್ಧಿ ಕ್ಷೀಣ: ಛಲವಾದಿ

ದಾವಣಗೆರೆ: ರಾಜ್ಯದ ಕಾಂಗ್ರೆಸ್ ಸರ್ಕಾರ ಮೀಸಲಾತಿ, ಒಳ ಮೀಸಲಾತಿ, ಉದ್ಯೋಗ, ಶಿಕ್ಷಣ, ಅಭಿವೃದ್ಧಿ ಹೀಗೆ ಎಲ್ಲದರಲ್ಲೂ ಹಿಂದೆ ಬಿದ್ದಿದೆ. ತನ್ನದೇ ತಪ್ಪುಗಳಿಂದ ಸಂಕಷ್ಟ ಮೈಮೇಲೆಳೆದುಕೊಂಡು ಜನರ ಮುಂದೆ ಮುಜುಗರಕ್ಕೀಡಾಗುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಟೀಕಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ವಿಧಾನ ಸಭೆ ಚುನಾವಣೆ ಪೂರ್ವದಲ್ಲಿ 2 ಲಕ್ಷಕ್ಕೂ ಅಧಿಕ ಹುದ್ದೆ ಖಾಲಿಗಳನ್ನು ಅಧಿಕಾರಕ್ಕೆ ಬಂದ ಒಂದೇ ವರ್ಷದಲ್ಲಿ ಭರ್ತಿ ಮಾಡಿಕೊಳ್ಳುವುದಾಗಿ ಪ್ರಣಾಳಿಕೆಯಲ್ಲಿ ಭರವಸೆ ನೀಡಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಧಾರವಾಡದಲ್ಲಿ ವಿದ್ಯಾರ್ಥಿ-ಯುವಜನರು ಸರ್ಕಾರಿ ಹುದ್ದೆಗಳ ಭರ್ತಿಗಾಗಿ ತೀವ್ರ ಸ್ವರೂಪದ ಹೋರಾಟ ನಡೆಸಿದ ಪರಿಣಾಮ ಈಗ 56 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದಾಗಿ ಕಾಂಗ್ರೆಸ್ ಸರ್ಕಾರ ಹೇಳಿದೆ ಎಂದರು. ಮಾಜಿ ಶಾಸಕ ಎಂ. ಬಸವರಾಜ ನಾಯ್ಕ, ಪಕ್ಷದ ಜಿಲ್ಲಾಧ್ಯಕ್ಷ ಎನ್. ರಾಜಶೇಖರ, ಮುಖಂಡರಾದ ಧನಂಜಯ ಕಡ್ಲೇಬಾಳು ಇದ್ದರು.



> **ಸಿದ್ದರಾಮಯ್ಯ ಸರ್ಕಾರ ಕಳೆದ 2-3 ವರ್ಷಗಳಿಂದ ಏನು ಮಾಡಿದೆ? ಕಾಂಗ್ರೆಸ್ ಹಾಗೂ ಬಿಜೆಪಿ ಸರ್ಕಾರಗಳ ಅವಧಿಯಲ್ಲಿ ಎಷ್ಟು ಹುದ್ದೆಗಳು ಖಾಲಿ ಇದ್ದವು, ಯಾವ ಸರ್ಕಾರದಲ್ಲಿ ಎಷ್ಟು ನೇಮಕಾತಿ ನಡೆದವು? ಎಂಬ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶ್ವೇತಪತ್ರ ಹೊರಡಿಸಲಿ.**
> ■ **ಛಲವಾದಿ ನಾರಾಯಣಸ್ವಾಮಿ, ಪ್ರತಿಪಕ್ಷ ನಾಯಕ**

ಕಡೇ ಕ್ಷಣದಲ್ಲಿ ಮದುವೆ ನಿರಾಕರಿಸಿದ ವಧು!

ಚಿಕ್ಕಮಗಳೂರು: ಕಡೇ ಕ್ಷಣದಲ್ಲಿ ವಧು ಮದುವೆ ನಿರಾಕರಿಸಿದ ಕಾರಣ ವಿವಾಹವೊಂದು ಮದುವೆ ಮಂಟಪದಲ್ಲೇ ಮುರಿದುಬಿದ್ದ ಪ್ರಸಂಗ ಶೃಂಗೇರಿ ಪಟ್ಟಣದ ಈಡಿಗ ಸಮುದಾಯ ಭವನದಲ್ಲಿ ಶುಕ್ರವಾರ ನಡೆದಿದೆ. 41 ವರ್ಷದಯುವಕನ ಜೊತೆ 29 ವರ್ಷದ ಯುವತಿಯ ಮದುವೆ ನಿಶ್ಚಯವಾಗಿತ್ತು. ಆದರೆ, ವರನು ತನ್ನ ವಯಸ್ಸಿನ ಬಗ್ಗೆ ಸುಳ್ಳು ಹೇಳಿದ್ದಾನೆಂದು ಆರೋಪಿಸಿ ವಧು ಮದುವೆಯನ್ನೇ ನಿರಾಕರಿಸಿದ್ದಾಳೆ.

ವರನ ಮೇಲೆ ಈ ಹಿಂದೆ ಇದ್ದ ಪೊಲೀಸ್ ಪ್ರಕರಣಗಳನ್ನು ಮುಚ್ಚಿಡಲಾಗಿದೆ. ಆತನ ತಾಯಿಯ ಅನಾರೋಗ್ಯದ ವಿಷಯವನ್ನೂ ಮರೆಮಾಚಲಾಗಿದೆ ಎಂಬುದು ಯುವತಿಯ ಆರೋಪವಾಗಿದೆ. ಮದುವೆಗೆ ಮೊದಲು ಯಾವುದೇ ಪ್ರಶ್ನೆ ಕೇಳಿದರೂ ಮದುವೆಯಾದ ನಂತರ ಉತ್ತರಿಸುವುದಾಗಿ ವರ ಹೇಳುತ್ತಿದ್ದನೆನ್ನಲಾಗಿದೆ.

ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಬೆಲ್ಲದ ಮನವಿ

ಹುದ್ದೆ ಭರ್ತಿ ಪಾರದರ್ಶಕತೆಯಿಂದ ನಡೆಯಲಿ

ಹುಬ್ಬಳ್ಳಿ: ರಾಜ್ಯ ಸರ್ಕಾರ ಉದ್ಯೋಗಾಕಾಂಕ್ಷಿಗಳ ಹೋರಾಟಕ್ಕೆ ಮಣಿದು ವಿವಿಧ ಇಲಾಖೆಯಲ್ಲಿ 56 ಸಾವಿರ ಹುದ್ದೆ ಭರ್ತಿ ಮಾಡುವುದಾಗಿ ಹೇಳಿದ್ದು, ಭ್ರಷ್ಟಾಚಾರ ರಹಿತ ಹಾಗೂ ಪಾರದರ್ಶಕತೆಯಿಂದ ಪ್ರಕ್ರಿಯೆ ನಡೆಸಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಅರವಿಂದ ಬೆಲ್ಲದ ಆಗ್ರಹಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರ ಇನ್ನೂ 30 ದಿನಗಳಲ್ಲಿ ಭರ್ತಿ ಮಾಡುವುದಾಗಿ ಒಪ್ಪಿಕೊಂಡಿದೆ. ಉದ್ಯೋಗಾಕಾಂಕ್ಷಿಗಳ ಮತ್ತು ಬಿಜೆಪಿ ಪ್ರತಿಭಟನೆಗೆ ಸರ್ಕಾರ ಮಣಿದಿದೆ. ಒಂದು ವೇಳೆ ನಿರ್ಲಕ್ಷ್ಯ ವಹಿಸಿದ್ದರೆ ಗಂಭೀರ ಪರಿಣಾಮ ಎದುರಿಸಬೇಕು ಎಂಬ ಭಯದಿಂದ ಸೂಕ್ತ ನಿರ್ಧಾರ ಕೈಗೊಂಡಿದೆ ಎಂದು ತಿಳಿಸದರು.

ಕೆಲವೇ ತಿಂಗಳುಗಳಲ್ಲಿ ಸ್ಥಳೀಯ ಸಂಸ್ಥೆಯ ಚುನಾವಣೆಗಳು ನಡೆಯಲಿದ್ದು, ನೀತಿ ಸಂಹಿತೆ ಜಾರಿಗೂ ಮುನ್ನವೇ ಅಧಿಸೂಚನೆ ಹೊರಡಿಸಬೇಕು. ಅಧಿಸೂಚನೆ ಹೊರಡಿಸಿದ ಮೂರು ತಿಂಗಳ ಒಳಗಾಗಿ ನೇಮಕಾತಿ ಪತ್ರ ನೀಡಬೇಕು ಎಂದು ಆಗ್ರಹಿಸಿದರು.

ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿದೆ. ಸರ್ಕಾರ ಇದರ ನೆಪ ಹೇಳದೇ ಈ ಹಿಂದಿನ 6:6:5 ಅನುಪಾತದಲ್ಲಿ ನೇಮಕಾತಿ ಮಾಡಿಕೊಳ್ಳಬೇಕು ಮತ್ತು ಈ ಸಂಬಂಧ ವಿಶೇಷ ಸಭೆ ಕರೆದು, ಕಾನೂನು ತಜ್ಞರೊಂದಿಗೆ ಸಮಾಲೋಚನೆ ನಡೆಸಿ, ನ್ಯಾಯಾಲಯಕ್ಕೆ ನಿರುದ್ಯೋಗಿಗಳ ಸಮಸ್ಯೆಗಳನ್ನು ಮನವರಿಕೆ ಮಾಡಲು ಪ್ರಯತ್ನಿಸಬೇಕು.

ಯಾವ ಸಮಾಜ, ಸಮುದಾಯಕ್ಕೂ ಮೀಸಲಾತಿ ವಿಚಾರದಲ್ಲಿ ಅನ್ಯಾಯ ಆಗದಂತೆ ಕ್ರಮ ವಹಿಸಬೇಕು ಎಂದು ವಿವರಿಸಿದರು ಎಂದು ಹೇಳಿದರು. ಮಾಜಿ ಮಹಾಪೌರ ರಾಮಣ್ಣ ಬಡಿಗೇರ ಸೇರಿದಂತೆ ಅನೇಕರಿದ್ದರು.

ಹೋರಾಟದಿಂದ ಬಿಜೆಪಿಗೆ ಜಯ



ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸುವ ಹೋರಾಟದಲ್ಲಿ ವಿದ್ಯಾರ್ಥಿ ಸಂಘಟನೆ ಮತ್ತು ಬಿಜೆಪಿಗೆ ಜಯ ಲಭಿಸಿದೆ. ಆದರೆ, ಹೋರಾಟದ ಸಂದರ್ಭದಲ್ಲಿ ಆದ ಸಣ್ಣ ಪುಟ್ಟ ಘಟನೆಗಳನ್ನು ಮನದಲ್ಲಿಟ್ಟುಕೊಂಡು ಪೊಲೀಸರು ವಿದ್ಯಾರ್ಥಿ ನಾಯಕರ ಮೇಲೆ ಪ್ರಕರಣ ದಾಖಲಿಸುವ ಕೆಲಸ ಮಾಡಬಾರದು. 30-40 ಸಾವಿರ ಜನ ಸೇರಿದಾಗ ಸಣ್ಣ ಪುಟ್ಟ ಘಟನೆಗಳು ಆಗುವುದು ಸಹಜ ಅದನ್ನೇ ದೊಡ್ಡದಾಗಿ ಬಿಂಬಿಸುವ ಕೆಲಸ ಆಗಬಾರದು ಎಂದರು.

ಹೊರಗಡೆ ಔಷಧಿ ಬರೆದು ಕೊಟ್ಟರೆ ಕ್ರಮ: ಸಚಿವ

ಕಲಬುರಗಿ: ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಯಾವುದೇ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಹೊರಗಡೆಯ ಮೆಡಿಸಿನ್ ಬರೆದು ಕೊಡುವಂತಿಲ್ಲ. ಒಂದು ವೇಳೆ ಯಾರಾದರೂ ಬರೆದು ಕೊಟ್ಟರೆ ಅಂತವರ ವಿರುದ್ಧ ಇಲಾಖೆ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.



ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ವೈದ್ಯಕೀಯ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿರುವ ಯಾವುದೇ ಆಸ್ಪತ್ರೆಗಳಲ್ಲಿ ಔಷಧೀಯ ಕೊರತೆಯಿಲ್ಲ. ಹೀಗಾಗಿ ಹೊರಗಡೆ ಔಷಧಿ ಯಾರು ಬರೆದು ಕೊಡಬಾರದು ಎಂಬ ಸ್ಪಷ್ಟ ನಿರ್ದೇಶನವಿದ್ದು, ಈಗಾಗಲೇ ಈ ಕುರಿತು ಸರ್ಕ್ಯೂಲರ್ ಕೂಡ ಹೊರಡಿಸಲಾಗಿದೆ. ಒಂದು ವೇಳೆ ಯಾರಾದರೂ ಈ ನಿರ್ದೇಶನ ಮುರಿದರೇ, ಇಲಾಖೆ ಅವರ ವಿರುದ್ಧ ಸೂಕ್ತ ಕ್ರಮಕ್ಕೆ ಮುಂದಾಗಲಿದೆ ಎಂದರು.

ಸಚಿವ ಸ್ಥಾನ ಕೇಳುವ ಅಧಿಕಾರ ಇದೆ

ಮುಖ್ಯಮಂತ್ರಿ ಬದಲಾವಣೆ ಪಕ್ಷದ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳಲಿದೆ. ನಾನಲ್ಲ. ಸಚಿವ ಸಂಪುಟ ಪುನಾರಚನೆ ಮಾಡುವುದು ಬಿಡುವುದು ಸಿಎಂ ಸಿದ್ದರಾಮಯ್ಯ ಹಾಗೂ ಪಕ್ಷದ ವರಿಷ್ಠರಿಗೆ ಬಿಟ್ಟ ವಿಚಾರ. ಸಚಿವ ಸ್ಥಾನ ಕೇಳುವ ಅಧಿಕಾರ ಎಲ್ಲರಿಗೂ ಇರಲಿದೆ. ಇದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಅಂತಿಮವಾಗಿ ಹೈಕಮಾಂಡ್ ಸೂಚಿಸಿದರೆ ಯಾರು ಕೂಡ ಸಚಿವರಾಗಬಹುದು ಎಂದರು.

ನೇಮಕಾತಿ ಆದೇಶ ಮಾಡಿ: ಅಶೋಕ

ಮೈಸೂರು: ಕಾಂಗ್ರೆಸ್ ಸರ್ಕಾರ ಸರ್ಕಾರಿ ಉದ್ಯೋಗದ ನೇಮಕಾತಿ ಆದೇಶ ಮಾಡದೆ ವಿದ್ಯಾರ್ಥಿಗಳನ್ನು ಆಟವಾಡಿಸುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ ಕಿಡಿಕಾರಿದರು.



ಶುಕ್ರವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ನಮ್ಮ ಹೋರಾಟ,ವಿದ್ಯಾರ್ಥಿಗಳ ಹೋರಾಟಕ್ಕೆ ಮಣಿದು, ಇದೀಗ ಹುದ್ದೆಗಳ ನೇಮಕಾತಿ ಆದೇಶ ಮಾಡಿದೆ. 2.84 ಲಕ್ಷ ಹುದ್ದೆಗಳಿಗೆ ನಾವು ಹೋರಾಟ ಮಾಡಿದ್ದರೂ, ಸರ್ಕಾರ 56 ಸಾವಿರ ಹುದ್ದೆಗೆ ನೇಮಕ ಆದೇಶ ಮಾಡಿದೆ. ಉಳಿದ ನೇಮಕಾತಿಗೆ ಯಾವಾಗ ಆದೇಶ ಮಾಡುತ್ತಾರೆಂದು ಸರ್ಕಾರ ತಿಳಿಸಬೇಕು. ಇಲ್ಲವಾದರೆ ಪಾದಯಾತ್ರೆಯ ಚಳವಳಿ ಮಾಡುತ್ತೇವೆ. ಅದೇ ರೀತಿ ಸೇವ್ ಮೈಸೂರು ಸಿಲ್ಕ್ ಎಂಬ ಹೋರಾಟ ಮಾಡುತ್ತೇವೆ. ಇದನ್ನು ದೊಡ್ಡ ಮಟ್ಟದ ಜನಾಂದೋಲನವಾಗಿ ರೂಪಿಸುತ್ತೇವೆ. ಬಜೆಟ್ ಅಧಿವೇಶನದಲ್ಲೂ ಈ ಬಗ್ಗೆ ಮಾತಾಡುತ್ತೇನೆ ಎಂದರು.

ಸಿಎಂ ಹುದ್ದೆ ಒಪ್ಪಂದ ಬಗ್ಗೆ ಸ್ಪಷ್ಟವಾಗಿ ಹೇಳಿ: ಸಿಎಂ ಹುದ್ದೆ ಒಪ್ಪಂದದ ಬಗ್ಗೆ ಯಾರೂ ಸರಿಯಾಗಿ ಹೇಳುತ್ತಿಲ್ಲ. ಇದೇ ಕಚ್ಚಾಟದಿಂದಾಗಿ ರಾಜ್ಯದ ಅಭಿವೃದ್ಧಿ ಕಡೆಗಣನೆಯಾಗಿದೆ. ಇಬ್ಬರ ಕಿತಾಪತಿಯಿಂದ ಗೊಂದಲ ಸೃಷ್ಟಿಯಾಗಿದೆ. ಇಂತಹ ಕಾಮಿಡಿಯನ್ನು ಜನರು ಎಂಜಾಯ್ ಮಾಡುತ್ತಿದ್ದಾರೆ. ನವೆಂಬರ್ ಕ್ರಾಂತಿ ಆರಂಭವಾಗಿ, ಕಾಂಗ್ರೆಸ್ ಪಕ್ಷದಲ್ಲಿ ಕಹಳೆ ಊದಲಾಗಿದೆ. ಕಾಂಗ್ರೆಸ್ ಶಾಸಕ ಬಾಲಕೃಷ್ಣ ಅವರೇ ಮುಂದೆ ಕಾಂಗ್ರೆಸ್ ಗೆಲ್ಲಲ್ಲ ಎಂದಿದ್ದಾರೆ. ಗ್ಯಾರಂಟಿಗಳನ್ನು ಹೊರೆ ಎಂದು ಈಗ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಚುನಾವಣೆಯಲ್ಲಿ ಘೋಷಣೆ ಮಾಡುವಾಗ ಇವರಿಗೆ ಜ್ಞಾನ ಇರಲಿಲ್ಲ. ಯುವನಿಧಿ ಈಗಾಗಲೇ ಸ್ಥಗಿತವಾಗಿದೆ ಎಂದರು.

ಸಂಪಾದಕೀಯ

ಪಾಪದ ಕರ್ಮ ಬೆನ್ನು ಬಿಡದು

ಒಂದೆಡೆ ರಷ್ಯಾ -ಉಕ್ರೇನ್ ಸಮರ, ಇನ್ನೊಂದೆಡೆ ಇಸ್ರೇಲ್ ಮತ್ತು ಅದರ ವಿರೋಧಿಗಳ ನಡುವಿನ ಸಂಘರ್ಷ, ಮತ್ತೊಂದೆಡೆ ಇರಾನ್ ಮೇಲೆ ಅಮೆರಿಕದ ದಾಳಿಯ ಸಂಭಾವ್ಯತೆ...ಇವುಗಳ ಮಧ್ಯೆಯೇ ಮತ್ತೊಂದು ಯುದ್ಧವು ಸ್ಫೋಟಗೊಂಡಿದೆ. ಪಾಕಿಸ್ತಾನವು ಅಫಘಾನಿಸ್ತಾನದ ಮೇಲೆ 'ಸಮರ ಘೋಷಿಸಿದ್ದು' ರಾಜಧಾನಿ ಕಾಬೂಲ್ ಸೇರಿದಂತೆ ಕೆಲವು ನಗರಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇದು ಕಳೆದ ಕೆಲವು ತಿಂಗಳುಗಳಿಂದ ಉಭಯದೇಶಗಳ ನಡುವೆ ನಡೆಯುತ್ತಿದ್ದ ಚಕಮಕಿ ತೀರಾ ಉಲ್ಬಣಾವಸ್ಥೆ ತಲುಪಿರುವುದನ್ನು ಸಂಕೇತಿಸಿದೆ. ಈ ಸಮರವು ದೀರ್ಘಾವಧಿಗೆ ಮುಂದುವರಿದಲ್ಲಿ ಇಡೀ ದಕ್ಷಿಣ ಏಷ್ಯಾದ ಮೇಲೆ ಪರಿಣಾಮ ಬೀರುವುದು ನಿಶ್ಚಿತವಾಗಿದೆ.

ಭಯೋತ್ಪಾದನೆಯನ್ನು ಪೋಷಿಸುವ ಪಾಕಿಸ್ತಾನದ ನೀತಿಯು ಅದಕ್ಕೇ ತಿರುಗುಬಾಣವಾಗುತ್ತಿರುವ ಸಂಕೇತವೂ ಇದಾಗಿದೆ. ತಾಲಿಬಾನನ್ನು ಪೋಷಿಸಿ, ಬೆಳೆಸಿದ್ದು ಇದೇ ಪಾಕಿಸ್ತಾನ. ಅಫಘಾನಿಸ್ತಾನದಲ್ಲಿ ತನ್ನ ಕೈಗೊಂಬೆ ಸರಕಾರವನ್ನು ಕೂರಿಸುವ ಉದ್ದೇಶದಿಂದ ತಾಲಿಬಾನನ್ನು ಬೆಳೆಸಿದ ಪಾಕಿಸ್ತಾನಕ್ಕೆ ಆಘಾತವಾದುದು ತಾಲಿಬಾನ್ ಅಫಘಾನಿಸ್ತಾನದ ಅಧಿಕಾರ ಹಿಡಿದ ಬಳಿಕ! ಪಾಕಿಸ್ತಾನದ ತಾಳಕ್ಕೆ ಕುಣಿಯಲು ನಿರಾಕರಿಸಿದ ತಾಲಿಬಾನ್‌ಗಳು ಪಾಕಿಸ್ತಾನದ ಮೇಲೆಯೇ ದಾಳಿ ನಡೆಸಲಾರಂಭಿಸಿದರು.



ಕಳೆದ ಕೆಲವು ವರ್ಷಗಳಲ್ಲಿ ಹಲವಾರು ಭಯೋತ್ಪಾದಕ ಕೃತ್ಯಗಳಿಗೆ ಪಾಕಿಸ್ತಾನವು ಈಡಾಗಬೇಕಾಯಿತು. ಅದೀಗ ಉಭಯದೇಶಗಳ ಮಧ್ಯೆ ನೇರ ಯುದ್ಧಕ್ಕೆ ಕಾರಣವಾಗಿದೆ.

ಸದ್ಯದ ಮಟ್ಟಿಗೆ ಪಾಕಿಸ್ತಾನವು ಅಫಘಾನಿಸ್ತಾನದ ಮೇಲೆ ಮೇಲುಗೈ ಸಾಧಿಸಿದಂತೆ ತೋರಿ ಬರಬಹುದು. ಅಫಘಾನಿಸ್ತಾನವು ಪಾಕಿಸ್ತಾನದಷ್ಟು ದೊಡ್ಡ ಸೇನಾ ಬಲ ಹೊಂದದಿರುವುದು, ಅತ್ಯಾಧುನಿಕ ಸಮರ ಉಪಕರಣಗಳನ್ನು ಪಡೆಯದಿರುವುದು, ವಾಯುಪಡೆಯ ಸೌಲಭ್ಯವನ್ನ ಹೊಂದದಿರುವುದು ಇದಕ್ಕೆ ಕಾರಣವಾಗಿದೆ. ಆದರೆ ಗೆರಿಲ್ಲಾ ಯುದ್ಧದಲ್ಲಿ ಪರಿಣತವಾದ ತಾಲಿಬಾನ್‌ಗಳು ದೀರ್ಘಾವಧಿಯಲ್ಲಿ ಪಾಕಿಸ್ತಾನಕ್ಕೆ ಭಾರೀ ಹಾನಿ ಎಸಗುವುದು ಖಂಡಿತವಾಗಿದೆ. ರಷ್ಯಾ ಮತ್ತು ಅಮೆರಿಕದಂತಹ ಬಲಿಷ್ಠ ರಾಷ್ಟ್ರಗಳೇ ತಾಲಿಬಾನ್‌ನ ಮುಂದೆ ಸೋತುಹೋಗಿರುವುದು ಇದಕ್ಕೆ ನಿದರ್ಶನ. ಇದರ ಜತೆಗೇ ಬಲೂಚಿಸ್ತಾನದ ಸ್ವಾತಂತ್ರ್ಯ ಹೋರಾಟಗಾರರೂ ಪಾಕಿಸ್ತಾನದ ವಿರುದ್ಧ ಸಮರ ಸಾರಿರುವುದರಿಂದ ಪಾಕಿಸ್ತಾನದ ಪರಿಸ್ಥಿತಿ ಮುಂದಿನ ದಿನಗಳಲ್ಲಿ ಚಿಂತಾಜನಕವಾದರೆ ಅಚ್ಚರಿ ಪಡಬೇಕಾಗಿಲ್ಲ.

ಭಾರತದ ವಿರುದ್ಧ ಭಯೋತ್ಪಾದನೆಯನ್ನು ಛೂ ಬಿಟ್ಟು, ಜಗತ್ತಿಗೆ ಭಯೋತ್ಪಾದನೆಯನ್ನು ರಫ್ತು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಪಾಕಿಸ್ತಾನವು ಈಗ ತಾನೇ ಅದರ ಉಪಟಳವನ್ನು ಎದುರಿಸುತ್ತಿರುವುದು 'ಪಾಪದ ಕರ್ಮ ಎಂದಿಗೂ ಬೆನ್ನು ಬಿಡದು' ಎಂಬುದಕ್ಕೆ ಸಾಕ್ಷಿ.

ವಿಶುದ್ಧ ಚಕ್ರ ನಿಮಗೊಲಿದರೆ...

ವಿಶುದ್ಧ ಚಕ್ರವು ನಿಮಗೊಲಿದರೆ ದಿನೇ ದಿನೇ ನೀವು ಮಾತಿನ ನಾಯಕರಾಗುತ್ತಾ ಹೋಗುತ್ತೀರಿ.

ಪೂರ್ಣ ಪರಿಪೂರ್ಣ
ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವು ನಿಮಗೆ ಒಲಿದುದಾದರೆ...

ನೀವು ಸ್ಪಷ್ಟವಾಗಿ, ಸಣ್ಣ ಸಣ್ಣ ವಾಕ್ಯಗಳಲ್ಲಿ ಸಂಗತಿಗಳನ್ನು ಹೇಳುತ್ತೀರಿ. ಕೇಳುಗರಿಗೆ ಇಷ್ಟವಾಗುವ ರೀತಿಯಲ್ಲಿ ಹೇಳುತ್ತೀರಿ. ಮಕ್ಕಳಿಂದ ಹಿಡಿದು ವೃದ್ಧರವರೆಗೆ ಎಲ್ಲರನ್ನೂ ಆಕರ್ಷಿಸುತ್ತೀರಿ. ನಿಮ್ಮ ಸ್ವರ ಹಿತವಾಗಿರುತ್ತದೆ.

ಸಾರ್ವಜನಿಕವಾಗಿ ಮಾತನಾಡುವಾಗ ವಿಷಯವನ್ನು ಕೇಂದ್ರೀಕರಿಸುತ್ತೀರಿ. ವಿಷಯದ ಸುತ್ತಲೂ ಮಾತುಗಳನ್ನು ಬೆಳೆಸುತ್ತೀರಿ. ನಿಧಾನವಾಗಿ ಕತೆಗಳನ್ನು ಹೇಳುತ್ತಾ ಕೇಳುಗರಿಗೆ ಬೇಸರವಾಗದಂತೆ ಜೋಕ್ಸ್‌ಗಳನ್ನು ಮಾಡುತ್ತಾ ವಿಷಯವು ಅವರ ಮನ ಮುಟ್ಟುವಂತೆ ಮಾಡುತ್ತೀರಿ. ನಿಮಗೆ ಯಾವುದೂ ಅಡಚಣೆ ಎನಿಸುವುದಿಲ್ಲ. ಯಾರೋ ಪ್ರಶ್ನೆ ಕೇಳಿದರೆ ಅದು ಅಸಂಗತ ಅಥವಾ ತೊಡಕು ಎನಿಸುವುದಿಲ್ಲ. ಅದನ್ನೇ ಮುಂದುವರೆಸಿ ಅವರಿಗೆ ಉತ್ತರ ಕೊಡುತ್ತೀರಿ ಅಥವಾ ಅವರನ್ನು ಗೊಂದಲಕ್ಕೆ ಕೆಡವುತ್ತೀರಿ.

ಎಲ್ಲಿ ಆಕ್ರಮಣ ಮಾಡಬೇಕು, ಯಾವಾಗ ಡಯಾಸನ್ನು ಗುದ್ದಬೇಕು ಎನ್ನುವುದನ್ನು ಪ್ರಜ್ಞಾಪೂರ್ವಕವಾಗಿ ಮಾಡುತ್ತೀರಿ. ಕೇಳುಗರ ಅಗತ್ಯಗಳನ್ನು ತಣಿಸುತ್ತಾ ಅವರಲ್ಲೇ ಜಿಜ್ಞಾಸೆ ಉಂಟಾಗುವಂತೆ ಮಾಡುತ್ತೀರಿ. ಅದು ಅವರಲ್ಲಿ ತರ್ಕವಾಗಿ ಅವರಿಗೆ ಅದೇ ಸವಾಲಾಗುವಂತೆ ಮಾಡುತ್ತೀರಿ. ಮುಂದೆ ಅವರ ದಾರಿ ಅವರೇ ಕಂಡುಕೊಳ್ಳಬೇಕೆಂಬುದು ನಿಮ್ಮ ಗುರಿಯಾಗಿರುತ್ತದೆ. ನಿಮ್ಮ ಅಭಿವ್ಯಕ್ತಿತ್ವವು ಅವರನ್ನು ವಿಚಲಿತ ಗೊಳಿಸುವಂತೆ ನಿಮ್ಮ ಪ್ರಭಾವ ಇರುತ್ತದೆ. ನೀವು ಸತ್ಯವನ್ನು ನೇರವಾಗಿ ನುಡಿದರೆ ಜನರು ಮೆಚ್ಚುವುದಿಲ್ಲ. ನಿಮ್ಮ ಮಾತುಗಳು ಕಹಿ ಗುಳಿಗೆಗಳಾದರೂ ಅದನ್ನು ಸಿಹಿಯಾದ ಲೇಪನ ಮಾಡಿ ಕೊಡಬೇಕು. ನಿಮ್ಮ ಭಾವನೆಗಳು ನಿಮ್ಮನ್ನು ವಿಚಲಿತರನ್ನಾಗಿ ಮಾಡಬಾರದು. ನಿಮ್ಮ ವಿಚಾರಗಳು ನಿಮ್ಮ ಭಾವನೆಯ ಮೇಲೆ ಹೇರಿಕೆಯಾಗಲೂ ಬಾರದು. ಇವೆಲ್ಲದರೊಂದಿಗೆ ಕೊನೆಯಲ್ಲಿ ನಿಮ್ಮ ಗುರುತು ಉಳಿಯುವಂತೆ ನೀವು ಮುಕ್ತಾಯ ಮಾಡಬೇಕು. ನಿಮ್ಮ ಅವರ ಸಂಬಂಧ ಅಲ್ಲಿಂದ ಪ್ರಾರಂಭವಾಗುವಂತೆ ಇರಬೇಕು.

ನಿಮ್ಮ ಆಲೋಚನೆಗಳೇ ನಿಮ್ಮ ಮಾತುಗಳಾಗಿರಬೇಕು. ಮಾತನಾಡುತ್ತಾ ನೀವೇ ತರ್ಕವನ್ನೂ, ಹೊಸ ಚಿಂತನೆಗಳನ್ನು, ಹೊಸ ದೃಷ್ಟಿಕೋನವನ್ನೂ, ಹೊಸ ಸಂಗತಿಗಳನ್ನು ಹುಟ್ಟುಹಾಕಬೇಕು. ಇದು ನಿಮಗೆ ನೀವೇ ಹಾಕಿಕೊಳ್ಳುವ ಸವಾಲಾಗಿರಬೇಕು. ದಿನೇ ದಿನೇ ನೀವು ಮಾತಿನ ನಾಯಕರಾಗುತ್ತಾ ಹೋಗುತ್ತೀರಿ. ನಿಮ್ಮ ಸಂವಹನದ ಸಾಮರ್ಥ್ಯ ಹೆಚ್ಚುತ್ತದೆ. ಭಾವನಾತ್ಮಕ ತೀವ್ರತೆ ಕಡಿಮೆಯಾಗುತ್ತದೆ. ಆಲೋಚನೆಗಳೆಲ್ಲಾ ಸುಸಂಬದ್ಧವಾಗಿ ವ್ಯಕ್ತವಾಗುತ್ತಾ ಹೋಗುತ್ತದೆ. ಆತಂಕ ಇಲ್ಲವೇ ಇಲ್ಲವಾಗುತ್ತದೆ.

ಸಂದರ್ಶನಗಳಲ್ಲಿ ನೀವು ಅವರು ಕೇಳುವ ಪ್ರಶ್ನೆಗಳ ಉತ್ತರಿಸುವ ಬದಲು ನಿಮ್ಮ ಉತ್ತರಗಳಿಗೆ ಅವರು ಪ್ರಶ್ನೆ ಕೇಳುವಂತೆ ಹಿಡಿತ ಸಾಧಿಸಬಲ್ಲಿರಿ. ನಿಮ್ಮ ಧ್ವನಿ ಕರುಣೆಯಿಂದ, ಮನವೊಲಿಸುವ ದಾಟಿಯಲ್ಲಿ ಬದಲಾಗಿರುತ್ತದೆ. ನಾಯಕತ್ವವನ್ನು ವಹಿಸಿದಾಗ ನಿಮ್ಮ ಕಿವಿಗಳು ತೆರೆದಿದ್ದು ಅವರನ್ನು ತೃಪ್ತಿಗೊಳಿಸುವ ರೀತಿಯಲ್ಲಿ ಆಲಿಸಿರುತ್ತೀರಿ. ಬಳಿಕ ಅವರಿಗೆ ಭರವಸೆ ಮೂಡಿಸುವ ಮಾತುಗಳನ್ನು ಆಡುತ್ತಾ ಬಲವಾದ ಜಾಲವನ್ನು ಹೆಣೆಯುತ್ತೀರಿ. ಅದೆಷ್ಟೆಂದರೆ ಅವರು ಹೇಳಿದ್ದು ಅವರಿಗೆ ಮರೆತು ಹೋಗಿ ನೀವು ಹೇಳುತ್ತಿರುವುದನ್ನೇ ಅವರು ಪಾಲಿಸುವಂತೆ ಮತ್ತು ನಂಬುವಂತೆ ಮಾಡುತ್ತೀರಿ. ಮತ್ತು ಆದದ್ದೆಲ್ಲಾ ಅವರು ಹೇಳಿದಂತೆ ಎನ್ನುವಂತೆ ವರ್ತಿಸುತ್ತೀರಿ.

ನಿಮ್ಮ ಮಾತಿನಿಂದ ಹಳಸಿದ ಅನ್ನವನ್ನೂ ಸಹಾ ಮಾರಾಟ ಮಾಡಬಲ್ಲಿರಿ, ಉರಿದೆದ್ದ ಗ್ರಾಹಕರನ್ನು ಸಮಾಧಾನಪಡಿಸಬಲ್ಲಿರಿ. ಗೊಂದಲದಿಂದ ನಿರ್ಣಯಕ್ಕೆ ಬರಲಾರದ ವ್ಯಕ್ತಿಯನ್ನು ಕೈಹಿಡಿದು ನಡೆಸಬಲ್ಲಿರಿ. ಸಿಟ್ಟು ಬಂದವರನ್ನು ಸುಧಾರಿಸ ಬಲ್ಲಿರಿ. ಸಂಘರ್ಷ ಉಂಟಾದಾಗ ಕ್ಷಮೆ ಕೇಳುವ ಮೂಲಕ ಪರಿಸ್ಥಿತಿಯನ್ನು ನಿಭಾಯಿಸ ಬಲ್ಲಿರಿ. ಯಾವುದೇ ತಪ್ಪು ಗ್ರಹಿಕೆಗಳು ಉಂಟಾಗದಂತೆ ನೋಡಿಕೊಳ್ಳಬಲ್ಲಿರಿ. ಇಲ್ಲ ಎನ್ನುವದನ್ನು ಇಲ್ಲ ಎಂದೇ ಹೇಳಬಲ್ಲಿರಿ. ಸಂವಾದಕ್ಕೆ ನಿಮ್ಮನ್ನು ತೆರೆದುಕೊಳ್ಳಬಲ್ಲಿರಿ. ಆದರಿಂದ ಕಡಿಮೆ ವಿವಾದ ಮತ್ತು ಹೆಚ್ಚು ರಚನಾತ್ಮಕವಾದ ಫಲಿತಾಂಶ ಬರುತ್ತದೆ.

ನಿಮ್ಮ ಧ್ವನಿ ಯಾವತ್ತೂ ಕರ್ಕಶವಾಗುವುದಿಲ್ಲ. ಏರು ಧ್ವನಿಯಲ್ಲಿ ಮಾತನಾಡಿದರೂ ಅದು ಹಿಂಸೆ ನೀಡುವುದಿಲ್ಲ. ನಿಮಗೆ ಎಂದಿಗೂ ಉದ್ವೇಗ ಉಂಟಾಗುವುದಿಲ್ಲ. ನಿರ್ದಿಷ್ಟವಾದ ಸಮಯದಲ್ಲಿ ನೀವು ಮಾತನ್ನು ಮುಗಿಸುತ್ತೀರಿ. ಯಾವ ಭಯವಿಲ್ಲದೇ ಕಠೋರವಾದ ವಾಸ್ತವವನ್ನು ಲಘುವಾದ ದಾಟಿಯಲ್ಲಿ ಹೇಳಿ ಬಿಡುತ್ತೀರಿ. ಕಷ್ಟ ಮತ್ತು ಕ್ಲಿಷ್ಟವಾದ ಸಂಗತಿಗಳನ್ನು ಉದಾಹರಣೆಯೊಂದಿಗೆ ಸುಗಮವಾಗಿ ತಲುಪುವಂತೆ ಮಾಡುತ್ತೀರಿ. ಎದುರಿನವರ ಮಾತುಗಳನ್ನು ಸಮಸ್ಯೆಗಳನ್ನು, ನೋವನ್ನು, ಖುಷಿಯನ್ನು ಎಲ್ಲವನ್ನೂ ಕೇಳುವ ಒಳ್ಳೆಯ ಕೇಳುಗರು ನೀವು ಎಂದು ಎಲ್ಲರೂ ಮೆಚ್ಚುವಂತೆ ಮಾಡುತ್ತೀರಿ. ನಿಮ್ಮಲ್ಲಿ ಶಬ್ದ ಭಾಂಡಾರವೇ ಇರುತ್ತದೆ. ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಬಳಸುತ್ತಾ ನಿಮ್ಮ ಶಬ್ದ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತೀರಿ.

ನೀವು ಇವುಗಳನ್ನೆಲ್ಲಾ ನಿತ್ಯವೂ ಪಾಲಿಶ್ ಮಾಡುವುದೂ ಸಹಾ ಅಗತ್ಯ. ಅದಕ್ಕಾಗಿ ನಿತ್ಯವೂ ಮಂತ್ರಗಳ ಪಠಣ ಮಾಡಿ. ಹಾಡುಗಳನ್ನು ಗುನುಗುತ್ತಾ ಇರಿ. ಭಜನೆ ಮಾಡಿ, ಜಪಗಳನ್ನು ಮಾಡಿ. ಕಷ್ಟವಾದ ಶ್ಲೋಕಗಳನ್ನು ಹೇಳುತ್ತಿರಿ. ಒಳ್ಳೊಳ್ಳೆಯ ಪದ್ಯಗಳನ್ನು ಬಾಯಿಪಾಠ ಮಾಡಿ. ನಾನು ಎನ್ನುವುದನ್ನು ಕಡಿಮೆ ಮಾಡುತ್ತಾ, ನಾವು ಎನ್ನುವ ವಿಶಾಲತೆಯನ್ನು ರೂಢಿಸಿಕೊಳ್ಳಿ.

ವಿಶುದ್ಧ ಚಕ್ರವನ್ನು ಬಲಪಡಿಸುವ ಕೆಲವು ಪ್ರಯೋಗಗಳು:

- ನೀವು ಕಲಿಯಲು ಕಷ್ಟ ಎಂದಾದರೆ ಅದನ್ನು ಬಾಯಿಂದ ಹೇಳುತ್ತಾ ಬರೆದು ಕಲಿಯಿರಿ.
- ನಿಮ್ಮದೇ ಅನುಭವಗಳನ್ನು ಮೊದಲು ಹೇಳಿ, ಬಳಿಕ ಯಾರದೋ ಅನುಭವಗಳನ್ನು ಅನುಭವಿಸಿದಂತೆ ಹೇಳಿ
- ಮಾತನಾಡುವಲ್ಲಿ ಆತಂಕ ಇದೆ ಎಂದಾದರೆ, ಒಂದು ಗುಟುಕು ನೀರು ಕುಡಿಯಿರಿ ಅಥವಾ ಒಂದು ಚಾಕೋಲೇಟ್‌ನ್ನು ಬಾಯಿಗೆ ಹಾಕಿಕೊಳ್ಳಿ.
- ವೇದಿಕೆಯಲ್ಲಿ ನಿಂತಾಗ ಅಥವಾ ಸಂದರ್ಶನದಲ್ಲಿ ಒಮ್ಮೆ ದೀರ್ಘವಾದ ಉಸಿರನ್ನು ತೆಗೆದುಕೊಳ್ಳಿ. ಮುಖದಲ್ಲಿ ಒಂದು ಕಿರು ನಗುವನ್ನು ಕೃತಕವಾಗಿಯಾದರೂ ಭರಿಸಿಕೊಳ್ಳಿ. ಬಳಿಕ ಮಾತನ್ನು ಶುರು ಮಾಡಿ.
- ನಿಮ್ಮ ಮಾತಿನ ಮೇಲೆ ಹಿಡಿತ ಇರುವುದು ಅಗತ್ಯ. ಏಕೆಂದರೆ ವೇದಿಕೆಯಲ್ಲಿ ನೀವೇ ಮಾತನಾಡುತ್ತಾ ಕಳೆದುಹೋದರೆ ಏನೆಲ್ಲಾ ಹೇಳಿ ಸಿಕ್ಕಿ ಹಾಕಿಕೊಳ್ಳುತ್ತೀರಿ.ಸಂದರ್ಶನದ ವೇಳೆ ಏನೆಲ್ಲಾ ಹೇಳುತ್ತಾ ಹೋದರೆ ಕೆಲಸ ನಿಮ್ಮ ಕೈತಪ್ಪಿ ಹೋಗುವ ಸಾಧ್ಯತೆ ಇರುತ್ತದೆ.
- ಪೂರ್ವ ತಯಾರಿ ಯಾವುದೇ ಕೆಲಸಗಳಿಗೂ ತುಂಬಾ ಮುಖ್ಯ. ಅದೇ ರೀತಿ ಎಷ್ಟೆಲ್ಲಾ ನಿಮಗೆ ಗೊತ್ತಿದ್ದರೂ ಪ್ರತಿ ಸಾರಿ ಚಿಕ್ಕದಾದರೂ ಸರಿಯೇ ಪೂರ್ವ ತಯಾರಿ ಇಲ್ಲದೇ ಮಾತನ್ನು ಶುರು ಮಾಡಬೇಡಿ, ಸಂದರ್ಶನಕ್ಕೆ ಹಾಜರಾಗ ಬೇಡಿ.
- ಮೊದಲ ಸಾರಿ ನಿಮಗೆ ಮಾತನಾಡಲು ಬರದೇ ಇದ್ದಾಗ ಅದು ಒಂದು ಆಕಸ್ಮಿಕ ಮಾತ್ರ. ಎರಡನೇ ಸಾರಿ ನೀವು ಖಂಡಿತಾ ಮಾತನಾಡಬಲ್ಲಿರಿ.
- ಯಾವುದೇ ಕಾರಣಕ್ಕೂ ನಿಮಗೆ ವೇದಿಕೆಯ ಅಥವಾ ಸಂದರ್ಶನದ ಅವಕಾಶ ಸಿಕ್ಕಾಗ ತಪ್ಪಿಸಿಕೊಳ್ಳಬೇಡಿ
- ವಿಷಯದ ಬಗ್ಗೆ ನಿಮಗೆ ಸಂಪೂರ್ಣ ಜ್ಞಾನ ಇರುವುದು ಮುಖ್ಯ.
- ನಿಮಗೆ ಗೊತ್ತಿರುವ ವ್ಯಕ್ತಿಗಳು, ಸಹಕಾರ ನೀಡುವ ವ್ಯಕ್ತಿಗಳು, ಸ್ನೇಹಿತರು ಇದ್ದರೆ ಅವರನ್ನು ನೋಡುತ್ತಾ ಮಾತನ್ನು ಪ್ರಾರಂಭಿಸಿ. ಆಗ ನಿಮಗೆ ಅವರ ಮುಖ ಭಾವದಿಂದ ಆತಂಕ ಉಂಟಾಗುವುದಿಲ್ಲ.

ಡಯಾಫ್ರಾಗ್ಮಾಟಿಕ್ ಉಸಿರಾಟ

ಮನೆಯಲ್ಲಿ ಇರುವಾಗ ಬೆನ್ನನ್ನು ಕೆಳಗೆ ಮಾಡಿ ಮಲಗಿ. ಒಂದು ಕೈಯನ್ನು ಎದೆಯ ಮೇಲೆ ಮತ್ತೊಂದು ಕೈಯನ್ನು ಹೊಟ್ಟೆಯ ಮೇಲೆ ಇಟ್ಟುಕೊಳ್ಳಿ. ಮೂಗಿನ ಮೂಲಕ ಮಾತ್ರ ಉಸಿರಾಡಿ. ಎದೆಯನ್ನು ಉಬ್ಬಿಸಬೇಡಿ ಅದರೊಳಗಿನ ಡಯಾಫ್ರಮ್‌ನ್ನು ಮಾತ್ರ ಹಿಗ್ಗಿಸಿ ಮತ್ತು ಸಂಕುಚಿಸಿ. ಸ್ವಲ್ಪ ಸಮಯದ ಬಳಿಕ ಮೂಗಿನಿಂದ ಉಸಿರನ್ನು ತೆಗೆದುಕೊಂಡು ಬಾಯಿಂದ ಉಸಿರನ್ನು ಬಿಡಿ. ಇದು ನಾವು ಮಾತನಾಡುವ ವೇಗವನ್ನು, ಅದರೊಂದಿಗೆ ಸ್ಪಷ್ಟತೆಯನ್ನು ಸಮತೋಲನಗೊಳಿಸುತ್ತದೆ.

ಹಮ್ಮಿಂಗ್

ಆಳವಾಗಿ ಉಸಿರನ್ನು ಎಳೆದುಕೊಳ್ಳಿ. ನಿಧಾನವಾಗಿ ಆರಾಮದಾಯಕವಾದ ಸ್ವರಗಳಿಂದ ಗುನುಗುನು ಹಾಡನ್ನು ಹೇಳಿ. ಎದೆಯ ಕಂಪನ ಮತ್ತು ಗಂಟಲಿನ ಕಂಪನಗಳನ್ನು ಗಮನಿಸಿ. ಹಾಡನ್ನು ಏರಿಸುತ್ತಾ ಹೋಗಿ. ತಾರಕಕ್ಕೆ ಬಂದಾಗ ಇದ್ದಕ್ಕಿದ್ದಂತೆ ನಿಲ್ಲಿಸಿ. ನಿಮ್ಮೊಳಗೆ ಆ ಹಾಡು ಹಾಗೇ ಉಳಿದಿರುವುದನ್ನು ಗಮನಿಸಿ. ಇದು ಗಂಟಲು, ಶ್ವಾಸಕೋಶ, ನಾಲಿಗೆ ಹೀಗೆ ಎಲ್ಲದಕ್ಕೂ ವ್ಯಾಯಾಮ ವಾಗುತ್ತದೆ.

ಲಿಪ್ ಟ್ರಿಲ್ಸ್

ಉಸಿರನ್ನು ತೆಗೆದುಕೊಳ್ಳಿ, ತುಟಿಗಳನ್ನು ಒತ್ತಿ ಹಿಡಿದು ಬುರ್... ಶಬ್ದವನ್ನು ಹೊರಡಿಸಿ. ನಿಮ್ಮ ತುಟಿಗಳು ಕಂಪಿಸಬೇಕು. ಆದರಿಂದಲೇ ಶಬ್ದ ಬರಬೇಕು. ಗಂಟಲಿನಿಂದ ಉಸಿರು ಒತ್ತಿ ಬರಬೇಕು. ಮೊದಲಿಗೆ ಹತ್ತು ಸೆಕೆಂಡ್‌ಗಳು, ಹೀಗೆ ಹೆಚ್ಚುತ್ತಾ ಹೋಗಿ ಎರಡು ನಿಮಿಷಗಳವರೆಗೆ ವಿಸ್ತರಿಸಬೇಕು. ತುಟಿ ಮತ್ತು ಗಂಟಲಿನ ಸ್ನಾಯುಗಳನ್ನು ಇದು ಸಡಿಲಗೊಳಿಸುತ್ತದೆ.

ಟಂಗ್ ಟ್ವಿಸ್ಟರ್

ನಾಲಿಗೆ ತಿರುಚುವ ಪದಗಳನ್ನು ಬೇಗ ಬೇಗನೆ ಹೇಳುವುದು. ಉದಾಹರಣೆಗೆ; ರಸ್ಕ್- ಲಕ್ಸ್, ತೆಂಗಿನ ಮರದಲಿ ಮೇಲೆರೆಡೋಲೆ ಕೆಳಗೆರೆಡೋಲೆ, ಕೆಂಪು ಕುಂಕುಮ- ಕಪ್ಪು ಕುಂಕುಮ, ನೀನನ್ನನೇನನ್ನು- ನಾನಿನ್ನನೇನನ್ನೆ, ಚಕ್ಕಾ ಪಾಪಡ್- ಪಕ್ಕಾ ಪಾಪಡ್. ಹೀಗೆ ತುಂಬಾ ಪದಗಳಿವೆ. ಇವುಗಳನ್ನೆಲ್ಲಾ ಮೊದಲು ನಿಧಾನವಾಗಿ ಹೇಳುತ್ತಾ ಜೋರಾಗಿ ಹೇಳುವುದನ್ನು ಅಭ್ಯಾಸ ಮಾಡಬೇಕು. ತಪ್ಪಿಲ್ಲದೇ ಹೇಳಬೇಕು. ಉಚ್ಚಾರಣೆ ಸ್ಪಷ್ಟವಾಗಿಸುತ್ತದೆ. ಮಾತು ಸುರಳೀತವಾಗಿ ಹೊರ ಬರುತ್ತದೆ.

'ರಾಮನ್' ಎಂಬೋ ಮಾನುಷಾದ್ಭುತ!

ಸುರೇಶ್ ಮರಕಾಲ



ಇಂದು ರಾಷ್ಟ್ರೀಯ ವಿಜ್ಞಾನ ದಿನ. 'ರಾಮನ್ ಪರಿಣಾಮ'ವನ್ನು ಕಂಡುಕೊಂಡ ದಿನ.

ಅದು 1902ನೇ ಇಸವಿ, ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಬಿ.ಎ. ತರಗತಿ. ಕೇವಲ ಹದಿನಾಲ್ಕು ವಯಸ್ಸಿನ ಪುಟ್ಟ ಬಾಲಕನೊಬ್ಬ ಡಿಗ್ರಿ ತರಗತಿಯ ವಿದ್ಯಾರ್ಥಿಗಳ ಮಧ್ಯದಲ್ಲಿ ಕುಳಿತಿದ್ದ. ಅವನೇನು ತರಗತಿಗೆ ಬಂದ ಅಣ್ಣನೊಂದಿಗೆ ಬಂದು ಕುಳಿತ ಹುಡುಗನಾಗಿರಲಿಲ್ಲ! ಬದಲಿಗೆ, ಇನ್ನೂ 8ನೇ ತರಗತಿಯಲ್ಲಿರಬೇಕಾಗಿದ್ದ ಪೋರ ಆ ಯುವಕರೊಂದಿಗೆ ವಿದ್ಯಾಭ್ಯಾಸ ಮಾಡಲು ಬಂದು ತಾನೂ ಡಿಗ್ರಿ ವಿದ್ಯಾರ್ಥಿಯಾಗಿ ತರಗತಿಯೊಳಗೆ ಕುಳಿತಿದ್ದ! ಆ ಮೂರ್ತಿ ಪುಟ್ಟದಾಗಿದ್ದರೂ ಅವನೊಳಗಿನ ದಿವ್ಯ ಪ್ರತಿಭೆ ಮಾತ್ರ ಮನುಷ್ಯಮಾತ್ರರ ಎಣಿಕೆಗೂ ನಿಲುಕದಷ್ಟು ಅದ್ಭುತವಾಗಿತ್ತು! ಆತ ಜನ್ಮತಃ ಮಹಾನ್ ಪ್ರತಿಭಾವಂತನಾಗಿದ್ದ! ಈ ಪ್ರೆಸಿಡೆನ್ಸಿ ಕಾಲೇಜಿಗೆ ಸೇರುವ ಮೊದಲೇ ತನ್ನ ಹನ್ನೊಂದನೇ ವಯಸ್ಸಿಗೇ- ಎಂದರೆ ಐದಾರನೇ ತರಗತಿಯಲ್ಲಿರುವ ಎಳವೆಯಲ್ಲಿ ಮೆಟ್ರಿಕ್ಯುಲೇಶನ್ನನ್ನೇ ಪಾಸುಮಾಡಿದ್ದ! ಹೀಗಾಗಿಯೇ ಪ್ರೌಢಶಾಲೆಯ ಮೆಟ್ಟಿಲೇರಬೇಕಾಗಿದ್ದ ಪ್ರಾಯದಲ್ಲಿ ಡಿಗ್ರಿ ತರಗತಿಯೊಳಗೆ ವಿರಾಜಮಾನನಾಗಿದ್ದ! ವರ್ಷದ ಅಂತ್ಯದಲ್ಲಿ ಇಡೀ ಕಾಲೇಜ್‌ನ ಬಿ.ಎ. ವಿಭಾಗಕ್ಕೇ ಮೊದಲಸ್ಥಾನ ಬರುವ ಮೂಲಕ ಎಲ್ಲರ ಹುಬ್ಬೇರಿಸಿದ್ದ! ಮುಂದೆ ಆ ಬಾಲಕ ತನ್ನ ಜೀವನದುದ್ದಕ್ಕೂ ಹತ್ತುಹಲವು ಅಪ್ರತಿಮ ಸಾಧನೆಗಳನ್ನು ಮಾಡಿ, ಇಡೀ ಜಗತ್ತೇ ನಿಬ್ಬೆರಗಾಗುವಂತೆ ಮಾಡಿದ! ಅಂದು ಚೋಟುದ್ದ ಬಾಲಕನಾಗಿ ಡಿಗ್ರಿ ತರಗತಿಯಲ್ಲಿ ಕುಳಿತಿದ್ದ ಹುಡುಗನೇ ಜಗತ್ತಿಗೆ 'ರಾಮನ್ ಪರಿಣಾಮ'ವೆಂಬ ಭವ್ಯ ಸತ್ಯವನ್ನು ತೋರಿಸಿಕೊಟ್ಟ ಮಹೋನ್ನತ ವಿಜ್ಞಾನಿ ಸರ್. ಸಿ.ವಿ.ರಾಮನ್!



ಚಂದ್ರಶೇಖರ ವೆಂಕಟ ರಾಮನ್ ಬಾಲ್ಯದಿಂದಲೇ ಗಂಭೀರ ಓದಿನ ಹವ್ಯಾಸ ಹೊಂದಿದ್ದರು. ಶಾಸ್ತ್ರೀಯ ಸಂಗೀತ, ವಯೋಲಿನ್ ವಾದನಗಳೂ ರಕ್ತಗತವಾಗಿ ಬಂದಿದ್ದವು. ಬಾಲಕನಾಗಿದ್ದಾಗ ರಾಮನ್ ಮೇಲೆ ಎಡ್ವಿನ್ ಅರ್ನಾಲ್ಡ್‌ನ 'ಲೈಟ್ ಆಫ್ ಏಶಿಯಾ', ರೇಖಾಗಣಿತದ ಮೇಲಿನ 'ದಿ ಎಲಿಮೆಂಟ್ಸ್ ಆಫ್ ಯೂಕ್ಲಿಡ್' ಹಾಗೂ ಜರ್ಮನ್ ವಿಜ್ಞಾನಿ ಹೆಮೋಲ್ಟ್ಸ್‌ನ 'ದಿ ಸೆನ್ಸೇಶನ್ಸ್ ಆಫ್ ಟೋನ್ಸ್' ಎಂಬ ಮೂರು ಪುಸ್ತಕಗಳು ಗಾಢ ಪರಿಣಾಮ ಬೀರಿದ್ದವು. ಮುಂದೆ ವಿಶ್ವ ಪ್ರಸಿದ್ಧ ವಿಜ್ಞಾನಿಯಾದಾಗಲೂ ಅವರ ಸಂಶೋಧನೆ-ಬರಹಗಳಲ್ಲಿ ಈ ಮೂರು ಪುಸ್ತಕಗಳ ಪ್ರಭಾವವನ್ನು ಸ್ಪಷ್ಟವಾಗಿ ಕಾಣಬಹುದು.

ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಬಿ.ಎ. ಮುಗಿಸಿ, ಎಂ.ಎ. ವಿದ್ಯಾಭ್ಯಾಸವನ್ನೂ ಅಲ್ಲಿಯೇ ಆರಂಭಿಸಿದರು. ಅಲ್ಲಿನ ವಾತಾವರಣ ರಾಮನ್‌ರ ಜೀವನಕ್ಕೆ ಹೊಸ ತಿರುವನ್ನೇ ನೀಡಿತು. ಎಂ.ಎ. ಅವಧಿಯಲ್ಲಿ ಸಂಶೋಧಿಸಿದ ಪಟ್ಟಕದಲ್ಲಿನ ಚದುರುವಿಕೆಯ ವಿಚಾರಗಳು ಜಗದ್ವಿಖ್ಯಾತ ಬ್ರಿಟಿಷ್ ಪತ್ರಿಕೆಯಾದ 'ಫಿಲಾಸಾಫಿಕಲ್ ಮ್ಯಾಗಜ಼ಿನ್'ನಲ್ಲಿ ಪ್ರಕಟವಾಯಿತು. ಎಂ.ಎ. ವಿದ್ಯಾಭ್ಯಾಸವನ್ನು ಎಲ್ಲರೂ ನಿರೀಕ್ಷಿಸಿದಂತೆ ಪ್ರಥಮ ರ್‍ಯಾಂಕ್‌ನೊಂದಿಗೆ ತೇರ್ಗಡೆಯಾದರು!

ಮುಂದೆ ರಾಮನ್ ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತು, 1907ರಲ್ಲಿ ಸಹಾಯಕ ಅಕೌಂಟೆಂಟ್ ಜನರಲ್ ಆಗಿ ಕೋಲ್ಕತ್ತಾಕ್ಕೆ ನೇಮಕವಾದರು. ಹುದ್ದೆಗೆ ಸೇರಿದ ದಿನದಿಂದ ಕಚೇರಿಗೆ ಹೋಗುವ ದಾರಿಬದಿಯ 'ಇಂಡಿಯನ್ ಅಸೋಸಿಯೇಶನ್ ಫಾರ್ ದ ಕಲ್ಟಿವೇಶನ್ ಆಫ್ ಸೈನ್ಸ್' ಎಂಬ ಸಂಸ್ಥೆಯ ನೋಟವು ರಾಮನ್‌ರನ್ನು ಸೂಜಿಗಲ್ಲಿನಂತೆ ಆಕರ್ಷಿಸುತ್ತಾ ಮತ್ತೆಮತ್ತೆ ತನ್ನತ್ತ ಕರೆಯುತ್ತಿತ್ತು! ಮುಂದೆ ಇದೇ ಸಂಸ್ಥೆ ರಾಮನ್‌ರ ಜೀವನದ ದಿಕ್ಕನ್ನೇ ಸಂಪೂರ್ಣ ಬದಲಿಸಿತೆನ್ನುವುದೂ ಅಷ್ಟೇ ಸತ್ಯ! ಈ ಸಂಸ್ಥೆ ಸೇರಿದ ರಾಮನ್‌ರವರು ಶಬ್ದ-ತರಂಗಗಳ ಬಗ್ಗೆ ಅಸೀಮ ಆಸಕ್ತಿಯನ್ನು ತಾಳಿ, ಸಂಗೀತ ಉಪಕರಣಗಳ ಸಂಶೋಧನೆಗೆ ಒಪ್ಪಿಗೆ ಪಡೆದುಕೊಂಡರು.

ಆರಂಭದಲ್ಲಿ ಹೆಮೋಲ್ಟ್ಸ್‌ನ ಪರಿಕಲ್ಪನೆಯ ಸಹಾಯದಿಂದ ರಾಮನ್ ಏಕತಾರಿಯ (ಒಂದೇ ತಂತಿಯ ಹಿಮ್ಮೇಳದ ಸಂಗೀತಸಾಧನ) ಕಾರ್ಯ ವಿಧಾನವನ್ನು ಕಂಡುಹಿಡಿದರು. ಮುಂದೆ ತಮ್ಮಿಷ್ಟದ ಪಿಟೀಲನ್ನೇ ಅಧ್ಯಯನದ ವಸ್ತು ವಿಷಯವನ್ನಾಗಿ ಆರಿಸಿಕೊಂಡ ಅವರು ಪಿಟೀಲಿನ ಬಗ್ಗೆ ಆಮೂಲಾಗ್ರವಾಗಿ ಸಂಶೋಧನೆ ನಡೆಸಿದರು. ಪಿಟೀಲಿನ ಬಗ್ಗೆ ರಾಮನ್ ಅಪೂರ್ವ ಕೃತಿಯೊಂದನ್ನು ರಚಿಸಿದರು. ವಿಶೇಷವೇನೆಂದರೆ ಸೈಕಲ್ ರಿಪೇರಿ ಅಂಗಡಿಯಿಂದ ಬಿಡಿ ಭಾಗಗಳನ್ನು ತಂದು ತಮ್ಮದೇ ಕಲ್ಪನೆಯ ಪಿಟೀಲನ್ನು ತಯಾರಿಸಿದರು. ಅದು ನೋಡಲು ಯಾವ ಕೋನದಿಂದಲೂ ಪಿಟೀಲಾಗಿರಲಿಲ್ಲ! ಆದರೆ ಪಿಟೀಲು ಮಾಡುವ ಎಲ್ಲಾ ಕೆಲಸಗಳನ್ನು ನಿಜವಾದ ಪಿಟೀಲಿಗಿಂತಲೂ ಅಚ್ಚುಕಟ್ಟಾಗಿ ಮಾಡುತ್ತಿತ್ತು!

1920ರವರೆಗೆ ರಾಮನ್‌ರ ಗಮನ ಸಂಪೂರ್ಣವಾಗಿ ಶಬ್ದ ತರಂಗ ಸಂಶೋಧನಾ ಕೇಂದ್ರಿತವಾಗಿತ್ತು. ಅಲ್ಲಿಂದ ಮುಂದೆ ಅವರು ಬೆಳಕಿನ ಚದುರುವಿಕೆಯ ಸಂಶೋಧನೆ ಕಡೆಗೆ ತಮ್ಮ ಸರ್ವಸ್ವವನ್ನೂ ಅರ್ಪಿಸಿಕೊಂಡರು! ಇದಕ್ಕೆ ಅವರಿಗೆ ನೊಬೆಲ್ ಪ್ರಶಸ್ತಿಯೇ ಹುಡುಕಿಕೊಂಡು ಬಂತು!

1917ರಲ್ಲಿ ಕೋಲ್ಕತ್ತಾ ವಿಶ್ವವಿದ್ಯಾಲಯದ ಉಪಕುಲಪತಿಗಳಾಗಿದ್ದ ಸರ್ ಅಶುತೋಷ್ ಮುಖರ್ಜಿಯವರು ಭೌತಶಾಸ್ತ್ರದ ತಾರಕಾನಾಥ ಪಲಿತ್ ಪ್ರೊಫೆಸರ್‌ಶಿಪ್ ಹುದ್ದೆಗೆ ಬಂದು ಸೇರುವಂತೆ ರಾಮನ್‌ರನ್ನು ಒತ್ತಾಯಿಸಿದರು. ಆದರೆ ವಿಶ್ವವಿದ್ಯಾಲಯದಲ್ಲಿ ಹಿಂದಿನಿಂದಲೂ ಬಂದ ಕಟ್ಟಲೆಯೊಂದಿತ್ತು- ಯಾರೇ ಭೌತಶಾಸ್ತ್ರದ ಪ್ರೊಫೆಸರ್ ಆಗಬೇಕಿದ್ದರೂ ವಿದೇಶದಲ್ಲಿ ವಿದೇಶೀಯರ ಕೈಕೆಳಗೆ ಕಾರ್ಯನಿರ್ವಹಿಸಿದ ಅನುಭವ ಪಡೆದಿರಬೇಕಿತ್ತು. ರಾಮನ್‌ಗೆ ಈ ಅನುಭವವಿರಲಿಲ್ಲವಾದ್ದರಿಂದ ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು ರಾಮನ್ ಹೆಸರನ್ನು ತಿರಸ್ಕರಿಸಿದರು. ಆಗ ಸ್ವಾಭಿಮಾನಿಯಾದ ರಾಮನ್ ಅಂತಹ ಹುದ್ದೆಯು ತಾನಾಗಿಯೇ ಬಂದರೂ ಬೇಡವೆಂದು, ಯಾವುದೇ ಕಾರಣಕ್ಕೂ ಭಾರತೀಯನಾದ ತಾನು ವಿದೇಶೀಯನೊಬ್ಬನಿಗೆ ಸಲಾಂ ಹೊಡೆಯಲಾರೆನೆಂದು ಖಡಕ್ಕಾಗಿ ಹೇಳೀದರು. ಆದರೆ ರಾಮನ್ ಎಂಬ ಹೊಳೆವ ವಜ್ರ ತಮ್ಮಲ್ಲಿರಲೇಬೇಕೆಂದು ಅಶುತೋಷರು ಅಷ್ಟರವರೆಗಿದ್ದ ಆ ಕಾನೂನನ್ನೇ ರದ್ದುಗೊಳಿಸಿ ರಾಮನ್‌ರನ್ನೇ ಪ್ರೊಫೆಸರಾಗಿ ನೇಮಕ ಮಾಡಿಕೊಂಡರು!! ಇದನ್ನು ನೋಡಿ ಎಲ್ಲರೂ ಹೌಹಾರಿದ್ದರೆ, ರಾಮನ್ ಕೂಡಾ ಸಹಾಯಕ-ಅಕೌಂಟೆಂಟ್ ಜನರಲ್ ಎಂಬ ಉನ್ನತ ಹಾಗೂ ಕೈತುಂಬ ಸಂಬಳ ತರುವ ಸರ್ಕಾರಿ ಹುದ್ದೆಯನ್ನು ತ್ಯಜಿಸಿ, ಅದರ ಅರ್ಧ ಸಂಬಳವಾಗಿದ್ದ ಪ್ರೊಫೆಸರಾಗಿ ಬಂದು ಸೇರಿ ಮತ್ತೊಂದು ಶಾಕ್ ನೀಡಿದ್ದರು!

1921ರಲ್ಲಿ ರಾಮನ್‌ಗೆ ಕೋಲ್ಕತ್ತಾ ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿ ಗೌರವಿಸಿತು. ಅದೇವರ್ಷ ಅಶುತೋಷ್‌ರವರು ಯುರೋಪ್ ಅಧ್ಯಯನ ಪ್ರವಾಸಕ್ಕೆ ರಾಮನ್‌ರನ್ನು ಆಯ್ಕೆ ಮಾಡಿ ಕಳಿಸಿದರು. ಅದು ರಾಮನ್‌ರ ಪ್ರಥಮ ವಿದೇಶ ಪ್ರವಾಸವಾಗಿತ್ತು. ಯುರೋಪ್‌ನಲ್ಲಿ ರಾಮನ್ ರುದರ್‌ಫೋರ್ಡ್, ಬ್ರಾಗ್, ಜೆ.ಜೆ.ಥಾಮ್‌ಸನ್‌ರಂಥ ದಿಗ್ಗಜರನ್ನು ಭೇಟಿಯಾದರು. ಲಂಡನ್‌ನಲ್ಲಿ ಸೈಂಟ್ ಪೌಲ್ ಕೆಥೆಡ್ರಲ್‌ನ 'ಪಿಸುಗುಟ್ಟುವ ಗ್ಯಾಲರಿ'ಯನ್ನು ಮಕ್ಕಳಂತೆ ಆನಂದಿಸಿ, ಕೆಲವೊಂದು ಪ್ರಯೋಗಗಳನ್ನೂ ಕೈಗೊಂಡರು.

ಸಾಗರದ ನೀಲಿಗೆ ಆಕಾಶದ ನೀಲಿ ಬಣ್ಣದ ಪ್ರತಿಫಲನವೇ ಕಾರಣ ಎಂದು ಆ ಕಾಲದಲ್ಲಿ ಇಡೀ ಪ್ರಪಂಚವೇ ನಂಬಿತ್ತು. ಆದರೆ ಆಕಾಶದ ನೀಲಿ ಬಣ್ಣಕ್ಕೂ ಸಾಗರದ ಜಲರಾಶಿಯ ನೀಲಿಗೂ ಯಾವುದೇ ಕಾರ್ಯಕಾರಣ ಸಂಬಂಧವಿಲ್ಲವೆಂಬುದು ರಾಮನ್‌ಗೆ ಅನಿಸಿತ್ತು. ವಾಪಾಸ್ಸು ಬರುವಾಗ ಮೆಡಿಟರೇನಿಯನ್ ಸಮುದ್ರದ ನಯನಮನೋಹರ ನೀಲಿ ಜಲರಾಶಿಯನ್ನು ದಿನಗಟ್ಟಲೆ ನೋಡುತ್ತಾ ನೀರಿನ ನೀಲಿ ಬಣ್ಣಕ್ಕೆ ಕಾರಣವೇನಿರಬಹುದೆಂದು ಚಿಂತಿಸತೊಡಗಿದರು. ಗಾಳಿಯ ಅಣುಗಳಂತೆ ನೀರಿನ ಅಣುಗಳೂ ಬೆಳಕನ್ನು ಚದುರಿಸುತ್ತವೆಂದು ಅವರು ಕಂಡುಕೊಂಡು ಅದನ್ನು 'ನೇಚರ್' ಪತ್ರಿಕೆಗೆ ಕಳಿಸಿದರು. ಮುಂದೆ ಅವರ ಸಂಪೂರ್ಣ ಅಧ್ಯಯನ ಬೆಳಕಿನ ಅಣುಗಳ ಚದುರುವಿಕೆಯತ್ತ ಹಾಯಿತು. 1923ರಲ್ಲಿ 'ಕಾಂಪ್ಟನ್ ಪರಿಣಾಮ'ವೂ ರಾಮನ್‌ರ ಸಿದ್ಧಾಂತವನ್ನೇ ಎತ್ತಿಹಿಡಿದ ನಂತರ ರಾಮನ್ ತಮ್ಮದೇ ಆದ ಸಂಶೋಧನಾ ತಂಡವೊಂದನ್ನು ಕಟ್ಟಿಕೊಂಡರು.

1923, ಫೆಬ್ರವರಿ 27. ಅಂದು ನಡುರಾತ್ರಿಯವರೆಗೆ ರಾಮನ್ ತಂಡ ಪ್ರಯೋಗ ನಡೆಸಿದರೂ ಸರಿಯಾದ ಉತ್ತರ ಸಿಗಲಿಲ್ಲ. ಮರುದಿನ ಫೆಬ್ರವರಿ 28ರ ನಸುಕಿನಲ್ಲೇ ರಾಮನ್ ಪಾರದರ್ಶಕ ವಸ್ತುವಿನ ಮೂಲಕ ಒಳಹಾಯಿಸಿದ ಬೆಳಕಿನ ದಿಕ್ಕಿಗಿಂತ ಅದರಿಂದ ಹೊರಬರುವ ಕಿರಣಗಳು ಭಿನ್ನವಾದ ದಿಕ್ಕಿಗೆ ಹೊರಳಿದ್ದು, ಇದರಲ್ಲಿ ಕೆಲವೊಂದು ಭಾಗದ ಕಿರಣಗಳ (ರಾಮನ್ ಕಿರಣ) ತರಂಗಾಂತರವು ಮೂಲಕ್ಕಿಂತ ಬದಲಾಗಿರುತ್ತದೆ ಎಂದು ತಿಳಿದುಬಂತು. ಬೆಳಕು ದ್ರವ ಮಾಧ್ಯಮದಲ್ಲಿ ಚದುರಿಕೊಂಡು ಹಾಯುವಾಗ ತನ್ನ ತರಂಗಾಂತರವನ್ನು ಬದಲಿಸುತ್ತದೆ ಎಂಬ ದಿವ್ಯವಾದ ಸತ್ಯವೊಂದನ್ನು ಕಂಡುಕೊಂಡರು! ಇದೇ 'ರಾಮನ್ ಪರಿಣಾಮ'ವೆಂದು ಎಂದೆಂದಿಗೂ ಜನಮಾನಸದಲ್ಲಿ ಚಿರಸ್ಥಾಯಿಯಾಗಿ, ಭೌತಶಾಸ್ತ್ರದಲ್ಲಿ ಭಾರತ ಮಾತ್ರವಲ್ಲ ಏಶಿಯಾದಲ್ಲೇ ಮೊತ್ತಮೊದಲ ನೊಬೆಲ್ ಪ್ರಶಸ್ತಿ 1930ರಲ್ಲಿ ರಾಮನ್‌ರನ್ನು ಹುಡುಕಿಕೊಂಡು ಬಂತು!! 'ರಾಮನ್ ಪರಿಣಾಮ'ದ ದರ್ಶನ ಪಡೆದ ಫೆಬ್ರವರಿ 28ನ್ನು ಭಾರತ 'ರಾಷ್ಟ್ರೀಯ ವಿಜ್ಞಾನ ದಿನಾಚರಣೆ'ಯಾಗಿ ಆಚರಿಸುತ್ತಿದೆ.

ಕೋಲ್ಕತ್ತಾ ವಿ.ವಿ.ಯ ನಂತರ ಬೆಂಗಳೂರಿನ ಐ.ಐ.ಎಸ್.ಸಿ.ಯ ನಿರ್ದೇಶಕರಾಗಿ 1948ರಲ್ಲಿ ನಿವೃತ್ತರಾದರು. ನಂತರ ಜೀವಿತದ ಅಂತ್ಯದವರೆಗೆ 'ರಾಮನ್ ರಿಸರ್ಚ್ ಇನ್‌ಸ್ಟಿಟ್ಯೂಟ್' ಹಾಗೂ 'ಇಂಡಿಯನ್ ಅಕಾಡೆಮಿ ಆಫ್ ಸೈನ್ಸ್' ಸಂಸ್ಥೆಗಳನ್ನು ನಡೆಸಿದರು. ಜೊತೆಗೆ 'ಕರೆಂಟ್ ಸೈನ್ಸ್' ಹಾಗೂ 'ದ ಪ್ರೊಸೀಡಿಂಗ್ಸ್ ಆಫ್ ಅಕಾಡೆಮಿ' ಎಂಬ ಪತ್ರಿಕೆಗಳ ಸಂಪಾದರೂ ಆಗಿದ್ದರು.

ರಾಮನ್ ಮತ್ತು ನೊಬೆಲ್ ಪ್ರಶಸ್ತಿ!

ನೊಬೆಲ್ ಪ್ರಶಸ್ತಿಗೆ ಕಾರಣವಾದ 'ರಾಮನ್ ಪರಿಣಾಮ'ವೆಂಬ ಶಬ್ದವನ್ನು ಸರ್ ಸಿ.ವಿ.ರಾಮನ್‌ರೇ ಹುಟ್ಟುಹಾಕಿರಬಹುದೆಂದು ಬಹುತೇಕರು ತಿಳಿಯುತ್ತಾರೆ. ಆದರೆ ಅಸಲಿಗೆ ಹಾಗಿಲ್ಲ. 'ರಾಮನ್ ಪರಿಣಾಮ'ವೆಂಬ ಶಬ್ದವನ್ನು ಹೆಸರಿಸಿದ್ದು ರಾಮನ್‌ರಲ್ಲ, ಬದಲಿಗೆ ಅವರ ಸಹೋದ್ಯೋಗಿಗಳು!!

ಅತ್ಯಂತ ಅಚ್ಚರಿಯ ವಿಚಾರವೆಂದರೆ ನೊಬೆಲ್ ಪ್ರಶಸ್ತಿಗೆ ಕಾರಣವಾದ ತಮ್ಮ ಪ್ರಯೋಗದ ಉಪಕರಣಗಳಿಗೆ ರಾಮನ್ ಖರ್ಚು ಮಾಡಿದ ಮೊತ್ತವೆಷ್ಟು ಗೊತ್ತೇ? ಕೇವಲ ಇನ್ನೂರು ರೂಪಾಯಿಗಳ ಆಸುಪಾಸು ಅಷ್ಟೇ..!!

ಪರೋಪಕಾರಾರ್ಥಂ ಇದಂ ಶರೀರಮ್

ಸಹಿಷ್ಣುತೆ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು ಹಿಂದೂ ಧರ್ಮದ ವೈಶಿಷ್ಟ್ಯ. ಪರೋಪಕಾರಕ್ಕೂ ಹಿಂದು ಧರ್ಮ ಆದ್ಯತೆ ನೀಡುತ್ತದೆ.

ಒಳನೋಟ
ಹೆ.ಬಾ. ಮಲ್ಯ



ಭಾರತ ಹಿಂದಿನಿಂದಲೂ ತ್ಯಾಗಭೂಮಿ ಎನಿಸಿಕೊಂಡಿತ್ತು. ಆದರೆ ಇತ್ತೀಚಿನ ಕಾಲದಲ್ಲಿ ಭಾರತೀಯರೂ ಪಾಶ್ಚಾತ್ಯರ ಭೋಗ ಸಂಸ್ಕೃತಿಯನ್ನು ಅಳವಡಿಸಿಕೊಂಡು ಭೋಗಜೀವನಕ್ಕೆ ಅಂಟಿಕೊಳ್ಳುತ್ತಿರುವುದು ಕಂಡು ಬರುತ್ತಿದೆ. ಸ್ವಾರ್ಥಿಗಳೂ ಆಗುತ್ತಿದ್ದಾರೆ. ತಾನು, ಮಡದಿ, ಮಗು ಇಷ್ಟೇ ತನ್ನ ಪ್ರಪಂಚ ಎಂಬ ಭಾವನೆ ಹೆಚ್ಚಾಗುತ್ತಿದೆ. ಕುಟುಂಬದ ವ್ಯಾಪ್ತಿ ಮೀರಿ ಸಮಾಜ, ದೇಶ, ರಾಷ್ಟ್ರ, ಸಮಸ್ತ ಮಾನವಕುಲ, ಪಕ್ಷಿ, ಪ್ರಾಣಿ, ಜಂತು, ಪರಿಸರಗಳವರೆಗೆ ದೃಷ್ಟಿ ಹರಡುವುದಿಲ್ಲ. "ವಸುಧೈವ ಕುಟುಂಬಕಮ್" ಎಂಬುದು ಭಾರತದ ವಿಶೇಷತೆಯಾಗಿತ್ತು. ದಾನ-ಧರ್ಮ, ಸೇವೆಗಳು ತ್ಯಾಗದ್ದೇ ಪರಿಣಾಮಗಳು. ಪರೋಪಕಾರ ಭಾರತೀಯರ ಸಹಜ ಗುಣ.

ನಾಲ್ಕು ಪ್ರಮುಖ ಸೆಮೆಟಿಕ್ ಮತಗಳು ಹುಟ್ಟಿದ್ದು ಮಧ್ಯಪೂರ್ವ ಹಾಗೂ ಪಾಶ್ಚಾತ್ಯ ಜಗತ್ತಿನಲ್ಲಿಯೇ. ಇಸ್ಲಾಂ, ಕ್ರೈಸ್ತ, ಯೆಹೂದಿ, ಕಮ್ಯೂನಿಸಂ ಇವೇ ಆ ನಾಲ್ಕು ಸೆಮೆಟಿಕ್ ಮತಗಳು. ಕಮ್ಯೂನಿಸಂ ಕೂಡಾ ಸೆಮೆಟಿಕ್ ಮತದ ಎಲ್ಲ ಲಕ್ಷಣಗಳನ್ನು ಹೊಂದಿದೆ. ಒಬ್ಬನೇ ದೇವರು, ಒಂದೇ ಪವಿತ್ರ ಗ್ರಂಥ, ಒಬ್ಬನೇ ಪ್ರವಾದಿ- ಅವರ ನಂತರ ಯಾವ ಹೊಸ ಪ್ರವಾದಿಯೂ ಹುಟ್ಟಲು ಸಾಧ್ಯವಿಲ್ಲ ಎಂಬ ನಂಬಿಕೆ ಇವರದು. ಗ್ರಂಥದಲ್ಲಿ ಪ್ರವಾದಿ ಹೇಳಿದ್ದು ಮಾತ್ರ ಸತ್ಯ. ಮಿಕ್ಕೆಲ್ಲವೂ ಅಸತ್ಯ. ಅದನ್ನು ಒಪ್ಪದವರು ನರಕಕ್ಕೆ ಹೋಗುತ್ತಾರೆ. ಅವರನ್ನು ನಾಶ ಮಾಡಬೇಕು. ಅಸಹಿಷ್ಣುತೆ, ಬಲವಂತದ ಮತಾಂತರ, ವಿರೋಧಿಸಿದರೆ ಕೊಲೆ, ಹಿಂಸೆ. ಇಸ್ಲಾಮಿನ ಜಿಹಾದಿ ಪಡೆ ಹಾಗೂ ಪೋಪ್‌ರ ಕ್ರುಸೇಡ್ಸ್ ಪಡೆಗಳೊಳಗೆ ನಡೆದ ಯುದ್ಧ, ರಕ್ತಪಾತಗಳಿಂದ ಪಾಶ್ಚಾತ್ಯ ಇತಿಹಾಸದ ಪುಟಗಳು ತುಂಬಿಹೋಗಿದೆ. ಹಿಟ್ಲರ್ 60 ಲಕ್ಷ ಯಹೂದಿಗಳ ಮಾರಣ ಹೋಮ ನಡೆಸಿದ. ಪಾಶ್ಚಾತ್ಯ ನೆಲದಲ್ಲಿ ಹುಟ್ಟಿದ ಕಮ್ಯೂನಿಸಂನ ಸ್ಟಾಲಿನ್, ಚೀನಾದ ಮಾವೋತ್ಸೆ ತುಂಗ್ ಕೋಟ್ಯಂತರ ವಿರೋಧಿಗಳ ಮಾರಣ ಹೋಮ ನಡೆಸಿದ್ದಕ್ಕೆ ದಾಖಲೆಗಳಿವೆ. ಭಾರತದಲ್ಲಿ ಕೂಡ ಕೇರಳದಲ್ಲಿ ಹಾಗೂ ಇತರೆಡೆ ಕಮ್ಯೂನಿಸ್ಟರು, ನಕ್ಸಲರು ಸಾವಿರಾರು ಮಂದಿಯ ಹತ್ಯೆ ಮಾಡಿದ್ದಾರೆ. ಇಂದಿಗೂ ಈ ಸೆಮೆಟಿಕ್ ಮತಗಳೊಳಗಿನ ಒಳಪಂಗಡಗಳು ತಮ್ಮೊಳಗೇ ಬಡಿದಾಡಿಕೊಂಡು ಸಾಯುತ್ತಿದ್ದಾರೆ. ಹಿಂದೂ ಧರ್ಮೀಯರ ವಿರುದ್ಧ ಇವರೆಲ್ಲರೂ ಒಂದಾಗಿದ್ದಾರೆ. ಸಾವಿರ ವರ್ಷಗಳ ಆಕ್ರಮಣಗಳನ್ನು ಎದುರಿಸಿ ಹಿಂದೂ ಸಮಾಜ, ಹಿಂದೂ ಧರ್ಮ ಇಂದಿಗೂ ಬದುಕುಳಿದಿದೆ ಎಂದರೆ ಇದರ ಅಂತಃಸತ್ವ ಎಷ್ಟು ಬಲಶಾಲಿಯಾಗಿದೆ ಎಂದು ಊಹಿಸಬಹುದು. ಅದಕ್ಕೇ ಇದನ್ನು ಸನಾತನ ಧರ್ಮ ಎನ್ನುತ್ತಾರೆ. ಇತರರ ವಿಷಯ ಭಾರತೀಯರಿಗೇಕೆ? ಹಿಂದು ಧರ್ಮದ ವಿಶೇಷತೆಗಳ ಬಗ್ಗೆ ಹಾಗೂ ಅದರಲ್ಲಿ ನುಸುಳಿರುವ ಲೋಪ, ದೋಷ, ದೌರ್ಬಲ್ಯಗಳ ಬಗ್ಗೆ ಒಂದಷ್ಟು ಚಿಂತಿಸೋಣ. ಪರೋಪಕಾರ ಹಿಂದು ಧರ್ಮದ ಒಂದು ವಿಶೇಷ ಲಕ್ಷಣ ಮಾತ್ರವಲ್ಲ ಈ ಸೃಷ್ಟಿಯಲ್ಲೇ ಆ ಗುಣ ಅಡಗಿದೆ. ಈ ಸುಭಾಷಿತ ನೋಡಿ:

ಪರೋಪಕಾರಾಯ ಫಲಂತಿ ವೃಕ್ಷಾಃ ಪರೋಪಕಾರಾಯ ವಹಂತಿ ನದ್ಯಃ।
ಪರೋಪಕಾರಾಯ ದುಹಂತಿಗಾವಃ ಪರೋಪಕಾರಾರ್ಥಮಿದಂ ಶರೀರಂ॥

ಬೇರೆಯವರ ಉಪಯೋಗಕ್ಕೋಸ್ಕರವೇ ಮರಗಿಡಗಳು ಹೂ ಹಣ್ಣುಗಳನ್ನು, ನದಿಗಳು ನೀರನ್ನು , ಹಸುಗಳು ಹಾಲನ್ನು ನೀಡುತ್ತವೆ. ಮರಗಳು ಫಲಗಳನ್ನು ತಾವೇ ಸ್ವತಃ ತಿನ್ನುವುದಿಲ್ಲ. ಹಾಗೆಯೇ, ನದಿ ಹಾಗೂ ಹಸುಗಳು. ಮರಗಳು ತಂಪಾದ ನೆರಳನ್ನು ಇತರರಿಗಾಗಿ ಕೊಡುತ್ತವೆ, ತಾವು ಬಿಸಿಲಿನ ತಾಪ ಸಹಿಸಿಕೊಳ್ಳುತ್ತವೆ. ಭಗವಂತನ ಸೃಷ್ಟಿ ಎಷ್ಟು ವಿಚಿತ್ರ! ಮಾನವರೂ ಈ ತ್ಯಾಗದ ಭಾವನೆಯನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂಬುದೇ ಭಗವಂತನ ಹಾಗೂ ಪ್ರಕೃತಿ ಮಾತೆಯ ಸಂದೇಶ

ಋಣತ್ರಯಗಳು ಹಿಂದೂ ಧರ್ಮದ ಇನ್ನೊಂದು ವಿಶೇಷತೆ. ತಾನು ಯಾರಿಂದ ಉಪಕೃತನಾಗಿದ್ದಾನೋ ಅವರ ಬಗ್ಗೆ ಕೃತಜ್ಞತಾ ಭಾವನೆ ಇರಬೇಕು. ದೇವಋಣ, ಪಿತೃ(ಮಾತೃ)ಋಣ, ಆಚಾರ್ಯ ಋಣ, ಅತಿಥಿ ಋಣ, ರಾಷ್ಟ್ರ ಋಣ. ಇದೆಲ್ಲವೂ ದೇವರ ಕೊಡುಗೆ, ಅವನ ಕೃಪೆ. ಮೊದಲು ದೇವರಿಗೆ ಅರ್ಪಿಸಿ ನಂತರ ಅದನ್ನು ನೈವೇದ್ಯವೆಂದು ಭಾವಿಸಿ, ಕೃತಜ್ಞತಾಪೂರ್ವಕ ತಾನು ಸ್ವೀಕರಿಸುವುದು. ಜನ್ಮ ನೀಡಿ ಲಾಲನೆ ಪಾಲನೆ ಮಾಡಿದ ತಾಯಿ, ವ್ಯಾವಹಾರಿಕ ಸಂಗತಿಗಳ ಬಗ್ಗೆ ಕಲಿಸಿದ ತಂದೆ, ಜ್ಞಾನ ನೀಡಿದ ಆಚಾರ್ಯ, ಅನ್ನ ದಾನ ನೀಡಿ ಸೇವೆ ಮಾಡಲು ಪುಣ್ಯ ಸಂಪಾದಿಸಲು ಅವಕಾಶ ಕಲ್ಪಿಸಿದ ಅತಿಥಿ, ಜಗತ್ತು, ಸಮಸ್ತ ಸೃಷ್ಟಿಯೊಡನೆ ಸಂಬಂಧ ಕಲ್ಪಿಸಿಕೊಟ್ಟ ರಾಷ್ಟ್ರ ಇವರ ಹಾಗೂ ಇವುಗಳ ಬಗ್ಗೆ ಕೃತಜ್ಞತೆ.ವೃದ್ಧಾಪ್ಯದಲ್ಲಿ ತಮ್ಮ ತಂದೆ ತಾಯಿಗಳ ಆರೈಕೆ ಮಾಡುವುದು ದೇವರು ತನಗೆ ಕಲ್ಪಿಸಿಕೊಟ್ಟ ಒಂದು ಸದವಕಾಶ ಎಂದು ಭಾವಿಸಬೇಕು. ಅಂಗವಿಕಲ, ಮಾನಸಿಕ ಅಸ್ವಸ್ಥ ಅಣ್ಣ-ತಮ್ಮ -ತಂಗಿಯರನ್ನು ಪ್ರೀತಿಯಿಂದ ನೋಡಿಕೊಳ್ಳುವುದೂ ಪುಣ್ಯಕಾರ್ಯ. ವೃದ್ಧಾಶ್ರಮ ಪರಿಹಾರವಲ್ಲ. ನಾವು ಮಾಡಿದ ಈ ಪುಣ್ಯ ಕಾರ್ಯಗಳೇ ಮುಂದೆ ತಮ್ಮ ಜೀವನದಲ್ಲಿ, ವೃದ್ಧಾಪ್ಯದಲ್ಲಿ ಕಾಯುತ್ತವೆ. ಹಿಂದೆ ಸಮಾಜ ಜೀವನವು ತ್ಯಾಗ, ಪರೋಪಕಾರಗಳ ಆಧಾರದ ಮೇಲೆ ನಡೆಯುತ್ತಿತ್ತು. ಪಾಪ ಪುಣ್ಯಗಳ ವ್ಯಾಖ್ಯೆ ಏನು ಎಂದು ಯಾರೋ ಗುರು ವೇದವ್ಯಾಸರನ್ನು ಕೇಳಿದಾಗ ಅವರು ಕೊಟ್ಟ ಉತ್ತರ : "ಪರೋಪಕಾರಾಯ ಪುಣ್ಯಾಯ ಪಾಪಾಯ ಪರಪೀಡನಮ್". ಇಂಗ್ಲಿಷಿನಲ್ಲಿ ಪುಣ್ಯಕ್ಕೆ ಪರ್ಯಾಯ ಪದ ಇಲ್ಲ ಎನ್ನುತ್ತಾರೆ. "ಎಲ್ಲ ಮನುಷ್ಯರೂ ಪಾಪದಿಂದಲೇ ಹುಟ್ಟುತ್ತಾರೆ. ಹಾಗಾಗಿ ಮನುಷ್ಯರೆಲ್ಲರೂ ಪಾಪಿಗಳು" ಎಂಬುದು ಅನ್ಯ ಕೆಲವು ಮತಗಳ ಭಾವನೆ. ಹಿಂದು ಧರ್ಮ ಹೇಳುತ್ತದೆ :- "ನೀವೆಲ್ಲರೂ ಅಮೃತ ಪುತ್ರರು." ಕಾಮದಿಂದ ಹುಟ್ಟಿದ ಮಾತ್ರಕ್ಕೆ ಪಾಪಿಗಳಾಗುವುದಿಲ್ಲ. ಕಾಮ ಪಾಪವಲ್ಲ. ಕಾಮಭಾವನೆಯನ್ನು ದೇವರೇ ಮನುಷ್ಯ ಹಾಗೂ ಸಕಲ ಪ್ರಾಣಿಗಳಲ್ಲಿ ಹಾಕಿರುವ ಒಂದು ಪವಿತ್ರ ಭಾವನೆ. ಸ್ವಯಂಚಾಲಿತರಾಗಿ ಸಂತತಿ (Species) ಮುಂದುವರಿದುಕೊಂಡು ಹೋಗಲು ಒಂದು ವ್ಯವಸ್ಥೆ. ನಾವು ನೋಡುವ ದೃಷ್ಟಿ ಶುದ್ಧವಾಗಿದ್ದರೆ ಇದೆಲ್ಲವೂ ಸುಲಭವಾಗಿ ಅರ್ಥವಾಗುತ್ತದೆ.

ತ್ಯಾಗ, ಪರೋಪಕಾರ ಭಾವನೆ, ಸೇವಾ ಭಾವನೆ, ದಾನ ಇವುಗಳು ಹಿಂದು ಧರ್ಮದಲ್ಲಿರುವುದರಿಂದಲೇ ಹಿಂದೆ ಭಾರತದಲ್ಲಿ, ವಿದ್ಯೆ, ಆಹಾರ, ಔಷಧಿ ಹಾಗೂ ವೈದ್ಯಕೀಯ ಚಿಕಿತ್ಸೆಗಳು ಮಾರಾಟದ ವಸ್ತುಗಳಾಗಿರಲಿಲ್ಲ. ಇಂದು ಈ ಕ್ಷೇತ್ರಗಳೇ ವ್ಯಾಪಾರೀಕರಣಕ್ಕೊಳಗಾಗಿ ಹೆಚ್ಚು ಲಾಭ ತರುವಂಥ ಸಾಧನಗಳಾಗಿವೆ. ಎಲ್ಲವನ್ನೂ ಮಾತೃತ್ವದ ದೃಷ್ಟಿಯಿಂದ ನೋಡುವುದು ಹಿಂದು ಧರ್ಮದ ವೈಶಿಷ್ಟ್ಯ. ಸ್ವಂತ ತಾಯಿ, ಎಲ್ಲ ಸ್ತ್ರೀಯರು, ಭೂಮಿ, ಗೋವು, ನದಿಗಳು, ವನಶ್ರೀ ಎಲ್ಲದರಲ್ಲೂ ಮಾತೃತ್ವದ ದೃಷ್ಟಿ

ಮಾತೃವತ್ ಪರದಾರೇಷು, ಪರದ್ರವ್ಯೇಷು ಲೋಷ್ಠವತ್।
ಆತ್ಮವತ್ ಸರ್ವಭೂತೇಷು ಯಃಪಶ್ಯತಿ ಸಃ ಪಂಡಿತಃ॥

ಎಲ್ಲ ಪರಸ್ತ್ರೀಯರನ್ನು ತಾಯಿಯಂತೆ, ಪರದ್ರವ್ಯವನ್ನು ಮಣ್ಣಿನ ಮುದ್ದೆಯಂತೆ, ಎಲ್ಲರನ್ನೂ ತನ್ನಂತೆಯೇ ಭಾವಿಸುವವನೇ ಜ್ಞಾನಿ ಎಂದರ್ಥ.

ಪರರ ಸೇವೆ ಎಂದಾಗ ವಾಸ್ತವದಲ್ಲಿ ತನ್ನ ಸೇವೆಯನ್ನು ತಾನೇ ಮಾಡಿಕೊಂಡಂತೆ. ಅದು ಹೇಗೆಂದರೆ ಹಿಂದು ತತ್ವಜ್ಞಾನದ ಪ್ರಕಾರ ದೇವರು ಸರ್ವವ್ಯಾಪಿ. ಅವನಿಲ್ಲದ ಜಾಗವೇ ಇಲ್ಲ. ಅವನೊಬ್ಬನೇ ಇರುವುದು. ನನ್ನಲ್ಲೂ, ಪರರಲ್ಲೂ ಇರುವವನು ಒಬ್ಬನೇ. ಆದರ ಜ್ಞಾನ ಇಲ್ಲದಿರುವುದರಿಂದಲೇ ನಾವು ಬೇರೆ ಬೇರೆ ಎಂದುಕೊಳ್ಳುತ್ತೇವೆ. ಸ್ವತಃ ನಮ್ಮೊಳಗೆ ಆತ್ಮ-ಜೀವಾತ್ಮದ ರೂಪದಲ್ಲಿ ಪರಮಾತ್ಮನಿದ್ದಾನೆ. ಈ ದೇಹವೇ ಆತ ನೆಲೆಸಿರುವ ದೇವಾಲಯ. "ಅಹಂ ಬ್ರಹ್ಮಾಸ್ಮಿ, ತತ್ ತ್ವಂ ಅಸಿ" ಎಂದು ಆಚಾರ್ಯ ಶಂಕರರು ಇದನ್ನೇ ಹೇಳಿರುವುದು. ಆದರೂ ಹಿಂದು ಧರ್ಮದಲ್ಲಿ ಆರಾಧನಾ ಸ್ವಾತಂತ್ರ್ಯವಿದೆ. ಆದ್ದರಿಂದಲೇ ಇಷ್ಟ ದೇವರ ಕಲ್ಪನೆ. ಕಣ್ಣಿಗೆ, ಪಂಚೇಂದ್ರಿಯಗಳಿಗೆ ಕಾಣದ ದೇವರ ಸ್ಥಾನದಲ್ಲಿ ತನಗಿಷ್ಟವಾದ ಕಣ್ಣಿಗೆ ಕಾಣುವ ಮೂರ್ತರೂಪವೊಂದನಿಟ್ಟು ಆರಾಧಿಸಿ ನೆಮ್ಮದಿ-ಶಾಂತಿ ಪಡೆದುಕೊಳ್ಳುವ ವ್ಯವಸ್ಥೆ. ನೂರು ಕೋಟಿ ಹಿಂದುಗಳಿಗೆ ನೂರು ಕೋಟಿ ದೇವತೆಗಳು. ದೈವಾರಾಧನೆ ವ್ಯಕ್ತಿಗತವಾದದ್ದು. ಹಾಗಾಗಿ ಮೊದಲು ರಾಷ್ಟ್ರಕ್ಕೆ ನಿಷ್ಠೆ. ರಾಷ್ಟ್ರ ಮೊದಲು, ನಂತರ ಮತ. ಆಗ ಎಲ್ಲರೂ ರಾಷ್ಟ್ರೀಯರೆನಿಸಿಕೊಳ್ಳುತ್ತಾರೆ. ಈ ಅರ್ಥದಲ್ಲಿ ಭಾರತದಲ್ಲಿ ಮೂಲತಃ ಎಲ್ಲರೂ ಹಿಂದುಗಳೇ. ಕೆಲವರು ಆಕ್ರಮಣ ಕಾಲದಲ್ಲಿ ಮತಾಂತರವಾದರು. ಅವರ ಮೊದಲ ನಿಷ್ಠೆ ರಾಷ್ಟ್ರದ ಬಗ್ಗೆ ಇದ್ದರೆ ಅವರು ಹಿಂದುಗಳೇ, ಭಾರತೀಯರೇ. ಸಹಿಷ್ಣುತೆ ಹಾಗೂ ವಿವಿಧತೆಯಲ್ಲಿ ಏಕತೆಯನ್ನು ಕಾಣುವುದು ಹಿಂದೂ ಧರ್ಮದ್ದೇ ವೈಶಿಷ್ಟ್ಯ. ಸತ್ಯವೊಂದೇ, ದೇವರೊಬ್ಬನೆ. ಜ್ಞಾನಿಗಳು ಅನೇಕ ವಿಧದಲ್ಲಿ ವ್ಯಾಖ್ಯಾನಿಸುತ್ತಾರೆ:- "ಏಕಂಸದ್ವಿಪ್ರಾಃ ಬಹುದಾವದಂತಿ". ಅದೇ ರೀತಿ "ಆಕಾಶಾತ್ ಪತಿತಂ ತೋಯಂ ಯಥಾಗಚ್ಛತಿ ಸಾಗರಂ। ಸರ್ವದೇವ ನಮಸ್ಕಾರಂ ಕೇಶವಂ ಪ್ರತಿಗಚ್ಛತಿ॥"

ಆಕಾಶದಿಂದ ಮಳೆಯಾಗಿ ಬಿದ್ದ ನೀರು ಅನೇಕ ನದಿ ತೊರೆಗಳಾಗಿ, ಬೇರೆ ಬೇರೆಯಾಗಿ ಹರಿದರೂ ಅಂತಿಮವಾಗಿ ಒಂದೇ ಮಹಾ ಸಾಗರವನ್ನು ಸೇರುವಂತೆ, ಯಾವುದೇ ಬೇರೆ ಬೇರೆ ದೇವರನ್ನು ಆರಾಧಿಸಿದರೂ, ಆ ಪ್ರಾರ್ಥನೆ ಹೋಗಿ ತಲುಪುವುದು ಆ ಒಬ್ಬನೇ ದೇವರಿಗೆ.

ಪಾಪ-ಪುಣ್ಯಗಳ ಫಲವಾಗಿ ಸುಖ-ದುಃಖಗಳು ಎಂಬ ಅದ್ಭುತವಾದ ಕರ್ಮಸಿದ್ಧಾಂತ, ಆತ್ಮನ ಅಮರತ್ವ, ಪುನರ್ಜನ್ಮ ಸಿದ್ಧಾಂತ ಇವು ಹಿಂದು ಧರ್ಮದ್ದೇ ವಿಶೇಷತೆಗಳು. ಅಂತಿಮವಾಗಿ ಮಾನವ ಇತರರ ಒಳಿತಿಗಾಗಿ ಬದುಕಬೇಕು ಎಂಬ ಪಾಠವನ್ನು ಈ ಎಲ್ಲಾ ಸಂಗತಿಗಳೂ ಒತ್ತಿ ಒತ್ತಿ ಹೇಳುತ್ತವೆ. "ಸರ್ವೇ ಭವಂತು ಸುಖಿನಃ" ಎಂಬ ಸರ್ವಸಮಾವೇಶಕ ದೃಷ್ಟಿ. ಈ ಎಲ್ಲದರ ಸಾರರೂಪವೇ "ಪರೋಪಕಾರಾಯ ಪುಣ್ಯಾಯ" ಎಂಬ ವ್ಯಾಸ ಮಹರ್ಷಿಗಳ ವಚನ.

ಅಫ್ಘಾನ್-ಪಾಕ್ ಸಮರ

ಪುಟ 1 ➜ ನಮ್ಮ ತಾಳ್ಮೆ ಮಿತಿ ಮೀರಿದೆ. ಇನ್ನಿದು ನಮ್ಮ ಮತ್ತು ನಿಮ್ಮ ನಡುವಿನ ಯುದ್ಧ ಎಂದು ಪಾಕ್ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಎಕ್ಸ್ ಪೋಸ್ಟ್‌ನಲ್ಲಿ ಅಫ್ಘಾನಿಸ್ತಾನಕ್ಕೆ ಬೆದರಿಕೆ ಹಾಕಿದ್ದರು.

ಕಾಬೂಲ್ ಸೇರಿ 3 ನಗರಗಳ ಮೇಲೆ ದಾಳಿ: ಅಫ್ಘಾನ್ ರಾಜಧಾನಿ ಕಾಬೂಲ್ ಸೇರಿದಂತೆ ಕಂದಹಾರ್ ಮತ್ತು ಪಾಕ್ಟಿಯಾ ನಗರಗಳ 21 ಕಡೆ ಪಾಕ್ ಸೇನೆ ಶುಕ್ರವಾರ ಭಾರೀ ದಾಳಿ ನಡೆಸಿದೆ. ಕಾಬೂಲ್ ನಗರದಲ್ಲಿಯೇ ಮೂರು ಪ್ರತ್ಯೇಕ ದಾಳಿಗಳನ್ನು ನಡೆಸಿದೆ. ಪಾಕ್ ದಾಳಿಗೆ ಕಾಬೂಲ್‌ನ ಎರಡು ದೊಡ್ಡ ಕಟ್ಟಡಗಳು ನೆಲಸಮಗೊಂಡಿವೆ.

ಏನಿದು ಡುರಾಂಡ್ ಗಡಿರೇಖೆ?

ಪುಟ 1 ➜ ಆದರೆ ಅಫ್ಘಾನಿಸ್ತಾನವು ಇದನ್ನು ಪರಿಗಣಿಸಲು ನಿರಾಕರಿಸಿತು. 1947ರಲ್ಲಿ ಪಾಕಿಸ್ತಾನದ ವಿಶ್ವಸಂಸ್ಥೆ ಸದಸ್ಯತ್ವದ ವಿರುದ್ಧ ಅಫ್ಘಾನಿಸ್ತಾನವೊಂದೇ ಮತ ಚಲಾಯಿಸಿತ್ತು. ಪಾಕ್ ವಿರುದ್ಧ ಡುರಾಂಡ್ ಗಡಿರೇಖೆ ಭಿನ್ನಾಭಿಪ್ರಾಯ ಹಿನ್ನೆಲೆಯಲ್ಲಿ ಅಫ್ಘಾನಿಸ್ತಾನವು ಪಾಕ್ ವಿರುದ್ಧ ಮತ ಚಲಾಯಿಸಿತ್ತು. ಆದರೆ ಭಾರತ ತಟಸ್ಥ ನಿಲುವನ್ನು ತಳೆದಿದ್ದು, ಮತವನ್ನೇ ಚಲಾಯಿಸಿರಲಿಲ್ಲ.

ಭಾರತದ ಈವರೆಗಿನ ನಿಲುವು?

ಪುಟ 1 ➜ ಈವರೆಗೆ ಡುರಾಂಡ್ ರೇಖೆ ವಿಚಾರವಾಗಿ ಭಾರತ ಸಾರ್ವಜನಿಕ ಅಭಿಪ್ರಾಯ ನೀಡಿಲ್ಲ, ತಟಸ್ಥ ನಿಲುವು ತಳೆಯುತ್ತಲೇ ಬಂದಿದೆ. ಆದರೆ 2021ರಲ್ಲಿ ತಾಲಿಬಾನ್ ಅಫ್ಘಾನ್‌ನಲ್ಲಿ ಅಧಿಕಾರದ ಗದ್ದುಗೆಯೇರಿದ ಬಳಿಕ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಎಚ್ಚರಿಕೆಯ ಹೆಜ್ಜೆಯನ್ನಿಟ್ಟಿದೆ.

ಐವಿಎಫ್ ಕೇಂದ್ರಗಳ ಮೇಲೆ ನಿಗಾ

• **ಬೆಂಗಳೂರು:** ನಗರದಲ್ಲಿ ಅಂಡಾಣು ಮಾರಾಟ ದಂಧೆ ಪ್ರಾರಂಭವಾಗಿದೆ ಎಂಬ ಶಂಕೆ ಮೇರೆಗೆ ಆರೋಗ್ಯ ಇಲಾಖೆ ಇದೀಗ ನಗರದ ಐವಿಎಫ್ ಕೇಂದ್ರಗಳ ಮೇಲೆ ಕಟ್ಟುನಿಟ್ಟಿನ ನಿಗಾ ವಹಿಸಲು ಮುಂದಾಗಿದೆ.

ಅಂಡಾಣು ಮಾರಾಟ ದಂಧೆ

ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಅಂಡಾಣು ಮಾರಾಟ ದಂಧೆ ಬೆಳಕಿಗೆ ಬಂದ ಬೆನ್ನಲ್ಲೇ ಅದೇ ಮಾದರಿಯ ಜಾಲವು ಬೆಂಗಳೂರಿನ ಕೆಲವು ಆಸ್ಪತ್ರೆಗಳಲ್ಲಿಯೂ ಕಾರ್ಯನಿರ್ವಹಿಸುತ್ತಿದೆ ಎಂಬ ಅನುಮಾನ ಮೂಡಿದೆ. ಮತ್ತೊಂದೆಡೆ ಮಹಿಳೆಯರಿಗೆ ಹಣದ ಆಮಿಷವೊಡ್ಡಿ ಹಲವು ರಾಜ್ಯಗಳಿಂದ ನಗರಕ್ಕೆ ಕರೆತಂದು, ಕಾನೂನು ಬಾಹಿರ ಅಂಡಾಣು ಸಂಗ್ರಹಣೆ ನಡೆಸಲಾಗುತ್ತಿದೆ ಎಂಬ ಮಾಹಿತಿ ತನಿಖಾ ಸಂಸ್ಥೆಗಳಿಗೆ ಲಭ್ಯವಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಹಿನ್ನೆಲೆ ರಾಜ್ಯ ಆರೋಗ್ಯ ಇಲಾಖೆ ಮುನ್ನೆಚ್ಚರಿಕಾ ಕ್ರಮವಾಗಿ ಐವಿಎಫ್ ಕೇಂದ್ರಗಳಲ್ಲಿ ನಿಗಾವಹಿಸಲು ಸೂಚನೆ ನೀಡಿದೆ.

ಜಾಲ ನಗರದಲ್ಲಿ ಮಾತ್ರವಲ್ಲದೇ ತೆಲಂಗಾಣ, ನಾಗ್ಪುರ, ಪುಣೆ, ನಾಸಿಕ್ ಸೇರಿದಂತೆ ಹಲವು ನಗರಗಳವರೆಗೂ ವಿಸ್ತರಿಸಿವೆ. ಈ ಮೂಲಕ ಅಮಾಯಕ ಮಹಿಳೆಯರ ಆರೋಗ್ಯ ಮತ್ತು ಜೀವನವನ್ನು ಅಪಾಯಕ್ಕೆ ಒಳಪಡಿಸುವ ಈ ಕೃತ್ಯವನ್ನು ಆರೋಗ್ಯ ಇಲಾಖೆ ಗಂಭೀರವಾಗಿ ಪರಿಗಣಿಸಿದೆ.

ಈ ಕುರಿತು ಮಹಾರಾಷ್ಟ್ರ ಆರೋಗ್ಯ ಇಲಾಖೆಯಿಂದ ಸಂಪೂರ್ಣ ಮಾಹಿತಿಯನ್ನು ಕೋರಲಾಗಿದ್ದು, ಪ್ರಕರಣವನ್ನು ಎಲ್ಲ ಆಯಾಮಗಳಿಂದ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆರೋಗ್ಯ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಅವರ ನಿರ್ದೇಶನ ಮೇರೆಗೆ ಆರೋಗ್ಯ ಇಲಾಖೆಯ ಆಯುಕ್ತರು ಹಾಗೂ ಹಿರಿಯ ಅಧಿಕಾರಿಗಳಿಗೆ ಸಮಗ್ರ ತನಿಖೆ ನಡೆಸುವಂತೆ ಸೂಚಿಸಲಾಗಿದೆ.

ಯಾವ ಆಸ್ಪತ್ರೆಗಳು, ವೈದ್ಯರು ಅಥವಾ ಮಧ್ಯವರ್ತಿಗಳು ಈ ಅಕ್ರಮ ಚಟುವಟಿಕೆಯಲ್ಲಿ ಶಾಮೀಲಾಗಿದ್ದಾರೆ ಎಂಬುದರ ಕುರಿತು ವಿವರವಾದ ವರದಿ ಸಿದ್ದಪಡಿಸಲು ಸೂಚಿಸಲಾಗಿದೆ. ಅಗತ್ಯವಿದ್ದರೆ ಗೃಹ ಇಲಾಖೆಯ ಸಹಕಾರವನ್ನೂ ಪಡೆಯಲಾಗುವುದು ಎಂದು ತಿಳಿಸಲಾಗಿದೆ.

ಸ್ಪರ್ಧಾತ್ಮಕ ಪ್ರಗತಿಗೆ ಸಜ್ಜಾಗಲು ಸಕಾಲ

• **ಹೊಸದಿಲ್ಲಿ:** ಇದುವರೆಗಿನ ಬಜೆಟ್‌ಗಳಲ್ಲಿ ಅತ್ಯಂತ ಉತ್ತೇಜನಕಾರಿ ಬಂಡವಾಳ ವ್ಯಯ ಘೋಷಣೆ ಮತ್ತು ಉದ್ಯಮರಂಗಕ್ಕೆ ಪೂರಕ ನೀತಿನಿಯಮಗಳ ವಾತಾವರಣ ಸೃಜಿಸುವ ಮುಖೇನ ಸರ್ಕಾರ, ಉದ್ದಿಮೆ ರಂಗಕ್ಕೆ ಪ್ರೋತ್ಸಾಹ ನೀಡುತ್ತಿದೆ. ಹಾಗಾಗಿ ಹೂಡಿಕೆಗಳು ಹಾಗೂ ಆವಿಷ್ಕಾರಗಳ ವರ್ಧಿಸುವಂತೆ ಮತ್ತು ಬಜೆಟ್ ಘೋಷಣೆಗಳ ಪ್ರಯೋಜನ ಪಡೆಯುವಂತೆ ಭಾರತೀಯ ಉದ್ಯಮಿಗಳಿಗೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ.



ಬಜೆಟ್ ನಂತರದಲ್ಲಿ ಪ್ರಪ್ರಥಮವಾಗಿ, ವಿಕಸಿತ ಭಾರತದ ಸಾಕಾರಕ್ಕಾಗಿ ತಂತ್ರಜ್ಞಾನ, ಸುಧಾರಣೆಗಳು ಹಾಗೂ ಹಣಕಾಸು ಕುರಿತ ವೆಬಿನಾರ್ ಉದ್ದೇಶಿಸಿ ಮಾತನಾಡಿದ ಅವರು, ಜಾಗತಿಕವಾಗಿ ಮುಂದಿನ ಹಂತದ ಸ್ಪರ್ಧಾತ್ಮಕ ಬೆಳವಣಿಗೆಗೆ ಅಣಿಯಾಗಲು ಇದು ಸಕಾಲ ಎಂದರು.

11 ವರ್ಷಗಳ ಹಿಂದೆ 2 ಲಕ್ಷ ಕೋಟಿ ರೂ.ಗಳಿದ್ದ ಸಾರ್ವಜನಿಕ ಬಂಡವಾಳ ವೆಚ್ಚವು 2026-27ರ ಕೇಂದ್ರ ಬಜೆಟ್‌ನಲ್ಲಿ 12 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ತನ್ಮೂಲಕ ಉದ್ಯಮ ರಂಗದ ವಿಸ್ತೃತತೆಗೆ ಬಲವಾದ ಬುನಾದಿ ಹಾಕಲಾಗಿದೆ ಎಂದು ಮಾಹಿತಿ ನೀಡಿದರು.

ಖಾಸಗಿ ರಂಗಕ್ಕೆ ಕರೆ: 2026-27ರ ಬಜೆಟ್ ಘೋಷಣೆಗಳ ಸಂಪೂರ್ಣ ಪ್ರಯೋಜನ ಪಡೆಯುವನ್ವಯ, ಹೊಸ ಚೈತನ್ಯದೊಂದಿಗೆ ಹೂಡಿಕೆ ಹೂಡಲು ಖಾಸಗಿ ರಂಗ ಮುಂದಾಗಬೇಕು. ಸರ್ಕಾರದ ಅತ್ಯಧಿಕ ಅನುದಾನಗಳ ಇಂಗಿತ ಇದೇ ಆಗಿದೆ ಎಂದು ವಿವರಿಸಿದರು. ಭಾರತದ ಉದ್ದಿಮೆಗಳು ಹೊಸ ಹೂಡಿಕೆ ಹಾಗೂ ಆವಿಷ್ಕಾರಗಳಿಗೆ ಮುಂದಾಗಬೇಕು. ಪ್ರಾಯೋಗಿಕ ಪರಿಹಾರಗಳ ವಿನ್ಯಾಸಗೊಳಿಸುವಲ್ಲಿ ಮತ್ತು ಮಾರುಕಟ್ಟೆ ವಿಶ್ವಾಸವನ್ನು ಸುಧಾರಿಸುವಲ್ಲಿ ಹಣಕಾಸು ಸಂಸ್ಥೆಗಳು ಮತ್ತು ವಿಶ್ಲೇಷಕರು ನೆರವಾಗಬೇಕು. ಸುಧಾರಣೆಗಳು ಮೂರ್ತ ಫಲಿತಾಂಶಗಳಾಗಿ ಪರಿವರ್ತಿತವಾಗಲು ಸರಕಾರ, ಉದ್ದಿಮೆ ಹಾಗೂ ಅನುಭವಿ ಪಾಲುದಾರರ ಮಧ್ಯೆ ನಿಕಟ ಸಹಯೋಗ ಅಗತ್ಯ ಎಂದರು. ಹಣಕಾಸು ಮಾದರಿಯಲ್ಲಿ ಮೂಲಸೌಕರ್ಯ ಹಾಗೂ ಆವಿಷ್ಕಾರ ರಂಗಗಳಲ್ಲಿ ನಾವು ಹೆಚ್ಚೆಚ್ಚು ಪಾಲ್ಗೊಳ್ಳಬೇಕು ಎಂದರು.

ಖಾಸಗಿ ರಂಗದ ಸ್ಫೂರ್ತಿ ಸಾಲದು

ಕಳೆದ ದಶಕದಿಂದೀಚೆಗೆ ಹೆದ್ದಾರಿ ನಿರ್ಮಾಣ, ರೈಲ್ವೆ, ಬಂದರುಗಳು, ವಿಮಾನ ನಿಲ್ದಾಣಗಳು, ಡಿಜಿಟಲ್ ಮೂಲಸೌಕರ್ಯ, ಇಂಧನ ಜಾಲಗಳಿಗೆ ಸರಕಾರ ಅನುದಾನವನ್ನು ಸಾಕಷ್ಟು ಹೆಚ್ಚಿಸಿದೆ. ಖಾಸಗಿ ಹೂಡಿಕೆಗೆ ಉತ್ತೇಜನ ಮತ್ತು ಮಧ್ಯಮ ಸ್ವರೂಪದ ಉತ್ಪಾದಕತೆಯನ್ನು ಮೇಲೆತ್ತುವುದು ಸರ್ಕಾರದ ಈ ರೀತಿ ದಾಖಲೆ ಬಂಡವಾಳ ವೆಚ್ಚದ ಆಶಯ. ತನ್ಮೂಲಕ ಸರ್ಕಾರವು ಭಾರತದ ಬೆಳವಣಿಗೆ ಗಾಥೆಯನ್ನು ತುಂಬು ದೃಢಗೊಳಿಸಿದೆ. ಆದರೂ ಖಾಸಗಿ ರಂಗದ ಸ್ಫೂರ್ತಿ ಮಾತ್ರ ನಿರೀಕ್ಷಿತ ಬಲಿಷ್ಠ ಮಟ್ಟದಲ್ಲಿಲ್ಲ ಎಂದು ಪ್ರಧಾನಿ ಮೋದಿ ಅತೃಪ್ತಿ ವ್ಯಕ್ತಪಡಿಸಿದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪ್ರಧಾನಿ ಮೋದಿಯವರು ಯಾವುದೇ ಹೋರಾಟ ಮಾಡದೆ ಪುಕ್ಕಟೆಯಾಗಿ ಪಟ್ಟಕ್ಕೇರಿದ್ದಾರೆ – ಮಲ್ಲಿಕಾರ್ಜುನ ಖರ್ಗೆ

– ಮೊದಲನೆಯದಾಗಿ ಯಾವುದೇ ಶಸ್ತ್ರ ಹಿಡಿದು ಹೋರಾಟ ಮಾಡದ ಅವರು ಪಟ್ಟಕ್ಕೇರಿದ್ದಾರೆ ಎಂಬುದು ಹೆಮ್ಮೆಯ ಸಂಗತಿ, ಎರಡನೆಯದಾಗಿ ನೀವು ಈ ರೀತಿ ಮಾತನಾಡುವ ಮೂಲಕ ಮತದಾರರಿಗೆ ಪುಕ್ಕಟೆಯಾಗಿ ಮನೋರಂಜನೆ ನೀಡುತ್ತಿದ್ದೀರಿ ಎಂಬುದೂ ಕಡಿಮೆ ಹೆಮ್ಮೆಯ ಸಂಗತಿ ಖಂಡಿತ ಅಲ್ಲ!

ದಿನ ಭವಿಷ್ಯ

ಮೇಷ ನಿಮಗೆ ಸಂಬಂಧಿಸಿ ಪ್ರಮುಖ ಬದಲಾವಣೆ ಉಂಟಾದೀತು. ಹಣದ ವಿಚಾರದಲ್ಲಿ ರಿಸ್ಕ್ ತೆಗೆದುಕೊಳ್ಳಬೇಡಿ. ಸಂಬಂಧದಲ್ಲಿ ಒಡಕು ಸಂಭವ.

ವೃಷಭ ನಿಮ್ಮ ತಪ್ಪಿಗೆ ಇತರರನ್ನು ದೂರಬೇಡಿ. ಕಾದಿಟ್ಟ ರಹಸ್ಯವೊಂದು ಬಹಿರಂಗವಾದೀತು. ಎಲ್ಲರ ಜತೆ ಸೌಹಾರ್ದದಿಂದ ವರ್ತಿಸಿದರೆ ಒಳಿತು.

ಮಿಥುನ ಕೆಲಸದ ಒತ್ತಡ ಅಧಿಕವಿದ್ದರೂ ನೀವು ವಿರಾಮ ಪಡೆಯಲು ಶಕ್ತರಾಗುವಿರಿ. ಖರ್ಚು ಅಧಿಕ ಮಾಡದಿರಿ. ಬಳಿಕ ಚಿಂತೆಗೆ ಕಾರಣವಾದೀತು.

ಕಟಕ ಕೆಲಸವೊಂದು ಅನಿರೀಕ್ಷಿತ ಫಲ ನೀಡಲಿದೆ. ಒತ್ತಡ ನಿವಾರಣೆ. ಬಂಧುಗಳ ಜತೆ ಆತ್ಮೀಯ ಒಡನಾಟ. ಮಕ್ಕಳ ಸಾಧನೆಯ ತೃಪ್ತಿ.

ಸಿಂಹ ಸವಾಲುಗಳ ದಿನ. ನಿಭಾಯಿಸಲು ಸಮರ್ಥರು. ಕೆಲವು ವಿಷಯಗಳಲ್ಲಿ ಸಮತೋಲನ ಸಾಧಿಸಿ. ವಿಚಕ್ಷಣೆಯ ಧೋರಣೆ ತಾಳದಿರಿ. ಧನವ್ಯಯ.

ಕನ್ಯಾ ಮನೆಯವರ ಹಿತಾಸಕ್ತಿಗೆ ಹೆಚ್ಚಿನ ಗಮನ ಕೊಡಿ. ನಿಮಗೆ ಅರಿವಿಲ್ಲದೇ ಬಿಕ್ಕಟ್ಟು ಬೆಳೆಯುತ್ತಿದೆ. ಎಲ್ಲರ ಜತೆ ಸಮಾಲೋಚನೆ ನಡೆಸಿ.

ತುಲಾ ನಿಮ್ಮ ನಿರ್ವಹಣೆ ಇಂದು ಸುಧಾರಿಸಲಿದೆ. ಅದೃಷ್ಟವೂ ಜತೆಗಿದೆ. ಕ್ಲಿಷ್ಟಕರ ಪರಿಸ್ಥಿತಿಯೊಂದು ಅಚಾನಕ್ ಪರಿಹಾರ ಕಾಣುವುದು.

ವೃಶ್ಚಿಕ ನಿಮ್ಮ ಒಳ್ಳೆ ಕೆಲಸ ಯಾರೂ ಗಮನಿಸುತ್ತಿಲ್ಲ ಎಂಬ ಕೊರಗು ಬಿಡಿ. ಸೂಕ್ತ ಪ್ರಶಂಸೆ ಸಿಕ್ಕೇ ಸಿಗುವುದು. ಮನೆಯಲ್ಲಿ ಸೌಹಾರ್ದ ಪರಿಸರ.

ಧನು ಕಷ್ಟವೆಂದುಕೊಂಡ ಕೆಲಸ ಸಕಾಲದಲ್ಲಿ ಮುಗಿಸುವಿರಿ. ಆತ್ಮವಿಶ್ವಾಸ ವೃದ್ಧಿ. ಮನೆಯಲ್ಲಿ ಅಸಹಕಾರ ಎದುರಿಸುವಿರಿ. ಸಹನೆಯಿಂದಿರಿ.

ಮಕರ ಮನವನ್ನು ಕಾಡುತ್ತಿರುವ ವಿಷಯ ಸರಿಯಾಗಿ ಇತ್ಯರ್ಥ ಪಡಿಸಿ. ಅದನ್ನು ಹಾಗೇ ಬೆಳೆಯಲು ಬಿಡಬೇಡಿ. ಕೌಟುಂಬಿಕ ಸಹಕಾರ.

ಕುಂಭ ನಿಮ್ಮ ಪಾಲಿಗೆ ಗುಣಾತ್ಮಕ ಬದಲಾವಣೆ ಉಂಟಾಗಲಿದೆ. ಮನೆಯವರ ಮಾತಿಗೆ ರೇಗದಿರಿ. ಸಮಾಧಾನದ ಪ್ರತಿಕ್ರಿಯೆ ನೀಡಿ.

ಮೀನ ಇತ್ತೀಚೆಗೆ ಮೂಡಿದ್ದ ಕೆಲವು ಸಂಶಯಗಳಿಗೆ ಇಂದು ಪರಿಹಾರ ಸಿಗಲಿದೆ. ಮನಸ್ಸು ನಿರಾಳ. ಆರ್ಥಿಕ ಪರಿಸ್ಥಿತಿ ಉತ್ತಮ. ಖರ್ಚು ಹೆಚ್ಚಿದರೂ ಚಿಂತೆ ಕಾಡದು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 2,5,8,1

ಅಸಂಘಟಿತ ಕಾರ್ಮಿಕರಿಗೆ ಅನುಕೂಲ: ಸಚಿವ ಸಂತೋಷ್ ಲಾಡ್

4 ಮಸೂದೆ ಜಾರಿಗೆ ಚಿಂತನೆ

• **ಬೆಂಗಳೂರು:** ಕಾರ್ಮಿಕರ ಕಲ್ಯಾಣಕ್ಕಾಗಿ ಕಾರ್ಮಿಕ ಇಲಾಖೆಯು 4 ಮಸೂದೆಗಳನ್ನು ಈಗಾಗಲೇ ಜಾರಿಗೊಳಿಸಿದ್ದು, ಇದರೊಂದಿಗೆ ಇನ್ನೂ 4 ಮಸೂದೆ ಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆಂದು ಕಾರ್ಮಿಕ ಸಚಿವ ಸಂತೋಷ್ ಎಸ್. ಲಾಡ್ ಹೇಳಿದರು.



ಶುಕ್ರವಾರ ನಗರದ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ರಾಜ್ಯದ ವಿವಿಧ ಕೈಗಾರಿಕೆಗಳು, ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ವಿಶೇಷಚೇತನರಿಗೆ ಮೋಟಾರು ಚಾಲಿತ ತ್ರಿಚಕ್ರ ವಾಹನಗಳ ವಿತರಣಾ ಸಮಾರಂಭದಲ್ಲಿ ಮಾತನಾಡಿದ ಅವರು, ಮನೆಗೆಲಸದ ಕಾರ್ಮಿಕರು, ವಿಧವೆಯರು, ಅಂಗವಿಕಲರಿಗೆ ಸಂಬಂಧಿಸಿದ ಮಸೂದೆಗಳನ್ನು ಜಾರಿ ಮಾಡಲು ಉದ್ದೇಶಿಸಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಸ್ವಲ್ಪಮಟ್ಟಿನ ಸುಂಕ ವಿಧಿಸಿ ಅಸಂಘಟಿತ ಕಾರ್ಮಿಕ ಕಲ್ಯಾಣಕ್ಕೆ ಬಳಸುವ ಉದ್ದೇಶವಿದೆ. ಕೋಟ್ಯಂತರ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಹೊಸ ಮಸೂದೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು.

ಕಳೆದ ಎರಡೂವರೆ ವರ್ಷಗಳಲ್ಲಿ ನಮ್ಮ ಕಾರ್ಮಿಕ ಇಲಾಖೆ ಹಲವಾರು ಯೋಜನೆ ಮತ್ತು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಇಲಾಖೆ ಹೊಸ-ಹೊಸ ಸೌಲಭ್ಯಗಳನ್ನು ಅನುಷ್ಠಾನ ಮಾಡಿದೆ ಎಂದರು.

ವಿಶೇಷ ಚೇತನರ ಸಮಸ್ಯೆಗಳನ್ನು, ನೋವನ್ನು ನಾನು ತೀರಾ ಹತ್ತಿರದಿಂದ ನೋಡಿದ್ದೇನೆ. ಅವರು ಬದುಕು ನಡೆಸಲು ಕಷ್ಟಪಡುವುದನ್ನು ಕಂಡಿದ್ದೇನೆ. ಇಂತಹವರಿಗೆ ಏನಾದರೂ ಸಹಾಯ ಮಾಡಬೇಕು. ಅವರ ಜೀವನಕ್ಕೆ ಊರುಗೋಲಾಗಬೇಕು ಎಂಬ ಸದುದ್ದೇಶದಿಂದ ಇಂತಹ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ ಎಂದು ತಿಳಿಸಿದರು.

ಬಜೆಟ್‌ನಲ್ಲೂ ಹಲವು ಕಾರ್ಯಕ್ರಮಗಳಿಗೆ ಮನವಿ: ನಮ್ಮ ರಾಜ್ಯ ಸರ್ಕಾರವು ಗ್ಯಾರಂಟಿಗಳ ಮೂಲಕ ನಾಡಿನ ಕೋಟ್ಯಂತರ ಜನರಿಗೆ ನೆರವಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿರುವ ಅಸಂಘಟಿತ ಕಾರ್ಮಿಕರಿಗೆ ಗ್ಯಾರಂಟಿಗಳು ಸಹಾಯ ಮಾಡಿವೆ. ಈ ಬಾರಿಯ ಬಜೆಟ್‌ನಲ್ಲೂ ಅಸಂಘಟಿತ ಕಾರ್ಮಿಕರಿಗೆ ಮತ್ತಷ್ಟು ಅನುಕೂಲವಾಗುವ ಕಾರ್ಯಕ್ರಮಗಳಿಗೆ ಮನವಿ ಮಾಡಿದ್ದೇವೆ ಎಂದು ನುಡಿದರು.

ಶಿವಮೊಗ್ಗ ನಿಟ್ಟೂರಿನ ಶ್ರೀ ನಾರಾಯಣ ಗುರು ಮಹಾಸಂಸ್ಥಾನದ ಶ್ರೀ ರೇಣುಕಾನಂದ ಸ್ವಾಮೀಜಿ, ಚಿತ್ರದುರ್ಗ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ಶ್ರೀ ವಚನಾನಂದ ಸ್ವಾಮೀಜಿ, ಮಾದಾರ ಚೆನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿಗಳು ಆಶೀರ್ವಚನ ನೀಡಿದರು.


ಕಾರ್ಯಕ್ರಮದಲ್ಲಿ ಕಾರ್ಮಿಕ ಆಯುಕ್ತ ಡಾ. ಎಚ್.ಎನ್. ಗೋಪಾಲಕೃಷ್ಣ ಕಾರ್ಮಿಕ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಸಲ್ಮಾ ಕೆ. ಫಾಹೀಂ, ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರವಿ ಡಿ. ಚೆನ್ನಣ್ಣನವರ್ ಇದ್ದರು.

ಕಾರ್ಮಿಕ ಇಲಾಖೆ ಕಾರ್ಮಿಕರಿಗೆ ರಕ್ಷಣೆ ನೀಡುತ್ತಿದೆ

ವಿಶೇಷ ಚೇತನರಿಗೆ ವಿವಿಧ ಸಂಸ್ಥೆಗಳ ಮೂಲಕ ತ್ರಿಚಕ್ರ ವಾಹನಗಳನ್ನು ನೀಡುವ ಮೂಲಕ ಒಳ್ಳೆಯ ಕೆಲಸ ಮಾಡಿದೆ. ಸಂತೋಷ್ ಲಾಡ್ ಅವರಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ಅಪಾರವಾದ ಅರಿವು ಇದೆ. ಕಾರ್ಮಿಕರಿಲ್ಲದೆ ಕೆಲಸಗಳು ನಡೆಯುವುದಿಲ್ಲ. ಕಾರ್ಮಿಕ ಇಲಾಖೆಯು ಹೊಸ ಕಾನೂನುಗಳನ್ನು ಜಾರಿ ಮಾಡಿ ಕಾರ್ಮಿಕರಿಗೆ ರಕ್ಷಣೆ ಕೊಡುತ್ತಿದೆ. ಇನ್ನೂ ಜಗತ್ತಿನಾದ್ಯಂತ 130 ಕೋಟಿ, ಭಾರತದಲ್ಲಿ 2.6 ಕೋಟಿ ಹಾಗೂ ಕರ್ನಾಟಕದಲ್ಲಿ 13.2 ಲಕ್ಷ ವಿಶೇಷಚೇತನರು ಇದ್ದಾರೆ. ವಿಶೇಷಚೇತನರು ಯಾರೂ ಮಾನಸಿಕವಾಗಿ ಧೃತಿಗೆಡಬಾರದು. ರಾಜ್ಯ ಸರ್ಕಾರದಿಂದ ನಿಮಗೆ ಎಂದಿಗೂ ಬೆಂಬಲ ಇದೆ. ನಿಮ್ಮ ವಿಶ್ವಾಸ ಎಂದಿಗೂ ಕಡಿಮೆಯಾಗಬಾರದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಶೇಷಚೇತನರಿಗೆ ಹುರಿದುಂಬಿದರು.

ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಕ್ಕೆ ನೆಪ ಬೇಡ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಪ್ರಕ್ರಿಯೆಯನ್ನು ಸ್ಥಗಿತಗೊಳಿಸುವಂತೆ ಧ್ವನಿದಿನ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಸ್ಪಷ್ಟಪಡಿಸಿದೆ. ಪ್ರಕ್ರಿಯೆ ತಡೆಯಲು ನಿರ್ದಿಷ್ಟ ಕಾರಣ ಬೇಕು ಹಾಗೂ ವಿಚಾರಣೆಗೆ ಒಂದು ಅಂತ್ಯ ಇರಬೇಕು ಎಂದು ನ್ಯಾಯಪೀಠ ಕಟುವಾಗಿ ಸೂಚಿಸಿತು.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜೋಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ಪೀಠ, ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಹಕ್ಕು ಪರಿಶೀಲನೆಗಾಗಿ ನಿಯೋಜಿಸಲಾದ ನ್ಯಾಯಾಂಗ ಅಧಿಕಾರಿಗಳಿಗೆ ತರಬೇತಿ ನೀಡುತ್ತಿರುವುದರ ಬಗ್ಗೆ ಆಕ್ಷೇಪಿಸಿ ತೃಣಮೂಲ ಕಾಂಗ್ರೆಸ್(ಟಿಎಂಸಿ) ಎತ್ತಿದ ಆಕ್ಷೇಪಣೆಗಳನ್ನು ಪರಿಗಣಿಸಲು ನಿರಾಕರಿಸಿತು. ಚುನಾವಣಾ ಆಯೋಗದ ತರಬೇತಿ ಮಾಡ್ಯೂಲ್ ನ್ಯಾಯಾಲಯದ ಆದೇಶಗಳನ್ನು ಅತಿಕ್ರಮಿಸುವುದಿಲ್ಲ. ನ್ಯಾಯಾಂಗ ಅಧಿಕಾರಿಗಳ ಸ್ವತಂತ್ರ ತೀರ್ಮಾನದಲ್ಲಿ ನಂಬಿಕೆ ಇಡಬೇಕು ಎಂದು ಪೀಠ ಸ್ಪಷ್ಟಪಡಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲರಾದ ಕಪಿಲ್ ಸಿಬಲ್ ಮತ್ತು ಕಲ್ಯಾಣ್ ಬ್ಯಾನರ್ಜಿ ವಾದ ಮಂಡಿಸಿದರು. ಚುನಾವಣಾ ಆಯೋಗದ ಪರ ಹಿರಿಯ ವಕೀಲ ಡಿ.ಎಸ್. ನಾಯ್ಡು ಹಾಜರಿದ್ದರು. ವಿಚಾರಣೆ ವೇಳೆ ಕಪಿಲ್ ಸಿಬಲ್ ಅವರು, ಚುನಾವಣಾ ಆಯೋಗವು ನ್ಯಾಯಾಂಗ ಅಧಿಕಾರಿಗಳಿಗೆ ಯಾವ ದಾಖಲೆಗಳನ್ನು ಸ್ವೀಕರಿಸಬೇಕು, ಯಾವುದನ್ನು ತಿರಸ್ಕರಿಸಬೇಕು ಎಂಬುದಾಗಿ ಸೂಚನೆ ನೀಡಿರುವ ತರಬೇತಿ ಮಾಡ್ಯೂಲ್ ರೂಪಿಸಿದೆ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿಗಳು, ಇದು ಹೇಗೆ ಪ್ರಮಾದವಾಗುತ್ತದೆ? ಅಂತಿಮ ತೀರ್ಮಾನವನ್ನು ನ್ಯಾಯಾಂಗ ಅಧಿಕಾರಿಗಳೇ ಕೈಗೊಳ್ಳುತ್ತಾರೆ ಎಂದರು. ನಿವಾಸ ಪ್ರಮಾಣಪತ್ರ ಸೇರಿದಂತೆ ಕೆಲವು ದಾಖಲೆಗಳನ್ನು ಸ್ವೀಕರಿಸಬಾರದು ಎಂಬ ಸೂಚನೆ ನೀಡಲಾಗಿದೆ ಎಂದು ಸಿಬಲ್ ವಾದಿಸಿದರು.

ತರಬೇತಿ ಅಗತ್ಯ

ನ್ಯಾಯಾಧೀಶರಿಗೆ ಇದು ಹೊಸ ರೀತಿಯ ಜವಾಬ್ದಾರಿಯಾಗಿರುವುದರಿಂದ ತರಬೇತಿಯ ಅಗತ್ಯವಿದೆ ಎಂದು ನ್ಯಾಯಮೂರ್ತಿ ಬಾಗ್ಚಿ ಅಭಿಪ್ರಾಯಪಟ್ಟರು. ಚುನಾವಣಾ ಆಯೋಗದ ತಾಂತ್ರಿಕ ವ್ಯವಸ್ಥೆ ಮತ್ತು ದಾಖಲೆಗಳ ಪರಿಶೀಲನೆಯ ಬಗ್ಗೆ ಆಯೋಗವೇ ತರಬೇತಿ ನೀಡುವುದು ಸರಿಯಾಗಿಯೇ ಇದೆ. ಅಲ್ಲದೆ, ಯಾವ ದಾಖಲೆಗಳನ್ನು ಪರಿಶೀಲಿಸಬೇಕು ಎಂಬ ಬಗ್ಗೆ ನ್ಯಾಯಾಲಯ ಈಗಾಗಲೇ ಸ್ಪಷ್ಟ ಆದೇಶ ನೀಡಿದೆ ಎಂದು ಪೀಠ ನೆನಪಿಸಿತು.

ಬೆಂಗಳೂರು ಸೃಜನಶೀಲ ರಾಜಧಾನಿ ಆಗಲಿ: ಸಿಎಂ

ಪುಟ 1 ➜ **ಪ್ರತಿ ಜಿಲ್ಲೆಯಿಂದ ನಾವೀನ್ಯಕಾರರು ಬರಬೇಕು:** ಬೆಂಗಳೂರಿನಾಚೆಗೂ ಅಂದರೆ, ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ, ಕಲಬುರಗಿ ಮತ್ತು ಇತರ ಉದಯೋನ್ಮುಖ ನಗರಗಳಲ್ಲಿ ಡಿಜಿಟಲ್ ಸೃಜನಶೀಲ ಕ್ಲಸ್ಟರ್‌ಗಳನ್ನು ಉತ್ತೇಜಿಸುತ್ತಿದ್ದೇವೆ. ಮುಂದಿನ ಶ್ರೇಷ್ಠ ಗೇಮ್ ಡಿಸೈನರ್ ಅಥವಾ ವಿಎಫ್‌ಎಕ್ಸ್ ನಾವೀನ್ಯಕಾರರು ಕರ್ನಾಟಕದ ಪ್ರತಿ ಜಿಲ್ಲೆಯಿಂದಲೂ ಹೊರಹೊಮ್ಮಬೇಕೆಂದು ನಾವು ಬಯಸುತ್ತೇವೆ ಎಂದರು. ಕರ್ನಾಟಕದ ಯುವಕರು ಕೇವಲ ಉದ್ಯೋಗಾಕಾಂಕ್ಷಿಗಳಲ್ಲ, ಅವರು ಪ್ರಪಂಚಗಳ ಸೃಷ್ಟಿಕರ್ತರು. ಮುಂದಿನ 5 ವರ್ಷಗಳಲ್ಲಿ 20 ಲಕ್ಷ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಈ ವಲಯವು ವಿನ್ಯಾಸ, ಕೋಡಿಂಗ್, ಕಥೆ ಹೇಳುವಿಕೆ, ಸಂಗೀತ, ಮೋಷನ್ ಕ್ಯಾಪ್ಚರ್, ಎಐ ಮಾಡೆಲಿಂಗ್ ಮತ್ತು ಉತ್ಪಾದನಾ ನಿರ್ವಹಣೆಯಾದ್ಯಂತ ಉದ್ಯೋಗ ಸೃಷ್ಟಿಸುತ್ತದೆ. ಇದು ಕಲೆ, ಗಣಿತ, ಮನೋವಿಜ್ಞಾನ ಮತ್ತು ತಂತ್ರಜ್ಞಾನವನ್ನು ಸಂಯೋಜಿಸುತ್ತದೆ ಎಂದು ಸಿಎಂ ಹೆಮ್ಮೆ ವ್ಯಕ್ತಪಡಿಸಿದರು.

ಪ್ರತಿಭಾವಂತರಿಗೆ ಕರ್ನಾಟಕ ಕಾಯಕ ಭೂಮಿ: ಡಿಸಿಎಂ

ಪುಟ 1 ➜ **ಆದರೆ ಇದರ ಬಗ್ಗೆ ನಾವು 2016ರಲ್ಲಿಯೇ ನೀತಿ ರೂಪಿಸಿದ್ದೆವು. ಈ ಕ್ಷೇತ್ರದ ಬೆಳವಣಿಗೆಗೆ ಪೂರಕವಾಗಿ ನಮ್ಮ ಸರ್ಕಾರ ಕೆಲಸ ಮಾಡಿದೆ. ಪ್ರತಿವರ್ಷ 1.50 ಲಕ್ಷ ಯುವ ಹಾಗೂ ಪ್ರತಿಭಾವಂತ ಐಟಿ ಉದ್ಯೋಗಿಗಳು ಕರ್ನಾಟಕದಿಂದ ಹೊರಹೊಮ್ಮುತ್ತಿದ್ದಾರೆ. ಇಡೀ ಜಗತ್ತೇ ನಮ್ಮ ಕಡೆ ನೋಡುತ್ತಿದೆ. ನಮ್ಮ ರಾಜ್ಯವು ಈಗಾಗಲೇ ಏಷ್ಯಾದ ಅತ್ಯಂತ ಬಲಿಷ್ಠ ತಂತ್ರಜ್ಞಾನ ವ್ಯವಸ್ಥೆ ಹೊಂದಿರುವ ರಾಜ್ಯವಾಗಿದೆ ಎಂದು ಹೇಳಿದರು.**

50,000 ವಿದ್ಯಾರ್ಥಿಗಳಿಗೆ ಎವಿಜಿಸಿ- ಎಕ್ಸ್‌ಆರ್ ತರಬೇತಿ ಗುರಿ: ಕರ್ನಾಟಕ ಚಲನಚಿತ್ರ ಉದ್ದಿಮೆ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದಿದೆ. ಈಗಾಗಲೇ ನಮ್ಮ ಚಲನಚಿತ್ರಗಳು ಹಾಲಿವುಡ್ ಚಿತ್ರಗಳಿಗೆ ಪ್ರತಿಸ್ಪರ್ಧಿಯಾಗಿವೆ. ಎವಿಜಿಸಿ- ಎಕ್ಸ್‌ಆರ್ ವಿಭಾಗದಲ್ಲಿ 2028ರ ವೇಳೆಗೆ ಸುಮಾರು 50 ಸಾವಿರ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಗುರಿ ಹೊಂದಲಾಗಿದೆ. ಸುಮಾರು ಶೇ.70ರಷ್ಟು ಉದ್ಯೋಗಿಗಳು ಸೃಜನಶೀಲ ವೃತ್ತಿಪರರಾಗಿದ್ದಾರೆ. ಈ ಮೂಲಕ, 2028ರ ವೇಳೆಗೆ 30 ಸಾವಿರಕ್ಕೂ ಹೆಚ್ಚು ಉತ್ತಮ ಗುಣಮಟ್ಟದ ಉದ್ಯೋಗ ಸೃಷ್ಟಿಸುವ ಗುರಿ ಹೊಂದಲಾಗಿದೆ ಎಂದರು.

ಭವಿಷ್ಯವನ್ನು ಗುರಿಯಲ್ಲಿಟ್ಟುಕೊಂಡು ಕರ್ನಾಟಕದಲ್ಲಿ 6.5 ಲಕ್ಷ ಉದ್ಯೋಗಿಗಳಿಗೆ 2023-2024ರಲ್ಲಿ ಎಐ ಕೌಶಲ್ಯಗಳ ಕುರಿತು ತರಬೇತಿ ನೀಡಲಾಗಿದೆ. 2022ಕ್ಕೆ ಹೋಲಿಸಿ ನೋಡಿದರೆ 2023ರಲ್ಲಿ ಎಐ ಸಂಬಂಧಿತ ತರಬೇತಿ ಚಟುವಟಿಗಳು ಶೇ.9ರಷ್ಟು ಹೆಚ್ಚಳವಾಗಿದೆ.

■ **ಡಿ.ಕೆ.ಶಿವಕುಮಾರ್, ಡಿಸಿಎಂ**

ಕೇಜ್ರಿವಾಲ್, ಸಿಸೋಡಿಯಾ ಸೇರಿ 23 ಮಂದಿ ಖುಲಾಸೆ

• **ಹೊಸದಿಲ್ಲಿ:** ದಿಲ್ಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್, ಮನೀಶ್ ಸಿಸೋಡಿಯಾ ಮತ್ತು ಕೆ.ಕವಿತಾ ಸೇರಿದಂತೆ ಒಟ್ಟು 23 ಆರೋಪಿಗಳನ್ನು ವಿಶೇಷ ನ್ಯಾಯಾಲಯ ಶುಕ್ರವಾರ ಖುಲಾಸೆ ಮಾಡಿದೆ.



ಸಿಬಿಐ ಸಲ್ಲಿಸಿದ ಸಾಕ್ಷ್ಯಗಳು ನ್ಯಾಯಾಲಯದ ಮುಂದೆ ನಿಲ್ಲಲು ಸಾಧ್ಯವಿಲ್ಲ ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ತಮ್ಮ ತೀರ್ಪಿನಲ್ಲಿ ವಿಶೇಷ ನ್ಯಾಯಾಧೀಶ ಜಿತೇಂದ್ರ ಸಿಂಗ್, ಈ ಅಬಕಾರಿ ನೀತಿಯಲ್ಲಿ ಯಾವುದೇ ಲೋಪದೋಷಗಳಿಲ್ಲ ಅಥವಾ ಇದನ್ನು ಕಾನೂನು ಬಾಹಿರವಾಗಿ ಜಾರಿಗೆ ತಂದಿದ್ದಾರೆ ಎನ್ನುವುದಕ್ಕೆ ಸಾಕ್ಷಿಯಿಲ್ಲ. ಹೀಗಿರುವಾಗ, ಪ್ರಾಸಿಕ್ಯೂಷನ್ (ಸಿಬಿಐ) ಮಂಡಿಸುತ್ತಿರುವ ವಾದ ಕೇವಲ ಊಹಾಪೋಹವಷ್ಟೇ ಆಗುತ್ತದೆ.

ಸರಿಯಾದ ಕ್ರಮದಲ್ಲಿ ರೂಪಿಸಿ, ಕಾನೂನುಬದ್ಧವಾಗಿ ಜಾರಿಗೆ ತಂದಿರುವ ನೀತಿಯಿಂದ ಲಾಭ ಪಡೆಯಲು ಪ್ರಯತ್ನಿಸಿದ ಖಾಸಗಿ ವ್ಯಕ್ತಿಗಳನ್ನು ಅಪರಾಧದ ವಿಚಾರಣೆಗೆ ಗುರಿಪಡಿಸುವುದು ಸರಿಯಲ್ಲ ಎಂದು ಹೇಳಿದ್ದಾರೆ. ಸಿಬಿಐ ತನಿಖೆಯು ಮೊದಲೇ ನಿರ್ಧರಿಸಿದ ದಾರಿಯಲ್ಲಿ ನಡೆದಂತಿದೆ. ಇದೊಂದು ಕಾಲ್ಪನಿಕ ಪಿತೂರಿಯಂತೆ ಕಾಣುತ್ತಿದೆ ಎಂದು ನ್ಯಾಯಾಲಯ ಹೇಳಿದೆ. ಗೋವಾ ಚುನಾವಣೆಗೂ ಈ ನೀತಿಗೂ ಸಂಬಂಧ ಕಲ್ಪಿಸಲು ಸಿಬಿಐ ಪ್ರಯತ್ನಿಸಿದೆ. ಇದು ಕೇವಲ ಊಹೆಗಳ ಮೇಲೆ ನಿಂತಿದೆಯೇ ಹೊರತು ಸರಿಯಾದ ಕಾನೂನು ದಾಖಲೆಗಳ ಮೇಲಲ್ಲ ಎಂದು ಕೋರ್ಟ್ ಹೇಳಿದೆ.

ನಿಯಮಗಳ ಪಾಲನೆ: ಸಂಬಂಧಿತ ಸಂಸ್ಥೆಗಳ ಮೇಲಿನ ನಿರ್ಬಂಧಗಳನ್ನು ಮೀರಿರುವ, ಕ್ರಿಮಿನಲ್ ಮೊಕದ್ದಮೆ ಹೂಡಲು ಕಾರಣವಾಗುವಂತಹ ಯಾವುದೇ ನೀತಿ ಉಲ್ಲಂಘನೆ ಇಲ್ಲಿ ಕಂಡುಬಂದಿಲ್ಲ. ಲಭ್ಯವಿರುವ ದಾಖಲೆಗಳನ್ನು ನೋಡಿದರೆ, ಈ ನೀತಿಯನ್ನು ಸಾಕಷ್ಟು ಚರ್ಚೆ ಮತ್ತು ಆಲೋಚನೆ ನಡೆಸಿದ ನಂತರವೇ ರೂಪಿಸಲಾಗಿದೆ ಎಂಬುದು ಸ್ಪಷ್ಟವಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ.

ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ತರುವೆ

ಪುಟ 1 ➜ ರೈತರಿಗಾಗಿ ಪ್ರತ್ಯೇಕ ಕೃಷಿ ಬಜೆಟ್ ಮಂಡಿಸಿದ್ದು, ಇದರ ಲಾಭ ರೈತ ಸಮುದಾಯಕ್ಕೆ ಸಿಕ್ಕಿದೆ. ಶಿವಮೊಗ್ಗ ಜಿಲ್ಲೆ ಮಾತ್ರವಲ್ಲದೆ ಇಡೀ ರಾಜ್ಯದಲ್ಲಿ ನೀರಾವರಿ ಯೋಜನೆಗಳನ್ನು ಅನುಷ್ಠಾನಗೊಳಿಸಿ ರೈತರ ಕಣ್ಣೀರು ಒರೆಸುವ ಕೆಲಸ ಮಾಡಲಾಗಿದೆ. ಈ ನಾಡು ಕಟ್ಟುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಬಂದಿದ್ದು, ಮುಂದೆಯೂ ಅದನ್ನೇ ಮಾಡುತ್ತೇನೆ ಎಂದರು.

ರಾಜ್ಯದಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ: ಯಡಿಯೂರಪ್ಪ ಅವರನ್ನು ಅಭಿನಂದಿಸಿ ಮಾತನಾಡಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಜನನಾಯಕ ಯಡಿಯೂರಪ್ಪನವರ ಮಾರ್ಗದರ್ಶನದಲ್ಲಿ ಕಾಂಗ್ರೆಸ್ಸೇತರ ಸರ್ಕಾರವಾಗಿ ಬಿಜೆಪಿ ಮತ್ತೊಮ್ಮೆ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಇಡೀ ದಕ್ಷಿಣ ಭಾರದಲ್ಲಿ ಶೂನ್ಯದಲ್ಲಿದ್ದ ಬಿಜೆಪಿಯನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತರುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು. ಅಂತಹ ಶಕ್ತಿ ಮತ್ತೊಮ್ಮೆ ಬರಲಿದೆ ಎಂದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಡಿಸಿಎಂ ಗೋವಿಂದ ಕಾರಜೋಳ, ಮಾಜಿ ಸಚಿವರಾದ ಬಿ. ಶ್ರೀರಾಮುಲು, ಸಿ.ಟಿ. ರವಿ., ಬಿ.ಸಿ. ಪಾಟೀಲ್, ಮಾಜಿ ಶಾಸಕಿ ರೂಪಾಲಿ ನಾಯ್ಕ್ ಇದ್ದರು.

ಹುದ್ದೆ ಭರ್ತಿಗೆ ರಾಜ್ಯ ಸರ್ಕಾರಕ್ಕೆ ಮನಸ್ಸಿಲ್ಲ: ಎಚ್‌ಡಿಕೆ

• **ವಿಜಯಪುರ:** ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ರಾಜ್ಯ ಸರ್ಕಾರಕ್ಕೆ ಮನಸ್ಸು ಇಲ್ಲ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಲಕ್ಷಾಂತರ ಖಾಲಿ ಹುದ್ದೆಗಳು ಇವೆ. ಆದರೆ, ಸರ್ಕಾರ ಮಾತ್ರ ವಿದ್ಯಾರ್ಥಿಗಳ ಜೊತೆಗೆ ಚೆಲ್ಲಾಟವಾಡುತ್ತಿದೆ ಎಂದರು.

ಇನ್ನು ಗ್ಯಾರಂಟಿಗಳಿಂದ ಅಭಿವೃದ್ಧಿ ಕೆಲಸಗಳು ಆಗುತ್ತಿಲ್ಲ. ಸದ್ಯ ಡಿಸಿಎಂ ಡಿ.ಕೆ.ಶಿವಕುಮಾರ ಅವರಿಗೆ ಜ್ಞಾನೋದಯ ಆಗಿದೆ. ಗ್ಯಾರಂಟಿಯಿಂದ ಸರ್ಕಾರಕ್ಕೆ ಹೊರೆ ಆಗುತ್ತಿದೆ ಎಂದಿದ್ದಾರೆ.

ಅದಕ್ಕಾಗಿ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ಅಭಿವೃದ್ಧಿ ಕಡೆಗೆ ಗಮನ ಕೊಡಬೇಕು ಎಂದರು. ಅಲ್ಲದೇ, ಮುಂದಿನ ಚುನಾವಣೆ ಬಿಜೆಪಿ ಜೊತೆಗೆ ಮೈತ್ರಿಯೊಂದಿಗೆ ಚುನಾವಣೆ ಸ್ಪರ್ಧೆ ಮಾಡುತ್ತೇವೆ ಎಂದರು.

ಕೃಷ್ಣಾ ಮೇಲ್ದಂಡೆಗೆ ಗಟ್ಟಿ ಹೋರಾಟ

• **ವಿಜಯಪುರ:** ಕೃಷ್ಣಾ ಮೇಲ್ದಂಡೆ 3ನೇ ಹಂತದ ಯೋಜನೆಗೆ ಅಂತಿಮ ಗೆಜೆಟ್ ನೋಟಿಫಿಕೇಷನ್ ಹೊರಡಿಸಬೇಕಿದ್ದು, ನಾನು ರಾಜ್ಯಸಭೆಯಲ್ಲಿ ಇರ ದಿದ್ದರೂ ಈ ನಿಟ್ಟಿನಲ್ಲಿ ಗಟ್ಟಿ ಹೋರಾಟ ಮಾಡುವೆ ಎಂದು ಮಾಜಿ ಪ್ರಧಾನಿ, ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಶಪಥ ಮಾಡಿದ್ದಾರೆ.

ನಗರದಲ್ಲಿ ಶುಕ್ರವಾರ ಹಮ್ಮಿಕೊಂಡ ಜೆಡಿಎಸ್ ಬೆಳ್ಳಿ ಹಬ್ಬದ ಸಂಭ್ರಮ ಹಾಗೂ ಕಿತ್ತೂರ ಕರ್ನಾಟಕ ಭಾಗದ ಜಿಲ್ಲೆಗಳ ಸಂಘಟನಾ ಸಮಾವೇಶದಲ್ಲಿ ಅವರು ಮಾತನಾಡಿದರು. ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ವ್ಯವಸ್ಥೆಯ ರಾಜ್ಯ ಸರ್ಕಾರವನ್ನೇ ನಾನು ನೋಡಿಲ್ಲ, ಹೀಗಾಗಿ ನಿಮ್ಮ ಮುಂದೆ ಕೈಚಾಚಿ ಪ್ರಾದೇಶಿಕ ಪಕ್ಷವನ್ನು ಬೆಳೆಸಿ, ಉಳಿಸಿ ಎಂದು ಕೇಳಿಕೊಳ್ಳುವೆ. ನಾಡಿನ ಅಭ್ಯುದಯಕ್ಕೆ ಪ್ರಾದೇಶಿಕ ಪಕ್ಷದ ಅವಶ್ಯಕತೆ ಇದೆ.

ನಾವೆಲ್ಲರೂ ಒಗ್ಗಟ್ಟಾಗಿ ಸಮೃದ್ಧ ಕರ್ನಾಟಕ ಕಟ್ಟೋಣ. ಕನ್ನಡಾಂಬೆಯ ಮಕ್ಕಳು ನಾವೆಲ್ಲರೂ ಒಂದಾಗೋಣ. ಸಮೃದ್ಧ ನಾಡು ಕಟ್ಟುವುದೇ ನನ್ನ ಕೊನೆಯ ಆಸೆ ಎಂದರು. ನನಗೀಗ 93 ವರ್ಷ. ನಾನು ಮುಂದೆ ಪ್ರಧಾನಮಂತ್ರಿಯಾಗಲ್ಲ, ಮುಖ್ಯಮಂತ್ರಿಯಾಗಲ್ಲ. ನಾನು ನನಗಾಗಿ ಇಲ್ಲಿಗೆ ಬಂದಿಲ್ಲ. ಹಿರಿಯರು ಭೀಕರ ಬರಗಾಲ ನೋಡಿದರು. ದುಡಿಯಲು ಗೋವಾ, ಮಹಾರಾಷ್ಟ್ರಕ್ಕೆ ಗುಳೇ ಹೋದರು. ಇಲ್ಲಿನ ದಾರುಣ ಪರಿಸ್ಥಿತಿ ಕಣ್ಣಾರೆ ಕಂಡಿರುವೆ. ವಿರೋಧ ಪಕ್ಷದ ನಾಯಕನಾಗಿದ್ದ ಸಂದರ್ಭದಲ್ಲಿ ಈ ಭಾಗದಲ್ಲಿ ಮೂಲೆ ಮೂಲೆ ಸುತ್ತಿದ್ದೇನೆ. ಈ ಭಾಗದಲ್ಲಿಯೇ ರೊಟ್ಟಿ, ಹೋಳಿಗೆ ತಿಂದಿರುವೆ. ದಿ.ಮೊರಾರ್ಜಿ ದೇಸಾಯಿ ಅವರು ಈ ಪಕ್ಷವನ್ನು ಬೆಳೆಸುವ ಜವಾಬ್ದಾರಿಯನ್ನು ನನ್ನ ತಲೆಗೆ ಕಟ್ಟಿದರು. ಅದನ್ನು ನಿಷ್ಠೆಯಿಂದ ನಿಭಾಯಿಸಿರುವೆ ಎಂದರು.



ಬಡವರ ಬದುಕು ಬೀದಿಗೆ: ಎಚ್‌ಡಿಕೆ

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆ ಖಾಲಿ ಇವೆ. ಸಾವಿರಾರು ಶಿಕ್ಷಕರ ಹುದ್ದೆ ಖಾಲಿ ಇವೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಎಂಬ ಹೆಸರು ಇರಿಸಿದ ಮಾತ್ರಕ್ಕೆ ಇಲ್ಲಿ ಅಭಿವೃದ್ಧಿ ಪರ್ವ ನಡೆದಿದೆಯೇ? ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿವೆ ಎಂದು ಹೇಳಿದರು.

ಇಂದಿನಿಂದ ಪಿಯುಸಿ ಪರೀಕ್ಷೆ, ಮೊಬೈಲ್ ನಿಷೇಧ

• **ಬೆಂಗಳೂರು:** ಪ್ರಸಕ್ತ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ-1 ರಾಜ್ಯಾದ್ಯಂತ ಶನಿವಾರದಿಂದ(ಫೆ.28) ಆರಂಭವಾಗಲಿದೆ. ಪರೀಕ್ಷೆಗೆ ಒಟ್ಟು 7,10,363 ವಿದ್ಯಾರ್ಥಿಗಳು ನೋಂದಾಯಿಸಿಕೊಂಡಿದ್ದು, ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ವೆಬ್ ಕಾಸ್ಟಿಂಗ್ ಮುಖಾಂತರ ಪರೀಕ್ಷೆಯನ್ನು ವೀಕ್ಷಿಸಲಾಗುತ್ತದೆ.

ಒಟ್ಟು 6,46,801 ಹೊಸಬರು, 50,540 ಪುನಾವರ್ತಿತ ಮತ್ತು 13,022 ಖಾಸಗಿ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪರೀಕ್ಷೆಗೆ ಒಟ್ಟು 5,174 ಶಾಲೆ, ಕಾಲೇಜುಗಳು ನೋಂದಾಯಿಸಿದ್ದು, 1,217 ಪರೀಕ್ಷಾ ಕೇಂದ್ರಗಳನ್ನು ಸಜ್ಜುಗೊಳಿಸಲಾಗಿದೆ ಜತೆಗೆ ಪ್ರತಿ ಪರೀಕ್ಷಾ ಕೇಂದ್ರಗಳಲ್ಲೂ ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ನಿಷೇಧಿತ ಪ್ರದೇಶ ಎಂದು ಘೋಷಿಸಲಾಗಿದ್ದು, ಆಯಾ ಜಿಲ್ಲೆಗಳ ಎಸ್‌ಪಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂಜಾಗ್ರತಾ ಕ್ರಮ ವಹಿಸಿದ್ದಾರೆ. ಪರೀಕ್ಷಾ ಕೇಂದ್ರದ ಒಳಗೆ ಮೊಬೈಲ್, ವಿದ್ಯುನ್ಮಾನ ಉಪಕರಣಗಳನ್ನು ನಿಷೇಧಿಸಲಾಗಿದೆ.

ಉಚಿತ ಸಾರಿಗೆ ಸೌಲಭ್ಯ: ವಿದ್ಯಾರ್ಥಿಗಳು ಯಾವುದೇ ತೊಂದರೆಯಿಲ್ಲದೆ ಪರೀಕ್ಷಾ ಕೇಂದ್ರಗಳನ್ನು ತಲುಪುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಪರೀಕ್ಷಾ ಅವಧಿಯಲ್ಲಿ ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಹಾಲ್ ಟಿಕೆಟ್‌ನ್ನು ತೋರಿಸಿ ಉಚಿತವಾಗಿ ಪ್ರಯಾಣಿಸಬಹುದು.

ಪರೀಕ್ಷಾ ಕೇಂದ್ರಗಳಲ್ಲಿ ಭದ್ರತೆ ಕ್ರಮ

ರಾಜ್ಯಾದ್ಯಂತ ಫೆ. 28 ರಿಂದ ದ್ವಿತೀಯ ಪಿಯುಸಿ ಪರೀಕ್ಷೆಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿಯುವವರೆಗೆ (ಏ.2) ಪರೀಕ್ಷಾ ಕೇಂದ್ರಗಳನ್ನು ಸುರಕ್ಷಿತಗೊಳಿಸುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿ ನಿಯೋಜಿಸಲಾಗಿದೆ. ಪರೀಕ್ಷಾ ಕೇಂದ್ರಗಳ ಭದ್ರತೆಯನ್ನು ಹೆಚ್ಚಿಸಲಾಗಿದ್ದು, ಎಲ್ಲ ಪರೀಕ್ಷಾ ಕೇಂದ್ರಗಳ ಸುತ್ತಮುತ್ತ ಸೆಕ್ಷನ್ 163 ಬಿಎನ್‌ಎಸ್‌ಎಸ್ ಜಾರಿಗೊಳಿಸಿ, 200 ಮೀ. ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಯಾರೂ ಸೇರದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಇಲಾಖೆ ಮಹಾನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪರೀಕ್ಷೆ ಬರೆಯುವಾಗ ಯಾವುದೇ ರೀತಿಯಲ್ಲಿ ಭಯಪಡದೆ ಧೈರ್ಯದಿಂದ ಪರೀಕ್ಷೆ ಎದುರಿಸಿ. ಸಾಮಾಜಿಕ ಜಾಲತಾಣಗಳಲ್ಲಿ ಬಂದ ವದಂತಿಗಳಿಗೆ ಕಿವಿಗೊಡಬೇಡಿ. ಅಂತಹವರಿಗೆ ಇಲಾಖೆಯಿಂದ ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದು. ಮಕ್ಕಳಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಶಿಕ್ಷಣ ಇಲಾಖೆ ಸಿದ್ಧವಿದೆ.

■ **ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವ**

ವಾರ್ಷಿಕ ಸಮಾರಾಧನೆ

ಕಿನ್ನಿಗೋಳಿ: ಬೆಮ್ಮೆರವಾಡಿ ಪಂಜ ಮೊಗಪಾಡಿ ಶ್ರೀ ನಾಗಬ್ರಹ್ಮ ಸ್ಥಾನದ ವಾರ್ಷಿಕ ಸಮಾರಾಧನೆ, ಶ್ರೀ ನಾಗದೇವರಿಗೆ ಸಾಮೂಹಿಕ ತಂಬಿಲ, ಆಶ್ಲೇಷ ಪೂಜೆ, ಮಹಾ ಪೂಜೆ, ಪರಿವಾರ ದೈವಗಳಿಗೆ ಚೌತಿ ಹಬ್ಬ ಫೆ. 28 ಮತ್ತು ಮಾ 1 ರಂದು ನಡೆಯಲಿದೆ. ಫೆ. 28 ರಂದು ಸಂಜೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು, ಮಾ. 1 ರಂದು ಬೆಳಿಗ್ಗೆಯಿಂದ ಭಜನೆ, ಅತ್ತೂರು ಬೈಲು ವೆಂಕಟರಾಜ ಉಡುಪ ಅವರ ನೇತೃತ್ವದಲ್ಲಿ ಶ್ರೀನಾಗದೇವರಿಗೆ ಸಾಮೂಹಿಕ ನಾಗತಂಬಿಲ, ಆಶ್ಲೇಷ ಪೂಜೆ, ಮಧ್ಯಾಹ್ನ ನವಕ ಪ್ರಧಾನ ಕಲಶಾಭಿಷೇಕ, ಅನ್ನಸಂತರ್ಪಣೆ, ಪರಿವಾರ ದೈವಗಳಿಗೆ ಕುರಿ ತಂಬಿಲ ನಡೆಯಲಿದೆ ಎಂದು ಪ್ರಕಟನೆ ತಿಳಿಸಿದೆ.

ಪುತ್ತೂರು ಮಾರುಕಟ್ಟೆ ಧಾರಣೆ

27-02-2026
ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 480
ಚೋಲ್ ಅಡಿಕೆ	505 - 535
ಡಬಲ್ ಚೋಲ್	505 - 535
ಹೊಸ ಪಟೋರ	365 - 415
ಹಳೆ ಪಟೋರ	400 - 430
ಹೊಸ ಉಳ್ಳಿ	115 - 300
ಹಳೆ ಉಳ್ಳಿ	105 - 305
ಹೊಸ ಕೋಕಾ	330 - 350
ಹಳೆ ಕೋಕಾ	355 - 375
ಹೊಸ ಕರಿಗೋಟು	240 - 270
ಹಳೆ ಕರಿಗೋಟು	240 - 270
ಹಸಿ ಕೊಕ್ಕೋ	80 - 110
ಒಣ ಕೊಕ್ಕೋ	350 - 380

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	215.50
ಆರ್‌ಎಸ್‌ಎಸ್ 2	197.00
ಸ್ಕ್ರಾಪ್ 1	138.00
ಸ್ಕ್ರಾಪ್ 2	130.00

ಮಾನ್ಯ ಪುತ್ತೂರು ಹಿರಿಯ ಸಿವಿಲ್ ಜಡ್ಜ್ ಮತ್ತು ಎಸಿಜೆಯಂ ಇವರ ನ್ಯಾಯಾಲಯದಲ್ಲಿ

ಕ್ರಿ. ಮಿಸ್. ಕೇಸ್. ನಂ. 27/2026

ಇವರೊಳಗೆ,
ಮೆಗ್ದಲಿನ್ ಡಿ'ಮೆಲ್ಲೊ
ಕೋಂ. ಜಾನ್ ಬ್ಯಾಪ್ಟಿಸ್ಟ್ ಡಿ'ಮೆಲೊ ಮುಂಡೆಗುರಿ, ಕುಂಪನ ಮಜಲುಮನೆ,ಪುದು ಗ್ರಾಮ ಮತ್ತು ಅಂಚೆ, ಬಂಟ್ವಾಳ ತಾಲೂಕು ...ಅರ್ಜಿದಾರಳು

ಮತ್ತು

ತಹಶೀಲ್ದಾರರು ಪುತ್ತೂರು
(ಜನನ ಮತ್ತು ಮರಣ ನೋಂದಣಾಧಿಕಾರಿಗಳು) ...ಪ್ರತಿವಾದಿ

ಸಾರ್ವಜನಿಕ ಪ್ರಕಟಣೆ

ಮೇಲಿನ ಪ್ರಕರಣದಲ್ಲಿ ಅರ್ಜಿದಾರರು ಅವರ ತಂದೆ **ಶ್ರೀ ಜೋಸೆಫ್ ಸಿಕ್ವೇರ** ಎಂಬವರು ದಿನಾಂಕ 16/02/1966 ರಂದು ಪುತ್ತೂರು ತಾಲೂಕು ಕಬಕ ಗ್ರಾಮದಲ್ಲಿ ಮೃತಪಟ್ಟಿರುವುದಾಗಿಯೂ, ಈ ಬಾಬ್ತು ಅರ್ಜಿದಾರರು ಪುತ್ತೂರು ತಹಶೀಲ್ದಾರರ ಕಚೇರಿಯ ಮರಣ ನೋಂದಣಿ ವಹಿಯಲ್ಲಿ ದಾಖಲೆ ಇಲ್ಲದಿರುವುದರಿಂದ ಸದ್ರಿ ಕಚೇರಿಯಿಂದ ಅಲಭ್ಯ ಪ್ರಮಾಣಪತ್ರ ಪಡಕೊಂಡು ಮಾನ್ಯ ನ್ಯಾಯಾಲಯಕ್ಕೆ ಈ ಮೇಲಿನಂತೆ ಜನನ ಮರಣ ನೋಂದಣಿ ಕಾಯ್ದೆ ಕಲಂ 132 ಪ್ರಕಾರ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಯಾರಿಗಾದರೂ ಆಕ್ಷೇಪಗಳಿದ್ದರೆ ಮಾನ್ಯ ನ್ಯಾಯಾಲಯಕ್ಕೆ ದಿನಾಂಕ 09- 04 -2026 ರಂದು ಬೆಳಿಗ್ಗೆ 11 ಗಂಟೆಗೆ ಖುದ್ದು ಅಥವಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಮಾನ್ಯ ಪುತ್ತೂರು ಹಿರಿಯ ಸಿವಿಲ್ ಜಡ್ಜ್ ಮತ್ತು ಎ ಸಿ ಜೆ ಯಂ ಇವರ ನ್ಯಾಯಾಲಯದಲ್ಲಿ, ಪುತ್ತೂರು, ದ.ಕ
ಸಹಿ/-ಅರ್ಜಿದಾರರ ಪರ ವಕೀಲರು

BEFORE THE DISTRICT CONSUMER REDRESSAL FORUM AT MANGALORE D.K
CONSUMER DISPUTE NO. 338/2025

Between:
Umesha D.M., S/o. Monappa Gowda, Residing at 1-73 Amadka Derane House, Shiribagilu, Kadaba Taluk, Shiribagilu, D.K.
...Complainant

And

1. Authorised signatory, Raja Ganesh Vahan Private Lmt., Sy. No. 3-25/17 & 3-25/18, Mangaluru- Bengaluru, Highway Near Kannur, Old Check Post Mangaluru, D.K-575007
2. Managing Director, Citroen India, Adhigattur Village, Kadambthur, P.O., Tiruvallur, Tamil Nadu-631203
...Opposite Parties

PUBLIC NOTICE

Whereas the Complainant has filed a case to this Forum against Opposite Parties regarding compensation for deficiency in service of Citron car against Opposite Parties. The above petition stands posted to 10th day of April 2026 for hearing at 10.30 A.M before this court. Persons desiring to oppose the same may appear and contest on the said date and time, failing which the matter will be heard and decided exparte.

Given under my hand and the seal of the Forum, this 27th day of February 2026

By Order of the Court
Sd/- Asst. Registrar Cum Asst. Administrative Officer
D. K. Dist., Commission, Mangaluru
Sd/- Harish Kumar Balakka
Advocate for Complainant

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಕೆಕೆಆರ್‌ಡಿಬಿ/2025-26/2051 ದಿನಾಂಕ: 26.02.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW 3

(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) 2ನೇ ಕರೆ

1) ಕಾಮಗಾರಿಗಳ ವಿವರ.: Pck. No.YDG-YDG-01-2025-26 (4 Worsk) (1)ಯಾದಗಿರಿ ತಾಲ್ಲೂಕಿನ ಗೌಡಗೇರಾ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ. (2) ಗುರುಮಿಠಕಲ್ ತಾಲ್ಲೂಕಿನ ಹೊನಗೇರಾ ಗ್ರಾಮದ ಅಂಗನಾವಡಿ-03 ಕಟ್ಟಡ ನಿರ್ಮಾಣ. (3) ಗುರುಮಿಠಕಲ್ ತಾಲ್ಲೂಕಿನ ಶಿವಪೂರ ಗ್ರಾಮದ ಅಂಗನವಾಡಿ-01 ಕಟ್ಟಡ ನಿರ್ಮಾಣ.(4) ಯಾದಗಿರಿ ತಾಲ್ಲೂಕಿನ ಕೌಳೂರು ಗ್ರಾಮದ ಅಂಗನವಾಡಿ-03 ಕಟ್ಟಡ ನಿರ್ಮಾಣ. RDPR/2025-26/BD/WORK_INDENT24509/CALL-2 CAT-I Bidders Only 2) ಲೆಕ್ಕ ಶೀರ್ಷಿಕೆ :2025-26ನೇ ಕೆ.ಕೆ.ಆರ್.ಡಿ.ಬಿ. ಯೋಜನೆ 3) ಟೆಂಡರಿಗಿಟ್ಟ ಅಂದಾಜು ಮೊತ್ತ: ಕನಿಷ್ಠ ಮತ್ತು ಗರಿಷ್ಠ ರೂ. 64.00 ಲಕ್ಷ 4) ಗುತ್ತಿಗೆದಾರರ ದರ್ಜೆ: 3ನೇ ದರ್ಜೆ ಮೇಲ್ಪಟ್ಟು 5) ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ: 27.02.2026 ರಿಂದ 07.03.2026 ಸಾಯಂಕಾಲ 4:00 ಗಂಟೆವರೆಗೆ 6) ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ: ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) 7) ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ: 07.03.2026 ಸಾಯಂಕಾಲ 4:00 ಗಂಟೆವರೆಗೆ 8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ಡ್ (ಕೆ.ಡಬ್ಲ್ಯೂ- 3): 09.03.2026 ಬೆಳಿಗ್ಗೆ 11:00 ನಂತರ 9) ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ಡ್ (ಕೆ.ಡಬ್ಲ್ಯೂ- 3): 13.03.2026 ಬೆಳಿಗ್ಗೆ 11:00 ನಂತರ 10) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ): ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 11) ಅಂತರಜಾಲ ತಾಣದ ವಿಳಾಸ:https://kppp.karnataka.gov.in

ಸೂಚನೆ :- ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/- ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ವಾ.ಸಾ.ಸಂ.ಇ/ಯಾದಗಿರ/556/ಕೆ.ಎಸ್.ಎಂ.ಸಿ.&ಎ/2025-26

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ
ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ: ಪಂರಾ.ಇಂ/ಕಾ/ಪಿಬಿ-1/2025-26/53 ದಿ: 25.02.2026

ಟೆಂಡರ್ ಪ್ರಕಟಣೆ-53/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ವಿವಿಧ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ **Standard Tender Document** ನ **K.W-1, 2** ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) **2022-23**ನೇ ಸಾಲಿನ ರಾಜ್ಯ ವಲಯ ಮುಂದುವರೆದ ವಿವೇಕ ಯೋಜನೆಯಡಿ ಹೊನ್ನಾವರ ತಾಲೂಕಿನ ಕಾಸರಕೋಡ ಪಂ.ದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉರ್ದು ಹಿರೇಮಠ ಒಂದು ಕೊಠಡಿ ನಿರ್ಮಾಣ. **RDPR/2025-26/BD/WORK_INDENT24073,** ಅಂದಾಜು ಮೊತ್ತ: ರೂ. **14.50** ಲಕ್ಷ, ಮುಂಗಡ ಠೇವಣಿ: ರೂ. **36,250.00**, ಕಾಲಮಿತಿ (ಮಳೆಗಾಲ ಸಹಿತ): **06** ತಿಂಗಳು

(ಮೀಸಲಾತಿ: ಪರಿಶಿಷ್ಟ ಪಂಗಡ) (2) **2024-25**ನೇ ಸಾಲಿನ ಸರಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ಥಿ ಅನುದಾನದಡಿ ಕುಮಟಾ ತಾಲೂಕಿನ ಸರಕಾರಿ ಬೆಣ್ಣೆ ಪದವಿಪೂರ್ವ ಕಾಲೇಜು ನೆಲ್ಲಿಕೇರಿ ಕೊಠಡಿ ದುರಸ್ಥಿ. **RDPR/2025-26/BD/WORK_INDENT25186,** ಅಂದಾಜು ಮೊತ್ತ: ರೂ. **27.00** ಲಕ್ಷ, ಮುಂಗಡ ಠೇವಣಿ: ರೂ. **27,000.00**, ಕಾಲಮಿತಿ (ಮಳೆಗಾಲ ಸಹಿತ): **06** ತಿಂಗಳು

(ಮೀಸಲಾತಿ: ಪರಿಶಿಷ್ಟ ಜಾತಿ) (3) **2024-25**ನೇ ಸಾಲಿನ ಸರಕಾರಿ ಪದವಿ ಪೂರ್ವ ಕಾಲೇಜುಗಳ ತರಗತಿ ಕೊಠಡಿಗಳ ದುರಸ್ಥಿ ಅನುದಾನದಡಿ ಕುಮಟಾ ತಾಲೂಕಿನ ಸರಕಾರಿ ಪದವಿಪೂರ್ವ ಕಾಲೇಜು ಬಾಡ ಕಟ್ಟಡ ದುರಸ್ಥಿ. **RDPR/2025-26/RD/WORK_INDENT25101,** ಅಂದಾಜು ಮೊತ್ತ: ರೂ. **16.00** ಲಕ್ಷ, ಮುಂಗಡ ಠೇವಣಿ: ರೂ. **20,000.00**, ಕಾಲಮಿತಿ (ಮಳೆಗಾಲ ಸಹಿತ): **05** ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು **Technical Bid** ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: **13.03.2026** ರ ಮದ್ಯಾಹ್ನ **16.30** ಘಂಟೆವರೆಗೆ (2) ಕಾಮಗಾರಿಯ **Technical Bid**ನ್ನು ತೆರೆಯುವ ದಿನಾಂಕ: **16.03.2026** ಮದ್ಯಾಹ್ನ **16.31** ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1159/25-26 dt. 27.02.2026

ಕರ್ನಾಟಕ ಸರಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ
ದೂರವಾಣಿ : 08472 -220196, midnglb@rediffmail.com / midnglb1@gmail.com

ಐಎಫ್‌ಟಿ. ನಂ: ಕಾನಿಅ/ಸನೀಅಅವಿ/ಕ/ಯೋಶಾ-4/2025-26/5435 ದಿನಾಂಕ: 25-02-2026

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1, 2&4) ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 4702-ಅಣೆಕಟ್ಟು, ಪಿಕಪ್, 4702-ಏತ ನೀರಾವರಿ ಯೋಜನೆ-ಪ್ರಧಾನ ಕಾಮಗಾರಿಗಳು, 2702 ವಾರ್ಷಿಕ ನಿರ್ವಹಣೆ, ವಿಶೇಷ ಘಟಕ ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: ಗರಿಷ್ಠ ರೂ. **121,92,140.50** ಕನಿಷ್ಠ ರೂ. **3,43,481.25,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಮೇಲ್ಪಟ್ಟು (ಬಿಡ್‌ನಲ್ಲಿ ಇರುವಂತೆ), 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ. ಪೋರ್ಟಲ್‌ನಂತೆ ಇ.ಎಂ.ಡಿ. ಮೊತ್ತ ಗರಿಷ್ಠ ರೂ. 2,00,000.00 ಕನಿಷ್ಠ ರೂ. 4,300.00 5) ಪ್ರಿ ಬಿಡ್ ಮೀಟಿಂಗ್ ದಿನಾಂಕ: **02-03-2026 ಸಮಯ 11-00ರ ವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ: **05-03-2026 ಸಮಯ 11-00ರ ವರೆಗೆ,** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ: **06-03-2026 ಸಮಯ 17-30ರ ವರೆಗೆ,** 8) ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **07-03-2026 ಸಮಯ 17-30ರ ವರೆಗೆ,** 9) ಫೈನಾನ್ಸಿಯಲ್ ಬಿಡ್ ತೆರೆಯುವ ದಿನಾಂಕ: **09-03-2026 ಸಮಯ 17-30ರ ವರೆಗೆ** 10) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ: www. kppp.Karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/1129/ಕೆ.ಎಸ್.ಎಂ.ಸಿ.&ಎ/2025-26

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು
Raichur Institute of Medical Sciences, Raichur
(ಸರ್ಕಾರದ ಸ್ವಾಯತ್ತ ಸಂಸ್ಥೆ) ಹೈದ್ರಾಬಾದ್ ರೋಡ್, ರಾಯಚೂರು -584102
Phone /Fax-08532-238488/89
www.rims-raichur.karnataka.gov.in info@rims-raichur.com

ಸಂ. ರಿಮ್ಸ್/ಸರಬರಾಜು/ಟೆಂಡರ್/2025-26 ದಿನಾಂಕ:26.02.2026

ಇ-ಟೆಂಡರ್ ಪ್ರಕಟಣೆ

2024-25ನೇ ಸಾಲಿನ ಕ.ಕ.ಪ್ರ.ಅ. ಮಂಡಳಿಯ ಮೈಕ್ರೋ ಯೋಜನೆಯಡಿ ದೇವದುರ್ಗ ತಾಲೂಕಿನ ಕ್ರಿಯಾ ಯೋಜನೆಯಲ್ಲಿ ಮಂಜೂರಾದ ಕಾಮಗಾರಿಗಳ ಅನುಷ್ಠಾನ ಮಾಡಲು ಅರ್ಹ ಟೆಂಡರ್‌ದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ	ಟೆಂಡರ್‌ನ ವಿವರ	ಟೆಂಡರ್‌ನ ಸಂಖ್ಯೆ	ಅಂದಾಜು ವೆಚ್ಚ (ಲಕ್ಷಗಳಲ್ಲಿ)
1	ದೇವದುರ್ಗ ಸಾರ್ವಜನಿಕ ತಾಲೂಕು ಆಸ್ಪತ್ರೆಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಹಾಗೂ ಅಳವಡಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/15/2025-26 DME/2025-26/IND2112	130.00
2	ದೇವದುರ್ಗ ತಾಲೂಕಿನ ಸಮುದಾಯ ಆರೋಗ್ಯ ಕೇಂದ್ರ ಜಾಲಹಳ್ಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/16/2025-26 DME/2025-26/IND2113	30.00
3	ದೇವದುರ್ಗ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ, ಗಾಣದಾಳ ಮತ್ತು ರಾಮದುರ್ಗ ಗಳಿಗೆ ಅವಶ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಪೀಠೋಪಕರಣಗಳನ್ನು ಪೀಠೋಪಕರಣಗಳನ್ನು ಸರಬರಾಜು ಮಾಡಿಸುವುದು ಮತ್ತು ಅಳವಡಿಸಿಕೆ ಮಾಡಿಸುವ ಕುರಿತು	ರಿಮ್ಸ್/ಡಿಹೆಚ್‌ಓ/ ಸರಬರಾಜು/ ಟೆಂಡರ್/ ಉಪಕರಣ/17/2025-26 DME/2025-26/IND2114	40.00

1) ಟೆಂಡರ್‌ಗಳನ್ನು ದಿನಾಂಕ : 27.02.2026 ರಿಂದ ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಡೌನ್ ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಫಾರ್ಮ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 13.03.2026 ರ ಸಾಯಂಕಾಲ 5.00 ಗಂಟೆಯ ವರೆಗೆ 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 16.03.2026 ರ ಬೆಳಿಗ್ಗೆ 11.30 ಗಂಟೆಗೆ

ಆಸಕ್ತಿವುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಗಾಗಿ ಮತ್ತು ಟೆಂಡರ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ಕೋಶದ ವೆಬ್‌ಸೈಟ್ https://kppp.karnataka.gov.in ನಿಂದ ಡೌನ್ಲೋಡ್ ಮಾಡಿಕೊಳ್ಳಬಹುದು.

ಸಹಿ/- ನಿರ್ದೇಶಕರು
DIP/RCR/732/KSMC&A/735/2025-26 ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು

ಮಂಗಳೂರು ಮಹಾನಗರಪಾಲಿಕೆ

DMA/2025-26/WORK INDENT NO.55608, 55636, 55635, 55503, 55533, 55627, 55577, 55566, 55495, 55518, 55611, 55632, 55637, 55492, 55502, 55607, 55618 ದಿನಾಂಕ: 26.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆಯ ಸಾಮಾನ್ಯ ನಿಧಿಯಲ್ಲಿ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಈ ಕಛೇರಿ ಟೆಂಡರ್ ಸಂಖ್ಯೆ:DMA/2025-26/WORK INDENT NO. **55608, 55636, 55635, 55503, 55533, 55627, 55577, 55566, 55495, 55518, 55611, 55632, 55637, 55492, 55502, 55607, 55618** ರಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. 17 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 187.94 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **11.03.2026** ಅಪರಾಹ್ನ **4.00** ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ kppp.karnataka.gov.in ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಮಹಾನಗರಪಾಲಿಕೆ, ಮಂಗಳೂರು

DIPR/DK/MPL/1685/25-26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಚಿತ್ರದುರ್ಗ.
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ.
ದೂ: ಸಂ: 08194-235464 ಇ-ಮೇಲ್: dhochitradurga@gmail.com

ಸಂ:ಜಿಆಕುಕಅ/ಚಿ/ಸರಬ/ಪಥ್ಯಹಾರ/03/2025-26 ದಿನಾಂಕ:-25-02-2026

ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿನ ಅವಧಿಗೆಜಿಲ್ಲಾಆರೋಗ್ಯ ಮತ್ತು ಕು.ಕ.ಅಧಿಕಾರಿಗಳು, ಚಿತ್ರದುರ್ಗ ಜಿಲ್ಲೆಯ ಅಧೀನ ಎರಡು ಸಾರ್ವಜನಿಕ ಆಸ್ಪತ್ರೆಗಳು (ಹೊಸದುರ್ಗ, ಮೊಳಕಾಲ್ಮೂರು) / ಹನ್ನೊಂದು ಸಮುದಾಯ ಆರೋಗ್ಯ ಕೇಂದ್ರಗಳಿಗೆ ಅವಶ್ಯವಿರುವ ಪಥ್ಯಾಹಾರ ಹಾಗೂ ಉತ್ತಮ ದರ್ಜೆ ಬ್ರೆಡ್‌ಪೂರೈಕೆಗಾಗಿ ಇ-ಟೆಂಡರ್ ಕರೆಯಲಾಗಿರುತ್ತದೆ. ಕರ್ನಾಟಕ ಪಬ್ಲಿಕ್ ಪ್ರಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್‌ನ್ನು ದಿನಾಂಕ:-25-02-2026 ರಿಂದ ದಿನಾಂಕ:-27-03-2026 ರ ಸಮಯ ಸಂಜೆ 5=00 ಗಂಟೆಯವರೆಗೆ ಅಪ್ ಲೋಡ್ ಮಾಡಬಹುದು. ಟೆಂಡರ್‌ನ ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:-30-03-2026 ರ ಬೆಳಿಗ್ಗೆ 11-00 ಗಂಟೆಗೆ.

ಟೆಂಡರ್‌ನ ಪ್ರತಿಯೊಂದು ಷರತ್ತು ಮತ್ತು ನಿಬಂಧನೆಗಳನ್ನು http://kppp.karnataka.gov.in ಅಂತರ್‌ಜಾಲದಲ್ಲಿ ಪಡೆದು ಕೊಳ್ಳಬಹುದು. ಹೆಚ್ಚಿನ ವಿವರಗಳಿಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಚಿತ್ರದುರ್ಗ. ಇಲ್ಲಿಕಚೇರಿ ವೇಳೆಯಲ್ಲಿ ಸಂಪರ್ಕಿಸುವುದು.

DIPR/CTA/KSMCA/709/2025-26 ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ಕರ್ನಾಟಕ ಸರ್ಕಾರ
ಮುಖ್ಯ ವೈದ್ಯಾಧಿಕಾರಿಗಳ ಕಚೇರಿ, ಭದ್ರಾವತಿ
Ph: Email: cmobdvt@gmail.com Phone- 08282-298133

ಸಂ/ಸಾಆಭ/ಹೊಗು/1250/2025-26 ದಿ: 27.02.2026

ವಿಷಯ :- 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್-ಡಿ ಮತ್ತು ನಾನ್-ಕ್ಲಿನಿಕಲ್ ಸೇವೆ ಪಡೆಯುವ ಕುರಿತು ಇ-ಟೆಂಡರ್ ಆಹ್ವಾನ.

ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ ಇಲ್ಲಿಗೆ 2026-27 ನೇ ಸಾಲಿಗೆ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್-ಡಿ ಮತ್ತು ನಾನ್-ಕ್ಲಿನಿಕಲ್ ಸೇವೆ ಪಡೆಯುವ ಕುರಿತು, ಕರ್ನಾಟಕ ಪಾರದರ್ಶಕ ಅಧಿನಿಯಮ 1999 ಮತ್ತು ನಿಯಮಗಳು 2000 ರಂತೆ ದ್ವಿ-ಲಕೋಟೆ ಪದ್ಧತಿಯ (Two Cover system) ಪ್ರಕಾರ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ, ಇ.ಎಂ.ಡಿ, ಟೆಂಡರ್ ಷರತ್ತು ಮತ್ತು ನಿಬಂಧನೆಗಳ ಬಗ್ಗೆ ಮತ್ತು ಹೆಚ್ಚಿನ ಮಾಹಿತಿಗಾಗಿ https:://kppp.karnataka.gov.in ವೆಬ್‌ಸೈಟ್‌ನಲ್ಲಿ ನೋಡಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಚೇರಿ ಕಾರ್ಯಾಲಯದ ಸಮಯದಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್‌ನ ಅಂದಾಜು ಮೊತ್ತರೂ. 81.00 ಲಕ್ಷಗಳು (ರೂ ಎಂಭತ್ತೊಂದು ಲಕ್ಷ ಮಾತ್ರ

ಸಹಿ/- ಮುಖ್ಯ ವೈದ್ಯಾಧಿಕಾರಿಗಳು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಭದ್ರಾವತಿ

ವಾ.ಸಾ.ಸಂ.ಇ/ಕೆ.ಎಸ್.ಎಂ.ಸಿ.ಎ/ಶಿ/25-26/149/02/1919

ಕರ್ನಾಟಕ ಸರ್ಕಾರ
(ನಗರಾಭಿವೃದ್ಧಿ ಇಲಾಖೆ)
ವಿಜಯಪುರ ಮಹಾನಗರಪಾಲಿಕೆ, ವಿಜಯಪುರ
ಕೇಂದ್ರ ಕಚೇರಿ. ಬಾಗಲಕೋಟೆ ರಸ್ತೆ, ಜಲನಗರ-586109
ದೂರವಾಣಿ : 08352-278536, 222474
ವೆಬ್‌ಸೈಟ್: www.vijayapuracity.mrc.gov.in

ಸಂ.ಮನಪಾವಿ/ಕಂ.ವಿ/2025-26/5401 ದಿನಾಂಕ:27.02.2026

ಸಂತೆ ಬಜಾರ್ ಹಾಗೂ ಮಳಿಗೆಗಳ ಜಾಹೀರ ಲಿಲಾವು ಮುಂದೂಡಿದ ಪ್ರಕಟಣೆ

ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ, ಸನ್ 2026-27 ನೇ ಸಾಲಿನ ವಿಜಯಪುರ ಮಹಾನಗರ ಪಾಲಿಕೆ, ಒಡೆತನದಲ್ಲಿ ಬರುವ(01) ಸಂತೆ ಮತ್ತುಸಂಡೆ ಬಜಾರ, ಉಪ್ಪಲಿ ಬುರುಜ ಹತ್ತಿರಇರುವ ಸಂತೆ ಬಜಾರಿನರಸ್ತೆ ಅಕ್ಕ ಪಕ್ಕ ಬೀದಿಯಲ್ಲಿ ಕಾಯಿಪಲ್ಲೆ ಮತ್ತು ಇನ್ನಿತರೆ ವ್ಯಾಪಾರ ಮಾಡುವ ವ್ಯಾಪಾರಸ್ಥರಿಂದ ಫೀ ವಸೂಲಿ ಮಾಡುವದು ಮತ್ತು (02) ಕೋಳಿ ಬಜಾರಿನ ರಸ್ತೆ ಅಕ್ಕ ಪಕ್ಕ ಬೀದಿಯಲ್ಲಿ ಕೋಳಿ ವ್ಯಾಪಾರ ಮಾಡುವ ವ್ಯಾಪಾರಸ್ಥರಿಂದ ಫೀ ವಸೂಲಿ ಮಾಡುವ ಬಗ್ಗೆ ದಿನಾಂಕ: **05.03.2026** ರಂದು ಜಾಹೀರ ಲಿಲಾವು ಕರೆಯಲಾಗಿತ್ತು. ಸದರಿ ಲಿಲಾವನ್ನು ಕಾರಣಾಂತರಗಳಿಂದ ಮುಂದೂಡಿ **ದಿನಾಂಕ: 10.03.2026** ರಂದು ಜರುಗಿಸಲಾವುದು. ಅರ್ಜಿ ಸಲ್ಲಿಸುವ ದಿನಾಂಕ: **07.03.2026** ರ 05:30 ಘಂಟೆ ವರೆಗೆ ವಿಸ್ತರಿಸಲಾಗಿದೆ.

ಬಬಲೇಶ್ವರ ನಾಕಾ ಹತ್ತಿರ ಇರುವ ಮಳಿಗೆಗಳನ್ನು ಪರಿಶಿಷ್ಟ ಜಾತಿ ಜನರಿಗೆ ಜಾಹೀರ ಲಿಲಾವಿನ ಮುಖಾಂತರ ಹಂಚಿಕೆ ಮಾಡಲು ದಿನಾಂಕ: **07.03.2026** ರಂದು ಲಿಲಾವು ಕರೆಯಲಾಗಿತ್ತು. ಸದರಿ ಮಳಿಗೆಗಳ ಲಿಲಾವನ್ನು ಕಾರಣಾಂತರಗಳಿಂದ ಮುಂದೂಡಿ ದಿನಾಂಕ: **17.03.2026** ರಂದು ಜರುಗಿಸಲಾವುದು. ಅರ್ಜಿ ಸಲ್ಲಿಸುವ ದಿನಾಂಕ: **13.03.2026** ರ 05:30 ಘಂಟೆ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿಈ ಕಾರ್ಯಾಲಯಕ್ಕೆ ಸಂಪರ್ಕಿಸಲು ಈ ಪ್ರಕಟಣೆ ಮೂಲಕ ತಿಳಿಸಲಾಗಿದೆ.

ಸಹಿ/- ಆಯುಕ್ತರು, ಮಹಾನಗರ ಪಾಲಿಕೆ, ವಿಜಯಪುರ
ಸಹಿ/- ಮಹಾಪೌರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/763/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ
ಗದಗ-ಬೆಟಗೇರಿ ವ್ಯಾಪಾರ ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ
(ನಗರಾಭಿವೃದ್ಧಿ ಇಲಾಖೆ)
ಜಿಲ್ಲಾಧಿಕಾರಿಗಳ ಕಾರ್ಯಾಲಯ (ಜಿಲ್ಲಾಆಡಳಿತ ಭವನ)
PH No. 08372-231877 ka.gadag.dudc@gmail.com. deo.gadag@gmail.com

ಸಂಖ್ಯೆ: ಗಬೆವ್ಯಾಸಂ&ವಪ್ರಾ/ವಹಿ-15/2025-26 ದಿನಾಂಕ : 27-02-2026

ಟೆಂಡರ್ ಪ್ರಕಟಣೆ

ಗದಗ-ಬೆಟಗೇರಿ ವ್ಯವಹಾರ, ಸಂಸ್ಕೃತಿ ಮತ್ತು ಪ್ರದರ್ಶನ ಪ್ರಾಧಿಕಾರದ ಆಯುಕ್ತರು, ಕರ್ನಾಟಕ ಸರ್ಕಾರದ ಮೂಲಸೌಕರ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡಿನ ಜಲ ಸಾರಿಗೆ ಇಲಾಖೆ **(IDP&IWTD)** ನಿಂದ ಎಂಪನೇಲ್ ಮಾಡಲಾದ ಸಲಹೆಗಾರರಿಂದ **RFP** ದಾಖಲೆಗಳನ್ನು ಬಳಸಿಕೊಂಡು ಪೂರ್ವ-ಅರ್ಹ ಬಿಡ್ಡರ್‌ಗಳ ಟೆಂಡರ್‌ಅನ್ನು ಆಹ್ವಾನಿಸುತ್ತಾರೆ. ದಿನಾಂಕ : 01.06.2023 ರಂದು ಅಧಿಸೂಚನೆ ಸಂಖ್ಯೆ. **IDP&IWTD 94 ITS 2022,** ಕರ್ನಾಟಕದ ಗದಗ ಜಿಲ್ಲೆಯ ಗದಗ-ಬೆಟಗೇರಿಯಲ್ಲಿ ವ್ಯಾಪಾರ ಕೇಂದ್ರದ ಅಭಿವೃದ್ಧಿಗಾಗಿ ವಹಿವಾಟು ಸಲಹಾ ಸೇವೆಗಳನ್ನು ಒದಗಿಸಲು ಸಲಹೆಗಾರರನ್ನು ಆಯ್ಕೆ ಮಾಡಲು **ರೂ. 500** ಕೋಟಿ ಯೋಜನಾ ವೆಚ್ಚ ಮತ್ತು ಸಾಮಾಜಿಕ ಮತ್ತು ವಾಣಿಜ್ಯ ವಲಯ. ಹಾಗೂ ಇಂಡೆಂಟ್ ಸಂಖ್ಯೆ. **GBBCEA/2025-26/SE0001/CALL-2.** ಬಿಡ್ಡರ್‌ಗಳು **www.kppp.karnataka.gov.in**ನಲ್ಲಿ **KPP** ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಡೌನ್‌ಲೋಡ್ ಮಾಡಬಹುದು ಮತ್ತು ಸಲ್ಲಿಸಬಹುದು. ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **26-03-2026** ರಂದು ಸಂಜೆ 5.30 ಗಂಟೆಯವರೆಗೆ ಮತ್ತು ಟೆಂಡರ್‌ಗಳನ್ನು ತೆರೆಯುವ ದಿನಾಂಕ (ಆರ್ಥಿಕ ಬಿಡ್) ದಿನಾಂಕ : **30-03-2026** ರಂದು ಸಂಜೆ 11.00 ಗಂಟೆಯವರೆಗೆ. ಕಾರ್ಯಕ್ರಮಗಳ ಕ್ಯಾಲೆಂಡರ್ ಅನ್ನು ಮುಂದೂಡುವುದು (ಯಾವುದೇ ತಿದ್ದುಪಡಿ/ಅನುಬಂಧಗಳಿದ್ದರೆ) ಕೆಪಿಪಿ ಪೋರ್ಟಲ್ ಮೂಲಕ ಮಾತ್ರ ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/- ಆಯುಕ್ತರು
ಗದಗ-ಬೆಟಗೇರಿ ವ್ಯಾಪಾರ ಸಂಸ್ಕೃತಿ ಮತ್ತು ವಸ್ತು ಪ್ರದರ್ಶನ ಪ್ರಾಧಿಕಾರ ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/683/2025-26

ಸಹಕಾರ ಸಂಘಗಳ ಅಪರ ನಿಬಂಧಕರು (ನಿಯಮ.441)
ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ನ್ಯಾಯಾಲಯದಲ್ಲಿ.
ನಂ.132, 2ನೇ ಮಹಡಿ, ಕೆ.ಹೆಚ್.ರಸ್ತೆ, ಬೆಂಗಳೂರು-560 027

ಪ್ರತಿವಾದಿಗಳು	ವಾದಿ	ದಾವಾ ಮೊತ್ತ
ವ್ಯಾಜ್ಯ ಸಂಖ್ಯೆ.ಎ.ಆರ್.ಡಿ/ಯು.ಬಿ.ಎಫ್/1298/2025-26		
ಪ್ರತಿವಾದಿಗಳು: 1. ಶ್ರೀ ಸಂತೋಷ ಖಾರ್ವಿ ಬಿನ್ ನರಸಿಂಹ ಖಾರ್ವಿ, #7/234, "ಲಕ್ಷ್ಮೀ ನಿವಾಸ", ಕೋಡಿ, ಕುಂದಾಪುರ, ಉಡುಪಿ-576217 2. ಶ್ರೀಮತಿ ಸುನಂದ ಕೋಂ ಸಂತೋಷ ಖಾರ್ವಿ, #7/234, "ಲಕ್ಷ್ಮೀ ನಿವಾಸ", ಕೋಡಿ, ಕುಂದಾಪುರ, ಉಡುಪಿ-576217. 3. ಶ್ರೀ ಅಭಿಷೇಕ್ ಬಿನ್ ಅಶೋಕ್, ಹೌಸ್ ನ.6-82, ಅನ್ನಪೂರ್ಣೇಶ್ವರಿ ನಿಲಯ, ಅರಲಗುಡ್ಡೆ, ಹಳೆಅಳಿವೆ, ಕೋಟೇಶ್ವರ, ಉಡುಪಿ ಜಿಲ್ಲೆ-576222	ವಾದಿ: ಮಹಾಲಕ್ಷ್ಮೀ ಕೋ-ಆಪ್ ಬ್ಯಾಂಕ್ ನಿ., ಉಡುಪಿ. ಇದರ ಸಹಾಯಕ ಪ್ರಧಾನ ವ್ಯವಸ್ಥಾಪಕರು	ದಾವಾ ಮೊತ್ತ: ರೂ. 1,26,292/- ಪ್ರತಿವಾದಿ- 3 ರವರಿಗೆ
ವ್ಯಾಜ್ಯ ಸಂಖ್ಯೆ.ಎ.ಆರ್.ಡಿ/ಯು.ಬಿ.ಎಫ್/1329/2025-26		
ಪ್ರತಿವಾದಿಗಳು: 1. ಶ್ರೀ ರಾಘವೇಂದ್ರ ಖಾರ್ವಿ ಬಿನ್ ನಾಗಪ್ಪ ಖಾರ್ವಿ, #188, "ಸನ್ನಿಧಿ ಕೃಪ", ಖಾರ್ವಿ ಕೇರಿ, ಕಂಚುಗೋಡು, ಗುಜ್ಜಾಡಿ, ಕುಂದಾಪುರ, ಉಡುಪಿ-576247 2. ಶ್ರೀಮತಿ ಪದ್ಮಾವತಿ ಖಾರ್ವಿ ಕೋಂ ರಾಘವೇಂದ್ರ ಖಾರ್ವಿ, #188, "ಸನ್ನಿಧಿ ಕೃಪ", ಖಾರ್ವಿ ಕೇರಿ, ಕಂಚುಗೋಡು, ಗುಜ್ಜಾಡಿ, ಕುಂದಾಪುರ, ಉಡುಪಿ-576247 3. ಶ್ರೀ ಶ್ರೀನಿವಾಸ ಖಾರ್ವಿ ಬಿನ್ ಗೋವಿಂದ ಖಾರ್ವಿ, #10-179, ಗಂಗೊಳ್ಳಿ, ಮಲ್ಯರಬೆಟ್ಟು, ಗಂಗೊಳ್ಳಿ, ಕುಂದಾಪುರ, ಉಡುಪಿ-576216	ವಾದಿ: ಮಹಾಲಕ್ಷ್ಮೀ ಕೋ-ಆಪ್ ಬ್ಯಾಂಕ್ ನಿ., ಉಡುಪಿ. ಇದರ ಸಹಾಯಕ ಪ್ರಧಾನ ವ್ಯವಸ್ಥಾಪಕರು	ದಾವಾ ಮೊತ್ತ: ರೂ. 33,040/- ಪ್ರತಿವಾದಿ- 1 ಮತ್ತು 2 ರವರಿಗೆ
ವ್ಯಾಜ್ಯ ಸಂಖ್ಯೆ.ಎ.ಆರ್.ಡಿ/ಯು.ಬಿ.ಎಫ್/1348/2025-26		
ಪ್ರತಿವಾದಿಗಳು: 1. ಶ್ರೀ ಮೊಹಮ್ಮದ್ ಅಲ್ತಾಫ್ ಉಸ್ಮಾನ್ ಬಿನ್ ಉಸ್ಮಾನ್, #5-19, "ತಸ್ಲೀಂ ಮಂಜಿಲ್" ಬಸ್ತಿಪಡ್ಪು, ಉಳ್ಳಾಲ, ಮಂಗಳೂರು, ದಕ್ಷಿಣ ಕನ್ನಡ-575020 2. ಶ್ರೀ ಅಬ್ದುಲ್ ಅಝೀಝ್ ಬಿನ್ ಉಸ್ಮಾನ್, #5-19, "ತಸ್ಲೀಂ ಮಂಜಿಲ್" ಬಸ್ತಿಪಡ್ಪು, ಉಳ್ಳಾಲ, ಮಂಗಳೂರು, ದಕ್ಷಿಣ ಕನ್ನಡ-575020 3. ಶ್ರೀ ಸಿರಾಜುದ್ದೀನ್ ಅಬ್ದುಲ್ ಖಾದರ್ ಬಿನ್ ಅಬ್ದುಲ್ ಖಾದರ್, #6-35, "ಸಲೀಂ ಮಂಜಿಲ್" ಬಸ್ತಿಪಡ್ಪು, ಉಳ್ಳಾಲ, ಮಂಗಳೂರು, ದಕ್ಷಿಣ ಕನ್ನಡ-575020	ವಾದಿ: ಮಹಾಲಕ್ಷ್ಮೀ ಕೋ-ಆಪ್ ಬ್ಯಾಂಕ್ ನಿ., ಉಡುಪಿ. ಇದರ ಸಹಾಯಕ ಪ್ರಧಾನ ವ್ಯವಸ್ಥಾಪಕರು	ದಾವಾ ಮೊತ್ತ: ರೂ. 1,77,854/- ಪ್ರತಿವಾದಿ- 1 ಮತ್ತು 2 ರವರಿಗೆ
ವ್ಯಾಜ್ಯ ಸಂಖ್ಯೆ.ಎ.ಆರ್.ಡಿ/ಯು.ಬಿ.ಎಫ್/1349/2025-26		
ಪ್ರತಿವಾದಿಗಳು: 1. ಶ್ರೀ ಅಬ್ದುಲ್ ಅಝೀಝ್‌ಬಿನ್ ಉಸ್ಮಾನ್, #5-19, "ತಸ್ಲೀಂ ಮಂಜಿಲ್" ಬಸ್ತಿಪಡ್ಪು, ಉಳ್ಳಾಲ, ಮಂಗಳೂರು, ದಕ್ಷಿಣ ಕನ್ನಡ-575020 2. ಶ್ರೀ ಅಬ್ದುಲ್ಲಾ ಬಿನ್ ಬಾವಾ ಸಾಹೇಬ್, #6-44/1, "ನಸೀಮಾ ಮಂಜಿಲ್" ಬಸ್ತಿಪಡ್ಪು, ಕೋಡಿ ಸೇನೆರೆ ಬೈಲು, ಉಳ್ಳಾಲ, ಮಂಗಳೂರು ದಕ್ಷಿಣ ಕನ್ನಡ-575020 3. ಶ್ರೀ ಮೊಹಮ್ಮದ್ ಅಲ್ತಾಫ್ ಉಸ್ಮಾನ್ ಬಿನ್ ಉಸ್ಮಾನ್, #5-19, "ತಸ್ಲೀಂ ಮಂಜಿಲ್" ಬಸ್ತಿಪಡ್ಪು, ಉಳ್ಳಾಲ, ಮಂಗಳೂರು, ದಕ್ಷಿಣ ಕನ್ನಡ-575020	ವಾದಿ: ಮಹಾಲಕ್ಷ್ಮೀ ಕೋ-ಆಪ್ ಬ್ಯಾಂಕ್ ನಿ., ಉಡುಪಿ. ಇದರ ಸಹಾಯಕ ಪ್ರಧಾನ ವ್ಯವಸ್ಥಾಪಕರು	ದಾವಾ ಮೊತ್ತ: ರೂ. 1,86,462/- ಪ್ರತಿವಾದಿ-1, 2 ಮತ್ತು 3 ರವರಿಗೆ

ಪ್ರತಿವಾದಿಗಳಿಗೆ ದಿನ ಪತ್ರಿಕೆಯ ಪ್ರಕಟಣೆಯ ಮೂಲಕ ನ್ಯಾಯಾಲಯದ ಸಮನ್ಸ್

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 70(1) ರ ಪ್ರಕಾರ ವಾದಿಯು ಪ್ರತಿವಾದಿಗಳ ವಿರುದ್ಧ ಮೇಲೆ ನಮೂದಿಸಿರುವ ಸಾಲದ ಮೊತ್ತದ ವಸೂಲಾತಿಗೆ ಅವಾರ್ಡ ನೀಡಲು ಕೋರಿ ಈ ದಾವೆಯನ್ನು ದಾಖಲಿಸಿರುತ್ತಾರೆ. ಪ್ರತಿವಾದಿಗಳಿಗೆ ಆರ್.ಪಿ.ಎ.ಡಿ. ಮೂಲಕ ನೋಟಿಸ್ ಕಳುಹಿಸಿದ್ದು, ಜಾರಿಯಾಗದೇ ವಾಪಸ್ಸಾಗಿರುತ್ತವೆ. ಆದ್ದರಿಂದ ವಾದಿ ಪ್ರತಿನಿಧಿಯು ದಿನಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ನೋಟಿಸ್ ಜಾರಿ ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಿ; ವಿಚಾರಣೆಯನ್ನು ದಿನಾಂಕ: 05-03-2026 ರಂದು ಬೆಳಿಗ್ಗೆ 11 ಘಂಟೆಗೆ ಸಹಕಾರ ಸಂಘಗಳ ಅಪರ ನಿಬಂಧಕರು (ನಿಯಮ.441) ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು-560027 ಇವರ ನ್ಯಾಯಾಲಯ, ಇಲ್ಲಿ ನಿಗದಿಪಡಿಸಿದ್ದು, ವಿಚಾರಣೆಗೆ ಹಾಜರಾಗಲು ಪ್ರತಿವಾದಿಗಳಿಗೆ ಈ ಮೂಲಕ ತಿಳಿಸಲಾಗಿದೆ. ಈ ದಾವೆಯ ವಿಷಯದಲ್ಲಿ ಅವರ ಪರವಾದ ಲೆಕ್ಕ-ಪತ್ರಗಳನ್ನು/ದಾಖಲೆಗಳನ್ನು ಮತ್ತು ಸಾಕ್ಷಿಗಳನ್ನು ಆ ದಿವಸ ಹಾಜರುಪಡಿಸಲು ತಿಳಿಸಲಾಗಿದೆ. ತಪ್ಪಿದಲ್ಲಿ, ದಾವೆಗಳನ್ನು ಅವರ ಗೈರು ಹಾಜರಿಯಲ್ಲಿಯೇ ವಿಚಾರಣೆ ಮಾಡಿ ಇತ್ಯರ್ಥ ಮಾಡಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ. ದಿನಾಂಕ 24-02-2026ರಂದು ನ್ಯಾಯಾಲಯದ ಮೊಹರಿನೊಂದಿಗೆ ಕೊಡಲ್ಪಟ್ಟಿದೆ.

ಸಹಕಾರ ಸಂಘಗಳ ಅಪರ ನಿಬಂಧಕರು(ನಿ.441)(ಅ.ಪ್ರ)
ಕ.ರಾ.ಸ.ಪ.ಬ್ಯಾಂಕುಗಳ ಮಹಾಮಂಡಳ ನಿ.,ಬೆಂಗಳೂರು
ಇವರ ಆದೇಶದ ಮೇರೆಗೆ
ಸ್ಥಳ: ಬೆಂಗಳೂರು ಅಧಿಕೃತ ಅಧಿಕಾರಿ

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-42) ಡ್ರಾ ಫೆಬ್ರವರಿ 27ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RR 161862 (KOLLAM)

Consolation Prize Rs.5,000/-
RN 161862 RO 161862 RP 161862 RS 161862
RT 161862 RU 161862 RV 161862 RW 161862
RX 161862 RY 161862 RZ 161862

2nd Prize Rs.30,00,000/- [30 Lakhs]
RR 247252 (KOLLAM)

3rd Prize Rs.5,00,000/- [5 Lakhs]
RW 717174 (ATTINGAL)

FOR THE TICKETS ENDING WITH THE FOLLOWING NUMBERS

4th Prize Rs.5,000/-
0717 0876 0994 1317 1585 2118 2310 2318 3639 4583 4585 5093 6554 6599 7648 7713 7846 8895 9210

5th Prize Rs.2,000/-
1189 3010 4621 6364 7372 9010

6th Prize Rs.1,000/-
0030 0319 0678 1309 1328 1403 1417 1859 1910 3077 3696 4236 5574 5641 6117 6440 6749 6942 7046 7262 7820 8713 9230 9497 9737

7th Prize Rs.500/-
0145 0217 0234 0428 0618 0763 0854 0856 1026 1272 1322 1362 1471 1778 1803 1908 2443 2510 2548 2733 3300 3575 3716 3723 3852 4045 4132 4177 4251 4289 4416 4505 4629 4647 4883 4894 5014 5015 5227 5251 5339 5467 5646 5810 5916 6191 6397 6399 6406 6444 6525 6552 6606 6647 6724 6893 6896 6962 6988 7071 7177 7320 7346 7641 7876 7996 8000 8105 8200 8982 9176 9375 9515 9812 9852 9917

8th Prize Rs.200/-
0209 0308 0590 0794 0883 1012 1034 1275 1279 1292 1298 1357 1579 1588 1632 1763 1833 1906 2106 2195 2663 2837 2893 3168 3207 3270 3359 3410 3411 3587 3742 3845 3858 3870 4128 4256 4270 4367 4437 4619 4713 4799 4853 4902 4920 4943 4987 5026 5070 5249 5318 5349 5471 5563 5613 5776 5859 5885 5995 6044 6062 6112 6113 6173 6188 6283 6337 6450 6653 6885 6947 7027 7069 7133 7184 7269 7285 7468 7597 7622 7740 7764 7855 8187 8271 8544 8705 9081 9093 9127 9214 9791

9th Prize Rs.100/-
0013 0017 0087 0164 0170 0230 0251 0258 0285 0305 0320 0361 0493 0533 0570 0614 0638 0657 0697 0718 0739 0817 0837 0870 0952 0982 1049 1076 1089 1254 1299 1457 1540 1558 1601 1625 1628 1657 1719 1777 1824 1848 1946 1983 2107 2197 2199 2300 2563 2684 2842 2886 2958 3081 3157 3220 3273 3349 3362 3364 3505 3657 3666 3732 3751 3769 3803 3827 3892 3896 3932 3940 4003 4100 4163 4294 4297 4326 4388 4392 4499 4607 4691 4702 4770 4816 4832 4934 5102 5105 5128 5208 5407 5518 5526 5715 5737 5795 5846 5902 5925 5927 5933 6058 6100 6439 6524 6603 6657 6697 6744 6795 6996 7126 7172 7183 7357 7414 7632 7791 7804 8119 8232 8259 8322 8376 8379 8409 8532 8550 8639 8757 8768 8814 9097 9268 9526 9763 9797 9817 9843 9847 9935 9998


ನಿಧನ ಸುದ್ದಿ

ಶಂಕರನಾರಾಯಣ ಭಟ್



ಉಡುಪಿ: ವೇದಾಧ್ಯಯನ ಪಾರಂಗತರಾಗಿದ್ದ ಹಿರಿಯಡ್ಕ ಶಂಕರನಾರಾಯಣ ಭಟ್ (59) ಫೆ.24ರಂದು ಒರಿಸ್ಸಾದ ಪುರಿ ಜಗನ್ನಾಥ ಕ್ಷೇತ್ರದಲ್ಲಿ ಹೃದಯಘಾತದಿಂದ ನಿಧನ ಹೊಂದಿದರು. ಇವರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು-ಬಳಗ, ಶಿಷ್ಯವರ್ಗವನ್ನು ಅಗಲಿದ್ದಾರೆ. ಹಿರಿಯಡ್ಕ ಬ್ರಾಹ್ಮಣ ಮಹಾಸಭಾ ವತಿಯಿಂದ ಆಯೋಜಿಸಲಾಗಿದ್ದ ಯಾತ್ರಾ ತಂಡದಲ್ಲಿ ಕುಟುಂಬ ಸಮೇತರಾಗಿ ತೀರ್ಥಯಾತ್ರೆಗೆ ತೆರಳಿದ್ದ ಇವರು ಜಗನ್ನಾಥನ ದರ್ಶನ ಪಡೆದು ಭೋಜನದ ಬಳಿಕ ತೀವ್ರ ಹೃದಯಘಾತಕ್ಕೊಳಗಾಗಿ ನಿಧನರಾದರು. ಇವರು ಹಿರಿಯಡ್ಕದ ಮಹತೋಭಾರ ವೀರಭದ್ರ ದೇವಳದ ಪ್ರಧಾನ ಅರ್ಚಕರಾಗಿ ಸೇವೆಸಲ್ಲಿಸಿದ್ದರು. ಬೆಂಗಳೂರಿನ ಪೂರ್ಣಪ್ರಜ್ಞ ವಿದ್ಯಾಪೀಠದಲ್ಲಿ 9 ವರ್ಷಗಳ ಕಾಲ ವೇದಾಧ್ಯಯನ ಮಾಡಿದ್ದ ಶಂಕರನಾರಾಯಣ ಭಟ್, ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಾವಿಣ್ಯತೆಯನ್ನು ಹೊಂದಿದ್ದರು. ಜಿಲ್ಲೆಯ ಹಲವಾರು ದೇವಳ, ದೈವಸ್ಥಾನ, ಗರಡಿಗಳ ಬ್ರಹ್ಮಕಲಶಗಳು ಇವರ ನೇತೃತ್ವದಲ್ಲಿ ಜರಗಿದ್ದವು. ಮೃತರ ಅಂತ್ಯಕ್ರಿಯೆ ಫೆ.25ರಂದು ಪುರಿಯಲ್ಲಿ ಜರಗಿತು.

ಅಬ್ದುಲ್ ರಹಿಮಾನ್



ಬಂಟ್ವಾಳ: ಬಿ.ಸಿ.ರೋಡಿನಲ್ಲಿ ಟ್ರಾಫಿಕ್ ವಾರ್ಡನ್ ಆಗಿ ಚಿರಪರಿಚಿತರಾಗಿದ್ದ ಡ್ರೈವಿಂಗ್ ತರಬೇತುದಾರ ಅಬ್ದುಲ್ ರಹಿಮಾನ್ ಪಟೇಲ್ (65) ಅಸೌಖ್ಯದಿಂದ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಕೆಲವು ವರ್ಷಗಳ ಕಾಲ ಕೊಲ್ಲಿ ರಾಷ್ಟ್ರದಲ್ಲಿ ಉದ್ಯೋಗಿಯಾಗಿದ್ದ ಇವರು ಊರಿಗೆ ಮರಳಿದ ಬಳಿಕ ಬಿ.ಸಿ.ರೋಡಿನ ಡ್ರೈವಿಂಗ್ ಸಂಸ್ಥೆಯಲ್ಲಿ ತರಬೇತುದಾರರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಕರ್ತವ್ಯದ ಬಿಡುವಿನ ವೇಳೆಯಲ್ಲಿ ಬಿ.ಸಿ.ರೋಡು, ಕೈಕಂಬ ಪರಿಸರದಲ್ಲಿ ಟ್ರಾಫಿಕ್ ವಾರ್ಡನ್ ಸೇವೆ ನೀಡುತ್ತಿದ್ದರು. ಇವರ ಈ ಸೇವಾಕಾರ್ಯ ಸಾರ್ವಜನಿಕ ಕ್ಷೇತ್ರದಲ್ಲಿ ಮೆಚ್ಚುಗೆಗೆ ಪಾತ್ರವಾಗುವುದರ ಜೊತೆಗೆ ಆ ಸಮಯದಲ್ಲಿ ಸಿಬ್ಬಂದಿ ಕೊರತೆ ಎದುರಿಸುತ್ತಿದ್ದ ಟ್ರಾಫಿಕ್ ಪೊಲೀಸರಿಗೆ ವರದಾನವಾಗಿತ್ತು. ಬಳಿಕ ಅನಾರೋಗ್ಯಕ್ಕೆ ತುತ್ತಾದ ಅವರು ಪರ್ಲಿಯಾ ಬಳಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ಅಬ್ದುಲ್ ರಹಿಮಾನ್ ಪಟೇಲ್ ಅವರ ಸೇವಾ ಕಾರ್ಯಕ್ಕೆ ಅನೇಕ ಸಂಘ ಸಂಸ್ಥೆಗಳು ಅವರನ್ನು ಗೌರವಿಸಿದ್ದವು.

ರಾಮ ಭಟ್



ಬದಿಯಡ್ಕ: ಹಿರಿಯ ಕೃಷಿಕ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಹಿರಿಯ ಮುಖಂಡ ಮೀಸೆಬೈಲು ರಾಮ ಭಟ್ ಕೆ.ಎಂ. (92) ಶುಕ್ರವಾರ ಮುಂಜಾನೆ ನಿಧನರಾದರು. ಈ ಹಿಂದೆ ಭಾರತೀಯ ಜನತಾ ಪಕ್ಷದ ಅಭ್ಯರ್ಥಿಯಾಗಿ ಗ್ರಾಮ ಪಂಚಾಯತ್ ಚುನಾವಣೆಗೆ ಸ್ಪರ್ಧಿಸಿದ್ದರು. ಅವರ ಪತ್ನಿ ಹಿಂದೆಯೇ ನಿಧನ ಹೊಂದಿದ್ದರೆ. ಮೃತರು ಮಕ್ಕಳಾದ ಸುಬ್ರಹ್ಮಣ್ಯ ಶರ್ಮ ಎಂ.ಆರ್., ಸುಲೋಚನಾ, ರಾಜೇಶ್ವರಿ, ಉಷಾ ಅವರನ್ನು ಅಗಲಿದ್ದಾರೆ.

ಲಲಿತಾ ಬಾಬುರಾಯ ಆಚಾರ್ಯ



ಕಿನ್ನಿಗೋಳಿ: ಇಲ್ಲಿನ ನಿವಾಸಿ ಲಲಿತಾ ಬಾಬುರಾಯ ಆಚಾರ್ಯ (90) ವಯೋಸಹಜದಿಂದಾಗಿ ಕಿನ್ನಿಗೋಳಿಯಲ್ಲಿರುವ ಮನೆಯಲ್ಲಿ ಹೊಂದಿದರು. ಕಿನ್ನಿಗೋಳಿಯ ದಿನೇಶ್ ಜುವೆಲ್ಲರ್ಸ್‌ನ ದಿನೇಶ್ ಹಾಗೂ ಏಳು ಪುತ್ರಿಯರನ್ನು ಅಗಲಿದ್ದಾರೆ.

ಮಾ.1: 9ನೇ ವರ್ಷದ 'ನರ್ತನಾವರ್ತನ-2026' ಕಾರ್ಯಕ್ರಮ

ಪುತ್ತೂರು: ಭರತ ನಾಟ್ಯದಲ್ಲಿ ಹೊಸ ಹೊಸ ಪ್ರಯೋಗದೊಂದಿಗೆ ಗುರುತಿಸಿಕೊಂಡಿರುವ ಪುತ್ತೂರಿನ ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯಿಂದ ಭಾರತ ಸರಕಾರದ ಸಾಂಸ್ಕೃತಿಕಸಚಿವಾಲಯದಸಹಕಾರದೊಂದಿಗೆ 9ನೇ ವರ್ಷದ 'ನರ್ತನಾವರ್ತನ-2026' ಕಾರ್ಯಕ್ರಮವು ಮಾ.1ರಂದು ಸಂಜೆ 5ರಿಂದ ವಿವೇಕಾನಂದ ಕನ್ನಡ ಮಾಧ್ಯಮ ಶಾಲಾ ವಠಾರದಲ್ಲಿ ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿಯ ನೃತ್ಯ ನಿರ್ದೇಶಕ ವಿದ್ವಾನ್ ಬಿ. ದೀಪಕ್ ಕುಮಾರ್, ಪ್ರತಿ ವರ್ಷದಂತೆ ಕಲಾಕ್ಷೇತ್ರದಲ್ಲಿ ಸಾಧನೆ ಮಾಡಿರುವ ಭರತನಾಟ್ಯ ಕಲಾವಿದರಿಂದ ಭರತನಾಟ್ಯ ಪ್ರಸ್ತುತಿ ನಡೆಯಲಿದೆ. ಕಲಾ ಪೋಷಕರಾಗಿರುವ ದ್ವಾರಕಾ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕ ಗೋಪಾಲಕೃಷ್ಣ ಭಟ್ ಅವರಿಗೆ ಕಲಾಶ್ರಯ ಪ್ರಶಸ್ತಿ ಪ್ರದಾನ ನಡೆಯಲಿದೆ ಎಂದರು.



ರಾಷ್ಟ್ರೀಯ ನೃತ್ಯೋತ್ಸವವಾಗಿ ಕಾರ್ಯಕ್ರಮ ಮಾಡುತ್ತಿದ್ದು, 2017ರಿಂದ ನರ್ತನಾವರ್ತನವನ್ನು ಆರಂಭಿಸಿದೆವು. ಈ ಬಾರಿ ಅಂತಾರಾಷ್ಟ್ರೀಯ ಖ್ಯಾತಿಯ ಮತ್ತು ಕಲಾಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿರುವ ಗುರು ವಿದುಷಿ ನರ್ಮದ ಅವರ ಶಿಷ್ಯೆ ಬೆಂಗಳೂರಿನ ಪ್ರತಿಭಾವಂತ ನೃತ್ಯ ಕಲಾವಿದೆ ವಿದುಷಿಪದ್ಮನಿಉಪಾಧ್ಯಬೆಂಗಳೂರುಅವರಿಂದ ಭರತನಾಟ್ಯ ಪ್ರಸ್ತುತಿ ಪ್ರದರ್ಶನಗೊಳ್ಳಲಿದೆ. ಅವರಿಗೆ ಹಾಡುಗಾರಿಕೆಯಲ್ಲಿ ವಿದ್ವಾನ್ ರಾಜೀವ್ ರಾಜಗೋಪಾಲನ್ ಬೆಂಗಳೂರು, ನಟುವಾಂಗದಲ್ಲಿ ವಿದ್ವಾನ್ ಪುಲಿಕೇಶಿ ಕಸ್ತೂರಿ ಬೆಂಗಳೂರು, ಮೃದಂಗದಲ್ಲಿ ವಿದ್ವಾನ್ ಜಿ.ಎಸ್. ನಾಗರಾಜ್, ಕೊಳಲಿನಲ್ಲಿ ವಿದ್ವಾನ್ ನರಸಿಂಹ ಮೂರ್ತಿ ಬೆಂಗಳೂರು ಅವರು ಸಹಕರಿಸಲಿದ್ದಾರೆ. ಸುಮಾರು ಎರಡೂವರೆ ಗಂಟೆಗಳ ಕಾಲ ನೃತ್ಯ ಕಾರ್ಯಕ್ರಮ ನಡೆಯಲಿದೆ. ಕಲಾಭಿಮಾನಿಗಳಿಗೆ ಕಾರ್ಯಕ್ರಮಕ್ಕೆ ಮುಕ್ತ ಪ್ರವೇಶವಿದೆ ಎಂದವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ನೃತ್ಯಗುರು ವಿದುಷಿ ಪ್ರೀತಿಕಲಾ ಉಪಸ್ಥಿತರಿದ್ದರು.

ಕಲಾಶ್ರಯ ಪ್ರಶಸ್ತಿ

ಸಂಜೆ 5ರಿಂದ ಕಾರ್ಯಕ್ರಮ ಆರಂಭಗೊಳ್ಳಲಿದ್ದು, ಶಾಂತಲಾ ನಾಟ್ಯ ಪ್ರಶಸ್ತಿ ಪುರಸ್ಕೃತ ನೃತ್ಯಗುರು ಉಳ್ಳಾಲ ಮೋಹನ್ ಕುಮಾರ್ ದೀಪ ಪ್ರಜ್ವಲನೆಯನ್ನು ಮಾಡಲಿದ್ದಾರೆ. ವಿವೇಕಾನಂದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಡಾ.ಕೆ.ಎಂ. ಕೃಷ್ಣ ಭಟ್ ಅಭ್ಯಾಗತರಾಗಿ ಭಾಗವಹಿಸಲಿದ್ದಾರೆ. ಇದೇ ಸಂದರ್ಭ ದ್ವಾರಕಾ ಸಮೂಹ ಸಂಸ್ಥೆಗಳ ಆಡಳಿತ ನಿರ್ದೇಶಕ ಗೋಪಾಲಕೃಷ್ಣ ಭಟ್ ಎ. ಅವರಿಗೆ 'ಕಲಾಶ್ರಯ ಪ್ರಶಸ್ತಿ' ಪ್ರದಾನ ಮಾಡಲಾಗುವುದು ಎಂದು ವಿದ್ವಾನ್ ದೀಪಕ್ ಕುಮಾರ್ ಹೇಳಿದರು.

ಕಾಡು ಪ್ರಾಣಿ ಮಾಂಸ ಸಾಗಾಟದ ಕಾರು ವಶ: ಆರೋಪಿಗಳು ಪರಾರಿ

ಮಡಿಕೇರಿ: ಕಾಡುಪ್ರಾಣಿಯ ಮಾಂಸ ಸಾಗಾಟ ಮಾಡುತ್ತಿದ್ದ ವಾಹನವನ್ನು ತಿತಿಮತಿ ಅರಣ್ಯಾಧಿಕಾರಿಗಳು ವಶಪಡಿಸಿಕೊಂಡಿದ್ದು, ಆರೋಪಿಗಳು ಪರಾರಿಯಾಗಿದ್ದಾರೆ.

ಕಾರಿನಲ್ಲಿ ಮಾಂಸ ಸಾಗಾಟವಾಡುತ್ತಿರುವುದಾಗಿ ದೊರೆತ ಮಾಹಿತಿ ಆಧರಿಸಿ ಕೂಡಲೇ ಕಾರ್ಯಾಚರಣೆಗಿಳಿದ ಅರಣ್ಯಾಧಿಕಾರಿಗಳು ಕಾರನ್ನು ಹಿಂಬಾಲಿಸಿ, ಆನೆಚೌಕೂರು ವನ್ಯಜೀವಿ ವಲಯದ ಬಫರ್ ಝೋನ್ ಪ್ರದೇಶದ ದೇವಮಚ್ಚಿ ಗ್ರಾಮದ ಅಕ್ಕಿಮಾಳ ಅಂಗನವಾಡಿಯ ಮುಂಭಾಗದಲ್ಲಿ ಅಡ್ಡಗಟ್ಟಿದ್ದಾರೆ.

ಈ ವೇಳೆ ಕಾರಿನ ಮುಂಭಾಗದ ಟಯರ್ ಪಂಕ್ಚರ್ ಆದ ಕಾರಣ ಆರೋಪಿಗಳು ಕಾರನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾರೆ. ಈ ಸಂದರ್ಭ ವಾಹನದಲ್ಲಿ ಜಿಂಕೆಯದ್ದೆನ್ನಲಾದ 6 ಕೆಜಿ ಮಾಂಸ ಪತ್ತೆಯಾಗಿದ್ದು, ಅದನ್ನು ವಶಪಡಿಸಿಕೊಳ್ಳಲಾಗಿದೆ.

ಉಳಿದಂತೆ ಪ್ಲಾಸ್ಟಿಕ್ ಕವರ್, ಮರದ ಹಿಡಿಕೆ ಇರುವ ಕತ್ತಿ, ವಿವಿಧ ಬಣ್ಣದ 9 ಜೀವಂತ ಕಾಡತೂಸುಗಳು, ಲೆದರ್ ಬ್ಯಾಗ್, ಟಾರ್ಚ್ ಹಾಗೂ ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ ಸೀಮಾ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಲಕ್ಷ್ಮೀಕಾಂತ್ ಅವರ ಮಾರ್ಗದರ್ಶನದಲ್ಲಿ ಆನೆಚೌಕೂರು ವನ್ಯಜೀವಿ ವಲಯ ಅರಣ್ಯಾಧಿಕಾರಿ ದೇವರಾಜು ಅವರ ನೇತೃತ್ವದಲ್ಲಿ ಉಪ ವಲಯ ಅರಣ್ಯಾಧಿಕಾರಿ ಚನ್ನವೀರೇಶ ಗಾಣಿಗೇರ, ದೇವಮಚ್ಚಿ ಶಾಖೆ ಮೋಜಣಿದಾರ ಸಿದ್ದಪ್ಪಾಜಿ, ಗಸ್ತು ಅರಣ್ಯ ಪಾಲಕರಾದ ಭೀಮನಾರೆ, ಹನುಮಂತಪ್ಪ, ತಿತಿಮತಿ ಎಸ್.ಟಿ.ಪಿ.ಎಫ್‌ನ ಕಾರ್ತಿಕ್ ಅವರು ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಸಂಸ್ಕಾರ ಪುಸ್ತಕಗಳ ಉಚಿತ ವಿತರಣೆ



ಉಡುಪಿ: ಸಚ್ಚಿದಾನಂದ ಪರಮಾರ್ಥ ಟ್ರಸ್ಟ್ ವತಿಯಿಂದ ಹಿರಿಯಡ್ಕ, ಕೊಡಿಬೆಟ್ಟು ಶ್ರೀ ವಿಷ್ಣುಮೂರ್ತಿ ಪ್ರೌಢಶಾಲೆಯ 60 ವಿದ್ಯಾರ್ಥಿಗಳಿಗೆ ಉಚಿತವಾಗಿ ಸಂಸ್ಕಾರ ನೋಟ್ ಪುಸ್ತಕಗಳನ್ನು ವಿತರಣೆ ನಡೆಸಲಾಯಿತು.

'ಸಂಸ್ಕಾರ ವಹಿ'ಯ ಮುಖಪುಟ ಹಾಗೂ ಹಿಂಬದಿಯ ಪುಟಗಳಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರಪುರುಷರ ಹಾಗೂ ಉತ್ತಮ ರಾಜ್ಯಾಡಳಿತ ನಡೆಸಿ ಪ್ರಜೆಗಳ ಹಿತಕ್ಕಾಗಿ ದುಡಿದ ರಾಜ-ಮಹಾರಾಜರ ಆದರ್ಶಗಳು ನೀಡಲಾಗಿದೆ. ಒಳಗಿನ ಪುಟಗಳಲ್ಲಿ ಸುಸಂಸ್ಕಾರ ಮತ್ತು ನೈತಿಕತೆ ಕುರಿತು ವಿಷಯಗಳು ಒಳಗೊಂಡಿವೆ.

ಈಸಂದರ್ಭಸಂಸ್ಥೆಯಕಾರ್ಯಕರ್ತರಾದ ಲಲಿತಾ, ಸುವರ್ಣ ವಿಶ್ವನಾಥ್ , ಶಾಲೆಯ ಮುಖ್ಯೋಪಾಧ್ಯಾಯ ಜಾದವ ಉಪಸ್ಥಿತರಿದ್ದರು.

ಕಿನ್ನಿಗೋಳಿ ಯುಗಪುರುಷದಲ್ಲಿ ಸಾಹಿತ್ಯಾವಲೋಕನ



ಕಿನ್ನಿಗೋಳಿ: ಸಾಹಿತ್ಯಿಕ ಕಾರ್ಯಕ್ರಮಗಳು ಕನ್ನಡ ಹಾಗೂ ಕನ್ನಡ ಶಾಲೆಗಳ ಉಳಿವಿಗೆ ಪೂರಕ ಕೆಲಸ ಮಾಡಬೇಕೆಂದು ಧರ್ಮದರ್ಶಿ ಡಾ. ಹರಿಕೃಷ್ಣ ಪುನರೂರು ಹೇಳಿದರು.

ಅವರು ಶುಕ್ರವಾರ ಯುಗಪುರುಷ ಸಭಾಭವನದಲ್ಲಿ ಯುಗಪುರುಷ ಕಿನ್ನಿಗೋಳಿ ಆಶ್ರಯದಲ್ಲಿಕಥಾಬಿಂದುಪ್ರಕಾಶನದಸಾರಥ್ಯದಲ್ಲಿ ನಡೆದ ಸಾಹಿತ್ಯಾವಲೋಕನದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಯುಗಪುರುಷದ ಸಂಪಾದಕ ಕೊಡೆತ್ತೂರು ಭುವನಾಭಿರಾಮ ಉಡುಪ ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕೆ. ವಿ. ಲಕ್ಷ್ಮಣ ಮೂರ್ತಿಯವರ ಕನ್ನಡ ಕೃತಿ ಸುನೀತಾ ಪ್ರದೀಪ್ ಕುಮಾರ್‌ರವರ ತುಳು ಅನುವಾದಿತ 'ಶ್ರೀ ಮಾತಾ ವೈಷ್ಣೋದೇವಿ', ಜಾನಕೀದೇವಿಯವರ 'ಬೃಂದಾವನ', ಪ್ರೇಮಪಿ ವೈ.ಕೆ ಮೋಳೆಯವರ 'ನೀಲಿರಾಗ', ನಾ. ಭಾ. ಕೆಂಪರಾಜ್ ಶಾಂತಲರವರ 'ನಾ ಕಂಡಂತೆ ನನ್ನ ಅನ್ನಪೂರ್ಣೇಶ್ವರೀ ಶಾಂತಲರಾಜ್' ಕೃತಿಗಳನ್ನು ಬಿಡುಗಡೆಗೊಳಿಸಲಾಯಿತು. ಶ್ರೀಪತಿ ಭಟ್, ಕೊಳ್ಚಪ್ಪೆ ಗೋವಿಂದ ಭಟ್, ಕೆ. ವಿ. ಲಕ್ಷ್ಮಣ್ ಮೂರ್ತಿ, ಪ್ರದೀಪ್ ಕುಮಾರ ಕಲ್ಕೂರ, ಕಸ್ತೂರಿ ಪಂಜ, ಜೊಸ್ಸಿ ಪಿಂಟೋ ಮತ್ತಿತರರಿದ್ದರು.

ಪ್ರಕಾಶ್ ಸುವರ್ಣ ಹಾಗೂ ಅನಿತಾ ಶೆಣೈಯವರನ್ನು ಸಮ್ಮಾನಿಸಲಾಯಿತು. ಜಯಾನಂದ ಪೆರಾಜೆ ಸ್ವಾಗತಿಸಿದರು. ಪ್ರದೀಪ್‌ಕುಮಾರ್ ಪ್ರಸ್ತಾವನೆಗೈದರು. ಡಾ.ಸತೀಶ್ ಎನ್. ಬಂಗೇರ ವಂದಿಸಿ, ಶರತ್ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಬಳಿಕ 20 ಕವಿಗಳಿಂದ ಕವಿಗೋಷ್ಠಿ ನಡೆಯಿತು.

ಅರಣ್ಯಾಧಿಕಾರಿ-ಶಾಸಕ ಕಾಮತ್ ಸಭೆ

ಮಂಗಳೂರು: ನಗರದ ಕದ್ರಿ, ಶಕ್ತಿನಗರ, ಭಾಗಗಳಲ್ಲಿ ರಾತ್ರಿ ವೇಳೆ ಚಿರತೆ ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಶಾಸಕ ವೇದವ್ಯಾಸ ಕಾಮತ್ ಅವರು ಅರಣ್ಯಾಧಿಕಾರಿಗಳೊಂದಿಗೆ ಸಭೆ ನಡೆಸಿ ಸಾರ್ವಜನಿಕರ ಹಿತದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ಪಡೆದುಕೊಂಡರು.

ಕದ್ರಿ ಕೈಬಟ್ಟಲ್, ಶಕ್ತಿನಗರದ ಕೋರ್ಡೆಲ್ ಪ್ರದೇಶಗಳಲ್ಲಿ ಚಿರತೆ ಓಡಾಡುತ್ತಿದ್ದ ದೃಶ್ಯಗಳು ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾಗಿದ್ದು, ಚಿರತೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆಯಿಂದ ಬೋನುಗಳನ್ನು ಇಡಲಾಗಿದೆ. ಈ ಎರಡೂ ಭಾಗಗಳಲ್ಲಿ ಕಾಣಿಸಿಕೊಂಡ ಚಿರತೆ ಒಂದೇ ಆಗಿರುವ ಸಾಧ್ಯತೆಯೂ ಇದೆ. ಚಿರತೆ ಸಂಚಾರ ಮಾಡಿರುವ ಪ್ರದೇಶದಲ್ಲಿ ಹಗಲು ರಾತ್ರಿ ಗಸ್ತು ತಿರುಗಲು ಅರಣ್ಯ ಇಲಾಖೆ ಸಿಬ್ಬಂದಿಯ ತಂಡವನ್ನು ನಿಯೋಜಿಸಿದ್ದೇವೆ. ಸದ್ಯ ಚಿರತೆ ಇಲ್ಲೇ ಉಳಿದಿರದೇ, ಕಾಡು ಪ್ರದೇಶಕ್ಕೆ ಮರಳಿರುವ ಬಗ್ಗೆ ಅಂದಾಜಿಸಲಾಗಿದೆ. ಹಾಗಿದ್ದೂ ಸಾರ್ವಜನಿಕರು ಚಿರತೆ ಸಹಿತ ಯಾವುದೇ ಅಪಾಯಕಾರಿ ಕಾಡುಪ್ರಾಣಿಗಳು ಕಂಡು ಬಂದಲ್ಲಿ ಕೂಡಲೇ ಅರಣ್ಯ ಇಲಾಖೆಯ ಟೋಲ್ ಫ್ರೀ ಸಂಖ್ಯೆ 1926 ಗೆ ಮಾಹಿತಿ ನೀಡಿ ಸಹಕರಿಸಿದರೆ ಇನ್ನಷ್ಟು ತ್ವರಿತ ಮತ್ತು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಲು ಸಹಾಯವಾಗುತ್ತದೆ ಎಂದು ವಲಯ ಅರಣ್ಯಾಧಿಕಾರಿ ರಾಜೇಶ್ ಬಳಿಗಾರ ಅವರು ಶಾಸಕರ ಮೂಲಕ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಕಾಡು ಪ್ರಾಣಿಗಳು ಆಹಾರ ಅರಸಿಕೊಂಡು ನಾಡಿಗೆ ಬರುತ್ತಿರುವುದು ಸೂಕ್ಷ್ಮ ವಿಚಾರವಾಗಿದ್ದು, ಸಾರ್ವಜನಿಕರ ಸುರಕ್ಷತೆಯ ಜೊತೆಗೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳೂ ಸಹ ಎಚ್ಚರಿಕೆಯಿಂದ ಕಾರ್ಯ ನಿರ್ವಹಿಸಬೇಕು ಶಾಸಕರು ಸೂಚನೆ ನೀಡಿದರು.

ಕುಕ್ಕೆಗೆ ನಾಳೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ



ಸುಬ್ರಹ್ಮಣ್ಯ: ಮಾಜಿ ಪ್ರಧಾನಿ ಹಾಗೂ ರಾಜ್ಯ ಸಭಾ ಸಂಸತ್ ಸದಸ್ಯ ಹೆಚ್.ಡಿ.ದೇವೇಗೌಡ ಅವರು ಮಾ.1ರಂದು ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ. ಹೆಚ್.ಡಿ.ದೇವೇಗೌಡ ಅವರು ಮಾ.1ರಂದು ಸಂಜೆ 5.20ಕ್ಕೆ ಹೆಲಿಕಾಪ್ಟರ್ ಮೂಲಕ ಬೆಂಗಳೂರಿನಿಂದ ಬಿಳಿನೆಲೆ ಹೆಲಿಪ್ಯಾಡ್‌ನಲ್ಲಿ ಬರಲಿದ್ದಾರೆ. ಬಿಳಿನೆಲೆಯಿಂದ ರಸ್ತೆ ಮಾರ್ಗದ ಮೂಲಕ ಕುಕ್ಕೆ ಸುಬ್ರಹ್ಮಣ್ಯಕ್ಕೆ ಆಗಮಿಸುವರು. 6 ಗಂಟೆಗೆ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಪೂಜೆಯಲ್ಲಿ ಭಾಗವಹಿಸುವರು. ಅಂದು ರಾತ್ರಿ ಸುಬ್ರಹ್ಮಣ್ಯದ ಅತಿಥಿ ಗೃಹದಲ್ಲಿ ವಾಸ್ತವ್ಯ ಮಾಡುವರು. ಮಾ.2ರಂದು ಬೆಳಗ್ಗೆ 6 ಗಂಟೆಗೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಪೂಜೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 2.30ಕ್ಕೆ ಸುಬ್ರಹ್ಮಣ್ಯದಿಂದ ರಸ್ತೆ ಮಾರ್ಗದ ಮೂಲಕ ಬಿಳಿನೆಲೆ ಹೆಲಿಪ್ಯಾಡ್‌ಗೆ ತೆರಳಿ 3 ಗಂಟೆಗೆ ಹೆಲಿಕಾಪ್ಟರ್ ಮೂಲಕ ಬೆಂಗಳೂರಿನತ್ತ ನಿರ್ಗಮಿಸುವರು. ಪ್ರವಾಸ ವೇಳೆ ಮಾಜಿ ಪ್ರಧಾನಿ ಅವರಿಗೆ ಝಡ್ ಪ್ಲಸ್ ಕೆಟಗರಿ ಭದ್ರತೆ ಇರಲಿದೆ.

ನಾಪತ್ತೆಯಾದ ಐಟಿಐ ವಿದ್ಯಾರ್ಥಿನಿ ಪ್ರಿಯತಮನೊಂದಿಗೆ ವಿವಾಹ

ಕುಂಬಳೆ: ಐಟಿಐಗೆ ಹೋಗಿ ಬಳಿಕ ನಾಪತ್ತೆಯಾದ ವಿದ್ಯಾರ್ಥಿನಿ ಹಾಗೂ ಪ್ರಿಯತಮ ಪರಶ್ಶಿನಿಕಡವ್ ಕ್ಷೇತ್ರದಲ್ಲಿ ವಿವಾಹವಾಗಿ ದಾಂಪತ್ಯಕ್ಕೆ ಕಾಲಿರಿಸಿದ್ದಾರೆ. ನೀರ್ಚಾಲು ಮೆಣಸಿನಪಾರೆಯ ಪುಷ್ಪಲತಾ ಎಂಬವರ ಪುತ್ರಿ ಕೆ.ಯಜ್ಞಶ್ರೀ (20) ಹಾಗೂ ಕಾಸರಗೋಡು ನೆಲ್ಲಿಕುಂಜೆ ಓವರ್ ಬ್ರಿಡ್ಜ್ ಸಮೀಪದ ಹಿತೇಶ್ ಗುರುವಾರ ವಿವಾಹವಾಗಿದ್ದಾರೆ.

ಸೀತಾಂಗೋಳಿ ಐಟಿಐಯ ವಿದ್ಯಾರ್ಥಿನಿಯಾದ ಯಜ್ಞಶ್ರೀ ಎಂದಿನಂತೆ ಗುರುವಾರ ಬೆಳಗ್ಗೆ ಕಾಲೇಜಿಗೆ ತೆರಳಿದ್ದಳು. ಆದರೆ ತರಗತಿಗೆ ಹಾಜರಾಗದೆ ಕುಂಬಳೆ ರೈಲು ನಿಲ್ದಾಣಕ್ಕೆ ತಲುಪಿ ಕಣ್ಣೂರು ಭಾಗಕ್ಕಿರುವ ರೈಲಿನಲ್ಲಿ ಪ್ರಯಾಣಿಸಿರುವುದಾಗಿ ತಾಯಿ ಕುಂಬಳೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ.

ಪೊಲೀಸರು ಕೇಸು ದಾಖಲಿಸಿ ತನಿಖೆ ನಡೆಸುತ್ತಿದ್ದಂತೆ ಯಜ್ಞಶ್ರೀ ಹಾಗೂ ಹಿತೇಶ್‌ರ ವಿವಾಹ ಪರಶ್ಶಿನಿಕಡವು ಕ್ಷೇತ್ರದಲ್ಲಿ ನಡೆದಿರುವ ಬಗ್ಗೆ ಮಾಹಿತಿ ಲಭಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಗೂಡಂಗಡಿಗಳಿಗೆ ಬೆಂಕಿ: ದುಷ್ಕರ್ಮಿಗಳ ಕೃತ್ಯವೆಂಬ ಶಂಕೆ

ಕಾಸರಗೋಡು: ಪೆರಿಯ ಬಜಾರ್‌ನಲ್ಲಿ ಮೂರು ಗೂಡಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಪೆರಿಯ ಪೆಟ್ರೋಲ್ ಬಂಕ್ ಸಮೀಪದ ಮುಹಮ್ಮದ್ ಕುಂಞ, ನವೋದಯ ನಗರ ಎಮಿನ್ ಶಾಲೆಯ ಸಮೀಪದ ಜಬ್ಬಾರ್ , ನವೋದಯ ಶಾಲೆ ಸಮೀಪದ ಮುಹಮ್ಮದ್ ಕುಂಞ ಎಂಬವರ ಅಂಗಡಿಗಳಿಗೆ ಬೆಂಕಿ ಹಚ್ಚಲಾಗಿದೆ. ಈ ಮೂರು ಅಂಗಡಿಗಳು ರಾಷ್ಟ್ರೀಯ ಹೆದ್ದಾರಿಯ ಎರಡು ಬದಿಗಳಲ್ಲಾಗಿ ಸ್ಥಳಗಳಲ್ಲಿದೆ. ಮಾಹಿತಿ ತಿಳಿದು ಬೇಕಲ ಪೊಲೀಸರು ಹಾಗೂ ಕಾಞಂಗಾಡಿನಿಂದ ಅಗ್ನಿಶಾಮಕ ದಳ ಗಮಿಸಿ ಬೆಂಕಿ ನಂದಿಸಿತು. ಸಿಸಿಟಿವಿ ಕ್ಯಾಮರಾಗಳಲ್ಲಿ ಸೆರೆಯಾದ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬೈಕ್‌ನಲ್ಲಿ ಆಗಮಿಸಿದ ತಂಡವೊಂದು ಬೆಂಕಿ ಹಚ್ಚಿ ಪರಾರಿಯಾಗಿರಬಹುದೆಂದು ಪೊಲೀಸರು ಶಂಕಿಸಿದ್ದಾರೆ.

ಕಿರುಸುದ್ದಿ

ಯಕ್ಷಾಂಗಣ ಟ್ರಸ್ಟ್ ಬೆಂಗಳೂರು: ಯಕ್ಷ ಶೃತಿ ಕಾರ್ಯಾಗಾರ

ಕೋಟ: ಸಂಗೀತದಲ್ಲಿ ಶೃತಿ ಮತ್ತು ಲಯ ತಾಯಿ ಮತ್ತು ತಂದೆ ಇದ್ದ ಹಾಗೆ ಇದು ನಮ್ಮೊಳಗೆ ಇದ್ದರೆ ಉಳಿದ ಅಂಗಗಳನ್ನು ಹೊರಗಿನಿಂದ ನಮ್ಮೊಳಗೆ ಸೇರಿಸಿಕೊಳ್ಳುವುದಕ್ಕೆ ಸಾಧ್ಯ. ಗುರು ಮುಖೇನ ಕಲಿತ ಕಲೆಯನ್ನು ಸದಾ ಮನನ ಮಾಡಿಕೊಳ್ಳುತ್ತಿದ್ದರೆ ಆ ವಿಭಾಗದಲ್ಲಿ ಪರಿಣಿತಿಯನ್ನು ಹೊಂದಲು ಸಾಧ್ಯ. ಎಂದು ಭಾಗವತ ನಿಟ್ಟೂರು ಲಂಬೋದರ ಹೆಗಡೆ ಹೇಳಿದರು. ಫೆ. 22ರಂದು ಬೆಂಗಳೂರಿನಲ್ಲಿ ಯಕ್ಷಾಂಗಣ ಟ್ರಸ್ಟ್ ಆಯೋಜಿಸಿದ ಯಕ್ಷಗಾನ ಭಾಗವತಿಕೆಗೆ ಸಂಬಂಧಿಸಿದ ಯಕ್ಷ ಶೃತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು. ವೇದಿಕೆಯಲ್ಲಿ ಯಕ್ಷಾಂಗಣ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ವೀಣಾ ಕೆ. ಮೋಹನ್, ಶಿಕ್ಷಕಿ ವಿಜಯಲಕ್ಷ್ಮೀ ಜಿ. ಉಡುಪ ಉಪಸ್ಥಿತರಿದ್ದರು. ಸಂಪನ್ಮೂಲ ವ್ಯಕ್ತಿಯಾಗಿ ಸುದರ್ಶನ ಉರಾಳ, ಲಂಬೋದರ ಹೆಗಡೆ, ಪ್ರಿಯಾಂಕ ಕೆ. ಮೋಹನ್ ಭಾಗವಹಿಸಿದ್ದರು. ಸುಮಾರು ಮೂವತ್ತೈದು ನಲವತ್ತಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದರು.

ಮಾ.3: ತಲಕಾವೇರಿ-ಭಾಗಮಂಡಲದಲ್ಲಿ ದೇವರ ದರ್ಶನವಿಲ್ಲ

ಮಡಿಕೇರಿ: ಮಾರ್ಚ್ 3 ರಂದು ಸಂಭವಿಸುವ ಚಂದ್ರಗ್ರಹಣ ಪ್ರಯುಕ್ತ ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಬೆಳಗ್ಗೆ 9 ರಿಂದ ರಾತ್ರಿ 7.15 ರವರೆಗೆ ಸಾರ್ವಜನಿಕ ಭಕ್ತಾದಿಗಳಿಗೆ ದೇವರ ದರ್ಶನ ಇರುವುದಿಲ್ಲ. ಈ ದಿನದಂದು ಯಾವುದೇ ಪಿಂಡ ಪ್ರದಾನ, ಪಿತೃ ಕಾರ್ಯಗಳು, ಹುಣ್ಣಿಮೆಯ ಸಾಮೂಹಿಕ ಸತ್ಯನಾರಾಯಣ ಪೂಜೆ ಮತ್ತು ಭಕ್ತಾದಿಗಳಿಗೆ ಅನ್ನದಾಸೋಹ ಇರುವುದಿಲ್ಲ. ಅಂತೆಯೇ ಶ್ರೀ ತಲಕಾವೇರಿ ದೇವಾಲಯದಲ್ಲಿ ಬೆಳಗ್ಗೆ 9 ರಿಂದ ಸಾರ್ವಜನಿಕ ಭಕ್ತಾದಿಗಳಿಗೆ ದೇವರ ದರ್ಶನ ಇರುವುದಿಲ್ಲ ಎಂದು ದೇವಾಲಯದ ಆಡಳಿತಾಧಿಕಾರಿಗಳ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಎನ್.ಜಿ ಅವರು ತಿಳಿಸಿದ್ದಾರೆ.

ಇಂದು ತುಳು ಬರಹಗಾರರ ಸಭೆ

ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯು ಪ್ರಸ್ತುತ ಸಾಲಿನ ಪುಸ್ತಕ ಪ್ರಕಟಣೆಯ ಬಗ್ಗೆ ಸಮಾಲೋಚನೆ ನಡೆಸುವ ಸಲುವಾಗಿ ತುಳು ಬರಹಗಾರರ ಸಭೆಯನ್ನು ಮಂಗಳೂರಿನ ಉರ್ವಸ್ಟೋರ್‌ನ ತುಳು ಭವನದಲ್ಲಿ ಶನಿವಾರ ಸಂಜೆ 4 ಗಂಟೆಗೆ ಆಯೋಜಿಸಿದೆ. ಈ ಸಭೆಯಲ್ಲಿ ಮಂಗಳೂರು, ಸುರತ್ಕಲ್, ಮುಲ್ಕಿ, ಉಳ್ಳಾಲ ವ್ಯಾಪ್ತಿಯ ತುಳು ಬರಹಗಾರರು ಪಾಲ್ಗೊಳ್ಳುವರು . ದಕ್ಷಿಣ ಕನ್ನಡ, ಉಡುಪಿ ಹಾಗೂ ಕಾಸರಗೋಡು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಮುಂದಿನ ದಿನಗಳಲ್ಲಿ ತುಳು ಲೇಖಕರ ಸಮಾಲೋಚನಾ ಸಭೆ ನಡೆಯಲಿದೆ ಎಂದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡ್ ತಿಳಿಸಿದ್ದಾರೆ.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶ್ರೀಯ ಹೆಗ್ಡೆ ಕೋಡಂಗಲ್ಲು ಮೂಡುಬಿದ್ರೆ – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.
2. ಕೂರಿಯಾಳ ಶಾಲಾ ಬಳಿ ಹತ್ತು ಸಮಸ್ತರು, ಬಂಟ್ವಾಳ (ತಾ).
3. ಹಿಂದೂ ಸೇವಾ ಸಮಿತಿ, ಬೊಲ್ಪುಗುಡ್ಡೆ ಹಾಗೂ ಹತ್ತು ಸಮಸ್ತರು, ಕಾವೂರು, ಮಂಗಳೂರು (ತಾ).
4. ಮಂಜುನಾಥ್, ಆಶಾ, 'ಶ್ರೀ ತಾಯಿ ನಿಲಯ', ಜೆಡ್ಡು, ಚಿತ್ತೂರು, ವಂಡ್ಸೆ, ಕುಂದಾಪುರ (ತಾ).
5. ದುರ್ಗಾಪರಮೇಶ್ವರೀ ಸೇವಾ ಸಮಿತಿ, ಮುಗ್ರೋಡಿ, ಕೊಂಚಾಡಿ, ಮಂಗಳೂರು.
6. ಗಣಪತಿ ಲತಾ ಆಚಾರ್ಯ, 'ಶ್ರೀ ದೇವಿಕೃಪಾ', ಬೊಳ್ಳಾರಗುತ್ತು, ಸೂರಿಂಜೆ ವಯಾ ಕಾಟಿಪಳ್ಳ.
7. ಶ್ರೀ ದುರ್ಗಾಪರಮೇಶ್ವರೀ ಸೇವಾ ಸಮಿತಿ ಹತ್ತು ಸಮಸ್ತರು, ಪಡೀಲು ಸಂಕದ ಬಳಿ, ಮಂಗಳೂರು (ತಾ).

ಶ್ರೀ ಧರ್ಮಸ್ಥಳ ಮೇಳ
ಕಾವ್ರಾಡಿ-ನೆಲ್ಲಿಕಟ್ಟೆಯಲ್ಲಿ
ಶ್ರೀಮತಿ ಮತ್ತು ಶ್ರೀ ಚಾರ್ಮಕ್ಕಿ ಜಯಕರ ಶೆಟ್ಟಿ, ಗಿರಿಜಾ ಟೈಲ್ಸ್

ಶ್ರೀ ಪೆರ್ಡೂರು ಮೇಳ
ಶಿರಸಿಯ ಮಾರಿಕಾಂಬಾ ಜಾತ್ರೆಯ ಪ್ರಯುಕ್ತ
ಯಮಧರ್ಮರಾಯ, ಕಂಸರಾಯ, ಕುರುರಾಯ

ಶ್ರೀ ಹನುಮಗಿರಿ ಮೇಳ
ಚೊಕ್ಕಬೆಟ್ಟು ಹಾಗೂ ಕಡಂಬು

ಶ್ರೀ ಪಾವಂಜೆ ಮೇಳ
ಶ್ರೀ ವಿನಾಯಕ ಶ್ರೀ ರಾಮ ಭಜನಾ ಮಂದಿರ (ರಿ.) ಅಂಡಿಂಜೆ
ಶ್ರೀ ದೇವೀ ಮಹಾತ್ಮೆ



ಮೂಲ್ಕಿ ಕೆ.ಎಸ್ ರಾವ್ ನಗರದ ವಿಜಾಪುರ ಕಾಲನಿಯ ಶ್ರೀ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿಯವರ ಮಠದಲ್ಲಿ ಜರುಗಿದ 40ನೇ ವರ್ಷದ ಜಾತ್ರಾ ಮಹೋತ್ಸವ ಪ್ರಯುಕ್ತ ಸ್ವಾಮೀಜಿಯವರ ಬೆಳ್ಳಿ ಮೂರ್ತಿಗೆ ಮೂಲ್ಕಿ ಶಾಂಭವೀ ನದಿಯಲ್ಲಿ ಪೂಜೆ ಗಂಗಾ ಸ್ನಾನಗೈದು ಪಲ್ಲಕಿಯಲ್ಲಿ ವಿಶೇಷ ಮೆರವಣಿಗೆಯ ಕೆ ಎಸ್ ರಾವ್ ನಗರದ ಲಿಂಗಪ್ಪಯ್ಯ ಕಾಡು ಶ್ರೀಮಠಕ್ಕೆ ತರಲಾಯಿತು.

ಕುಂದಾಪುರ ಶಾಸಕ ಕಿರಣ್‌ಕುಮಾರ್ ಕೊಡ್ಗಿ ಯತ್ನ ಯಶಸ್ವಿ

ಇಎಸ್‌ಐ ವ್ಯಾಪ್ತಿಗೆ ಮಣಿಪಾಲ ಕೆಎಂಸಿ

ಕುಂದಾಪುರ: ಕುಂದಾಪುರ ಶಾಸಕರ ಸತತ ಪ್ರಯತ್ನದಿಂದ ಇ.ಎಸ್.ಐ. ಮರು ನವೀಕರಣ ಸಂದರ್ಭದಲ್ಲಿ ಕೈಬಿಟ್ಟ ಕೆಎಂಸಿ ಮಣಿಪಾಲ ಆಸ್ಪತ್ರೆಯನ್ನು ಮರು ಸೇರ್ಪಡೆ ಮಾಡಲಾಗಿದೆ.

ರಾಜ್ಯದಲ್ಲಿ ವಿಮಾದಾರರು ಮತ್ತು ಅವರ ಕುಟುಂಬದವರ ಹಿತದೃಷ್ಟಿಯಿಂದ ಇಎಸ್‌ಐ ರೆಫರಲ್ ನಿಯಮದಂತೆ ಎರಡು ವರ್ಷಗಳ ಅವಧಿಗೆ ಖಾಸಗಿ ಆಸ್ಪತ್ರೆಯೊಂದಿಗೆ ನವೀಕರಣ ಮಾಡುವ ಸಂದರ್ಭದಲ್ಲಿ ಕೆಎಂಸಿ ಮಣಿಪಾಲ ಆಸ್ಪತ್ರೆಯನ್ನು ಕೈ ಬಿಡಲಾಗಿತ್ತು. ಈ ಆಸ್ಪತ್ರೆಯನ್ನು ಪರಿಶೀಲನಾ ಸಮಿತಿಯವರು ಕೈ ಬಿಟ್ಟಿರುವುದು ಸಮಂಜಸವಲ್ಲ, ಇದನ್ನು ಸರಿಪಡಿಸದೆ ಇದ್ದರೆ ತುಂಬಾ ವಿಮಾ ಅರ್ಹ ರೋಗಿಗಳು ಸಂಕಷ್ಟಕ್ಕೆ ಒಳಗಾಗುತ್ತಾರೆ. ಆದುದರಿಂದ ಖಾಸಗಿ ಆಸ್ಪತ್ರೆಯೊಂದಿಗೆ ವಿಮಾ ಚಿಕಿತ್ಸೆಗೆ ಹೊಂದಾಣಿಕೆ ಮಾಡಿಕೊಳ್ಳುವಾಗ ಬಿಟ್ಟು ಹೋಗಿರುವ ಕೆಎಂಸಿ ಮಣಿಪಾಲ ಆಸ್ಪತ್ರೆಯನ್ನು ಸೇರಿಸಿಕೊಳ್ಳುವ ಬಗ್ಗೆ ಕುಂದಾಪುರ ವಿಧಾನಸಭಾ ಕ್ಷೇತ್ರದ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಸತತವಾಗಿ ಪ್ರಯತ್ನಪಟ್ಟು, ರಾಜ್ಯ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಹಾಗೂ ಸಂಬಂಧಪಟ್ಟ ಇಲಾಖಾ ಅಧಿಕಾರಿಗಳ ಸತತವಾಗಿ ಸಂಪರ್ಕವನ್ನು ಮಾಡಿ ವಿಚಾರವನ್ನು ಮನವರಿಕೆ ಮಾಡಿ ಕೆಎಂಸಿ ಮಣಿಪಾಲ ಆಸ್ಪತ್ರೆಯನ್ನು ಮರು ಸೇರ್ಪಡೆ ಮಾಡುವಲ್ಲಿ ಸಫಲರಾಗಿದ್ದು, ಸಚಿವರಿಗೆ ಶಾಸಕ ಕೊಡ್ಗಿ ಧನ್ಯವಾದಗಳು ತಿಳಿಸಿದ್ದಾರೆ.

ಖಾಯಂ ವೈದ್ಯರ ನೇಮಕ

ಕುಂದಾಪುರ ಕಾರ್ಮಿಕ ಚಿಕಿತ್ಸಾಲಯಕ್ಕೆ 15 ದಿನಗಳಿಗೊಮ್ಮೆ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯ ಆಸ್ಪತ್ರೆ ದಾವಣಗೆರೆ ಹಾಗೂ ಕಾರ್ಮಿಕ ರಾಜ್ಯ ವಿಮಾ ಆಸ್ಪತ್ರೆ ಹುಬ್ಬಳ್ಳಿ ಇಲ್ಲಿಂದ ಪ್ರಭಾರ ಸೇವೆಯ ಮೇಲೆ ವೈದ್ಯರನ್ನು ನೇಮಿಸಲಾಗುತ್ತಿತ್ತು. ಇದರಿಂದ ವಿಮಾ ರೋಗಿಗಳಿಗೆ ತುಂಬಾ ತೊಂದರೆ ಆಗುತ್ತಿದ್ದು, ಸರಿಯಾದ ಚಿಕಿತ್ಸೆ ಸಿಗದೇ ಸಂಕಷ್ಟಕ್ಕೆ ಫಲಾನುಭವಿಗಳು ಒಳಗಾಗುತ್ತಿದ್ದರು. ಇದನ್ನು ಮನಗೊಂಡ ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಅವರು ಖಾಯಂ ವೈದ್ಯರ ನೇಮಕಕ್ಕೆ ಮುತುವರ್ಜಿ ವಹಿಸಿ ಸದನದಲ್ಲಿ ಇದರ ಬಗ್ಗೆ ಪ್ರಸ್ತಾಪಿಸಿದರು. ಕುಂದಾಪುರ ಶಾಸಕರ ಸತತ ಪ್ರಯತ್ನದಿಂದ ಕುಂದಾಪುರ ಕಾರ್ಮಿಕ ರಾಜ್ಯ ವಿಮಾ ಚಿಕಿತ್ಸಾಲಯಕ್ಕೆ ಅತೀ ಅಗತ್ಯವಿರುವ ಪೂರ್ಣ ಕಾಲಿಕ ವೈದ್ಯರನ್ನು ನೇಮಕ ಮಾಡಿದ್ದು ಈ ಬಗ್ಗೆ ಸಚಿವರಿಗೆ ಶಾಸಕರು ಧನ್ಯವಾದ ತಿಳಿಸಿದ್ದಾರೆ.

ಪಾನಿಪೂರಿ, ಮಸಾಲೆ ಪುರಿ, ಚರುಮುರಿ, ಬಿಸಿ ಬಿಸಿ ಚಿಕನ್ ಬಿರಿಯಾನಿ...

ಮಡಿಕೇರಿಯಲ್ಲಿ ಮಕ್ಕಳ ಸಂತೆ!

ಮಡಿಕೇರಿ: ಎತ್ತ ನೋಡಿದರೂ ವಿವಿಧ ಬಗೆ ಸೊಪ್ಪು, ತರಕಾರಿ, ಆಹಾರ ಧಾನ್ಯಗಳು, ಹಣ್ಣು ಹಂಪಲುಗಳು, ಪಾನಿಪೂರಿ, ಮಸಾಲೆ ಪುರಿ, ಚರುಮುರಿ; ಜೊತೆಗೆ ಚಿಕನ್ ಬಿರಿಯಾನಿ...

ನಗರದ ಜೂನಿಯರ್ ಕಾಲೇಜು ಆವರಣದಲ್ಲಿ ನಡೆದ ಮಕ್ಕಳ ಸಂತೆಯಲ್ಲಿ ಕಂಡು ಬಂದ ದೃಶ್ಯಗಳಿವು.

ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ, ಸರ್ಕಾರಿ ಪಿ.ಎಂ. ಶ್ರೀ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ನಡೆದ ಮಕ್ಕಳ ಸಂತೆಯಲ್ಲಿ ಸುಮಾರು 70 ಕ್ಕೂ ಹೆಚ್ಚು ಮಕ್ಕಳು ಪಾಲ್ಗೊಂಡು ಗಮನ ಸೆಳೆದರು.

ಗಣಿಕೆ ಸೊಪ್ಪು, ನುಗ್ಗೆ, ಕೊತ್ತಂಬರಿ, ಕರಿಬೇವು, ಬಸಳೆ, ಪಾಲಕ್ ಸೊಪ್ಪು, ಟೊಮೆಟೋ, ಕೆಸ, ಹಲಸು, ಬಾಳೆಕಾಯಿ, ಬಾಳೆಹಣ್ಣು, ಸಪೋಟ, ಕಿತ್ತಳೆ, ಚಕೋತ, ಮೂಲಂಗಿ, ನಿಂಬೆಹಣ್ಣು, ಸಿಹಿಗೆಣಸು, ಕಲ್ಲಂಗಡಿ, ಬದನೆ, ಪರಂಗಿ ಹಣ್ಣು ಆಲೂಗಡ್ಡೆ, ಈರುಳ್ಳಿ, ಸೌತೆಕಾಯಿ, ಜತೆಗೆ ಮಹಿಳೆಯರ ಸೀರೆ ಒಳಗೊಂಡಂತೆ ಫ್ಯಾನ್ಸಿ ವಸ್ತುಗಳು ಸೇರಿದಂತೆ ಹಲವು ವಿಭಾಗದಲ್ಲಿ ಮಕ್ಕಳ ಸಂತೆ ಏರ್ಪಡಿಸಿದ್ದು ವಿಶೇಷ ಆಕರ್ಷಣೆಯಾಗಿತ್ತು. ಬನ್ನಿ ಸಾರ್,



ಬನ್ನಿ ಸಾರ್, 10 ರೂ., 20 ರೂ., 30 ರೂ. ಬನ್ನಿ ಸಾರ್, ಸಂತೆ ವ್ಯಾಪಾರ ಮಾಡಿ ಎಂದು ವಿದ್ಯಾರ್ಥಿಗಳು ಆಹ್ವಾನಿಸುತ್ತಿದ್ದ ದೃಶ್ಯ ಕಂಡು ಬಂದಿತು. ವಿದ್ಯಾರ್ಥಿಗಳ ವ್ಯಾಪಾರಕ್ಕೆ ಪೋಷಕರು ಸಹ ಸಾಥ್ ನೀಡಿದ್ದು ವಿಶೇಷವಾಗಿತ್ತು. ಮಕ್ಕಳ ಸಂತೆಯಲ್ಲಿ ಹೆಚ್ಚಾಗಿ ಚುರುಮುರಿ ಮತ್ತು ಫ್ರೆಶ್ ಜ್ಯೂಸ್ ಸವಿಯುತ್ತಿದ್ದುದು, ತರಕಾರಿ ಮತ್ತು ವಿವಿಧ ಬಗೆಯ ಹಣ್ಣುಗಳನ್ನು ಮನೆಗೆ ಕೊಂಡೊಯ್ಯುವುದು ಕಂಡು ಬಂದಿತು.

ನಗರದ ಪಿ.ಎಂ.ಶ್ರೀ ಮಾದರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವತಿಯಿಂದ ಇದೇ ಮೊದಲ ಬಾರಿಗೆ ಶಾಲೆ ಆವರಣದಲ್ಲಿ ಮಕ್ಕಳ ಸಂತೆ ನಡೆಸಿದ್ದು ವಿಶೇಷವಾಗಿತ್ತು.

ಈ ಸಂದರ್ಭ ಮಾತನಾಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಹೇಶ್ ಅವರು, ವಿದ್ಯಾರ್ಥಿಗಳ ಆರ್ಥಿಕ ಸಾಕ್ಷರತಾ ಶಿಕ್ಷಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಸರ್ಕಾರದ ವತಿಯಿಂದ ಮಕ್ಕಳ ಸಂತೆಯನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳಲ್ಲಿ ಆರ್ಥಿಕ, ವಾಣಿಜ್ಯ, ವ್ಯಾಪಾರದ ಮಹತ್ವ ಕುರಿತು ಅರಿವು ಮೂಡಿಸುವಲ್ಲಿ ಮಕ್ಕಳ ಸಂತೆ ಸಹಕಾರಿಯಾಗಿದೆ. ಆ ನಿಟ್ಟಿನಲ್ಲಿ ಪ್ರತಿನಿತ್ಯ ಕುಟುಂಬಕ್ಕೆ ಬೇಕಿರುವ ಪದಾರ್ಥಗಳನ್ನು ಕೊಳ್ಳುವಲ್ಲಿ ಹಣದ ಉಳಿತಾಯ ಯೋಜನೆ ಬಗ್ಗೆ ಮಕ್ಕಳ ಸಂತೆ ಉತ್ಸಾಹದಾಯಕವಾಗಿದೆ ಎಂದು ನುಡಿದರು.

ಶಾಲಾ ಶಿಕ್ಷಣ ಇಲಾಖೆಯ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿ ಸೌಮ್ಯ ಪೊನ್ನಪ್ಪ, ವಿಷಯ ಪರಿವೀಕ್ಷಕರಾದ ಬಿಂದು, ಶರ್ಮಿಳಾ, ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಶಶಿಕಲಾ, ಪಿ.ಎಂ. ಶ್ರೀ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ಎಚ್.ಟಿ. ಭವಾನಿ, ಎಸ್.ಡಿಎಂ.ಸಿ ಅಧ್ಯಕ್ಷ ಜಗದೀಶ್, ಶಿಕ್ಷಕರಾದ ಜಯಮ್ಮ, ಮೋಹನಾ ಕುಮಾರಿ, ಶೃತಿ, ಕವಿತಾ, ಸಂದೇಶ್, ಮಮತಾ, ಹಾಜಿರಾ ಬೇಗಂ, ಸಿ.ಸಿ.ಮ್ಯಾಥ್ಯೂ, ಶೃತಿಶ್ರೀ, ಮಂಜುಳಾ ಮತ್ತಿತರರು ಇದ್ದರು.

ಶ್ರೀ ವೆಂಕಟರಮಣ ದೇವಳ: ಬ್ರಹ್ಮರಥೋತ್ಸವದ ಸಂಭ್ರಮ

ಗಂಗೊಳ್ಳಿ : ಪುರಾಣ ಪ್ರಸಿದ್ಧ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವ ಸ್ಥಾನದಲ್ಲಿ ಕಾಲಂಪ್ರತಿ ಜರಗುವ ಬ್ರಹ್ಮರಥೋತ್ಸವ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ಶ್ರೀಪಾದ ವಡೇರ ಸ್ವಾಮೀಜಿಯವರ ಉಪಸ್ಥಿತಿ ಹಾಗೂ ಮಾರ್ಗದರ್ಶನದಲ್ಲಿ ಮಂಗಳವಾರ ವಿಜೃಂಭಣೆಯಿಂದ ಜರಗಿತು.

ಬೆಳಿಗ್ಗೆ ಶ್ರೀ ದೇವರಿಗೆ ಪಂಚಾಮೃತ ಅಭಿಷೇಕ, ತುಲಾಭಾರ ಸೇವೆ ನಡೆಯಿತು. ಮಧ್ಯಾಹ್ನ ಮಹಾಪ್ರಾರ್ಥನೆ ಬಳಿಕ ಬಲಿ ಪೂಜೆ, ಮಾರ್ಗ ಬಲಿ ಜರಗಿತು. ಸಂಜೆ ರಥಾರೋಹಣ, ಮಹಾ ಮಂಗಳಾರತಿ ಮತ್ತಿತರ ಧಾರ್ಮಿಕ ಕಾರ್ಯಕ್ರಮಗಳು ಸಂಪನ್ನಗೊಂಡಿತು. ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಎಸ್. ವೆಂಕಟರಮಣ ಆಚಾರ್ಯ ಮತ್ತು ದೇವಳದ ತಾಂತ್ರಿಕ ವೇದಮೂರ್ತಿ ಜಿ.ವಸಂತ ಭಟ್ ನೇತೃತ್ವದಲ್ಲಿ ರಥೋತ್ಸವದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಮತ್ತು



ಅನುಷ್ಠಾನಗಳು ಶಾಸ್ತ್ರೋಕ್ತವಾಗಿ ನಡೆಯಿತು ನಡೆಯಿತು.

ದೇವಳದ ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ಅರ್ಚಕರು, ಊರಿನ ಹತ್ತು ಸಮಸ್ತರು, ಸಮಾಜಬಾಂಧವರು ಹಾಗೂ ಊರ ಪರ ಊರಿನ ಭಜಕರು ಉತ್ಸವದಲ್ಲಿ ಪಾಲ್ಗೊಂಡು ಮೊದಲಾದವರು ಶ್ರೀದೇವರ ಪ್ರಸಾದ ಸ್ವೀಕರಿಸಿದರು.

ಅಮ್ಮೈ ಶ್ರೀಕೃಷ್ಣ ಭಜನಾ ಮಂದಿರದ ರಜತ ಮಹೋತ್ಸವ ಆಮಂತ್ರಣ ಪತ್ರಿಕೆ ಬಿಡುಗಡೆ



ಕಾಸರಗೋಡು: ಅಮ್ಮೈ ಶ್ರೀಕೃಷ್ಣ ಭಜನಾ ಮಂದಿರದ 25ನೇ ವರ್ಷದ ರಜತ ಮಹೋತ್ಸವದ ಆಮಂತ್ರಣ ಪತ್ರಿಕೆಯನ್ನು ಮಂದಿರದಲ್ಲಿ ಬಿಡುಗಡೆಗೊಳಿಸಿ ಶುಭಹಾರೈಸಲಾಯಿತು. ಸಮಿತಿ ಅಧ್ಯಕ್ಷ ಕೆ.ಸದಾಶಿವ ಮಲ್ಯ ಅವರು ಉದ್ಘಾಟನೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಸಮಿತಿಯ ಪ್ರಧಾನ ಕಾರ್ಯದರ್ಶಿ ಗುಣಪಾಲ ಅಮ್ಮೈ, ಕೋಶಾಧಿಕಾರಿ ವೇಣುಗೋಪಾಲ, ವೈದಿಕ ಸಮಿತಿಯ ಅಧ್ಯಕ್ಷ ಡಾ.ಕೆ. ಎನ್.ವೆಂಕಟರಮಣ ಹೊಳ್ಳ, ಭಜನಾ ಮಂದಿರದ ಗೌರವಾಧ್ಯಕ್ಷ ಗಂಗಾಧರ ಅಮ್ಮೈ ಮತ್ತಿತರರು ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಅಮ್ಮೈ ಶ್ರೀಕೃಷ್ಣ ಭಜನಾ ಮಂದಿರದಲ್ಲಿ ಏಪ್ರಿಲ್ 23, 24, 25ರಂದು ನಡೆಯುವ ರಜತ ಮಹೋತ್ಸವವನ್ನು ವಿವಿಧ ಧಾರ್ಮಿಕ, ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು. ಈ ನಿಟ್ಟಿನಲ್ಲಿ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳಲಾಯಿತು.

ಪ್ರಧಾನ ಸಲಹೆಗಾರ ದೇವದಾಸ್ ನುಳ್ಳಿಪಾಡಿ ಸ್ವಾಗತಿಸಿ, ಸಾಂಸ್ಕೃತಿಕ ಸಮಿತಿಯ ಸಂಚಾಲಕ ರಾಜೇಶ್ ಅಮ್ಮೈ ವಂದಿಸಿದರು.

ಅಂಬಿಕಾ ವಿದ್ಯಾಲಯದಲ್ಲಿ ಸ್ಪರ್ಧಾವಿಜೇತರಿಗೆ ಬಹುಮಾನ ವಿತರಣೆ

ಪ್ರಶ್ನಿಸುವ ಮನೋಭಾವವಿದ್ದಾಗ ಸಾಧನೆ ಸಾಧ್ಯ

ಪುತ್ತೂರು: ವಿದ್ಯೆ ಎಂದರೆ ಅದು ವಿಮರ್ಶಾತೀತವಲ್ಲ. ವಿದ್ಯೆಯನ್ನೂ ವಿಶ್ಲೇಷಣೆಗೆ ಒಳಪಡಿಸಬೇಕು. ಯೋಚನಾ ಶಕ್ತಿ, ವಿಮರ್ಶಿಸುವುದೇ ನಿಜವಾದ ವಿದ್ಯೆ. ಯಾರಲ್ಲಿ ಪ್ರಶ್ನಿಸುವ ಮನೋಭಾವವಿರುತ್ತದೆಯೋ ಅಂತಹ ವ್ಯಕ್ತಿ ಶ್ರೇಷ್ಠ ಸಾಧನೆಯನ್ನು ಮಾಡುತ್ತಾನೆ ಎಂದು ಹೊಸದಿಲ್ಲಿಯ ಜವಾಹರಲಾಲ್ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ನರಸಿಂಹಮೂರ್ತಿ ಹೇಳಿದರು.

ನಗರದ ನಟ್ಟೋಜ ಫೌಂಡೇಶನ್ ಟ್ರಸ್ಟ್ ಮುನ್ನಡೆಸುತ್ತಿರುವ ಅಂಬಿಕಾ ಸಿ.ಬಿ.ಎಸ್.ಇ. ವಿದ್ಯಾಲಯದಲ್ಲಿ ಬೆಂಗಳೂರಿನ ನಂಬರ್ ಎಜುಕೇಶನಲ್ ಸೊಲ್ಯೂಶನ್ ಸಂಸ್ಥೆ ಆಯೋಜಿಸಿದ ವೇದ ಗಣಿತ ಮತ್ತು ಅಂದ ಬರವಣಿಗೆ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಅವರು ಬಹುಮಾನ ವಿತರಿಸಿ ಮಾತನಾಡಿದರು. ವಿದ್ಯೆ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು. ಸಹಬಾಳ್ವೆ, ಕೃತಜ್ಞತಾ ಮನೋಭಾವ, ಹೆತ್ತವರಿಗೆ ಗೌರವವನ್ನು ನೀಡುವುದೇ ವಿದ್ಯೆಯ ಮೂಲ ಉದ್ದೇಶವಾಗಿದೆ ಆದರೆ ವಿದ್ಯೆ ಇಂದು ಕಲಬೆರಕೆಯಾಗಿ, ಕೇವಲ ಪರೀಕ್ಷೆಗೆ ಸೀಮಿತವಾಗಿ ಇಂದು ತನ್ನ ಮೂಲ ಆಶಯವನ್ನು ಕಳೆದುಕೊಂಡಿದೆ ಎಂದು ತಿಳಿಸಿದರು.

ಅಂಬಿಕಾ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸುಬ್ರಮಣ್ಯ ನಟ್ಟೋಜ ಮಾತನಾಡಿ, ಈಗಿನ ಶಿಕ್ಷಣ ಪದ್ಧತಿಯಲ್ಲಿ ವೇದ ಶಿಕ್ಷಣವನ್ನು ಮಕ್ಕಳಿಗೆ ಹೇಳಿಕೊಡುವುದು ಅತ್ಯಂತ



ಅಗತ್ಯ. ವೇದ ಗಣಿತದಲ್ಲಿ ಅನೇಕ ಸಮಸ್ಯೆಗೆ ಸುಲಭವಾಗಿ ಪರಿಹಾರವನ್ನು ಕಂಡು ಹಿಡಿಯಬಹುದು. ಅಲ್ಲದೆ, ಇದರಿಂದ ಭಾರತದ ತತ್ವವನ್ನು ಬೆಳಕಿಗೆ ತಂದಂತಾಗುತ್ತದೆ. ಆದರೆ, ಇಂದು ಹಲವಾರು ಶಿಕ್ಷಣ ಸಂಸ್ಥೆಗಳು ಭಾರತ ತತ್ವವನ್ನು ಉಳಿಸುವಲ್ಲಿ ಸೋತಿವೆ. ಮುಂದೊಂದು ದಿನ ವೇದಗಣಿತ, ಸಂಸ್ಕೃತ, ಆಯುರ್ವೇದದಂತಹ ವಿಚಾರಗಳು ಪ್ರಪಂಚವನ್ನು ಆಳುವಂತಾಗಬೇಕು ಎಂದು ಆಶಿಸಿದರು.

ವೇದಿಕೆಯಲ್ಲಿ ನಂಬರ್ ಎಜುಕೇಶನಲ್ ಸೊಲ್ಯೂಶನ್ ಸಂಸ್ಥೆಯ ಸ್ಥಾಪಕ ಹಾಗೂ ವೇದ ಗಣಿತದ ಸಂಪನ್ಮೂಲ ವ್ಯಕ್ತಿ ನವೀನ್, ಸದಸ್ಯ ಸುಬ್ರಹ್ಮಣ್ಯ ಮತ್ತು ಶಾಲಾ ಪ್ರಾಂಶುಪಾಲೆ ಮಾಲತಿ ಡಿ. ಉಪಸ್ಥಿತರಿದ್ದರು. ನಂಬರ್ ಎಜುಕೇಶನಲ್ ಸೊಲ್ಯೂಶನ್ ಸಂಸ್ಥೆಯ ಸಹ ಸಂಸ್ಥಾಪಕ ಭರತ್ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳ ಹೆಸರಿನ ಪಟ್ಟಿಯನ್ನು ವಾಚಿಸಿದರು.

> ▸ ವಿದ್ಯೆ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕೊಡಬೇಕು.
>
> ▸ ಸಹಬಾಳ್ವೆ, ಕೃತಜ್ಞತಾ ಮನೋಭಾವ, ಹೆತ್ತವರಿಗೆ ಗೌರವವನ್ನು ನೀಡುವುದೇ ವಿದ್ಯೆಯ ಮೂಲ ಉದ್ದೇಶವಾಗಿದೆ

ಶಿಕ್ಷಕಿಯರಾದ ಕೃತಿಕಾ ಸ್ವಾಗತಿಸಿ, ಸುಷ್ಮಾ ವಂದಿಸಿದರು.

ವೇದ ಗಣಿತ ಸ್ಪರ್ಧೆಯಲ್ಲಿ 4ನೇ ತರಗತಿಯಲ್ಲಿ ಎಂ. ಅಂಶ್ ಕಾಮತ್ ಪ್ರಥಮ, ಅಕ್ಷರ ಎಚ್.ಪಿ. ದ್ವಿತೀಯ, ಪ್ರಚೇತ್ ಭಟ್ ತೃತೀಯ ಸ್ಥಾನ ಪಡೆದರೆ, 5ನೇ ತರಗತಿಯಲ್ಲಿ ಪರೀಕ್ಷಿತ್ ಎಸ್.ಪಿ. ಪ್ರ, ಶ್ರೀಯಾಂ ಕೆ.ಎಸ್. ದ್ವಿ, ಶ್ರೀಹಾನ್ ಗೌಡ ಕೆ.ಜೆ. ತೃ ಸ್ಥಾನ, 6ನೇ ತರಗತಿಯಲ್ಲಿ ಸ್ಪಂದನ ಭಟ್ ಪ್ರ, ಶೌರ್ಯ ಕೆ.ಆರ್. ದ್ವಿತೀಯ, ಶಿವಾನಿ ಪಿ.ವಿ. ತೃ. ಸ್ಥಾನ, 7ನೇ ತರಗತಿಯಲ್ಲಿ ಕೆ.ಎಂ. ಶಮಿತಾ ಭಟ್ ಪ್ರ, ಅನನ್ಯ ಪಿ. ದ್ವಿ ಹಾಗೂ ಸುಧನ್ವ ತೃ. ಸ್ಥಾನ, 8ನೇ ತರಗತಿಯಲ್ಲಿ ಸೌವರ್ಣಿಕ ಎಸ್. ದಾನೆಗೊಂಡರ್ ಪ್ರ, ಅನ್ವಿತಾ ಎಸ್. ದ್ವಿ, ಬಿಂದಿಯಾ ಎನ್. ತೃ. ಸ್ಥಾನ, 9ನೇ ತರಗತಿಯಲ್ಲಿ ಐಶಿನಿ ರೈ ಪ್ರ., ಶಾರ್ವಿ ಎಸ್. ರಾವ್ ದ್ವಿ, ಕುವಿರ ಕೆ.ವಿ. ತೃ.ಸ್ಥಾನ ಗಳಿಸಿದರು.

ಸುಂದರ ಬರವಣಿಗೆಯಲ್ಲಿ 2ನೇ ತರಗತಿಯ ವಿದ್ಯಾರ್ಥಿಗಳಾದ ಸಾದ್ವಿಕ್ ಎ.ಎಸ್. ಪ್ರ, ಹರ್ಷಿಲ್ ಬಂಗೇರ ದ್ವಿ, ಭುವಿ ಅವಿಷ್ಕಾ ತೃ. ಸ್ಥಾನ, 3ನೇ ತರಗತಿಯಲ್ಲಿ ಧನ್ವಿ ಬಿ.ವಿ. ಪ್ರ, ಬೆನಿಶಾ ಲೋಬೊ ದ್ವಿ, ಸ್ನೇಹಿತ್ ತೃ. ಸ್ಥಾನ, 4ನೇ ತರಗತಿಯಲ್ಲಿ ಪ್ರಸ್ತುತಿ ಪ್ರ, ಆದ್ಯ ಜೆ.ಎನ್. ದ್ವಿ, ಅಂಶ್ ಕಾಮತ್ ತೃ. ಸ್ಥಾನ, 5ನೇ ತರಗತಿಯ ನೈಮಿಷ ಪಿ.ವಿ. ಪ್ರ, ಹಾರ್ದಿಕ ದ್ವಿ, ಅನಿಷ್ಕಾ ಪಿ. ನಾಯಕ್ ತೃ, ಸ್ಥಾನ, 6ನೇ ತರಗತಿಯಲ್ಲಿ ಸ್ಪಂದನ ಎಂ. ಪ್ರ, ಜೀವಿಕಾ ಪಿ. ಭಟ್ ದ್ವಿ, ಯಶಿಕಾ. ಎಂ. ತೃ. ಸ್ಥಾನ, 7ನೇ ತರಗತಿಯ ಶಿತಿಜ್ ಪ್ರ, ಆಯುಷ್ ರಾವ್ ದ್ವಿ, ಶ್ರೀವತ್ಸ ವಿಠಲ ಭಟ್ಟ ತೃ. ಸ್ಥಾನ, 8ನೇ ತರಗತಿಯ ಅನ್ವಿತಾ ಎಸ್. ಪ್ರ, ಆಶ್ರಿತ್ ರಂಜನ್ ದ್ವಿ, ಆದ್ಯ ಶೆಣೈ ತೃ. ಸ್ಥಾನ, 9ನೇ ತರಗತಿಯ ಸಾನ್ವಿ ಪ್ರ, ಸೋನಾ ಪೃಥ್ವಿ ದ್ವಿ. ಹಾಗೂ ವಂಶಿಕ ಬಿ. ರೈ ತೃ. ಸ್ಥಾನವನ್ನು ಪಡೆದುಕೊಂಡಿದ್ದಾರೆ.

ಉಜಿರೆಯ ಎಸ್‌ಡಿಎಂ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘ, ಕಾಲೇಜಿನ ಸಹಕಾರದಲ್ಲಿ ನಡೆದ 20ನೇ 'ಎಸ್‌ಡಿಎಂ ನೆನಪಿನಂಗಳ' ಸರಣಿ ಕಾರ್ಯಕ್ರಮ

ಗುರು-ಹಿರಿಯರ ಮಾರ್ಗದರ್ಶನ, ಸ್ವಪ್ರಯತ್ನ ಇದ್ದರೆ ಗುರಿ ಸಾಧನೆಯು ಸುಲಭ

ಬೆಳ್ತಂಗಡಿ: ವಿದ್ಯಾರ್ಥಿಗಳಿಗೆ ಪ್ರತಿಯೊಂದು ಅವಕಾಶಗಳು ಹೊಸ ಪಾಠ ಮತ್ತು ಅನುಭವ ನೀಡುತ್ತದೆ. ಆ ಅನುಭವದ ಮೂಲಕ ನಮ್ಮ ಭವಿಷ್ಯದ ದಾರಿಯನ್ನು ಕಂಡುಕೊಳ್ಳಬೇಕು ಹಾಗೂ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕು. ಕಾಲೇಜು ಜೀವನ ನೂರಾರು ಸಾಧನೆಗಳನ್ನು ಮಾಡಲು ದಾರಿಮಾಡಿ ಕೊಡುತ್ತದೆ. ಗುರು ಹಿರಿಯರ ಮಾರ್ಗದರ್ಶನದ ಜತೆಗೆ ಸ್ವ ಪ್ರಯತ್ನ ಹಾಗೂ ಛಲದಿಂದ ಹೆಜ್ಜೆ ಹಾಕಿದರೆ ಸಾಧನೆಯ ಗುರಿ ತಲುಪಬಹುದು ಎಂದು ಪುತ್ತೂರಿನ ಅಂಬಿಕಾ ಮಹಾವಿದ್ಯಾಲಯದ ಪ್ರಾಚಾರ್ಯ ರಾಕೇಶ್ ಕಮ್ಮಜೆ ಅಭಿಪ್ರಾಯಪಟ್ಟರು.

ಅವರು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ನಾತಕೋತ್ತರ ಕೇಂದ್ರದ ಸಭಾಭವನದಲ್ಲಿ ಎಸ್.ಡಿ.ಎಂ ಕಾಲೇಜಿನ ಹಿರಿಯ ವಿದ್ಯಾರ್ಥಿ ಸಂಘ ಮತ್ತು ಎಸ್.ಡಿ.ಎಂ ಕಾಲೇಜಿನ ಸಹಕಾರದಲ್ಲಿ ಆಯೋಜಿಸಿದ್ದ 20ನೇ 'ಎಸ್.ಡಿ.ಎಂ. ನೆನಪಿನಂಗಳ' ಸರಣಿ ಕಾರ್ಯಕ್ರಮದಲ್ಲಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಗಳೊಂದಿಗೆ ಸಂವಾದ ಹಾಗೂ ವಿದ್ಯಾರ್ಥಿ ವೇತನ ವಿತರಣೆ ಕಾರ್ಯಕ್ರಮದಲ್ಲಿ



ಮುಖ್ಯ ಅತಿಥಿಯಾಗಿ ಮಾತನಾಡಿದರು.

ವಿದ್ಯೆ ನೀಡಿದ ಸಂಸ್ಥೆಯ ಋಣವನ್ನು ನಾವೆಂದೂ ತೀರಿಸಲು ಸಾಧ್ಯವಿಲ್ಲ. ಸಣ್ಣಸಣ್ಣ ವಿಷಯಗಳಿಂದಲೂ ಕಲಿಕೆಗೆ ಅವಕಾಶಗಳು ಹಲವಿರುತ್ತದೆ. ಮನುಷ್ಯ ದಿನೇ ದಿನೇ ಪ್ರಬುದ್ಧತೆಯೆಡೆಗೆ ಸಾಗಬೇಕು. ಎಲ್ಲದಕ್ಕೂ ಮಿಗಿಲಾಗಿ ನಮ್ಮೊಳಗಿನ ಸ್ವ ಸ್ಫೂರ್ತಿ ಜಾಗರೂಕವಾಗಿರಬೇಕು, ಜತೆಗೆ ಸಾಧನೆಯೆಡೆಗಿನ ತುಡಿತ ನಮ್ಮನ್ನು ಸದಾ ಕಾಡುತ್ತಿರಬೇಕು ಎಂದರು.

ಕಾಲೇಜಿನ ಪ್ರಾಚಾರ್ಯ ಪ್ರೊ. ವಿಶ್ವನಾಥ್ ಪಿ. ಮಾತನಾಡಿ, ಈ ನೆಲದ ಮಹಾನ್ ಸಾಧಕರ ಜೀವನ ಸದಾ ನಮಗೆಲ್ಲರಿಗೂ ಪ್ರೇರಣೆ. ಈ ಪ್ರೇರಣೆ ವಿದ್ಯಾರ್ಥಿಗಳಲ್ಲೂ ಜಾಗರೂಕವಾದಾಗ ನೆನಪಿನಂಗಳದಂತಹ ಕಾರ್ಯಕ್ರಮಗಳು ಯಶಸ್ವಿಯಾಗುತ್ತವೆ. ನೆನಪಿನಂಗಳ ಕಾರ್ಯಕ್ರಮಕ್ಕೆ ಆದರದ್ದೇ ಆದ ಹಿನ್ನೆಲೆ ಮತ್ತು ಉದ್ದೇಶವನ್ನು ಹೊತ್ತುಕೊಂಡು ನಿರಂತರವಾಗಿ ಕಾರ್ಯಕ್ರಮಗಳನ್ನು ಮಾಡುತ್ತಾ ಬರುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ಪ್ರತಿಯೊಬ್ಬ ಸಾಧಕ ಅತಿಥಿಯ ಮಾತು ನಮಗೆ ಸ್ಫೂರ್ತಿ ಹಾಗೂ ಪ್ರೇರಣೆಯಾಗಬೇಕು. ಸಾಧಕರ ವ್ಯಕ್ತಿತ್ವ ನಮ್ಮ ವ್ಯಕ್ತಿತ್ವವನ್ನೂ ರೂಪಿಸುವಂತೆ ಆಗಬೇಕು ಎಂದರು.

> **ದಿ. ಪ್ರೊ. ಎಸ್. ಪ್ರಭಾಕರ್‌ರಿಗೆ ಅರ್ಪಣೆ**
>
> ಉಜಿರೆಯ ಎಸ್.ಡಿ.ಎಂ ಕಾಲೇಜಿನ ಸ್ಥಾಪಕ ಪ್ರಾಚಾರ್ಯರಾಗಿದ್ದ ದಿವಂಗತ ಪ್ರೊ. ಎಸ್. ಪ್ರಭಾಕರ್ ಅವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ನುಡಿನಮನ ಸಲ್ಲಿಸಲಾಯಿತು. ಸಂಪೂರ್ಣ ನೆನಪಿನಂಗಳ ಕಾರ್ಯಕ್ರಮವನ್ನು ದಿ. ಪ್ರೊ. ಎಸ್. ಪ್ರಭಾಕರವರವರಿಗೆ ಸಮರ್ಪಿಸಲಾಗುವುದು ಎಂದು ಘೋಷಿಸಲಾಯಿತು.

ಅಧ್ಯಕ್ಷತೆ ವಹಿಸಿದ್ದ ಬೆಳ್ತಂಗಡಿಯ ಹಿರಿಯ ವಕೀಲ ಹಾಗೂ ಎಸ್.ಡಿ.ಎಂ ಹಿರಿಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಬಿ. ಕೆ. ಧನಂಜಯ ರಾವ್ ಮಾತನಾಡಿ, ಬದುಕಿನಲ್ಲಿ ಸಾಧನೆಯ ಪಥದಲ್ಲಿ ಸಾಗುತ್ತಾ ಹೋದ ಹಾಗೆ ನಾವು ಶ್ರೇಷ್ಠರೆನಿಸಿಕೊಳ್ಳುತ್ತೇವೆ. ಇದಕ್ಕೆಲ್ಲ ಪ್ರೇರಣೆಯಾದ ನಮ್ಮ ಶಾಲೆ ಹಾಗೂ ಕಾಲೇಜು ದಿನಗಳು ಸದಾ ನೆನಪಿನಲ್ಲಿ ಸ್ಮರಣೀಯವಾಗಿರುತ್ತದೆ ಎಂದರು.

ಇದೇ ಸಂದರ್ಭದಲ್ಲಿ ತಮ್ಮ ವೃತ್ತಿ ಬದುಕಿನಲ್ಲಿ ನಾನಾ ಹುದ್ದೆಗಳಲ್ಲಿ ಹಲವು ದಶಕಗಳಿಂದ ಸೇವೆ ಮಾಡಿಕೊಂಡು ಬಂದಿರುವ ಎಸ್.ಡಿ.ಎಂ ಸಂಸ್ಥೆಯ ಹಿರಿಯ ವಿದ್ಯಾರ್ಥಿಯ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ಅತಿಥಿಗಳಾದ ರಾಕೇಶ್ ಕಮ್ಮಜೆಯವರಿಗೆ ಪ್ರಾಚಾರ್ಯ ಪ್ರೊ.ವಿಶ್ವನಾಥ ಪಿ. ಎಸ್.ಡಿ.ಎಂ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸನ್ಮಾನಿಸಿದರು. ಕಾರ್ಯಕ್ರಮದದಲ್ಲಿ ಪಿಜಿ ವಿಭಾಗದ ಡೀನ್ ಸೌಮ್ಯ ಕುಮಾರಿ, ಬೋಧಕ ಮತ್ತು ಬೋಧಕೇತರರ ಸಿಬ್ಬಂದಿಗಳು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಎಸ್.ಡಿ.ಎಂ ಕಾಲೇಜಿನ ರಾಜ್ಯಶಾಸ್ತ್ರ ಉಪನ್ಯಾಸಕ ಶಿವಕುಮಾರ್ ನಿರೂಪಿಸಿ, ಉಪನ್ಯಾಸಕ ಅಭಿಲಾಶ್ ವಂದಿಸಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಗೂ ಹಿರಿಯ ವಿದ್ಯಾರ್ಥಿ ಸಂಘ ಸಮಿತಿಯ ಸಂಯೋಜಕ ಡಾ. ಎಂ.ಪಿ. ಶ್ರೀನಾಥ್ ಕಾರ್ಯಕ್ರಮವನ್ನು ಸಂಯೋಜಿಸಿದರು. ಉಪನ್ಯಾಸಕ ಡಾ. ದಿವಾಕರ ಕೊಕ್ಕಡ ಮತ್ತು ದೀಕ್ಷಿತ್ ರೈ ಸಹಕರಿಸಿದರು.

ವಿದ್ಯಾರ್ಥಿ ವೇತನ ವಿತರಣೆ

ನೆನಪಿನಂಗಳ ಕಾರ್ಯಕ್ರಮದ ಆಶಯದಂತೆ ಕಾಲೇಜಿನ ಪ್ರಥಮ ವರ್ಷದ ಪತ್ರಿಕೋದ್ಯಮ ವಿದ್ಯಾರ್ಥಿನಿ ಸಿಂಧು ಅವರಿಗೆ ಅತಿಥಿಗಳಾದ ರಾಕೇಶ್ ಕಮ್ಮಜೆ ಚೆಕ್ ನೀಡಿ ಶುಭ ಹಾರೈಸಿದರು.

ವೃತ್ತಿ ನಿವೃತ್ತ ಡಾ. ಭಾಸ್ಕರ್ ಹೆಗಡೆಯವರಿಗೆ ಸನ್ಮಾನ

ಉಜಿರೆಯ ಎಸ್.ಡಿ.ಎಂ ಸ್ವಾಯತ್ತ ಕಾಲೇಜಿನ ಪತ್ರಿಕೋದ್ಯಮ ವಿಭಾಗದಲ್ಲಿ ಮೂವತ್ತಮೂರು ವರ್ಷ ಉಪನ್ಯಾಸಕರಾಗಿ, ವಿಭಾಗ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಪ್ರೊ.ಭಾಸ್ಕರ ಹೆಗ್ದೆಯವರನ್ನು ಸನ್ಮಾನಿಸಲಾಯಿತು.

ಕಿರುಸುದ್ದಿ

ಕಾಫಿ ಕಳವು : ಕೆಲವೇ ಗಂಟೆಯಲ್ಲಿ ಆರೋಪಿ ಸೆರೆ

ಮಡಿಕೇರಿ: ಕಾಫಿ ಕಳವು ಪ್ರಕರಣದ ಬಗ್ಗೆ ದೂರು ದಾಖಲಾದ ಕೇವಲ ಗಂಟೆಯಲ್ಲಿ ಕ್ಷಿಪ್ರ ಕಾರ್ಯಾಚರಣೆಯ ಮೂಲಕ ಮಾಲು ಸಮೇತ ಆರೋಪಿಗಳನ್ನು ಬಂಧಿಸುವಲ್ಲಿ ಸುಂಟಿಕೊಪ್ಪ ಪೊಲೀಸರು ಯಶಸ್ವಿಯಾಗಿದ್ದಾರೆ.

ಸುಂಟಿಕೊಪ್ಪ ಸಮೀಪದ ಕಾನ್‌ಬೈಲ್‌ನ ಜಿ.ಜಿ. ರಾಜೇಂದ್ರಕುಮಾರ್ ಅವರ ತೋಟದ ಕಾಫಿ ಕಣದಲ್ಲಿ ಇರಿಸಿದ್ದ 128 ಕೆ.ಜಿ ಚೆರಿ ಕಾಫಿ ಬೆಳಗ್ಗೆ 4 ಗಂಟೆಯ ವೇಳೆಯಲ್ಲಿ ಕಳ್ಳತನವಾಗಿತ್ತು. ಈ ಕುರಿತು ತೋಟದ ವ್ಯವಸ್ಥಾಪಕರು ಸುಂಟಿಕೊಪ್ಪ ಪೊಲೀಸ್ ಠಾಣೆಗೆ ದೂರು ನೀಡುತ್ತಿದ್ದಂತೆ ಪ್ರಕರಣವನ್ನು ದಾಖಲಿಸಿಕೊಂಡ ಪೊಲೀಸರು ಎಂ.ಎ. ದೀಕ್ಷಿತ್, ಕೆ. ಮನೋಜ್ ಹಾಗೂ ವಿನೋದ್ ಕುಮಾರ್ ಅವರುಗಳನ್ನು ಮಾಲು ಸಹಿತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕಳ್ಳತನಕ್ಕೆ ಬಳಸಿದ ಕಾರು ಮತ್ತು ದ್ವಿಚಕ್ರ ವಾಹನವನ್ನು ಪೊಲೀಸರು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕುಶಾಲನಗರ ಡಿವೈಎಸ್‌ಪಿ ಚಂದ್ರಶೇಖರ್, ವೃತ್ತನಿರೀಕ್ಷಕ ದಿನೇಶ್ ಕುಮಾರ್ ಮಾರ್ಗದರ್ಶನದಲ್ಲಿ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಮೋಹನ್‌ರಾಜ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಎಎಸ್‌ಐ ಬಸಪ್ಪ, ಸಿಬ್ಬಂದಿಗಳಾದ ಪ್ರವೀಣ್, ಶಶಿಕುಮಾರ್, ಕಿರಣ್, ಪುನೀತ್, ಧನಲಕ್ಷ್ಮಿ ಮತ್ತಿತರರು ಪಾಲ್ಗೊಂಡಿದ್ದರು.

ಇಂದು, ನಾಳೆ ಶ್ರೀ ಕೋರ್ದಬ್ಬು ದೈವಸ್ಥಾನದ ವಾರ್ಷಿಕ ನೇಮ

ಮೂಲ್ಕಿ: ಕೊಲ್ನಾಡು ಬೆಳ್ಳಾಯರು ಶ್ರೀ ಕೋರ್ದಬ್ಬು ದೈವಸ್ಥಾನದ ವಾರ್ಷಿಕ ನೇಮ ಫೆ. 28 ಮತ್ತು ಮಾ. 1ರಂದು ನಡೆಯಲಿದೆ. ಫೆ. 28ರಂದು ಧ್ವಜಸ್ತಂಭ ಮುಹೂರ್ತ, ಚಪ್ಪರ ಏರುವುದು, ಸಂಜೆ ಭಂಡಾರ ಹೊರಡುವುದು, ರಾತ್ರಿ ಸಾರ್ವಜನಿಕ ಅನ್ನಸಂತರ್ಪಣೆ, ಅನಂತರ ಶ್ರೀ ಕೋರ್ದಬ್ಬು ಮತ್ತು ಶ್ರೀ ತನ್ನಿಮಾನಿಗ ದೈವದ ನೇಮ, ಮಾ. 1ರಂದು ಬೆಳಗ್ಗೆ ಶ್ರೀ ಗುಳಿಗ ಮತ್ತು ಸಂಜೆ ಶ್ರೀ ಧೂಮಾವತಿ ಹಾಗೂ ಬಂಟ ದೈವಗಳ ನೇಮ ನಡೆಯಲಿದೆ.

ಕ್ಷುಲ್ಲಕ ಕಾರಣಕ್ಕೆ ಹೊಡೆದಾಟ

ಮಂಗಳೂರು: ನಗರದ ಕಾರ್‌ಸ್ಟ್ರೀಟ್‌ನಲ್ಲಿ ಕ್ಷುಲ್ಲಕ ಕಾರಣಕ್ಕೆ ಇಬ್ಬರು ವ್ಯಕ್ತಿಗಳು ರಸ್ತೆಯಲ್ಲಿ ಕಲ್ಲಿನಿಂದ ಹೊಡೆದಾಡಿಕೊಂಡ ಘಟನೆ ನಡೆದಿದ್ದು, ಇದರ ವಿಡಿಯೋ ಎರಡು ದಿನದ ಬಳಿಕ ವೈರಲ್ ಆಗಿದೆ. ರಸ್ತೆ ಬದಿ ಮಾರಾಟಕ್ಕೆ ಇರಿಸಿದ ವಸ್ತುವನ್ನು ಅಪರಿಚಿತ ವ್ಯಕ್ತಿ ತುಳಿದುಕೊಂಡು ಹೋಗಿದ್ದಾನೆ. ಇದನ್ನು ಆಕ್ಷೇಪಿಸಿದ ಸ್ಥಳೀಯರೊಬ್ಬರ ಮೇಲೆ ಅಪರಿಚಿತ ವ್ಯಕ್ತಿ ಅಲ್ಲೇ ಇದ್ದ ಕಲ್ಲನ್ನು ಎತ್ತಿ ಹಲ್ಲೆ ನಡೆಸಿದ್ದಾನೆ. ಈ ಗಲಾಟೆ ತಾರಕಕ್ಕೇರಿ ಪರಸ್ಪರ ಹೊಡೆದಾಡಿ, ಹೊರಳಾಡಿಕೊಂಡು ಹಲ್ಲೆ ನಡೆಸಿದ್ದಾರೆ. ಇಬ್ಬರು ವ್ಯಕ್ತಿಗಳು ಗಂಭೀರವಾಗಿ ಹೊಡೆದಾಡಿಕೊಳ್ಳುತ್ತಿದ್ದರೂ ಅದನ್ನು ತಡೆಯಲು ಪ್ರಯತ್ನಪಡದ ವ್ಯಕ್ತಿಯೊಬ್ಬ ಘಟನೆಯನ್ನು ಚಿತ್ರೀಕರಣ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯ ಬಿಟ್ಟಿದ್ದಾನೆ. ಮಹಿಳೆಯೊಬ್ಬರು ಇವರಿಬ್ಬರ ಗಲಾಟೆಯನ್ನು ಬಿಡಿಸುವ ಪ್ರಯತ್ನ ಮಾಡಿದರೆ, ವಿಡಿಯೋ ಮಾಡುವ ವ್ಯಕ್ತಿ ಚಿತ್ರೀಕರಣದಲ್ಲಿ ಮಗ್ನನಾಗಿದ್ದ. ಈ ವಿಚಾರ ಪೊಲೀಸರ ಗಮನಕ್ಕೂ ಬಂದಿದೆ.

ಮಾ. 1: ಉಚ್ಚಿಲದಲ್ಲಿ ಮೊಗವೀರ ಕುಲಗುರುಗಳ ಪುತ್ಥಳಿ ನಿರ್ಮಾಣ

ಬೃಹತ್ ಸಮಾವೇಶ, ಬೈಕ್ ಜಾಥಾ

ಉಡುಪಿ: ಉಚ್ಚಿಲದ ಶ್ರೀ ಮಹಾಲಕ್ಷ್ಮೀ ದೇವಸ್ಥಾನದ ಆವರಣದಲ್ಲಿ ಮೊಗವೀರ ಸಮಾಜದ ಕುಲಗುರುಗಳಾದ ಕೀರ್ತಿಶೇಷ ಶ್ರೀ ಮಾಧವ ಮಂಗಲ ಪೂಜಾರ್ಯರ ಬೃಹತ್ ಕಂಚಿನ ಪುತ್ಥಳಿ ನಿರ್ಮಾಣದ ಅಂಗವಾಗಿ, ಮಾ. 1 ರಂದು ಸಾಮೂಹಿಕ ಗುರುಪಾದ ಕಾಣಿಕೆ ಸಮರ್ಪಣೆ, ಬೃಹತ್ ಸಮಾವೇಶ ಹಾಗೂ ಬೈಕ್ ಜಾಥಾ ನಡೆಯಲಿದೆ ಎಂದು ನಾಡೋಜ ಡಾ. ಜಿ. ಶಂಕರ್ ತಿಳಿಸಿದ್ದಾರೆ.



ಉಚ್ಚಿಲ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು ಸಾವಿರ ವರ್ಷಗಳ ಇತಿಹಾಸವಿರುವ ಮೊಗವೀರ ಸಮಾಜದ 9ನೇ ತಲೆಮಾರಿನ ಕೊನೆಯ ಕುಲಗುರುಗಳು ಹಾಗೂ ಉಚ್ಚಿಲ ಕ್ಷೇತ್ರದ ಸ್ಥಾಪಕರೂ ಆದ ಶ್ರೀ ಮಾಧವ ಮಂಗಲ ಪೂಜಾರ್ಯರ ಪ್ರತಿಮೆಯನ್ನು ಅಷ್ಟಮಂಗಳ ಪ್ರಶ್ನೆಯಲ್ಲಿ ಕಂಡುಬಂದ ಮಾರ್ಗದರ್ಶನದಂತೆ ನಿರ್ಮಿಸಲಾಗುತ್ತಿದೆ. ಸುಮಾರು 3 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ಕಂಚಿನ ಪುತ್ಥಳಿಯು ಸಮಾಜದ ಏಕತೆ ಮತ್ತು ಗುರುಭಕ್ತಿಯ ಸಂಕೇತವಾಗಲಿದೆ ಎಂದರು.

10 ಸಾವಿರಕ್ಕೂ ಅಧಿಕ ಭಕ್ತರ ಸಮಾವೇಶ

ಮಾ. 1ರಂದು ಬೆಳಿಗ್ಗೆ 10.30ಕ್ಕೆ ಉಚ್ಚಿಲದ ಶಾಲಿನಿ ಡಾ. ಜಿ. ಶಂಕರ್ ಸಭಾಂಗಣದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಕೇರಳದ ಉಪ್ಪಳದಿಂದ ಬೈಂದೂರಿನ ಶೀರೂರುವರೆಗಿನ ಒಟ್ಟು 336 ಮೊಗವೀರ ಗ್ರಾಮ ಸಭೆಗಳು, ಕೂಡುಕಟ್ಟುಗಳು ಹಾಗೂ ದೇಶ-ವಿದೇಶಗಳ ಮೊಗವೀರ ಸಂಘಟನೆಗಳ ಸುಮಾರು 10 ಸಾವಿರಕ್ಕೂ ಅಧಿಕ ಮಂದಿ ಈ ಐತಿಹಾಸಿಕ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

> **2000 ದ್ವಿಚಕ್ರ ವಾಹನಗಳ ಜಾಥಾ**
>
> **ಯುವ ಜನತೆಯಲ್ಲಿ ಜಾಗೃತಿ ಮೂಡಿಸಲು ಬೆಳಿಗ್ಗೆ 9.30ಕ್ಕೆ ದಕ್ಷಿಣದ ಹೆಜಮಾಡಿ ಟೋಲ್ ಪ್ಲಾಜಾ ಹಾಗೂ ಉತ್ತರದ ಪಾಂಗಾಳ ಶ್ರೀ ಲಕ್ಷ್ಮೀ ಜನಾರ್ಧನ ದೇವಸ್ಥಾನದ ಆವರಣದಿಂದ ಏಕಕಾಲಕ್ಕೆ ಬೈಕ್ ಜಾಥಾ ಹೊರಡಲಿದೆ. ಸುಮಾರು 2000 ದ್ವಿಚಕ್ರ ವಾಹನಗಳು ರಾಷ್ಟ್ರೀಯ ಹೆದ್ದಾರಿ 66ರ ಮೂಲಕ ಶಿಸ್ತುಬದ್ಧವಾಗಿ ಸಂಚರಿಸಿ ಉಚ್ಚಿಲ ಕ್ಷೇತ್ರವನ್ನು ತಲುಪಲಿವೆ.**

ಗುರುಪಾದ ಕಾಣಿಕೆ ಹಾಗೂ ಸಾಮಾಜಿಕ ಸೇವೆ

ದೇವಸ್ಥಾನದ ಮುಂಭಾಗ ಪುತ್ಥಳಿ ನಿರ್ಮಾಣವಾಗುವ ಜಾಗದಲ್ಲಿ ಗುರುಗಳ ಚಿನ್ನ ಲೇಪಿತ ಪಾದುಕೆಯನ್ನು ಇರಿಸಲಾಗುತ್ತಿದ್ದು, ಭಕ್ತರು ಪಾದಕಾಣಿಕೆ ಸಮರ್ಪಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. ಈ ಸಂದರ್ಭದಲ್ಲಿ 500ಕ್ಕೂ ಅಧಿಕ ಯುವಕರಿಂದ ಅಂಗಾಂಗ ದಾನ ನೋಂದಣಿ ನಡೆಯಲಿದ್ದು, ಮುಂದಿನ ದಿನಗಳಲ್ಲಿ ಬೃಹತ್ ರಕ್ತದಾನ ಶಿಬಿರವನ್ನೂ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಜಯ ಸಿ. ಕೋಟ್ಯಾನ್, ಮೋಹನ್ ಬೆಂಗ್ರೆ, ಗಿರಿಧರ್ ಸುವರ್ಣ, ಮನೋಜ್ ಸಾಲ್ಯಾನ್, ಶರಣ್ ಕುಮಾರ್ ಮಟ್ಟು, ರತ್ನಾಕರ್ ಸಾಲಿಯಾನ್, ಸತೀಶ್ ಅಮೀನ್ ಬೆಣ್ಣೆಕುದ್ರು, ಉದಯ ಕುಮಾರ್ ಹಟ್ಟಿಯಂಗಡಿ, ರವೀಶ್ ಎಸ್. ಕೊರವಡಿ, ದಿನೇಶ್ ಎರ್ಮಾಳ್ ಉಪಸ್ಥಿತರಿದ್ದರು.

ಶಂಭು ಭಟ್ಟರ ಸವಿನೆನಪಿನ ಶಿಕ್ಷಣ ಪ್ರೋತ್ಸಾಹ ಯೋಜನೆ

ಮಾ.5: ವಿಷ್ಣು ಗಣಪತಿ ಭಟ್‌ಗೆ 'ಉಂಡೆಮನೆ ಪ್ರಶಸ್ತಿ' ಪ್ರದಾನ

ಬೆಳ್ತಂಗಡಿ: ಉಂಡೆಮನೆ ಶಂಭು ಭಟ್ಟರ ಸವಿನೆನಪಿನ ಶಿಕ್ಷಣ ಪ್ರೋತ್ಸಾಹ ಯೋಜನೆಯ ಅಂಗವಾಗಿ ಪ್ರತಿವರ್ಷ ನೀಡುವ 'ಉಂಡೆಮನೆ ಪ್ರಶಸ್ತಿ'ಯನ್ನು ಈ ಬಾರಿ ವಿವೇಕಾನಂದ ಮಹಾವಿದ್ಯಾಲಯದ ವಿಶ್ರಾಂತ ಪ್ರಾಚಾರ್ಯ ವಿ. ಜಿ. ಭಟ್ ಎಂದೇ ಖ್ಯಾತಿ ಪಡೆದಿರುವ ವಿಷ್ಣು ಗಣಪತಿ ಭಟ್ ಅವರಿಗೆ ಪ್ರದಾನ ಮಾಡಿ ಗೌರವಿಸಲಾಗುವುದು ಎಂದು ಸಂಯೋಜಕ ಉಂಡೆಮನೆ ವಿಶ್ವೇಶ್ವರ ಭಟ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಮೂಲತಃ ಹೊನ್ನಾವರದ ಕರ್ಕಿಯವರಾದ ವಿ.ಜಿ. ಭಟ್ ಪ್ರಸ್ತುತ ಪುತ್ತೂರು ನಿವಾಸಿ. ಪುತ್ತೂರು ತಾಲೂಕಿನ ಎಲ್ಲಾ ಶೈಕ್ಷಣಿಕ, ಸಾಂಸ್ಕೃತಿಕ, ಸಾಹಿತ್ಯಕ ಮತ್ತು ಸಾಮಾಜಿಕ ಚಟುವಟಿಕೆಗಳಲ್ಲಿ ನಿಜಾರ್ಥದಲ್ಲಿ ಸಕ್ರಿಯ ಸ್ವಯಂಸೇವಕರಾಗಿ, ಸಂಯೋಜಕರಾಗಿ, ಕಾರ್ಯಕರ್ತರಾಗಿ ಇವರು ಭಾಗವಹಿಸುತ್ತಿದ್ದಾರೆ. ವಿವೇಕಾನಂದ ಮಹಾವಿದ್ಯಾಲಯದ ಪದವಿ ಪೂರ್ವ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ 2001 ರಿಂದ 2012 ರವರೆಗೆ ಸೇವೆ ಸಲ್ಲಿಸಿದ್ದರು. ಈ ಸಂದರ್ಭದಲ್ಲಿ ಇವರ ನಾಯಕತ್ವದಲ್ಲಿ ಈ ಸಂಸ್ಥೆಯು ನಾಡಿನಲ್ಲಿ ಅತ್ಯುತ್ತಮ ಶಿಕ್ಷಣ ಸಂಸ್ಥೆಯಾಗಿ ಹೆಸರನ್ನು ಪಡೆದಿದ್ದು ಇಂದೂ ಅದನ್ನು ಉಳಿಸಿಕೊಂಡು ಬರಲಾಗಿದೆ.

ವಿವೇಕಾನಂದ ಮಹಾವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದ ಉಪನ್ಯಾಸಕರಾಗಿ, ಎನ್. ಎಸ್. ಎಸ್. ಸಂಯೋಜಕರಾಗಿಯೂ ಯಶಸ್ವಿ ವೃತ್ತಿಜೀವನವನ್ನು ನಡೆಸಿದ ಅವರು ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಹಮ್ಮಿಕೊಂಡಿರುವ ಎಲ್ಲಾ ಸಮಾಜಸೇವಾ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿರುವ 'ಎಲ್ಲರೊಳಗೊಂದಾಗುವ' ಅವರ ವಿಶಿಷ್ಟ ಗುಣವನ್ನು ಗುರುತಿಸಿ 30ನೆಯ ವರ್ಷದ (2025ನೆಯ ಸಾಲಿನ) ಉಂಡೆಮನೆ ಪ್ರಶಸ್ತಿಯನ್ನು

ಮಾ.5 ರಂದು ಗುರುವಾಯನಕೆರೆ ಸನಿಹದ ನಮ್ಮಮನೆ ಹವ್ಯಕಭವನದಲ್ಲಿ ಶ್ರೀ ರಾಘವೇಶ್ವರ ಭಾರತೀ ಮಹಾಸ್ವಾಮಿಗಳು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಪೋಕ್ಸೋ ಆರೋಪಿಗಳ ಸಹಿತ 32 ಮಂದಿಯ ಬಂಧನ

ಕಾಸರಗೋಡು: ಮಂಜೇಶ್ವರದ ಲಾಡ್ಜ್ ಕೊಠಡಿಯಲ್ಲಿ ಯುವಕ ಮತ್ತು ಯುವತಿಯ ನಗ್ನ ಚಿತ್ರ ತೆಗೆದು ಬೆದರಿಸಿದ ಪ್ರಕರಣದ ಪ್ರಥಮ ಆರೋಪಿ, ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಪೋಕ್ಸೋ ಪ್ರಕರಣದ ಆರೋಪಿಗಳು ಮತ್ತು 32 ವಾರಂಟ್ ಆರೋಪಿಗಳನ್ನು ಕಾಸರಗೋಡು ಜಿಲ್ಲಾ ಪೊಲೀಸ್ ಮುಖ್ಯಸ್ಥರ ಸೂಚನೆಯ ಮೇರೆಗೆ ನಡೆಸಿದ ಮಿಂಚಿನ ಕಾರ್ಯಾಚರಣೆಯಲ್ಲಿ ಬಂಧಿಸಲಾಗಿದೆ.

ಮಂಜೇಶ್ವರ ಪೊಲೀಸರು ದಾಖಲಿಸಿರುವ ಪ್ರಕರಣದ ಪ್ರಥಮ ಆರೋಪಿ ಹೊಸಬೆಟ್ಟು ನಿವಾಸಿ ಬಡಾಜೆ ಮೊಯ್ದುದ್ದೀನ್ ಸಮದ್ (33) ಎಂಬಾತನನ್ನು ಮಂಜೇಶ್ವರ ಇನ್ಸ್‌ಪೆಕ್ಟರ್ ಅಜಿತ್ ಕುಮಾರ್ ನೇತೃತ್ವದ ಎಸ್‌ಐಗಳಾದ ಕೆ.ಆರ್.ಉಮೇಶ್ ಮತ್ತು ರತೀಶ್ ಅವರನ್ನೊಳಗೊಂಡ ತಂಡ ಬಂಧಿಸಿದೆ. ಅಲ್ಲದೆ ವಿದ್ಯಾನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಿ ಹಿದಾಯತ್ ನಗರ ಮುಟ್ಟತ್ತೋಡಿ ನಿವಾಸಿ ಅಬ್ದುಲ್ ಲತೀಫ್ (54) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ವಿದ್ಯಾನಗರ ಇನ್ಸ್‌ಪೆಕ್ಟರ್ ಶೈನ್ ಕೆ.ಪಿ., ಎಸ್‌ಐ ಸಫ್ವಾನ್ ಕೆ.ಪಿ., ಎಎಸ್‌ಐ ಶಿವನ್, ಎಸ್‌ಸಿಪಿಒ ಹರೀಶ್, ಸಿಪಿಒಗಳಾದ ಉಣ್ಣಿಕೃಷ್ಣನ್ ಮತ್ತು ನಿಖಿಲ್ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಅಲ್ಲದೆ ತಪಾಸಣೆಯ ಸಮಯದಲ್ಲಿ ಜಿಲ್ಲೆಯಲ್ಲಿ ವಿವಿಧ ಪ್ರಕರಣಗಳಲ್ಲಿ 31 ವಾರಂಟ್ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ವರದಿಯಾಗಿದೆ.

ಐರ್ಲೆಂಡಿನಲ್ಲಿ ಸಾವು: ಇನ್ನೂ ಸ್ವಗ್ರಾಮಕ್ಕೆ ತಲುಪದ ಕಡಬದ ಯುವಕನ ಪಾರ್ಥಿವ ಶರೀರ

ಕಡಬ: ಐರ್ಲೆಂಡ್‌ನಲ್ಲಿ ಫೆ. 19 ರಂದು ಮೃತಪಟ್ಟಿರುವ ಕಡಬ ತಾಲೂಕಿನ ಕುಟ್ರುಪಾಡಿ ಗ್ರಾಮದ ವಿಮಲಗಿರಿ ನಿವಾಸಿ ಕೃಷಿಕ ಸುನಿಲ್ ಅವರ ಪುತ್ರ ಸ್ಯಾಂಜೋ ಸುನಿಲ್ (31) ಅವರ ಪಾರ್ಥಿವ ಶರೀರವು ಮಾ. 1 ಅಥವಾ 2 ರಂದು ಸ್ವಗ್ರಾಮಕ್ಕೆ ತಲುಪುವ ನಿರೀಕ್ಷೆ ಇದೆ ಎಂದು ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರ ದೆಹಲಿ ಕಚೇರಿಯ ಮೂಲಗಳು ತಿಳಿಸಿವೆ. ಐರ್ಲೆಂಡ್‌ನ ಡಬ್ಲಿನ್ ನಗರದ ಫಿಂಗ್ಲಾಸ್‌ನ ಚಾರ್ಲ್ಸ್ ಟೌನ್ ಪ್ರದೇಶದಲ್ಲಿ ತನ್ನ ಪತ್ನಿಯ ಜೊತೆಗೆ ವಾಸವಾಗಿದ್ದ ಸ್ಯಾಂಜೋ ಸುನಿಲ್ ಅವರ ಶವವು ಅವರು ವಾಸ್ತವ್ಯವಿದ್ದ ಮನೆಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಮೃತರ ಮರಣೋತ್ತರ ಪರೀಕ್ಷೆಯು ಫೆ. 20 ರಂದು ನಡೆದಿದ್ದು, ಈಗಾಗಲೇ ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಪಾರ್ಥಿವ ಶರೀರವನ್ನು ಭಾರತಕ್ಕೆ ತರುವ ಬಗ್ಗೆ ನಿರಾಕ್ಷೇಪಣಾ ಪತ್ರ ಅಲ್ಲಿನ ಭಾರತೀಯ ರಾಯಭಾರ ಕಚೇರಿಯ ಅಧಿಕಾರಿಗಳ ಕೈಸೇರಿದ್ದು, ಪಾರ್ಥಿವ ಶರೀರವನ್ನು ಸ್ವಗ್ರಾಮಕ್ಕೆ ತರುವಲ್ಲಿ ಅಗತ್ಯ ಕ್ರಮಗಳನ್ನು ಅಲ್ಲಿನ ಅಧಿಕಾರಿಗಳು ನಡೆಸಿದ್ದಾರೆ ಎಂದು ಮೃತರ ಮನೆಯವರಿಗೆ ಮಾಹಿತಿ ನೀಡಲಾಗಿದೆ.

ಅಂತಾರಾಜ್ಯ ಸೈಬರ್ ಕ್ರೈಂ ಜಾಲ ಬೇಧಿಸಿದ ಪೊಲೀಸರು

ಆರು ಮಂದಿ ಆರೋಪಿಗಳ ಸೆರೆ

ಮಂಗಳೂರು: ಬಂದರು ನಿವಾಸಿಯೊಬ್ಬರ ಬ್ಯಾಂಕ್ ಖಾತೆಯನ್ನು ವಂಚನೆಗೆ ಬಳಸಿಕೊಂಡಿದ್ದ ಅಂತಾರಾಜ್ಯ ಸೈಬರ್ ಕ್ರೈಂ ಜಾಲವನ್ನು ಮಂಗಳೂರು ಸೈಬರ್ ಅಪರಾಧ ಪೊಲೀಸ್ ಠಾಣೆಯ ತಂಡವು ಪತ್ತೆಹಚ್ಚಿದೆ. ಈ ಸಂಬಂಧ ಹೈದರಾಬಾದ್‌ನಲ್ಲಿ ಐವರು ಹಾಗೂ ಮಂಗಳೂರಿನಲ್ಲಿ ಓರ್ವ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.



ಆಂಧ್ರಪ್ರದೇಶದ ನೆಲ್ಲೂರಿನ ಶೇಖ್ ಕರೀಮುಲ್ಲಾ ಯಾನೆ ರಸೂಲ್ (27), ಕರ್ನೂಲ್ ನ ಬುಡಿದಿನ್ನೆ ವಂಶಿ ಯಾನೆ ಗುರು (21), ತೆಲಂಗಾಣದ ಹೈದರಾಬಾದ್‌ನ ಪಂಡಿತಿ ಕ್ರಾಂತಿ ಕುಮಾರ್ (36), ಮಂಗಳೂರಿನ ಮುಲ್ಕಿ ನಿವಾಸಿ ಇಬ್ರಾಹಿಂ (35), ಹೈದರಾಬಾದ್‌ನ ಬಡೆ ಶ್ರೀನಿವಾಸ್ (38) ಮತ್ತು ನೆಲ್ಲೂರಿನ ಉತ್ತಲ ಸಂತೋಷ್ ಕೃಷ್ಣ (35) ಬಂಧಿತ ಆರೋಪಿಗಳು. ಇವರು ಸಾಮಾಜಿಕ ಮಾಧ್ಯಮಗಳ ಮೂಲಕ ಬ್ಯಾಂಕ್ ಖಾತೆದಾರರಿಗೆ ಕಮಿಷನ್ ಆಮಿಷವೊಡ್ಡಿ ವಂಚನೆ ಎಸಗುತ್ತಿದ್ದರು.

ಮಂಗಳೂರಿನ ಬಂದರು ನಿವಾಸಿ ಮೊಹಮ್ಮದ್ ಇಕ್ಬಾಲ್ ಎಂಬವರಿಗೆ ಅವರ ಸ್ನೇಹಿತ ಇಬ್ರಾಹಿಂ ಎಂಬಾತನು ವ್ಯವಹಾರದ ಉದ್ದೇಶಕ್ಕೆಂದು ಬ್ಯಾಂಕ್ ಖಾತೆಯನ್ನು ಕೇಳಿದ್ದನು. ಇದನ್ನು ನಂಬಿದ ಇಕ್ಬಾಲ್ ತಮ್ಮ ಬ್ಯಾಂಕ್ ಪಾಸ್ ಬುಕ್, ಎಟಿಎಂ ಕಾರ್ಡ್, ಚೆಕ್ ಬುಕ್ ಹಾಗೂ ವಿರ್ಚುವಲ್ ಸಿಮ್ ಕಾರ್ಡ್ ನೀಡಿದ್ದರು. ಆದರೆ ಬಂಧಿತ ಆರೋಪಿಗಳಿಂದ ಪೊಲೀಸರು ಒಟ್ಟು 18 ಮೊಬೈಲ್ ಫೋನ್‌ಗಳು, 1 ಲ್ಯಾಪ್‌ಟಾಪ್, 12 ಸಿಮ್ ಕಾರ್ಡ್‌ಗಳು ಮತ್ತು 18 ಡೆಬಿಟ್ ಕಾರ್ಡ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಇದರೊಂದಿಗೆ ವಂಚನೆಗೆ ಬಳಸಲಾದ ಬ್ಯಾಂಕ್ ಖಾತೆಗಳ ವಿವರಗಳನ್ನು ಸಹ ತನಿಖಾ ತಂಡವು ಸಂಗ್ರಹಿಸಿದೆ.

ಆರೋಪಿಗಳು ಸಾಮಾಜಿಕ ಮಾಧ್ಯಮಗಳ ಮೂಲಕ ಆಕರ್ಷಕ ಜಾಹೀರಾತು ನೀಡಿ, ಬ್ಯಾಂಕ್ ಖಾತೆದಾರರಿಗೆ ಶೇ. 4 ರಿಂದ 6ರಷ್ಟು ಕಮಿಷನ್ ನೀಡುವುದಾಗಿ ಆಮಿಷವೊಡ್ಡುತ್ತಿದ್ದರು. ದುರಾಸೆಗೊಳಗಾದವರಿಂದ ಖಾತೆ ವಿವರ ಮತ್ತು ಒಟಿಪಿ ಪಡೆದು ವಿದೇಶದಲ್ಲಿರುವ ಸೈಬರ್ ವಂಚಕರಿಗೆ ರವಾನಿಸುತ್ತಿದ್ದರು. ತನಿಖೆಯ ವೇಳೆ ಇವರಿಂದ ಒಟ್ಟು 72 ಬ್ಯಾಂಕ್ ಖಾತೆಗಳ ವಿವರ ಲಭ್ಯವಾಗಿದ್ದು, ಇವುಗಳ ಮೇಲೆ ದೇಶಾದ್ಯಂತ 272ಕ್ಕೂ ಹೆಚ್ಚು ದೂರುಗಳು ದಾಖಲಾಗಿವೆ. ವಿಶೇಷವೆಂದರೆ, ಇತ್ತೀಚೆಗೆ ಒಂದೇ ದಿನ ಈ ತಂಡವು 2 ಕೋಟಿ ರೂಪಾಯಿಗೂ ಅಧಿಕ ಹಣದ ವಹಿವಾಟು ನಡೆಸಿರುವುದು ಬೆಳಕಿಗೆ ಬಂದಿದೆ.

ಕಿರುಸುದ್ದಿ

ಸಿಎಸ್ ಪರೀಕ್ಷೆಯಲ್ಲಿ ಕೆನರಾ ಸಂಧ್ಯಾ ಕಾಲೇಜಿನ ವಿದ್ಯಾರ್ಥಿ ಸಾಧನೆ



ಮಂಗಳೂರು: ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯ(ಐಸಿಎಸ್ಐ) ಡಿಸೆಂಬರ್ 2025ರಲ್ಲಿ ನಡೆಸಿದ ಸಿಎಸ್ ಅಂತಿಮ ಪರೀಕ್ಷೆಯಲ್ಲಿ ಕೆನರಾ ಸಂಧ್ಯಾ ಕಾಲೇಜಿನ ಪೂರ್ವ ವಿದ್ಯಾರ್ಥಿ ಅಚಲ್ ಪ್ರವೀಣ್ ಉಳ್ಳಾಲ್ ಉತ್ತೀರ್ಣರಾಗಿದ್ದಾರೆಂದು ಕಾಲೇಜಿನ ಪ್ರಕಟಣೆ ತಿಳಿಸಿದೆ. ಸಾಧಕ ವಿದ್ಯಾರ್ಥಿಯನ್ನು ಆಡಳಿತ ಮಂಡಳಿ, ಪ್ರಾಂಶುಪಾಲರು, ಪ್ರಾಧ್ಯಾಪಕರು ಹಾಗೂ ಸಿಬ್ಬಂದಿ ಅಭಿನಂದಿಸಿದ್ದಾರೆ.

ಮಾ. 8: ತಿಂಗಳೆ ಸಾಹಿತ್ಯೋತ್ಸವ

ಉಡುಪಿ: ಹೆಬ್ರಿ ತಾಲೂಕಿನ ನಾಡ್ಪಾಲು ಗ್ರಾಮದ ತಿಂಗಳೆ ಪ್ರತಿಷ್ಠಾನದಿಂದ ವರ್ಷಂಪ್ರತಿ ಜರಗುವ ಸಾಹಿತ್ಯೋತ್ಸವ ಮಾ.8 ರಂದು ಸಂಜೆ 6 ರಿಂದ ತಿಂಗಳೆಯಲ್ಲಿ ನಡೆಯಲಿದೆ ಎಂದು ತಿಂಗಳೆ ಪ್ರತಿಷ್ಠಾನದ ಅಧ್ಯಕ್ಷ ತಿಂಗಳೆ ವಿಕ್ರಮಾರ್ಜುನ ಹೆಗ್ಗಡೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಂದು ಸಂಜೆ 6 ರಿಂದ ನಡೆಯುವ 64 ನೇ ಸಾಹಿತ್ಯೋತ್ಸವದ ಅಧ್ಯಕ್ಷತೆಯನ್ನು ಮಾಹೆ ಸಹಕುಲಾಧಿಪತಿ ಡಾ. ಹೆಚ್.ಎಸ್.ಬಲ್ಲಾಳ್ ವಹಿಸಲಿದ್ದಾರೆ. ಚಿಂತಕಿ ಡಾ. ವೀಣಾ ಬನ್ನಂಜೆ 'ರಾಮಾಯಣ ಜೀವನ ಮೌಲ್ಯ' ವಿಷಯದ ಬಗ್ಗೆ ಉಪನ್ಯಾಸ ನೀಡಲಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಶ್ರೀಪಾದ್ ನಾಯ್ಕ್, ಮುಂಬೈಯ ಪ್ರವೀಣ್ ಬಾಯ್ ಟಾಂಕ, ಬಾಲಕೃಷ್ಣ ಭಂಡಾರಿ ಕುಂಬ್ಳೆ ಹಾಗೂ ಡಾ.ಕೃಷ್ಣಪ್ರಸಾದ್ ಭಾಗವಹಿಸಲಿದ್ದು, ಯಕ್ಷಗಾನ ಕಲಾರಂಗದ ಮುರುಳಿ ಕಡೆಕಾರ್ ಅವರಿಗೆ 'ತಿಂಗಳೆ ಪ್ರಶಸ್ತಿ' ನೀಡಿ ಅಭಿನಂದನೆ ಮಾಡಲಾಗುವುದು. ಡಾ. ಪ್ರಶಾಂತ್ ಶೆಟ್ಟಿ, ಅಮಿತಾಂಜಲಿ ಕಿರಣ್ ಕಾರ್ಯಕ್ರಮ ನಿರೂಪಿಸಲಿದ್ದಾರೆ. ಸಭಾಕಾರ್ಯಕ್ರಮದ ನಂತರ ಅರೆಹೊಳೆ ಪ್ರತಿಷ್ಠಾನದ ನಂದಗೋಕುಲ ಕಲಾವಿದರು ಮಂಗಳೂರು ಇವರಿಂದ ಮಾರಣಕಟ್ಟೆ ಕ್ಷೇತ್ರದ ಐತಿಹ್ಯವನ್ನು ಸಾರುವ ಶ್ವೇತಾ ಅರೆಹೊಳೆ ನಿರ್ದೇಶನದ 'ಬಿಡುವನೇ ಬ್ರಹ್ಮಲಿಂಗ' ನೃತ್ಯರೂಪಕ ಪ್ರದರ್ಶನಗೊಳ್ಳಲಿದೆ. ಮಾ. 6, 7 ಹಾಗೂ 8 ರಂದು ತಿಂಗಳೆಯ ಧರ್ಮದೇವತೆಗಳ ನೇಮೋತ್ಸವ ನೆರವೇರಲಿದೆ. ಮಾ.8 ರಂದು ರಾತ್ರಿ 9.30 ಕ್ಕೆ ಕಾರಣಿಕದ ಶಿವರಾಯ ದೈವದ ನೇಮೋತ್ಸವ ಜರುಗಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇತ್ರ ಜ್ಯೋತಿ ಕಾಲೇಜಿನಲ್ಲಿ ಉಡುಪು ಸಂಗ್ರಹ ಅಭಿಯಾನ

ಉಡುಪಿ: ಪ್ರತಿಷ್ಠಿತ ನೇತ್ರ ಜ್ಯೋತಿ ಕಾಲೇಜಿನಲ್ಲಿ ನೇತ್ರ ಜ್ಯೋತಿ ಚಾರಿಟಬಲ್ ಟ್ರಸ್ಟ್, ಪ್ರಸಾದ್ ನೇತ್ರಾಲಯ ಕಣ್ಣಿನ ಆಸ್ಪತ್ರೆ ಉಡುಪಿ, ರಾಮ ಕ್ಷತ್ರಿಯ ಯುವ ಸಂಘ ಉಡುಪಿ, ಮತ್ತು ದಂತ ವೈದ್ಯರ ಸಂಘ ಉಡುಪಿ ಇವರ ಸಹಭಾಗಿತ್ವದಲ್ಲಿ ಉಡುಪು ಸಂಗ್ರಹ ಅಭಿಯಾನ ಕಾರ್ಯಕ್ರಮವನ್ನು ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಬಳಸಿದ ಉತ್ತಮ ಸ್ಥಿತಿಯಲ್ಲಿರುವ ಉಡುಪುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹ ಮಾಡಿ ಅದನ್ನು ಅನಾಥರಿಗೆ ನೀಡುವ ವಿನೂತನ ಕಾರ್ಯಕ್ರಮ. ಸಾರ್ವಜನಿಕ ಸಂಘ ಸಂಸ್ಥೆಗಳು ಕೂಡ ನಮ್ಮೊಂದಿಗೆ ಕೈ ಜೋಡಿಸಬಹುದೆಂದು ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಗೌರಿ ಪ್ರಭು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಕೂಟರ್ ಡಿಕ್ಕಿಯಾದ ವ್ಯಕ್ತಿ ಮೇಲೆ ಕಾರು ಹರಿದು ಸಾವು: ಸವಾರ ಗಂಭೀರ

ಮಡಿಕೇರಿ: ವೀರಾಜಪೇಟೆ ತಾಲೂಕಿನ ಸಿದ್ದಾಪುರ ಸಮೀಪದ ಆನಂದಪುರ ಬಳಿ ನಡೆದ ಭೀಕರ ರಸ್ತೆ ಅಪಘಾತದಲ್ಲಿ ಓರ್ವ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೋರ್ವ ಗಂಭೀರ ಗಾಯವಾಗಿರುವ ಘಟನೆ ನಡೆದಿದೆ.

ಅಮ್ಮತ್ತಿ ಕಡೆಯಿಂದ ಕಾಲ್ನಡಿಗೆಯಲ್ಲಿ ಬರುತ್ತಿದ್ದ ವ್ಯಕ್ತಿಗೆ ಸ್ಕೂಟಿ ಡಿಕ್ಕಿ ಹೊಡೆದಿದ್ದು, ರಸ್ತೆಗೆ ಬಿದ್ದ ಆ ವ್ಯಕ್ತಿ ಮೇಲೆ ಹಿಂಬದಿಯಿಂದ ಬಂದ ಕಾರೊಂದು ಹರಿದಿದೆ. ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಮೃತನನ್ನು ಆನಂದಪುರ ನಿವಾಸಿ ಮನೋಹರ್ (ಮನು) (43) ಎಂದು ಗುರುತಿಸಲಾಗಿದೆ. ಗಂಭೀರ ಸ್ಥಿತಿಯಲ್ಲಿದ್ದ ಸ್ಕೂಟಿ ಸವಾರ ನೆಲ್ಲಿಹುದಿಕೇರಿಯ ಹಂಸ ಎಂಬಾತನನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕಾಗಮಿಸಿದ ಸಿದ್ದಾಪುರ ಪೊಲೀಸರು ಡಿಕ್ಕಿಯಾಗಿ ಪರಾರಿಯಾದ ಕಾರನ್ನು ಪತ್ತೆ ಹಚ್ಚಲು ಶೋಧ ನಡೆಸುತ್ತಿದ್ದಾರೆ.

ತೋಕೂರು ದೇವಸ್ಥಾನದಲ್ಲಿ ನಾಳೆ ಆಶ್ಲೇಷ ಬಲಿ

ಮುಲ್ಕಿ: ತೋಕೂರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಾರ್ಚ್ 1ರಂದು ಸಾಮೂಹಿಕ ಆಶ್ಲೇಷ ಬಲಿ ಬೆಳಿಗ್ಗೆ ಗಂಟೆ 9 ಗಂಟೆಯಿಂದ ನಡೆಯಲಿದೆ. ಮಧ್ಯಾಹ್ನ ಗಂಟೆ 12ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನ ಸಂತರ್ಪಣೆ ನಡೆಯಲಿದೆ ಎಂದು ದೇವಸ್ಥಾನದ ವ್ಯವಸ್ಥಾಪನ ಸಮಿತಿ ಪ್ರಕಟಣೆ ತಿಳಿಸಿದೆ.



ಕರ್ನಾಟಕ ಸರಕಾರ ಶಾಲಾ ಶಿಕ್ಷಣ ಇಲಾಖೆ, ಅಪರ ಆಯುಕ್ತರ ಇಲಾಖೆ ಕಲಬುರ್ಗಿ, ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತ್ ಕೊಪ್ಪಳ, ಶಾಲಾ ಶಿಕ್ಷಣ ಇಲಾಖೆ ಕೊಪ್ಪಳ ಇದರ ಆಶ್ರಯದಲ್ಲಿ ಕೊಪ್ಪಳ ಜಿಲ್ಲೆಯ ಕಾರಟಗಿಯಲ್ಲಿ ನಡೆದ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವದ ಪ್ರೌಢ ಶಾಲಾ ವಿಭಾಗದ ಚಿತ್ರಕಲಾ ಸ್ಪರ್ಧೆಯಲ್ಲಿ ದ.ಕ. ಜಿಲ್ಲೆಯನ್ನು ಪ್ರತಿನಿಸಿದ ತೆಂಕಿಲದ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ನಿಲಿಷ್ಕಾ ಕೆ. ತೃತೀಯ ಸ್ಥಾನ ಗಳಿಸಿದ್ದಾರೆ. ಅವರು ಇಂಜಿನಿಯರ್ ದಿನೇಶ್ ಹಾಗೂ ಶಿಕ್ಷಕಿ ಸ್ಮಿತಾಶ್ರೀ ದಂಪತಿಯ ಪುತ್ರಿ.

ಯತಿಕಾರ್ಪ್ ಇಂಡಿಯಾದಿಂದ ಎಐ ಕಾರ್ಡ್: ಕೆಪಿಟಿ ಸಂಸ್ಥೆ ಜೊತೆಗೆ ಒಪ್ಪಂದ

ಮಂಗಳೂರು: ತಾಂತ್ರಿಕ ಕೌಶಲ್ಯವನ್ನು ಸಾಮಾನ್ಯ ಜನರಿಗೂ ತಲುಪಿಸುವ ಉದ್ದೇಶದಿಂದ 'ಎಐ ಕಾರ್ಡ್' ಎಂಬ ಯೋಜನೆಯನ್ನು ಜಾರಿಗೆ ತರಲಾಗಿದ್ದು, ಮಂಗಳೂರಿನ ಕರ್ನಾಟಕ ಸರಕಾರಿ ಪಾಲಿಟೆಕ್ನಿಕ್ (ಕೆಪಿಟಿ) ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಯತಿಕಾರ್ಪ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಸ್ಥಾಪಕ ಮತ್ತು ಸಿಇಒ ಯತೀಶ್ ಕೆ.ಎಸ್. ತಿಳಿಸಿದರು.

ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಮತ್ತು ಡಾಟಾ ಅನಾಲಿಟಿಕ್ಸ್ ಹೈಟೆಕ್ ಕೋರ್ಸ್‌ಗಳನ್ನು ಸಾಮಾನ್ಯ ಜನರಿಗೂ ತಲುಪಿಸುವ ಉದ್ದೇಶದಿಂದ ಈ ಯೋಜನೆ ರೂಪಿಸಲಾಗಿದೆ. ಮೂರು ತಿಂಗಳ ಕೋರ್ಸ್ ಇದಾಗಿದ್ದು, ಮೊಬೈಲ್ ರಿಚಾರ್ಜ್ ದರದಲ್ಲಿ ಎಐ ಕಾರ್ಡ್ ಪಡೆಯುವ ಮೂಲಕ ಈ ಕೋರ್ಸ್ ಪಡೆಯಬಹುದು. ಕೆಪಿಟಿಯಿಂದಲೇ ಈ ಕೋರ್ಸ್‌ಗಳಿಗೆ ಪರೀಕ್ಷೆ ನಡೆಸಿ ಸರಕಾರಿ ಮಾನ್ಯತೆಯ ಪ್ರಮಾಣ ಪತ್ರ ಒದಗಿಸಲಾಗುವುದು ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2014ರಲ್ಲಿ ತಾಂತ್ರಿಕ ಶಿಕ್ಷಣ ಪಡೆಯಲು ಮಂಗಳೂರಿಗೆ ಬಂದಾಗ ಹಣದ ಕೊರತೆಯಿಂದ ಸೆಂಟ್ರಲ್ ಮಾರುಕಟ್ಟೆಯಲ್ಲಿ ತರಕಾರಿ ಚೀಲ ಹೊರುವ ಕೆಲಸವನ್ನೂ ಮಾಡಿದ್ದೇನೆ. ಅಂದು ಪಡೆದ ತಾಂತ್ರಿಕ ಶಿಕ್ಷಣವೇ ಇಂದು ಯಾವುದೇ ಗುಪ್ತ ಶುಲ್ಕವಿಲ್ಲದೆ, ಜನ ಸಾಮಾನ್ಯರಿಗೂ ಅತ್ಯಗತ್ಯವಾಗಿರುವ ಎಐ ಕೋರ್ಸ್ ನೀಡಲು ಪ್ರೇರೇಪಿಸಿದೆ ಎಂದರು. ಈಗಾಗಲೇ ಭಾರತ ಸೇರಿದಂತೆ ಅಮೆರಿಕ, ದುಬೈ ಮತ್ತು ಬ್ರಿಟನ್‌ಗಳಲ್ಲಿ 75,000ಕ್ಕೂ ಅಧಿಕ ಎಐ ಕಾರ್ಡ್ ಬಳಕೆದಾರರಿದ್ದಾರೆ. ಈ ಯೋಜನೆಯ ಮೂಲಕ ಹಲವು ವಿದ್ಯಾರ್ಥಿಗಳು ಈಗಾಗಲೇ ವಾರ್ಷಿಕ 8ರಿಂದ 10 ಲಕ್ಷ ರೂ. ಪ್ಯಾಕೇಜ್ ಉದ್ಯೋಗ ಪಡೆದಿದ್ದಾರೆ. ಹಲವು ಕಾಲೇಜುಗಳು ತಮ್ಮ ಕ್ಯಾಂಪಸ್‌ನಲ್ಲಿ ಎಐ ಕಾರ್ಡ್ ಕಡ್ಡಾಯಗೊಳಿಸಿ 'ಎಐ ಎನೇಬಲ್ಡ್ ಕ್ಯಾಂಪಸ್' ಎಂಬ ಮಾನ್ಯತೆ ಪಡೆದಿವೆ. ಒಂಭತ್ತು ತಿಂಗಳ ದೀರ್ಘಾವಧಿಯ ಕೋರ್ಸ್‌ಗಳಿಗೂ ಯಾವುದೇ ಹೆಚ್ಚುವರಿ ಶುಲ್ಕ ಇರುವುದಿಲ್ಲ ಎಂದು ಅವರು ಹೇಳಿದರು.

ಕೆಪಿಟಿ ಪ್ರಾಂಶುಪಾಲ ಹರೀಶ ಶೆಟ್ಟಿ, ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿ ಹರೀಶ್ ಸಿ.ಪಿ., ಯತಿಕಾರ್ಪ್ ನಿರ್ದೇಶಕ ಪ್ರಖ್ಯಾತ್ ರೈ, ಜ.ಮ್ಯಾ. ಕೃಪಾ ಕೆ. ಉಪಸ್ಥಿತರಿದ್ದರು.

ಸಹಕಾರಿ ಸಂಸ್ಥೆ ಸದಸ್ಯರು, ಸಿಬ್ಬಂದಿಗಾಗಿ ಸಹಕಾರ ಭಾರತಿ ಸಾರಥ್ಯ

ನಾಳೆ ಸಹಕಾರಿ ಕ್ರೀಡೋತ್ಸವ

ಮಂಗಳೂರು: ಸಹಕಾರ ಭಾರತಿ ಮಂಗಳೂರು ಮಹಾನಗರ ಮತ್ತು ದಕ್ಷಿಣ ಕನ್ನಡಜಿಲ್ಲೆ(ಗ್ರಾಮಾಂತರ)ಸಹಭಾಗಿತ್ವದಲ್ಲಿ ಸಹಕಾರಿ ಸಂಸ್ಥೆಗಳ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಾಗಿ ದ.ಕ. ಜಿಲ್ಲಾ ಮಟ್ಟದ 'ಸಹಕಾರಿ ಕ್ರೀಡೋತ್ಸವ-2026' ಮಾರ್ಚ್ 1ರಂದು ಅಡ್ಯಾರ್‌ನ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ನಡೆಯಲಿದೆ.

ಜಿಲ್ಲೆಯಾದ್ಯಂತದ ಪತ್ತಿನ ಸಹಕಾರಿ ಸಂಘಗಳು, ಹಾಲು ಉತ್ಪಾದಕರ ಸಹಕಾರಿ ಸಂಘ, ರಬ್ಬರ್ ಪ್ರಾಥಮಿಕ ವ್ಯವಸಾಯ ಸೇವಾ ಸಹಕಾರಿ ಸಂಘ, ಸೌಹಾರ್ದ ಸಹಕಾರಿ ಸಂಘ, ಕ್ಯಾಂಪ್ಕೊ, ಜನತಾ ಬಜಾರ್, ದ.ಕ ಜಿಲ್ಲಾ ಸಹಕಾರಿ ಹಾಲು ಒಕ್ಕೂಟ ಸೇರಿದಂತೆ ಸಹಕಾರಿ ಕ್ಷೇತ್ರದ ಹೆಚ್ಚಿನ ಸಂಸ್ಥೆಗಳು ಈ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿವೆ. ಸಹಕಾರಿಗಳಿಗಾಗಿ ಆಯೋಜಿಸಿರುವ ಈ ಆಟೋಟ ಸ್ಪರ್ಧೆಗಳಲ್ಲಿ ವಿವಿಧ ಸಹಕಾರಿ ಸಂಸ್ಥೆಗಳಿಂದ 2000ಕ್ಕೂ ಮಿಕ್ಕಿ ಸಿಬ್ಬಂದಿ, ಆಡಳಿತ ಮಂಡಳಿ ಸದಸ್ಯರು, ಕ್ರೀಡೆ ಮತ್ತು ಕ್ರೀಡೇತರ ಚಟುವಟಿಕೆಗಳಲ್ಲಿ ಭಾಗವಹಿಸುವ ನಿರೀಕ್ಷೆ ಇದೆ ಎಂದು ಸಹಕಾರ ಭಾರತಿ ಮಂಗಳೂರು ಮಹಾನಗರ ಜಿಲ್ಲೆ ಅಧ್ಯಕ್ಷ ಜಿ.ಆರ್. ಪ್ರಸಾದ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಬೆಳಗ್ಗೆ 9ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್ ಧ್ವಜಾರೋಹಣ ನಡೆಸುವರು. ಸಂಸದ ಬ್ರಿಜೇಶ್ ಚೌಟ ಕ್ರೀಡೋತ್ಸವ ಉದ್ಘಾಟಿಸುವರು. ಶ್ರೀನಿವಾಸ ವೈದ್ಯಕೀಯ ಕಾಲೇಜಿನ ಸಹಯೋಗದೊಂದಿಗೆ ನಡೆಯುವ ಉಚಿತ ವೈದ್ಯಕೀಯ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವನ್ನು ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಉದ್ಘಾಟಿಸುವರು. ರಾಷ್ಟ್ರಮಟ್ಟದ ವಾಲಿಬಾಲ್ ಆಟಗಾರ ಸುಪ್ರೀತ್ ಆಳ್ವ ಕ್ರೀಡಾ ಜ್ಯೋತಿ ಪ್ರಜ್ವಲನೆ ಮಾಡುವರು. ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಂಗಳೂರು ವಿಭಾಗ ಕಾರ್ಯವಾಹ ವಾದಿರಾಜ್, ಸಹಕಾರ ಭಾರತಿ ರಾಜ್ಯ ಸಹ ಕಾರ್ಯದರ್ಶಿ ಗಣೇಶ ಶೆಣೈ ಅತಿಥಿಯಾಗಿ ಭಾಗವಹಿಸುವರು. ಜಿ. ಆರ್. ಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಸಂಜೆ 5ಕ್ಕೆ ಸಮಾರೋಪ, ಬಹುಮಾನ ವಿತರಣಾ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ದಕ್ಷಿಣ ಪ್ರಾಂತ ಸಹಕಾರ್ಯವಾಹ ಪಿ.ಎಸ್. ಪ್ರಕಾಶ್, ಶಾಸಕರಾದ ಡಾ. ವೈ. ಭರತ್ ಶೆಟ್ಟಿ, ವೇದವ್ಯಾಸ ಕಾಮತ್, ಜನತಾ ಬಜಾರ್ ಮಂಗಳೂರು ಅಧ್ಯಕ್ಷ ಪ್ರಸನ್ನ ಕೆ., ಸಹಕಾರ ಭಾರತಿ ಮೈಸೂರು ವಿಭಾಗ ಸಂಘಟನಾ ಪ್ರಮುಖ್ ಮೋಹನ್ ಕುಂಬ್ಳೇಕರ್, ಅಂತಾರಾಷ್ಟ್ರೀಯ ಮಟ್ಟದ ಕಬಡ್ಡಿ ಆಟಗಾರ್ತಿ ಧನಲಕ್ಷ್ಮಿ ಪೂಜಾರಿ ಅತಿಥಿಯಾಗಿ ಭಾಗವಹಿಸುವರು.

ಸಹಕಾರ ಭಾರತಿ ದ.ಕ. ಜಿಲ್ಲಾ ಅಧ್ಯಕ್ಷ ಸುಧಾಕರ ರೈ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ವಿವರಿಸಿದರು.

ಸಹಕಾರ ಭಾರತಿ ರಾಜ್ಯ ಸಹ ಕಾರ್ಯದರ್ಶಿ ಗಣೇಶ್ ಶೆಣೈ, ದ.ಕ. ಜಿಲ್ಲೆ ಅಧ್ಯಕ್ಷ ಬಿ. ಸುಧಾಕರ ರೈ ಬೋಳಂತೂರು, ಸಂಘಟನಾ ಕಾರ್ಯದರ್ಶಿ ಸುರೇಶ್ ಆಳ್ವ, ಮಹಿಳಾ ಪ್ರಮುಖ್ ಸುಭದ್ರಾ ರಾವ್, ಮಂಗಳೂರು ಮಹಾನಗರ ಜಿಲ್ಲೆ ಪ್ರಧಾನ ಕಾರ್ಯದರ್ಶಿ ಚರಣ್‌ರಾಜ್, ಮಹಿಳಾ ಪ್ರಮುಖ್ ಮದಲಾಕ್ಷಿ ರೈ ಉಪಸ್ಥಿತರಿದ್ದರು.

ವಿವಿಧ ಸ್ಪರ್ಧೆಗಳು

ಸಹಕಾರಿ ಸಂಸ್ಥೆಗಳ ಸಿಬ್ಬಂದಿ, ನಿರ್ದೇಶಕರು, ಪಿಗ್ಮಿ ಏಜೆಂಟ್ಸ್ ಭಾಗವಹಿಸುವ ಈ ಕ್ರೀಡೋತ್ಸವದಲ್ಲಿ ವಿವಿಧ ವಯೋಮಾನದವರಿಗೆ ಹಾಗೂ ಮಹಿಳೆಯರಿಗೂ ಅನ್ವಯವಾಗುವಂತೆ ಓಟ, ನಡಿಗೆ, ಭಾರ ಎಸೆಯುವ ಸ್ಪರ್ಧೆಗಳು, ಕ್ರಿಕೆಟ್, ವಾಲಿಬಾಲ್, ಥ್ರೋಬಾಲ್, ಹಗ್ಗ ಜಗ್ಗಾಟ, ಕ್ರೀಡೇತರ ಆಸಕ್ತರಿಗೆ ಅನುಕೂಲವಾಗುವಂತೆ ಆಶುಭಾಷಣ, ರಸ ಪ್ರಶ್ನೆ, ಸಿಬ್ಬಂದಿಯ ಮಕ್ಕಳಿಗೆ ಚಿತ್ರ ಬಿಡಿಸುವ ಸ್ಪರ್ಧೆ ನಡೆಯಲಿದೆ. ಉಪಯುಕ್ತ ಹಲವು ಮಳಿಗೆಗಳು ಭಾಗಿಯಾಗಲಿವೆ ಎಂದರು.

ಆನ್-ಕ್ಯಾಂಪಸ್ ನೀರು ಶುದ್ಧೀಕರಣ ಘಟಕ ಶುರು



ಮಂಗಳೂರು: ಪ್ರತಿದಿನ ಒಂದು ಮಿಲಿಯನ್ ಲೀಟರ್ ನೀರು ಶುದ್ಧೀಕರಣ ಸಾಮರ್ಥ್ಯ ಹೊಂದಿರುವ ಅತ್ಯಾಧುನಿಕ ನೀರು ಶುದ್ಧೀಕರಣ ಘಟಕವನ್ನು ರಾಷ್ಟ್ರೀಯ ತಾಂತ್ರಿಕ ಸಂಸ್ಥೆ ಕರ್ನಾಟಕ (ಎನ್‌ಐಟಿಕೆ) ಸುರತ್ಕಲ್‌ನಲ್ಲಿ ಉದ್ಘಾಟಿಸಲಾಯಿತು.

ಈ ಕಾರ್ಯಕ್ರಮವನ್ನು ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ 1989ರ ಮೆಕ್ಯಾನಿಕಲ್ ಎಂಜಿನಿಯರಿಂಗ್ ಬ್ಯಾಚ್‌ನ ಎನ್‌ಐಟಿಕೆ ಹಳೆಯ ವಿದ್ಯಾರ್ಥಿ ಸುಧೀರ್ ಕುಮಾರ್ ಮತ್ತು ಎನ್‌ಐಟಿಕೆ ಸುರತ್ಕಲ್ ನಿರ್ದೇಶಕ ಪ್ರೊ. ಬಿ. ರವಿ ಅವರು ನೆರವೇರಿಸಿದರು.

ಈ ಘಟಕವು ಕ್ಯಾಂಪಸ್‌ನ ಟ್ಯೂಬ್‌ವೆಲ್‌ಗಳು ಮತ್ತು ಓಪನ್‌ವೆಲ್‌ಗಳಿಂದ ಪಂಪ್ ಮಾಡಲಾದ ಕಚ್ಚಾ ನೀರನ್ನು ಶುದ್ಧೀಕರಿಸಲು ವಿನ್ಯಾಸಗೊಳಿಸಲಾಗಿದೆ. ನೀರು ಎರಡು ಹಂತದ ಶೋಧನೆಗೊಳಗಾಗುತ್ತದೆ. ನಂತರ ಕ್ಲೋರಿನೇಶನ್ ಮತ್ತು ಓಝೋನೇಷನ್ ಪ್ರಕ್ರಿಯೆ ನಡೆಯುತ್ತದೆ. ಇದರಿಂದ ಹೆಚ್ಚುವರಿ ಕಬ್ಬಿಣ ಹಾಗೂ ನೀರಿನಿಂದ ಹರಡುವ ಅಶುದ್ಧಿಗಳನ್ನು ತೆಗೆದುಹಾಕಲಾಗುತ್ತದೆ. ಈ ಯೋಜನೆಯನ್ನು ಪೆಟ್ರೋನೆಟ್ ಎಂಎಚ್‌ಬಿ ಲಿಮಿಟೆಡ್ ತನ್ನ 2025-26ರ ಸಿಎಸ್‌ಆರ್ ಯೋಜನೆಯಡಿ ಹೂಡಿಕೆ ಮಾಡಿದೆ.

ನಿರ್ದೇಶಕ ಪ್ರೊ. ಬಿ. ರವಿ, ಪೆಟ್ರೋನೆಟ್‌ನ ತಾಂತ್ರಿಕ ಮುಖ್ಯಸ್ಥ ಸೈಸುಧಮ್ಮೀ, ಕಾರ್ಯಾಚರಣೆ ಮುಖ್ಯಸ್ಥ ಉದಯ ಪೈ, ಇತರ ಅಧಿಕಾರಿಗಳು, ಎನ್‌ಐಟಿಕೆ ರಿಜಿಸ್ಟ್ರಾರ್ ಪ್ರೊ. ಕುಮಾರ್ ಜಿ.ಎನ್., ಯೋಜನೆ ಮತ್ತು ಅಭಿವೃದ್ಧಿ ಡೀನ್ ಪ್ರೊ. ವೆಂಕಟೇಶ ಪೆರುಮಾಳ್, ಹಳೆಯ ವಿದ್ಯಾರ್ಥಿ ಮತ್ತು ಕಾರ್ಪೊರೇಟ್ ಸಂಬಂಧಗಳ ಡೀನ್ ಪ್ರೊ. ಪ್ರಸನ್ನ ಬೆಳೂರು ಉಪಸ್ಥಿತರಿದ್ದರು.

ಪುತ್ತೂರಿನಲ್ಲಿ 'ಪ್ರತಿಷ್ಠೆ'ಯ ಜಿದ್ದಿಗೆ ಪ್ರಾಂಶುಪಾಲರಿಗೆ ಅಮಾನತು ಶಿಕ್ಷೆ?

ಪುತ್ತೂರು: ಸಮರ್ಪಕ ಮೂಲಭೂತ ಸೌಕರ್ಯಕ್ಕಾಗಿ ರಸ್ತೆಗಿಳಿದು ಪ್ರತಿಭಟನೆ ನಡೆಸಿದ ಪುತ್ತೂರು ಪ್ರಥಮ ದರ್ಜೆ ಮಹಿಳಾ ಕಾಲೇಜಿನ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ್ದಾರೆ ಮತ್ತು ಕಾನೂನು ಉಲ್ಲಂಘಿಸಿದ್ದಾರೆ ಎಂದು ಕಾಲೇಜಿನ ಪ್ರಭಾರ ಪ್ರಾಂಶುಪಾಲೆ ವೇದಶ್ರೀ ನಿಡ್ಯ ಅವರನ್ನು ಇಲಾಖಾ ಕ್ರಮವಾಗಿ ಅಮಾನತುಗೊಳಿಸಿರುವುದು ವ್ಯಾಪಕ ಚರ್ಚೆ ಹಾಗೂ ಆಕ್ರೋಶವನ್ನು ಹುಟ್ಟಿ ಹಾಕಿದೆ.

ಉನ್ನತ ಶಿಕ್ಷಣ ಇಲಾಖೆಯ ಸರಕಾರದ ಅಧೀನ ಕಾರ್ಯದರ್ಶಿಗಳು ಫೆ.26ರಂದು ಈ ಆದೇಶ ಹೊರಡಿಸಿದ್ದಾರೆ. ಆದರೆ, ಆದೇಶ ಪತ್ರ ಪ್ರಾಂಶುಪಾಲರಿಗೆ ತಲುಪಿಲ್ಲ ಎಂಬ ಮಾಹಿತಿ ಲಭಿಸಿದೆ.

ಫೆ.16ರಂದು ವಿದ್ಯಾರ್ಥಿನಿಯರು ಸಾರ್ವಜನಿಕ ಸ್ಥಳದಲ್ಲಿ ರಸ್ತೆ ತಡೆಯನ್ನು ಯಾವುದೇ ಪೂರ್ವಾನುಮತಿ ಪಡೆಯದೆ ನಡೆಸಿರುತ್ತಾರೆ ಮತ್ತು ಇದರಿಂದ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗಿದೆ. ಪ್ರತಿಭಟನೆಯ ಸಂದರ್ಭದಲ್ಲಿ ಪ್ರಾಂಶುಪಾಲೆ ವೇದಶ್ರೀ ನಿಡ್ಯಾ ಮತ್ತು ಪ್ರಾಧ್ಯಾಪಕ ಐವನ್ ಫ್ರಾನ್ಸಿಸ್ ಲೋಬೋ ಉಪಸ್ಥಿತರಿದ್ದು ಮತ್ತು ಈ ಪ್ರತಿಭಟನೆಗೆ ಪ್ರೇರೇಪಿಸಿರುವ ಮಾಹಿತಿ ಬಂದಿದೆ. ವಿದ್ಯಾರ್ಥಿನಿಯರು ಸಾರ್ವಜನಿಕಸ್ಥಳದಲ್ಲಿ ಪ್ರತಿಭಟನೆ/ರಸ್ತೆತಡೆ ನಡೆಸಿರುವ ಘಟನೆಗೆ ಸಂಬಂಧಿಸಿದಂತೆ ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರಿದ ಪ್ರಕರಣದಲ್ಲಿ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಅವರನ್ನು ಸೇವೆಯಿಂದ ಅಮಾನತು ಗೊಳಿಸಲು ತೀರ್ಮಾನಿಸಿ ಆದೇಶಿಸಲಾಗಿದೆ ಎಂದು ಆದೇಶ ಪತ್ರದಲ್ಲಿ ತಿಳಿಸಲಾಗಿದೆ.

ಶಾಸಕರು ಭೇಟಿ ನೀಡಿದ ಸಂದರ್ಭದಲ್ಲಿ ತಮ್ಮನ್ನು ತರಾಟೆಗೆ ತೆಗೆದುಕೊಂಡ ಶಾಸಕರಿಗೆ ಪ್ರಾಂಶುಪಾಲರು ಮರು ಉತ್ತರವನ್ನು ನೀಡಿದ್ದರು. ಕಾಲೇಜಿನಿಂದ ಹಲವು ಬಾರಿ ಮನವಿ ನೀಡಲಾಗಿದೆ. ಆದರೂ ತನ್ನನ್ನು ದೂರುವುದು ಸರಿಯಲ್ಲ ಎಂದು ಪ್ರಾಂಶುಪಾಲರು ಶಾಸಕರಿಗೆ ಉತ್ತರಿಸಿದ್ದರು. ಈ ಮಾತುಕತೆಯ ವೀಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿ ಪರ- ವಿರೋಧದ ಚರ್ಚೆಗಳು ನಡೆದಿದ್ದವು. ಇದೀಗ ಶಾಸಕರ ಮೂಲಕ ಇಲಾಖೆಗೆ ಪ್ರಾಂಶುಪಾಲರ ಕುರಿತು ದೂರು ಹೋಗಿ ಅಮಾನತಿನ ಪ್ರಕ್ರಿಯೆ ನಡೆಸಲಾಗಿದೆ ಎನ್ನುವ ಮಾತುಗಳು ಕೇಳಿ ಬರುತ್ತಿದೆ.

ಶಾಸಕರ ಸೇಡಿನ ಕ್ರಮ

ಮಹಿಳಾ ಕಾಲೇಜಿನ ಪ್ರಾಂಶುಪಾಲರ ವರ್ಗಾವಣೆಯ ವಿಚಾರ ಶಾಸಕರ ಸೇಡಿನ ಕ್ರಮದಂತೆ ಕಾಣುತ್ತಿದೆ ಎಂದು ಮಾಜಿ ಶಾಸಕ ಸಂಜೀವ ಮಠಂದೂರು ಹೇಳಿದ್ದಾರೆ.

ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಪ್ರತಿಭಟನೆ ಮಾಡಲು ಹಕ್ಕಿದೆ. ಪ್ರಜಾಪ್ರಭುತ್ವದಲ್ಲಿ ಅನುಮತಿ ಪಡೆದೇ ಪ್ರತಿಭಟನೆ ಮಾಡಬೇಕೆಂದು ಏನು ಇಲ್ಲ. ವ್ಯಕ್ತಿ ಸ್ವಾತಂತ್ರ್ಯ ಪ್ರತಿಯೊಬ್ಬರಿಗೂ ಇದೆ. ಪ್ರತಿಭಟನೆಯಿಂದ ಸಾರ್ವಜನಿಕರಿಗೆ ಅಡ್ಡಿಯಾಗಿದಾ ಎಂಬುದು ಪ್ರಶ್ನೆ ಇರುವುದು. ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು 18 ವರ್ಷ ಪ್ರಾಯದ ಮೇಲ್ಪಟ್ಟವರು. ಅವರು ಪ್ರಬುದ್ಧರು. ಮಕ್ಕಳು ಪ್ರತಿಭಟನೆ ಮಾಡುವುದು ಇದೇ ಮೊದಲಲ್ಲ. ಆಗ ಯಾವ ಪ್ರಾಂಶುಪಾಲರ ಮೇಲೆಯೂ ಕ್ರಮ ಆಗಿಲ್ಲ. ಪ್ರಾಂಶುಪಾಲರು ಓರ್ವ ಮಹಿಳೆ ಮತ್ತು ಅನಾರೋಗ್ಯದಲ್ಲಿದ್ದಾರೆ. ಕಾಲೇಜಿನಲ್ಲಿ ಸಮಸ್ಯೆ ಆಗಿರುವ ಕುರಿತು ಪತ್ರಿಕೆಗಳಲ್ಲಿ ಉಲ್ಲೇಖ ಆಗಿದೆ. ಅಲ್ಲಿನ ಇಡೀ ಘಟನೆ ಕಾಲೇಜ್ ಅಭಿವೃದ್ಧಿ ಸಮಿತಿ ಅಧ್ಯಕ್ಷರಾಗಿರುವ ಶಾಸಕರಿಗೆ ಗೊತ್ತಿರಬೇಕು. ಶಾಸಕರ ಗಮನಕ್ಕೆ ಇದು ಬರಲಿಲ್ಲ ಎಂದಾದರೆ ಶಾಸಕರು ಕಾಲೇಜಿನ ಬಗ್ಗೆ ಎಷ್ಟು ಗಮನ ಕೊಟ್ಟಿರಬಹುದು ಎಂಬುದನ್ನು ತಿಳಿಯಬಹುದು ಎಂದು ಮಠಂದೂರು ಪ್ರತಿಕ್ರಿಯಿಸಿದ್ದಾರೆ.

ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಖೇದ

ಇಷ್ಟು ಕೆಟ್ಟ 'ಎಸ್‌ಟಿಪಿ' ಮತ್ತೆಲ್ಲೂ ಇಲ್ಲ!



ಉಡುಪಿ: ಕರ್ನಾಟಕ ಉಪ ಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು ನಿಟ್ಟೂರಿನ ಮಲಿನ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿದ್ದು, ನಿರ್ವಹಣೆ ವ್ಯವಸ್ಥಿತವಾಗಿ ಇಲ್ಲದಿರುವುದು, ಘಟಕದಿಂದ ಹೊರಬರುತ್ತಿರುವ ದುರ್ವಾಸನೆ, ಕಳಪೆ ಶುದ್ಧೀಕರಣ ಹಾಗೂ ಕೊಳಚೆ ನೀರು ಸಮುದ್ರ ಸೇರುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದ ಅವರು, 18 ಜಿಲ್ಲೆಗಳ ಎಸ್.ಟಿ.ಪಿ.ಗಳನ್ನು ಪರಿಶೀಲಿಸಿದ್ದರೂ ಉಡುಪಿಯಷ್ಟು ಕಳಪೆ ಸ್ಥಿತಿ ಎಲ್ಲಿಯೂ ಕಂಡಿಲ್ಲವೆಂದು ಅವರು ದ್ವಾರ ತೆಗೆದರು.

ಅಧಿಕಾರಿ ವಿರುದ್ಧ ಕ್ರಮಕ್ಕೆ ಸೂಚನೆ

ಘಟಕವು ಆರು ಹಂತಗಳಲ್ಲಿ ಶುದ್ಧೀಕರಣಗೊಂಡಿದೆ ಎಂದು ಹೇಳಲಾಗುತ್ತಿದ್ದರೂ ಘಟಕ ದಿಂದ ಕಪ್ಪುಬಣ್ಣದ ನೀರು ಹೊರಬರುತ್ತಿರುವುದು ಗಮನಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್ ಪಿಸಿಬಿ) ಅಧಿಕಾರಿಯಾದ ಕೀರ್ತಿ ಕುಮಾರ್ ವಿರುದ್ಧ ನಿರ್ಲಕ್ಷ್ಯದ ಪ್ರಕರಣ ದಾಖಲಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಸಪ್ಪನೆಗೆ ಕಿಡಿ

2010 ರಲ್ಲಿ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ (ಕೆ.ಯು.ಐ.ಡಿ.ಎಫ್.ಸಿ) ಮೂಲಕ ಸ್ಥಾಪಿಸಲ್ಪಟ್ಟ ಈ ಘಟಕವನ್ನು ರೂ. 30 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲು ಯೋಜಿಸಲಾಗಿದೆ. ಅನುದಾನ ಮಂಜೂರಾದರೂ ಮೇಲ್ದರ್ಜೆ ಕಾಮಗಾರಿ ಇನ್ನೂ ಆರಂಭವಾಗಿಲ್ಲ. ಆದರೆ ನಗರಸಭೆ ಅಧಿಕಾರಿಗಳು ಆರಂಭಿಕ ಕಾರ್ಯ ಶುರು ಆಗಿವೆ ಎಂದು ತಿಳಿಸಿ ದ್ದಾರೆ. ಅಧಿಕಾರಿಗಳ ಅಸ್ಪಷ್ಟ ಮಾಹಿತಿ ಮತ್ತು ಸಮನ್ವಯದ ಕೊರತೆ ಉಪ ಲೋಕಾಯುಕ್ತರ ಅಸಮಾಧಾನವನ್ನು ಮತ್ತಷ್ಟು ಹೆಚ್ಚಿಸಿತು.

ಕಿಟಕಿ ಬಾಗಿಲು ಮುಚ್ಚಿಕೊಳ್ಳುತ್ತೇವೆ

ಮಲ್ಪೆ ಕಡೆಗೆ ತೆರಳುವ ವೇಳೆ ಇಂದ್ರಾಣಿ ನದಿಯ ಮಾಲಿನ್ಯದಿಂದ ಬಳಲುತ್ತಿರುವ ನಿವಾಸಿಗಳ ಸ್ಥಿತಿಯನ್ನೂ ಅವರು ಪರಿಶೀಲಿಸಿದರು. ಸ್ಥಳೀಯ ನಿವಾಸಿ ಇಂದಿರಾ, ಹಲವಾರು ವರ್ಷಗಳಿಂದ ನಾವು ಬಾವಿ ನೀರನ್ನು ಬಳಸಲು ಸಾಧ್ಯವಾಗುತ್ತಿಲ್ಲ. ಹಿಂದೆ ಸ್ನಾನಕ್ಕೂ ಬಳಸುತ್ತಿದ್ದೆವು ಎಂದರು.

ಇಂದ್ರಾಣಿ ನದಿಯ ನೀರು ಅರಬ್ಬಿ ಸಮುದ್ರವನ್ನು ಕೂಡುವ ಅಳಿವೆ ಪ್ರದೇಶವನ್ನು ವೀಕ್ಷಣೆ ಮಾಡಲು ಹೊರಟಾಗ ನದಿಯ ದಡದಲ್ಲಿ ಗಿಡ ಗಂಟಿಗಳು, ಅನುಪಯುಕ್ತ ವಸ್ತುಗಳು, ಎಲ್ಲೆಂದರಲ್ಲಿ ಬಿಸಾಕಿರುವ ಕಸ ಕಡ್ಡಿಗಳ ರಾಶಿ, ಸತ್ತ ನಾಯಿ ಇರುವುದನ್ನು ನೋಡಿ, ಬೇಸರ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಯ ವಿವಿಧ ಕಡೆಗಳಲ್ಲಿ ಅಧ್ವಾನ ಸೃಷ್ಟಿಸಿದ ಅಕಾಲಿಕ ಮಳೆ | ಅಪಾಯಕಾರಿಯಾದ ಮರಗಳನ್ನು ತಕ್ಷಣ ತೆರವುಗೊಳಿಸಲು ಇಲಾಖೆಗೆ ಆಗ್ರಹ

ವೀರಾಜಪೇಟೆ, ದೊಡ್ಡಕೊಡ್ಲಿ ಪರಿಸರದಲ್ಲಿ ಮರ ಉರುಳಿಬಿದ್ದು ಅಪಾರ ಹಾನಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಸುರಿದ ಅಕಾಲಿಕ ಮಳೆಯ ಪರಿಣಾಮ ದೇಗುಲದ ಕಟ್ಟಡ ಹಾಗೂ ಮನೆಯ ಮೇಲೆ ಮರ ಬಿದ್ದು ಹಾನಿಯಾದ ಪ್ರತ್ಯೇಕ ಘಟನೆಗಳು ವರದಿಯಾಗಿವೆ.

ವೀರಾಜಪೇಟೆ ನಗರದ ತೆಲುಗರ ಬೀದಿಯ ಶ್ರೀ ಮಧುರೈ ವೀರನ್ ಸ್ವಾಮಿ ದೇಗುಲದ ಆವರಣದಲ್ಲಿರುವ ಕಟ್ಟಡದ ಮೇಲೆ ಸನಿಹದಲ್ಲಿದ್ದ ಒಣಗಿದ ಬೀಟಿ ಮರವೊಂದು ಬಿದ್ದಿದೆ.

ದೇಗುಲದ ಆವರಣಕ್ಕೆ ಹೊಂದಿಕೊಂಡಿರುವ ಸ್ಥಳದಲ್ಲಿ ಬಹು ಕಾಲದಿಂದ ಒಣಗಿ ನಿಂತ ಬೀಟಿ ಮರವೊಂದಿತ್ತು. ಮಳೆಯಿಂದ ಮಣ್ಣು ಸಡಿಲಗೊಂಡು ದೇಗುಲದ ಆವರಣದ ಕಟ್ಟಡದ ಮೇಲೆ ಆ ಮರ ಬಿದ್ದಿದ್ದು, ಕಟ್ಟಡದ ಮೇಲ್ಛಾವಣಿ ಹಾಗೂ ತಡೆಗೋಡೆಗೆ ಹಾನಿಯಾಗಿದೆ. ಅಕಾಲಿಕ ಮಳೆಗೆ ಮರಬಿದ್ದು ಹಾನಿಯಾದ ಕಟ್ಟಡಕ್ಕೆ ಪರಿಹಾರ ನೀಡುವುದರೊಂದಿಗೆ ಮರವನ್ನು ತೆರವುಗೊಳಿಸುವಂತೆ ದೇವಾಲಯದ ಆಡಳಿತ ಮಂಡಳಿ ಸಂಬಂಧಿಸಿದ ಇಲಾಖೆಗಳನ್ನು ಒತ್ತಾಯಿಸಿದೆ.



ಮಳೆಗೆ ಮನೆಗೆ ಉರುಳಿಬಿದ್ದ ಮರ

ಮತ್ತೊಂದೆಡೆ ಕೊಡ್ಲಿಪೇಟೆ ಸಮೀಪದ ದೊಡ್ಡಕೊಡ್ಲಿ ಗ್ರಾಮದ ನವಗ್ರಾಮದಲ್ಲಿ ಸುರಿದ ಗಾಳಿ-ಮಳೆಯ ಪರಿಣಾಮವಾಗಿ ಮರ ಬಿದ್ದು ಎರಡು ಮನೆಗಳಿಗೆ ಹಾನಿಯುಂಟಾಗಿದೆ.

ಸುಗ್ಗಿಕಟ್ಟೆ ಸಮೀಪವಿದ್ದ ಅರಳಿ ಮರ ಬಡ ಕೂಲಿ ಕಾರ್ಮಿಕರಾದ ಝುಕೀರಾ ಬಾನು ಅವರ ಮನೆಯ ಮೇಲೆ ಬಿದ್ದು ಮೇಲ್ಛಾವಣಿ ಭಾಗಶಃ ಹಾನಿಗೊಳಗಾಗಿದೆ. ಅಲ್ಲದೆ ಪಕ್ಕದಲ್ಲಿರುವ ಜಮೀಲಾ ಅವರ ಮನೆಗೂ ಹಾನಿಯಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ.

ಶಾಸಕರ ಗಮನಕ್ಕೆ ಪ್ರಕರಣ

ಸ್ಥಳಕ್ಕೆ ಭೇಟಿ ನೀಡಿದ ತಾಲೂಕು ಕೆಡಿಪಿ ಸದಸ್ಯ ಹಾಗೂ ಕೊಡ್ಲಿಪೇಟೆ ಹೋಬಳಿ ವಲಯ ಕಾಂಗ್ರೆಸ್ ಅಧ್ಯಕ್ಷ ಔರಂಗಜೇಬ್ ಅವರು, ಬಡ ಕೂಲಿ ಕಾರ್ಮಿಕರ ಮನೆಗೆ ಹಾನಿಯಾಗಿದ್ದು ಈ ವಿಷಯವನ್ನು ಕಂದಾಯ ಪರಿವೀಕ್ಷರು ಹಾಗೂ ಶಾಸಕ ಡಾ. ಮಂಥರ್ ಗೌಡರ ಗಮನಕ್ಕೆ ತರಲಾಗಿದೆ. ಆದಷ್ಟು ಬೇಗ ಪ್ರಕೃತಿ ವಿಕೋಪದಡಿ ಸರ್ಕಾರದಿಂದ ಪರಿಹಾರ ಒದಗಿಸಲಾಗುತ್ತದೆ. ಮಳೆಗಾಲದಲ್ಲಿ ಅಪಾಯಕಾರಿಯಾದ ಮರಗಳನ್ನು ತೆರವುಗೊಳಿಸಲು ಸಂಬಂಧಿಸಿದ ಅರಣ್ಯ ಇಲಾಖೆ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕೊಡ್ಲಿಪೇಟೆ ಗ್ರಾಮ ಆಡಳಿತಾಧಿಕಾರಿ ಪ್ರಕೃತಿ ಅವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಹಾನಿಯ ವಿವರಗಳನ್ನು ಸಂಗ್ರಹಿಸಿ, ಸೂಕ್ತ ಪರಿಹಾರ ನೀಡುವಂತೆ ಇಲಾಖೆಗೆ ವರದಿ ಸಲ್ಲಿಸಲಾಗುವುದು ಎಂದರು.

ಸುಂಟರಗಾಳಿಗೆ ಹಾರಿ ಹೋದ ಮನೆಯ ಮೇಲ್ಛಾವಣಿ



ಕುಶಾಲನಗರ: ಹೆಬ್ಬಾಲೆ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬೀಸಿದ ಸುಂಟರಗಾಳಿಗೆ ಹುಲುಸೆ ಗ್ರಾಮದ ನಾಗರಾಜಾಚಾರಿ ಎಂಬವರಿಗೆ ಸೇರಿದ ವಾಸದ ಮನೆಯ ಸಿಮೆಂಟ್ ಶೀಟ್‌ಗಳು ಹಾರಿ ಹೋಗಿದ್ದು, ಭಾರೀ ನಷ್ಟ ಸಂಭವಿಸಿದೆ. ಹುಲುಸೆ ಗ್ರಾಮದ ತಮ್ಮ ಜಮೀನಿನಲ್ಲಿ ಸರಕಾರದ ವತಿಯಿಂದ ನಿರ್ಮಿಸಿಕೊಡಲಾದ ವಾಸದ ಮನೆ ಇದಾಗಿದ್ದು, ಸುಂಟರಗಾಳಿಗೆ ಇಲ್ಲಿನ 10ಕ್ಕೂ ಅಧಿಕ ಸಿಮೆಂಟ್ ಶೀಟ್‌ಗಳು ನೆಲಕಚ್ಚಿವೆ.

ಘಟನಾ ಸ್ಥಳಕ್ಕೆ ಹೆಬ್ಬಾಲೆ ಗ್ರಾಮ ಲೆಕ್ಕಾಕಾರಿ ಪೀರ್ ಮಹಮ್ಮದ್ ಅವರು ಭೇಟಿ ನೀಡಿ ಹಾನಿಗಳ ಬಗ್ಗೆ ಪರಿಶೀಲನೆ ನಡೆಸಿದ್ದಾರೆ.

ಕಿರುಸುದ್ದಿ

ಕರಾಟೆ: ಚೈತ್ರಾ ಶ್ರೀಗೆ ಕಂಚಿನ ಪದಕ



ಬೆಂಗಳೂರು: ದಿಲ್ಲಿಯಲ್ಲಿ ನಡೆದಿರುವ 5ನೇ ಕಿಯೊ ರಾಷ್ಟ್ರೀಯ ಕರಾಟೆ ಚಾಂಪಿಯನ್‌ಶಿಪ್ ಕೂಟದಲ್ಲಿ ಬೆಂಗಳೂರು ಮೂಲಕದ ಚೈತ್ರಾ ಶ್ರೀ ಎನ್. ಕಂಚಿನ ಪದಕ ಗೆದ್ದರು.ಫೆಬ್ರವರಿ 26ರಿಂದ ಮಾರ್ಚ್ 1ರವರೆಗೆ ಅಲ್ಲಿನ ಟಾಲ್ಕಾಟೋರಾ ಇಂಡೋರ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕರಾಟೆ ಕೂಟದಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದ ಅವರು, ಅಂಡರ್-21 ಮಹಿಳೆಯರ ಕಾಟಾ ವಿಭಾಗದಲ್ಲಿ ತಮ್ಮ ಕೌಶಲ ಭರಿತ ಪ್ರದರ್ಶನ ನೀಡಿ ಗಮನ ಸೆಳೆದರು. ಮೊದಲಿನಿಂದಲೂ ತಮ್ಮ ಅತ್ಯುತ್ತಮ ಪ್ರದರ್ಶನದಿಂದ ಎದುರಾಳಿಗಳನ್ನು ಸೋಲಿಸುತ್ತಾ ಬಂದ ಅವರು ಕಂಚಿನ ಪದಕ ಗೆದ್ದುಕೊಂಡಿದ್ದಾರೆ. ಕರ್ನಾಟಕ ತಂಡದ ಅಧಿಕಾರಿಗಳು, ಪ್ರಮುಖ ಕೋಚ್ ಸೆನ್ಸಿ ಶ್ರೀಜಾ ಅಭಿನಂದಿಸಿದ್ದಾರೆ.

ರಿಂಕು ಸಿಂಗ್ ತಂದೆ ನಿಧನ

ಹೊಸದಿಲ್ಲಿ: ಕ್ರಿಕೆಟಿಗ ರಿಂಕು ಸಿಂಗ್ ಅವರ ತಂದೆ ಕಾಂಚಂದ್ ಕ್ಯಾನ್ಸರ್‌ನಿಂದ ನಿಧನರಾದರು. ಪ್ರಸ್ತುತ ಟಿ20 ವಿಶ್ವಕಪ್ ತಂಡದ ಭಾಗವಾಗಿರುವ ರಿಂಕು ಸಿಂಗ್ ತಂದೆಯ ಅಂತಿಮ ಸಂಸ್ಕಾರ ನಿಮಿತ್ತ ತಮ್ಮ ಗ್ರಾಮಕ್ಕೆ ತೆರಳಿದ್ದಾರೆ. ವಿಶ್ವಕಪ್ ಪಂದ್ಯಾವಳಿಯಲ್ಲಿ 5 ಪಂದ್ಯಗಳನ್ನಾಡಿರುವ ರಿಂಕು ಸಿಂಗ್, ದ.ಆಫ್ರಿಕಾ ವಿರುದ್ಧ ನಡೆದ ಟಿ20 ಪಂದ್ಯದಲ್ಲಿ ಭಾರತ ತಂಡದ ಭಾಗವಾಗಿದ್ದರು. ಆದರೆ ಮಂಗಳವಾರದಂದು ಅವರ ತಂದೆ ನೋಯ್ಡಾದ ಸ್ಥಳೀಯ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಕಾರಣ ತಮ್ಮ ಊರಿಗೆ ಹೊರಟಿದ್ದರು. ಆದಾಗ್ಯೂ ಬುಧವಾರ ಬೆಳಗ್ಗೆ ತಂಡಕ್ಕೆ ಸೇರ್ಪಡೆಯಾಗಿದ್ದ ರಿಂಕು ಸಿಂಗ್ ಸೂಪರ್-8ರ ಭಾರತದ ಎರಡನೇ ಪಂದ್ಯದಲ್ಲಿ ಸ್ಥಾನ ಪಡೆದಿರಲಿಲ್ಲ. ಶುಕ್ರವಾರ ದಂದು ತಮ್ಮ ತಂದೆಯ ನಿಧನ ಸುದ್ದಿ ಕೇಳಿದ ರಿಂಕು ಸಿಂಗ್ ಅಂತಿಮ ಸಂಸ್ಕಾರಕ್ಕಾಗಿ ತೆರಳಿದ್ದಾರೆ. ರಿಂಕು ಸಿಂಗ್ ಕ್ರಿಕೆಟಿಗರಾಗುವಲ್ಲಿ ತಂದೆಯ ಪಾತ್ರ ದೊಡ್ಡದಿತ್ತು. ಅವರ ನಿಧನಕ್ಕೆ ಹರ್ಭಜನ್ ಸಿಂಗ್, ವಿರಾಟ್ ಕೊಹ್ಲಿ ಸೇರಿದಂತೆ ಕ್ರಿಕೆಟಿಗರು, ಮಾಜಿ ಕ್ರಿಕೆಟಿಗರು ಸಂತಾಪ ಸೂಚಿಸಿದ್ದಾರೆ.

ಐಪಿಎಲ್ ಮುಂದೂಡಿಕೆ?

ಮುಂಬೈ: ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಆರಂಭ ಎರಡು ದಿನ ಮುಂದೂಡ ಬಹುದು ಎನ್ನಲಾಗಿದೆ. ಅಬು-ಧಾಬಿಯಲ್ಲಿ ನಡೆದಿದ್ದ 2026ರ ಐಪಿಎಲ್‌ನ ಹರಾಜಿನ ವೇಳೆ ಮಾರ್ಚ್ 26ಕ್ಕೆ ಐಪಿಎಲ್ ಆರಂಭವಾಗುವ ಬಗ್ಗೆ ಹೇಳಲಾಗಿತ್ತು. ಆದರೆ ಐಪಿಎಲ್ 28 ಅಥವಾ 29ರಂದು ಆರಂಭವಾಗುವ ಸಾಧ್ಯತೆ ಇದೆ. ಐಪಿಎಲ್ ಫ್ರಾಂಚೈಸಿಗಳಿಗೆ ಈ ಬಗ್ಗೆ ಇನ್ನೂ ಮಾಹಿತಿ ನೀಡಲಾಗಿಲ್ಲ. ಆದರೆ ಈ ಬಗ್ಗೆ ಬಿಸಿಸಿಐ ಚಿಂತನೆ ನಡೆಸಿದೆ ಎನ್ನಲಾಗಿದೆ. ಶೀಘ್ರದಲ್ಲೇ ಐಪಿಎಲ್ ಫ್ರಾಂಚೈಸಿಗಳೊಂದಿಗೆ ಬಿಸಿಸಿಐ ಸಭೆಯೊಂದನ್ನು ನಡೆಸಲಿದೆ. ಇದೇ ವೇಳೆ ಈ ಬಗ್ಗೆ ತೀರ್ಮಾನ ಮಾಡಿ ಅಧಿಕೃತ ವೇಳಾಪಟ್ಟಿ ಬಿಡುಗಡೆ ಮಾಡಲಿದೆ. ಉದ್ಘಾಟನಾ ಪಂದ್ಯ ಬೆಂಗಳೂರಿನಲ್ಲೇ ನಡೆಯಲಿದೆ ಎಂದು ಹೇಳಲಾಗುತ್ತಿದೆ.

ರಣಜಿ ಟ್ರೋಫಿ: ಕರ್ನಾಟಕದ ಕನಸು ಭಗ್ನ | ಎರಡನೇ ಇನ್ನಿಂಗ್ಸ್‌ನಲ್ಲೂ ಜಮ್ಮು ಉತ್ತಮ ಬ್ಯಾಟಿಂಗ್

ಚೊಚ್ಚಲ ಪ್ರಶಸ್ತಿಯತ್ತ ಕಾಶ್ಮೀರದ ಹೆಜ್ಜೆ

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: ಪ್ರಶಸ್ತಿ ಪಡೆಯುವ ನೆಚ್ಚಿನ ತಂಡವಾಗಿ ಹುಬ್ಬಳ್ಳಿಗೆ ಬಂದಿದ್ದ ಆತಿಥೇಯ ಕರ್ನಾಟಕ ತಂಡದ ಕನಸನ್ನು ಪ್ರವಾಸಿ ಜಮ್ಮು ಮತ್ತು ಕಾಶ್ಮೀರ ತಂಡದ ಆಟಗಾರರು ನುಚ್ಚುನೂರು ಮಾಡಿದರು.

ಮೂರನೇ ದಿನ ರಾಜ್ಯದ ಐದು ವಿಕೆಟ್ ಗಳಿಸಿ ಮೇಲುಗೈ ಸಾಧಿಸಿದ್ದ ಕಾಶ್ಮೀರ ತಂಡ, 4ನೇ ದಿನದ ಮೊದಲ ಅವಧಿಯಲ್ಲೇ ಮಿಕ್ಕ 4 ವಿಕೆಟ್‌ಗಳನ್ನು ಕಬಳಿಸಿ 293ಕ್ಕೇ ನಿಯಂತ್ರಿಸುವ ಮೂಲಕ 291ರನ್‌ಗಳ ಬೃಹತ್ ಮುನ್ನಡೆ ಗಳಿಸಿತು. ಎರಡನೇ ಇನ್ನಿಂಗ್ಸ್ ನಲ್ಲೂ ಉತ್ತಮ ಬ್ಯಾಟಿಂಗ್ ಮೂಲಕ ಪ್ರಶಸ್ತಿಯತ್ತ ಮತ್ತೊಂದು ಹೆಜ್ಜೆ ಮುಂದಿರಿಸಿದೆ.

ಪಂದ್ಯ 5ನೇ ದಿನಕ್ಕೆ ಸಾಗಿದ್ದರೂ, ಕುತೂಹಲವೇ ಉಳಿಯ ದ್ದರಿಂದ ಕೊನೆಯ ದಿನ ಪ್ರವಾಸಿ ತಂಡಕ್ಕೆ ಟ್ರೋಫಿ ನೀಡುವ ಔಪಚಾರಿಕತೆ ಮಾತ್ರ ಬಾಕಿ ಉಳಿದಂತಾಗಿದೆ.ಹಿರಿಯ ಆಟಗಾರ ಮಯಾಂಕ್ ಅಗರವಾಲ್ ಶತಕಗಳಿಸಿ ಸಣ್ಣ ಆಸೆಯೊಂದನ್ನು ಉಳಿಸಿದ್ದರಾದರೂ, ನಾಲ್ಕನೇ ದಿನದಾಟದ ಮೊದಲ ಅವಧಿಯಲ್ಲಿ ಎದುರಾಳಿ ತಂಡದ ಕರಾರುವಾಕ್ ದಾಳಿಗೆ ಶರಣಾದರು. ಮತ್ತೆ 73ರನ್ ಗಳಿಸುವಷ್ಟರಲ್ಲಿ ಉಳಿದ 4 ವಿಕೆಟ್ ಪಡೆದ ಜಮ್ಮು-ಕಾಶ್ಮೀರ ದೊಡ್ಡ ಹೊಡೆತವನ್ನೇ ನೀಡಿತು.

ಎರಡನೇ ಇನ್ನಿಂಗ್ಸ್ ಆರಂಭಿಸಿದ ಜಮ್ಮು- ಕಾಶ್ಮೀರ ತಂಡ 4ನೇ ದಿನದಾಟದ ಅತ್ಯಂಕ್ಕೆ 57 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 186 ರನ್ ಗಳಿಸಿ ಸುಭದ್ರ ಸ್ಥಿತಿಯನ್ನು ತಲುಪಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ವಿಫಲವಾಗಿದ್ದ ಆರಂಭಿಕ ಆಟಗಾರ ಕಮ್ರಾನ್ ಇಕ್ಬಾಲ್ (94 ರನ್, 160 ಎಸೆತ, 11 ಬೌಂಡರಿ, 1 ಸಿಕ್ಸರ್) ಎರಡನೇ ಇನ್ನಿಂಗ್ಸ್‌ನಲ್ಲಿ ಶತಕದ ಸನಿಹದಲ್ಲಿದ್ದು, ಸಾಹಿಲ್ ಲೋತ್ರಾ (16 ರನ್, 41 ಎಸೆತ, 2 ಬೌಂಡರಿ) ಅವರೊಂದಿಗೆ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಒಂದು ದಿನದ ಆಟ ಬಾಕಿ ಇರುವಂತೆಯೇ 477 ರನ್ ಗಳ ಭಾರೀ ಮುನ್ನಡೆ ಸಾಧಿಸಿದ್ದು, ಗೆಲುವನ್ನು ಒಂದು ದಿನ ಮೊದಲೇ ಖಚಿತಪಡಿಸಿಕೊಂಡಂತಾಗಿದೆ. ಶನಿವಾರದ ಮೊಲದ ಅವಧಿಯಲ್ಲಿ ಕಡಿಮೆ ಮೊತ್ತಕ್ಕೆ ಮಿಕ್ಕ ಆರು ವಿಕೆಟ್ ಗಳಿಸಿ ಗೆಲುವಿನ ಗುರಿ ತಲುಪುವ ಅವಕಾಶ ಆತಿಥೇಯ ತಂಡಕ್ಕಿದೆಯಾದರೂ, ಅದಕ್ಕೆ ಪವಾಡವೇ ಘಟಿಸಬೇಕಿದೆ.

ವೈಫಲ್ಯ: 4ನೇ ದಿನ ವಿಕೆಟ್ ಕೀಪರ್ ಕೃತಿಕ್ ಕೃಷ್ಣ(36 ರನ್) ಅವರನ್ನು ಸಾಹಿಲ್ ಲೋತ್ರಾ ಎಲ್.ಬಿ ಬಲೆಗೆ ಕೆಡವಿದರು. ಬಳಿಕ ಬಂದ ವಿದ್ಯಾಧರ ಪಾಟೀಲ್, ಪ್ರಸಿದ್ಧ ಕೃಷ್ಣ ಹೆಚ್ಚು ಹೊತ್ತು ನಿಲ್ಲಿಲ್ಲ. ಅಜೇಯ 130 ರನ್‌ಗಳಿಸಿದ್ದ ಹಿರಿಯ ಆಟಗಾರ ಮಯಾಂಕ್ ಶುಕ್ರವಾರವೂ ತಾಳ್ಮೆಯ ಆಟವಾಡಿ ನೆರೆದಿದ್ದ ಪ್ರೇಕ್ಷಕರನ್ನು ರಂಜಿಸಿದರು. ಒಟ್ಟು 443 ನಿಮಿಷ ಕ್ರೀಸ್ ನಲ್ಲಿದ್ದ ಮಯಾಂಕ್ 260 ಎಸೆತಗಳಲ್ಲಿ 160 ರನ್ ಗಳಿಸಿದರು. ಕಾಶ್ಮೀರದ 2ನೇ ಇನ್ನಿಂಗ್ಸ್‌ನ ಆರಂಭದಲ್ಲಿ ಪ್ರಸಿದ್ಧ ಕೃಷ್ಣ ಹಾಗೂ ವೈಶಾಖ್ ವಿಜಯಕುಮಾರ ಅವರು ಯಾವರ್ ಹಸನ್ ಹಾಗೂ ಶುಭಂಸಿಂಗ್ ಪುಂಡೀರ್ ಅವರ ವಿಕೆಟ್ ಪಡೆದು ಕುತೂಹಲ ಮೂಡಿಸಿದ್ದರಾದರೂ ಆ ಸಂಭ್ರಮವನ್ನು ನಾಯಕ ಪರಾಸ್ ಡೋಗ್ರಾ, ಕಮ್ರಾನ್ ಇಕ್ಬಾಲ್, ಅಬ್ದುಲ್ ಸಮದ್ ತಡೆದರು.

ಮಾತಿನ ಚಕಮಕಿ: 48ನೇ ಓವರ್ ಬೌಲ್ ಮಾಡಿದ ವೇಗಿ ವೈಶಾಖ್ ವಿಜಯಕುಮಾರ್ ಅವರೊಂದಿಗೆ ಇಕ್ಬಾಲ್ ಮಾತಿನ ಚಕಮಕಿ ನಡೆಸಿದ್ದು, ಗ್ಯಾಲರಿಯಲ್ಲಿದ್ದ ಪ್ರೇಕ್ಷಕರ ಆಕ್ರೋಶಕ್ಕೂ ಕಾರಣವಾಯಿತು.

ನಬಿಗೆ ಐದು ವಿಕೆಟ್: ಪ್ರಸಕ್ತ ಸಾಲಿನ ರಣಜಿ ಋತುವಿನಲ್ಲಿ ಅತ್ಯುತ್ತಮ ಬಾಲಿಂಗ್ ಮಾಡುತ್ತಿರುವ ಕಾಶ್ಮೀರದ ವೇಗಿ ಆಕೀಬ್ ನಬಿದಾರ್ ನಿರ್ಣಾಯಕ ಪಂದ್ಯದಲ್ಲಿ ಸಾಮರ್ಥ್ಯ ಮೀರಿ ಉತ್ತಮ ಬೌಲಿಂಗ್ ಮಾಡುವ ಮೂಲಕ ತಮ್ಮ ತಂಡವನ್ನು ಗೆಲುವಿನ ಸನಿಹಕ್ಕೆ ಕರೆದೊಯ್ದಿದ್ದಾರೆ. ಫೈನಲ್ ಪಂದ್ಯದಲ್ಲಿ 5 ವಿಕೆಟ್ ಗೊಂಚಲು ಪಡೆದ ಅವರು ಪ್ರಸಕ್ತ ಟೂರ್ನಿಯಲ್ಲಿನ ತಮ್ಮ ವಿಕೆಟ್ ಗಳ ಮೊತ್ತವನ್ನು 61ಕ್ಕೆ ಕೊಂಡೊಯ್ದರು. ಇದುವರೆಗೆ ಅವರು 40 ಪ್ರಥಮ ದರ್ಜೆ ಪಂದ್ಯಗಳಲ್ಲಿ 151 ವಿಕೆಟ್ ಪಡೆದಿದ್ದು, ಒಟ್ಟು 16 ಬಾರಿ 5 ವಿಕೆಟ್ ಗೊಂಚಲು ಪಡೆದಿದ್ದಾರೆ.





ಚಿತ್ರ: ಮಂಜುನಾಥ ಜರತಾರಘರ

ಇನ್ನೂ ಗೆಲ್ಲುವ ಅವಕಾಶವಿದೆ

ಈ ಪಂದ್ಯದಲ್ಲಿ ನಾವು ಬಹಳ ಹಿಂದೆ ಇದ್ದೇವೆ. ಜಮ್ಮು ಕಾಶ್ಮೀರ ತಂಡದವರುಉತ್ತಮ ಬಾಲಿಂಗ್ ಮಾಡಿ ನಮ್ಮ ಮೇಲೆ ಒತ್ತಡ ಹೇರಿದರು. ನಾಳೆ ಪಂದ್ಯದ ಕೊನೆಯ ದಿನ ಜಮ್ಮು-ಕಾಶ್ಮೀರ ತಂಡದ ಉಳಿದ ವಿಕೆಟ್‌ಗಳನ್ನು ಬೇಗನೇ ಪಡೆದು ಲೀಗ್ ಹಂತದಲ್ಲಿ ಪಂಜಾಬ್ ವಿರುದ್ಧ ಆಡಿದ ರೀತಿಯಲ್ಲಿ ಆಡಿದರೆ ಗೆಲ್ಲುವ ಅವಕಾಶವಿದೆ. ಈ ನಿಟ್ಟಿನಲ್ಲಿ ಪ್ರಯತ್ನ ಮಾಡುತ್ತೇವೆ ಎಂದು ಶತಕ ಗಳಿಸಿದ ಮಯಾಂಕ್ ಅಗರವಾಲ್ ಸುದ್ದಿಗಾರರಿಗೆ ತಿಳಿಸಿದರು.

ಸಿಎಂ ಒಮರ್ ಅಬ್ದುಲ್ ಪಂದ್ಯ ವೀಕ್ಷಣೆ

ನಗರದ ಕೆಎಸ್‌ಸಿಎ ಮೈದಾನದಲ್ಲಿ ನಡೆಯುತ್ತಿರುವ ಕರ್ನಾಟಕ ಹಾಗೂ ಜಮ್ಮು-ಕಾಶ್ಮೀರ ನಡುವಿನ ರಣಜಿ ಟೂರ್ನಿಯ ಫೈನಲ್ ಪಂದ್ಯ ವೀಕ್ಷಿಸಲು ಜಮ್ಮು ಕಾಶ್ಮೀರದ ಮುಖ್ಯಮಂತ್ರಿ ಒಮರ್ ಅಬ್ದುಲ್ ಆಗಮಿಸಲಿದ್ದಾರೆ. ಶುಕ್ರವಾರ ಸಂಜೆ 7.20ಕ್ಕೆ ನಗರದಕ್ಕೆ ಆಗಮಿಸಿದ ಅವರು, ಇಲ್ಲಿಯ ಗೋಕುಲ ರಸ್ತೆ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ. ಶನಿವಾರ ಬೆಳಗ್ಗೆ ರಾಜನಗರದ ಮೈದಾನಕ್ಕೆ ಬೆಳಗ್ಗೆ 10 ಗಂಟೆಗೆ ಭೇಟಿ ನೀಡಲಿದ್ದು, ಸಂಜೆ ವರೆಗೂ ಆಟ ವೀಕ್ಷಿಸಲಿದ್ದಾರೆ. ಈ ಹಿನ್ನೆಲೆ ಮೈದಾನದಲ್ಲಿ ಬಿಗಿ ಬಂದೋಬಸ್ತ್ ನಿಯೋಜಿಸಲಾಗಿದೆ ಎಂದು ಹು-ಧಾ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸ್ಕೋರ್

ಜಮ್ಮು ಕಾಶ್ಮೀರ 1 ನೇ ಇನ್ನಿಂಗ್ಸ್: 584-10(173.1)
ಕರ್ನಾಟಕ 1ನೇ ಇನ್ನಿಂಗ್ಸ್:
ಮಯಾಂಕ್ ಅಗರವಾಲ್; 160 ರನ್,266 ಎ,21 ಬೌ,
ಕೃತೀಕ್ ಕೃಷ್ಣ; 36ರನ್, 101 ಎ, 2 ಬೌ
ವಿದ್ಯಾಧರ ; 11 ರನ್, 33ಎ, 2 ಬೌ
ವೈಶಾಕ್ ; 17ರನ್,27 ಎ, 3 ಬೌ,
ಶಿಖರ್ ಶೆಟ್ಟಿ; 0 ರನ್,7 ಎ,
ಪ್ರಸಿದ್ಧ ಕೃಷ್ಣ; 4 ರನ್, 6 ಎ, 1 ಬೌ
ಬೌಲಿಂಗ್: ಆಕೀಬ್ ನಬಿ; 5 ವಿ, 23 ಓ, 54 ರನ್,
ಸುನೀಲ್ ಕುಮಾರ 2 ವಿ, 19 ಓ, 51 ರನ್,
ಯುಧವೀರ್ ಸಿಂಗ್ 2ವಿ,14.3ಓ, 55 ರನ್,
ಸಾಹಿಲ್ ಲೋತ್ರಾ 1 ವಿ, 12 ಓ, 50 ರನ್
ಜಮ್ಮು ಕಾಶ್ಮೀರ 2 ನೇ ಇನ್ನಿಂಗ್ಸ್;
ಇಕ್ಬಾಲ್ ಬ್ಯಾಟಿಂಗ್ ; 94 ರನ್, 160 ಎ,11 ಬೌ, 1 ಸಿ,
ಅಬ್ದುಲ್ ಸಮದ್ಧ 32 ರನ್, 70 ಎ,4 ಬೌ,1 ಸಿ,
ಸಾಹಿಲ್ ಬ್ಯಾಟಿಂಗ್; 16 ರನ್, 41 ಎ, 2 ಬೌ.
ಬೌಲಿಂಗ್; ಪ್ರಸಿದ್ಧ ಕೃಷ್ಣ; 2 ವಿ, 12 ಓ, 42 ರನ್,
ವೈಶಾಕ್; 1 ವಿ, 10 ಓ, 30 ರನ್,

ಟಿಟಿ: ಸೆಮೀಸ್‌ನಲ್ಲಿ ಭಾರತಕ್ಕೆ ನಿರಾಸೆ

ಹೊಸದಿಲ್ಲಿ: ಸಿಂಗಲ್ಸ್ ವಿಭಾಗದಲ್ಲಿ ಹಿನ್ನಡೆ ಅನುಭವಿಸಿ ನೀರಸ ಪ್ರದರ್ಶನ ನೀಡಿದ್ದ ಭಾರತಕ್ಕೆ ಅಭಿಮಾನಿಗಳು ಸಮಾಧಾನಗೊಳ್ಳುವಂತೆ ಎದುರಾಳಿ ತಂಡದವರು ಬೆಚ್ಚುವಂತೆ ಮತ್ತು ಭಾರತ ಟೇಬಲ್ ಟೆನಿಸ್ ಲೋಕದಲ್ಲಿ ಇತಿಹಾಸವಾಗುವಂತೆ ಆಡಿದ್ದ ಮನುಶ್ ಶಾ ಮತ್ತು ಮಾನವ್ ಠಕ್ಕರ್ ಜೋಡಿಯು ಸಿಂಗಾಪುರ ಸ್ಮ್ಯಾಷ್‌ನ ನಿರೀಕ್ಷಿತ ಸೆಮಿಫೈನಲ್ ಪಂದ್ಯದಲ್ಲಿ ಹೋರಾಟದ ಸೋಲನುಭವಿಸಿ ಪಂದ್ಯಾವಳಿಯಿಂದ ಹೊರಬಿದ್ದಿತು.

ಸಿಂಗಾಪುರ ಸ್ಮ್ಯಾಷ್

ಮನಿಕಾ ಬಾತ್ರಾ ಸೇರಿದಂತೆ ಪ್ರಮುಖ ಆಟಗಾರರ ತಂಡವು ಸಿಂಗಾಪುರಕ್ಕೆ ಹೋಗಿತ್ತು. ಮೊದಲಿಗೆ ನಡೆದ ಸಿಂಗಲ್ಸ್ ವಿಭಾಗದಲ್ಲಿ ಭಾರೀ ಹಿನ್ನಡೆ ಅನುಭವಿಸಿತು. ಆದಾಗ್ಯೂ ತಮ್ಮ ಅತ್ಯುತ್ತಮ ಪ್ರದರ್ಶನ ಮುಂದುವರಿಸಿದ ಮಾನವ್ ಹಾಗೂ ಮಾನುಶ್ ತಮ್ಮ ಅತ್ಯುತ್ತಮ ಆಟದೊಂದಿಗೆ ಭಾರತದ ಪದಕ ಆಸೆ ಜೀವಂತವಾಗಿರಿಸಿತು.

ಹಿಂದಿನ ಪಂದ್ಯಗಳಲ್ಲಿ ತಾವು ನೀಡಿದ್ದ ಬಲವಾದ ಪ್ರದರ್ಶನದೊಂದಿಗೆ ತಮ್ಮೊಂದಿಗೆ ವಿಶ್ವಾಸ ತಂದಿದ್ದ ಭಾರತ ಜೋಡಿ ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಫ್ರೆಂಚ್‌ನ ಅಲೆಕ್ಸ್ ಮತ್ತು ಫೆಲಿಕ್ಸ್ ಅವರನ್ನು ಎದುರಿಸಿತ್ತು. ಅಲ್ಲಿನ ಪಂದ್ಯದಲ್ಲಿ ಲೆಕ್ಸ್ ಮತ್ತು ಫಿಲೆಕ್ಸ್ ಜೋಡಿ ಎದುರು 2-3(6-11, 11-7, 10-12, 11-9, 8-11)ರಿಂದ ಸೋತಿತು ಭಾರತ ಜೋಡಿ. ಸೋತರೂ ಪಂದ್ಯದ ಫಲಿತಾಂಶ ಅಷ್ಟೊಂದು ಸುಲಭವಾಗಿ ಪಡೆಯಲು ಬಿಡಲಿಲ್ಲ ಮಾನವ್ ಮತ್ತು ಮನುಶ್. ಮೊದಲಿನಿಂದಲೂ ತಮ್ಮ ಆಕ್ರಮಣಕಾರಿ ಆಟದೊಂದಿಗೆ ವಿಶಿಷ್ಠ ಪ್ರದರ್ಶನ ನೀಡಿದ ಈ ಜೋಡಿ ಎದುರಾಳಿಗಳ ಪರಿಶ್ರಮ ಕೇಳಿತು. ಸವಾಲು ಕೇಳಿತು ಮತ್ತು ಕೌಶಲ ಪ್ರದರ್ಶಿಸುವಂತೆ ಮಾಡಿತು. ಎರಡು ಸುತ್ತಿನ ಪಂದ್ಯಗಳಲ್ಲಿ ನಿಸ್ಸಂಶಯವಾಗಿ ಮಿಂಚಿದ ಭಾರತೀಯರು ರೋಚಕ ಹಣಾಹಣಿಯಲ್ಲಿ ಗೆಲ್ಲಲಾಗಲಿಲ್ಲ. ಮರಳಿ ಬರುವಾಗ ತಮ್ಮೊಂದಿಗೆ ಡಬ್ಲ್ಯುಟಿಟಿಯಲ್ಲಿ ಸೆಮಿಫೈನಲ್‌ಗೇರಿದ ಮೊದಲ ಭಾರತ ಜೋಡಿ ಎಂಬ ದಾಖಲೆಯನ್ನೂ, ಅತ್ಯುತ್ತಮ ಪ್ರದರ್ಶನ ನೀಡಿದ ತಮ್ಮ ಭರವಸೆ ಮತ್ತು ಒಂದಿಷ್ಟು ಕೌಶಲ ಅಭಿವೃದ್ಧಿ ತಂದಿತು.



ಭಾರತ ಮಹಿಳಾ ತಂಡಕ್ಕೆ 2ನೇ ಸೋಲು | ಜಾರ್ಜಿಯಾ ಶತಕ

ಆಸ್ಟ್ರೇಲಿಯಾಗೆ ಏಕದಿನ ಸರಣಿ

ಹಾರ್ಬಟ್: ಆಸ್ಟ್ರೇಲಿಯಾ ತಂಡದ ಸಾಂಘಿಕ ಬೌಲಿಂಗ್ ಮತ್ತು ವಾಲ್ ಅವರ ಶತಕದ ಮುಂದೆ ದಿಕ್ಕು ತಪ್ಪಿಸಿಕೊಂಡ ಭಾರತೀಯ ಮಹಿಳೆಯರ ತಂಡವು ಆಸ್ಟ್ರೇಲಿಯಾ ಪ್ರವಾಸದ ಏಕದಿನ ಸರಣಿಯನ್ನು ಒಂದು ಪಂದ್ಯ ಬಾಕಿ ಇರುವಾಗಲೇ ಸೋತಿದೆ.

ಟಿ20, ಏಕದಿನ ಹಾಗೂ ಟೆಸ್ಟ್ ಪಂದ್ಯಗಳ ಪ್ರವಾಸದಲ್ಲಿ ಟಿ20 ಸರಣಿಯನ್ನು ಭಾರತ, ಏಕದಿನ ಸರಣಿಯನ್ನು ಆಸ್ಟ್ರೇಲಿಯಾ ಗೆದ್ದಿದೆ. ಇನ್ನೂ ಒಂದು ಏಕದಿನ ಪಂದ್ಯ ಬಾಕಿಯಿದೆ. ಮೊದಲ ಪಂದ್ಯದಲ್ಲೂ ಆಸೀಸ್ ಮೇಲುಗೈ ಸಾಧಿಸಿತ್ತು. ಇದೀಗ ಎರಡನೇ ಪಂದ್ಯದ ಗೆಲುವಿನೊಂದಿಗೆ ಮುನ್ನಡೆ ಸಾಧಿಸಿದೆ. ಉಭಯ ತಂಡಗಳ ನಡುವೆ ಒಂದು ಟೆಸ್ಟ್ ಪಂದ್ಯ ಕೂಡ ನಡೆಯಲಿದೆ.

ಶುಕ್ರವಾರದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಭಾರತ ಕಳೆದ ಪಂದ್ಯಗಿಂತಲೂ ಉತ್ತಮ ಬ್ಯಾಟಿಂಗ್ ಮಾಡಿತ್ತಾದರೂ ದೊಡ್ಡ ಗುರಿ ನಿರ್ಮಿಸಲಾಗಲಿಲ್ಲ. ಪ್ರತಿಕಾ ಮತ್ತು ಕೌರ್ ಆಟಕ್ಕೆ ಮಧ್ಯಮ ಕ್ರಮಾಂಕದ ಆಟಗಾರ್ತಿಯರ 20-25 ರನ್‌ಗಳ ಇನ್ನಿಂಗ್ಸ್ ಕೂಡಿದ ನಂತರ ಭಾರತ 50 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 251 ರನ್ ಗಳಿಸಿತು. ಗುರಿ ಬೆನ್ನತ್ತಿದ ಆಸ್ಟ್ರೇಲಿಯಾ ಜಾರ್ಜಿಯಾ ವಾಲ್ ಅವರ ಶತಕದೊಂದಿಗೆ ಯಾವುದೇ ಅಡತಡೆಯಿಲ್ಲದೆ ಪಂದ್ಯ ಗೆದ್ದುಕೊಂಡಿತು.

ವಾಲ್ ಪಂದ್ಯಶ್ರೇಷ್ಠ ಆಟಗಾರ್ತಿಯಾದರು. ಲಿಚ್ ಫೀಲ್ಡ್ ಕೂಡ ಪಂದ್ಯದ ಬೆಸ್ಟ್ ಬ್ಯಾಟರ್ ಎನಿಸಿಕೊಂಡರು. ಆಸ್ಟ್ರೇಲಿಯಾದ ಮೂವರು, ಭಾರತದ ಇಬ್ಬರು ತಲಾ ಎರಡು ವಿಕೆಟ್ ಪಡೆದರು. ಮೂರನೇ ಪಂದ್ಯ ಭಾನುವಾರದಂದು ನಡೆಯಲಿದೆ.

ಜಾರ್ಜಿಯಾ ಶತಕ: ಗುರಿ ಬೆನ್ನತ್ತುವಾಗ ಆಸ್ಟ್ರೇಲಿಯಾ ಯಾವುದೇ ಹಂತದಲ್ಲೂ ಬವಣೆ ಎದುರಿಸಲಿಲ್ಲ. ಹೀಲಿ 6 ರನ್‌ಗೆ ವಿಕೆಟ್ ಒಪ್ಪಿಸಿದ ನಂತರ ಮೂರನೇ ಕ್ರಮಾಂಕದಲ್ಲಿ ಬಂದ ವಾಲ್ ಮತ್ತು ಲಿಚ್‌ಫೀಲ್ಡ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಅಬ್ಬರಿಸಿದರು. ಮೊದಲಿನಿಂದಲೂ ಭಾರತೀಯ ಬೌಲರ್‌ಗಳನ್ನು ಕಾಡುವ ನಿರ್ಧಾರ ಮಾಡಿದ್ದ ಈ ಜೋಡಿ ನಿಸ್ಸಂಶಯವಾಗಿ ಪಂದ್ಯವನ್ನು ಕಸಿದುಕೊಂಡಿತು. ಲಿಚ್‌ಫೀಲ್ಡ್ ಕೂಡ ಅದೇ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಆಟಕ್ಕೆ ತತ್ತರಿಸಿದ ಭಾರತ ಯಾವುದೇ ಕ್ಷಣದಲ್ಲೂ ಗೆಲ್ಲುವ ಹಂತಕ್ಕೆ ಬರಲಿಲ್ಲ. ಬೆಥ್ ಮೂನಿ 31 ರನ್ ಗಳಿಸಿ ಪಂದ್ಯ ಗೆಲ್ಲಿಸಿದರು. ಜಾರ್ಜಿಯಾ ವಾಲ್ 82 ಎಸೆತದಲ್ಲಿ 100 ರನ್‌ಗಳಿಸಿದರೆ, ಲಿಚ್‌ಫೀಲ್ಡ್ 62ರಲ್ಲಿ 80 ರನ್ ಬಾರಿಸಿದರು.



ಕೌರ್-ರಾವಲ್ ಅರ್ಧಶತಕ

ಇನ್ನು ಮೊದಲು ಬ್ಯಾಟಿಂಗ್ ಮಾಡಿದ ಭಾರತ ರಾವಲ್ ಮತ್ತು ಮಂಧಾನ ಅವರ ಉತ್ತಮ ಬ್ಯಾಟಿಂಗ್‌ನೊಂದಿಗೆ ಭರ್ಜರಿ ಆರಂಭ ಪಡೆಯಿತಾದರೂ ಮಂಧಾನ ಆಟ 31ಕ್ಕೆ ನಿಂತಿತು. ಮೂರನೇ ಕ್ರಮಾಂಕದ ರಾಡ್ರಿಗ್ಸ್ ಬೇಗನೇ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಕೌರ್ 54 ರನ್‌ಗಳ ಇನ್ನಿಂಗ್ಸ್ ಆಡಿದರು. ರಾವಲ್ 52 ರನ್ ಗಳಿಸಿದರು. ಇನ್ನುಳಿದ ಬ್ಯಾಟಿಗರಿಂದ 25ಕ್ಕೂ ಅಧಿಕ ಕಾಣಿಕೆ ಬರಲಿಲ್ಲ. ಆಸ್ಟ್ರೇಲಿಯಾ ಪರ ಅನಾಬೆಲ್, ಅಲ್ಲಾ ಮತ್ತು ಗಾರ್ಡನರ್ ತಲಾ 2 ವಿಕೆಟ್ ಕಿತ್ತರು.

ಸಂಕ್ಷಿಪ್ತ ಸ್ಕೋರ್

ಭಾರತ 50 ಓವರ್‌ಗಳಲ್ಲಿ 251/9: ಕೌರ್ 54, ಪ್ರತಿಕಾ 52; ಅನಾಬಲ್ 37/2
ಆಸ್ಟ್ರೇಲಿಯಾ 36.1 252/5: ಜಾರ್ಜಿಯಾ 101, ಲಿಚ್ ಫೀಲ್ಡ್ 80; ದೀಪ್ತಿ 32/2

ಕಿವೀಸ್‌ಗೆ ಸೋಲಿನ ಆಘಾತ

ಕೊಲಂಬೋ: ವಿಲ್ ಜ್ಯಾಕ್ಸ್ ಹಾಗೂ ಬ್ಯಾಟನ್ ಅವರ ಪರಾಕ್ರಮದಿಂದ ಭರ್ಜರಿ ಪ್ರದರ್ಶನ ನೀಡಿರುವ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ತಂಡವನ್ನು ಸೋಲಿಸಿ ಸೆಮಿ ವಿಚಾರದಲ್ಲಿ ಭಾರೀ ಒತ್ತಡ ಹೇರಿದೆ. ಪಾಕಿಸ್ತಾನ ಸೆಮಿಗೇರುವ ಆಸೆ ಇನ್ನೂ ಜೀವಂತವಾಗಿರಿಸಿದೆ.

ತಂಡದ ಯಾವುದೇ ಬ್ಯಾಟಿಗರೂ ಅರ್ಧಶತಕ ದಾಟದಿದ್ದರೂ ನಿರ್ದಿಷ್ಟ ಕೊಡುಗೆಗಳನ್ನು ನೀಡಿದ ನಂತರ ಇಂಗ್ಲೆಂಡ್ ತಂಡ ಗೆಲ್ಲುವ ಹಂತಕ್ಕೆ ಬಂದಿತ್ತು. ಆದಾಗ್ಯೂ 24 ಬಾಲ್‌ಗಳಲ್ಲಿ 46 ರನ್‌ಗಳಿಸುವ ದೊಡ್ಡ ಸವಾಲು ಹೊಂದಿತ್ತು. ಇದೇ ವೇಳೆ ಬ್ಯಾಟಿಂಗ್ ಗಿಳಿದ ವಿಲ್ ಜ್ಯಾಕ್ಸ್ ತಮ್ಮ ಸ್ಫೋಟಕ ಬ್ಯಾಟಿಂಗ್ ಮೂಲಕ ಪಂದ್ಯವನ್ನು ಗೆಲ್ಲಿಸಿದ್ದಾರೆ.

ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗಿಳಿದ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗೆ 159 ರನ್ ಗಳಿಸಿತು. ಗುರಿ ಬೆನ್ನತ್ತಿದ ಇಂಗ್ಲೆಂಡ್ 19.3 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 161 ರನ್‌ಗಳಿಸಿ ಗುರಿ ಮುಟ್ಟಿತು. ಈ ಗೆಲುವಿನೊಂದಿಗೆ ಇಂಗ್ಲೆಂಡ್ ಸೋಲಿಲ್ಲದ ತಂಡವಾಗೇ ಸೆಮಿಗೇರಿದೆ. ಇದಕ್ಕೂ ಹೆಚ್ಚಾಗಿ ಪಾಕಿಸ್ತಾನದ ಆಸೆ ಜೀವಂತವಾಗಿರಿಸಿದೆ. ಸೆಮಿಗೇರುವುದಕ್ಕೆ ಪಾಕಿಸ್ತಾನ ದೊಡ್ಡ ರನ್ ರೇಟ್‌ನಿಂದ ಪಂದ್ಯ ಗೆಲ್ಲಬೇಕಿದೆ.

ವಿಲ್ ಜ್ಯಾಕ್ಸ್ ಅರ್ಭಟ: ಗುರಿ ಬೆನ್ನತ್ತಿದ ಇಂಗ್ಲೆಂಡ್ ಆರಂಭದಲ್ಲಿ ಭಾರೀ ಆಘಾತ ಎದುರಿಸಿತು. ಟೂರ್ನಿಯುದ್ದಕ್ಕೂ ಹಿನ್ನಡೆ ಅನುಭವಿಸಿರುವ ಬಟ್ಲರ್ ಹಾಗೂ ಸಾಲ್ಟ್ ತಂಡ 2 ರನ್ ಗಳಿಸುವಷ್ಟರಲ್ಲಿ ವಿಕೆಟ್ ಒಪ್ಪಿಸಿದರು. ಮೂರನೇ ಕ್ರಮಾಂಕದಲ್ಲಿ ಬಂದ ಬ್ರೂಕ್ ಸೆಟ್ ಆಗುವ ಔಪಚಾರಿಕತೆ ಮುಗಿಸಿಕೊಳ್ಳುವ ಹೊತ್ತಿಗೆ 26 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು.

ಬ್ಯಾಥೆಲ್ ಕೂಡ 21 ರನ್‌ಗೆ ವಿಕೆಟ್ ಒಪ್ಪಿಸಿದರು. ಇದರೊಂದಿಗೆ ಸಂಕಷ್ಟಕ್ಕೆ ಸಿಲುಕೊಂಡ ಇಂಗ್ಲೆಂಡ್ ಬ್ಯಾಟನ್ ಅವರ ಆಟದೊಂದಿಗೆ ಪಂದ್ಯದಲ್ಲಿ ಉಳಿದಕೊಂಡಿತು.

ಕೊನೆಯ ನಾಲ್ಕು ಓವರ್‌ಗಳಲ್ಲಿ 46 ರನ್ ಬೇಕಿದ್ದವು.

ಈ ವೇಳೆ ಜ್ಯಾಕ್ಸ್ ಮತ್ತು ಅಹ್ಮದ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದರು. ಮೊದಲು ಬ್ಯಾಟ್ ಮಾಡಿದ ನ್ಯೂಜಿಲೆಂಡ್ ಪರ ಸೀಫರ್ಟ್ ಮತ್ತು ಫಿನ್‌ಆಲೆನ್ ಉತ್ತಮ ಬ್ಯಾಟಿಂಗ್ ಮಾಡಿದರು.

ನ್ಯೂಜಿಲೆಂಡ್ ವಿರುದ್ಧ ಇಂಗ್ಲೆಂಡ್‌ಗೆ ನಾಲ್ಕು ವಿಕೆಟ್ ಗೆಲುವು

ಇಂದಿನ ಪಂದ್ಯ

ಶ್ರೀಲಂಕಾ VS ಪಾಕಿಸ್ತಾನ
ಸಂಜೆ 7 (ಪಲ್ಲೆಕೆಲೆ)

ಸೂಪರ್-8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ದ.ಆಫ್ರಿಕಾ (Q)	2	2	0	0	4	+2.890
ವಿಂಡೀಸ್	2	1	1	0	2	+1.791
ಭಾರತ	2	1	1	0	2	-0.100
ಜಿಂಬಾಬ್ವೆ	2	0	2	0	0	-4.475

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	3	3	0	0	6	+1.09
ಕಿವೀಸ್	3	1	1	1	3	+1.39
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಲಖನೌ ತಂಡದ ಹೊಸ ಜೆರ್ಸಿ ಅನಾವರಣ

ಲಖನೌ: ಮೊನ್ನೆಯಷ್ಟೇ ತಮ್ಮ ತಂಡದ ಹೊಸ ಲೋಗೊ ಬಿಡುಗಡೆ ಮಾಡಿದ್ದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಫ್ರಾಂಚೈಸಿ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರದಂದು ತಮ್ಮ ತಂಡದ ಹೊಸ ಜೆರ್ಸಿ ಬಿಡುಗಡೆ ಮಾಡಿದೆ.

ರಿಷಭ್ ಪಂತ್ ನೇತೃತ್ವದಲ್ಲಿ ಕಣಕ್ಕಿಳಿಯುವ ಲಖನೌ ಸೂಪರ್ ಜೈಂಟ್ಸ್, ಬದಲಾವಣೆಗಳನ್ನು ತರುತ್ತಿದೆ. ನೀಲಿ ಜೆರ್ಸಿಯೊಂದಿಗೆ ಕಳೆದ ಮೂರು ಸೀಸನ್‌ಗಳಿಂದ ಆಡುತ್ತಿರುವ ತಂಡವು ಇದೇ ಮೊದಲ ಬಾರಿಗೆ ಕೆಂಪು ಮತ್ತು ನೀಲಿ ಬಣ್ಣದ ಜೆರ್ಸಿ ಬಿಡುಗಡೆ ಮಾಡಿದೆ. ನಡುವೆ ಬಂಗಾರ ಬಣ್ಣದ ರೇಖೆಗಳಿವೆ. ಶುಕ್ರವಾರದಂದು ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಬಿಡುಗಡೆ ಮಾಡಿರುವ ಪೋಸ್ಟ್‌ನಲ್ಲಿ ಜೆರ್ಸಿ ಬಗ್ಗೆ ಹೇಳಲಾಗಿದೆ. ಅದರಲ್ಲಿ ನಾವು ಹೊಸತನದನ್ನು ಬಯಸುತ್ತೇವೆ. ನಮ್ಮ ಲೋಗೊನಂತೆ ಜೆರ್ಸಿ ಕೂಡ ರಾಜ್ಯದ ಇತಿಹಾಸ ಪ್ರತಿಪಾದಿಸುತ್ತದೆ ಎಂದಿದೆ. ಜೆ.ಕೆ. ಸೂಪರ್ ಸಿಮೆಂಟ್ ತಂಡದ ಪ್ರಾಯೋಜಕರಾಗಿದ್ದಾರೆ.



ಚೆಸ್: ಎರಡನೇ ಡ್ರಾ ಸಾಧಿಸಿದ ಗುಕೇಶ್

ಹೊಸದಿಲ್ಲಿ: ಪ್ರಾಗ್ ಇಂಟರ್‌ನ್ಯಾಷನಲ್ ಚೆಸ್ ಫೆಸ್ಟಿವಲ್‌ನ ಮಾಸ್ಟರ್ಸ್ ವಿಭಾಗದಲ್ಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್ ಮತ್ತೊಂದು ಡ್ರಾ ಸಾಧಿಸಿದರೆ, ಹಾಲಿ ಚಾಂಪಿಯನ್ ಅರವಿಂದ್ ಚಿತಾಂಬರಂ ಅಮೆರಿಕದ ಹಾನ್ಸ್ ನಿಯೆಮನ್ ವಿರುದ್ಧ ಅಚ್ಚರಿ ಗೆಲುವು ದಾಖಲಿಸಿದರು.

ಮಾಸ್ಟರ್ಸ್ ವಿಭಾಗದ ಎರಡನೇ ಸುತ್ತಿನಲ್ಲಿ ಗುಕೇಶ್ ಉಜ್ಬೇಕಿಸ್ತಾನದ ನೋಡಿರ್‌ಬೇಕ್ ಯಾಕುಬ್ಬೋಯೆವ್ ವಿರುದ್ಧ ಡ್ರಾಗೆ ತೃಪ್ತಿಪಟ್ಟರು. ಕ್ವೀನ್‌ಸ್ ಗ್ಯಾಂಬಿಟ್ ಡಿಕ್ಲೈನ್ಡ್ ಆರಂಭದಲ್ಲಿ ಯಾಕುಬ್ಬೋಯೆವ್ ಉತ್ತಮ ಸಿದ್ಧತೆಯೊಂದಿಗೆ ಕಣಕ್ಕಿಳಿದಿದ್ದರು. ಆರಂಭದ ಉದ್ವೇಗದ ನಂತರ ಸ್ಥಿತಿ ಸಮಬಲದಲ್ಲಿತ್ತು. ಬಳಿಕ ಯಾಕುಬ್ಬೋಯೆವ್ ರುಕ್ ಬಲಿ ನೀಡಿ ಮರುಪದವಿನ್ಯಾಸ ಮೂಲಕ ಡ್ರಾ ಖಚಿತಪಡಿಸಿಕೊಂಡರು. ಇನ್ನೊಂದೆಡೆ, ಹಾಲಿ ಚಾಂಪಿಯನ್ ಅರ್ವಿಂದ್ ಚಿತಂಬರಂ ಫಿಲಿಡರ್ ಡಿಫೆನ್ಸ್ ಮುಂದುವರಿಸಿದರು. ಬಿಳಿ ಕಾಯಿಗಳೊಂದಿಗೆ ಆಡಿದ ಅವರು, ನಿಯೆಮನ್ ಆರಂಭದಲ್ಲಿ ಮೇಲುಗೈ ಸಾಧಿಸಿದ್ದರೂ, ಸಮಯದ ಒತ್ತಡದಿಂದ ಹಿನ್ನಡೆ ಅನುಭವಿಸಿದರು. ಅವಕಾಶವನ್ನು ಚಾಕಚಕ್ಯದಿಂದ ಬಳಸಿಕೊಂಡ ಅರವಿಂದ್ ಗೆಲ್ಲುವ ಅಂತಿಮ ಹಂತಕ್ಕೆ (ಎಂಡ್ ಗೇಮ್) ಪಂದ್ಯವನ್ನು ಕೊಂಡೊಯ್ದು ಅಮೂಲ್ಯ ಜಯ ಸಾಧಿಸಿದರು.

ಇನ್ನೊಂದು ನಿರ್ಣಾಯಕ ಪಂದ್ಯದಲ್ಲಿ ಸ್ಪೇನ್‌ನ ಡೇವಿಡ್ ಆಂಟೋನ್ ಕಿಂಗ್ಸ್ ಇಂಡಿಯನ್ ಡಿಫೆನ್ಸ್‌ನಲ್ಲಿ ನೆದರ್‌ಲ್ಯಾಂಡ್ಸ್‌ನ ಜಾರ್ಡನ್ ವ್ಯಾನ್ ಫಾರೆಸ್ಟ್ ವಿರುದ್ಧ ಜಯ ಸಾಧಿಸಿದರು.

ಏಳು ಸುತ್ತುಗಳು ಬಾಕಿ ಇರುವಾಗ, ಅಬ್ದುಸತ್ತೊರೋವ್, ಯಾಕುಬ್ಬೋಯೆವ್ ಮತ್ತು ಸ್ಥಳೀಯ ಆಟಗಾರ ಡೆವಿಡ್ ನಾವರಾ ತಲಾ 1.5 ಅಂಕಗಳೊಂದಿಗೆ ಸಂಯುಕ್ತ ಮುನ್ನಡೆಯಲ್ಲಿದ್ದಾರೆ. ಗುಕೇಶ್, ಅರ್ವಿಂದ್, ವಾನ್ ಫೊರೆಸ್ಟ್ ಮತ್ತು ಗುಯಿಜಾರೋ ಅರ್ಧ ಅಂಕ ಹಿಂದೆ ಇದ್ದಾರೆ. ಚಾಲೆಂಜರ್ಸ್ ವಿಭಾಗದಲ್ಲಿ ಭಾರತದ ಗ್ರ್ಯಾಂಡ್‌ಮಾಸ್ಟರ್ ಹಾಗೂ ವುಮೆನ್ಸ್ ವರ್ಲ್ಡ್ ಕಪ್ ವಿಜೇತೆ ದಿವ್ಯಾ ದೇಶಮುಖ್ ಸ್ಪೇನ್‌ನ ಡಾನಿಲ್ ಯುಫ್ಥಾ ವಿರುದ್ಧ ಡ್ರಾ ಸಾಧಿಸಿದರು. ಮೊದಲ ಪಂದ್ಯದಲ್ಲಿ ಹಂಗೇರಿಯ ಬೆಂಜಾಮಿನ್ ಗ್ಲೇಡುರಾ ವಿರುದ್ಧ ಸಮಬಲ ಸಾಧಿಸಿದ್ದ ದಿವ್ಯಾ, ಎರಡು ಪಂದ್ಯಗಳ ನಂತರ ಅರ್ಧ ಅಂಕದ ಸಾಧನೆಯೊಂದಿಗೆ ಮುಂದುವರಿದಿದ್ದಾರೆ. ಇನ್ನೊಬ್ಬ ಭಾರತೀಯ ಸೂರ್ಯ ಶೇಖರ ಡೆನ್ಮಾರ್ಕ್‌ನ ಜೋನಸ್ ಬುಹ್ಲ್ ವಿರುದ್ಧ ಡ್ರಾ ಮೂಲಕ ಖಾತೆ ತೆರೆದಿದ್ದಾರೆ.



ಪದಬಂಧ

ರಾಜಾ ಸಂಗಮೇಶ ಹಿರೇಮಠ



5909

ಎಡದಿಂದ ಬಲಕ್ಕೆ
1.ಲೋಕವನ್ನು ತನ್ನ ಸೌಂದರ್ಯದಿಂದ ಆಕರ್ಷಿಸುವವಳು (7)
3.ತ್ರಿಮೂರ್ತಿಗಳಲ್ಲೊಬ್ಬ-ಈಶ್ವರ (2)
4.ಚಿಕ್ಕಹುಳುಗಳಿಂದಾಗುವ ಅಂಟುರೋಗ (2)
5.ಕಣ್ಣಿಗೆ ಕಾಣದಷ್ಟು ಸಣ್ಣ ಜೀವಿ (3)
7.ಕೂಡಿದ ಜನರಿಂದ ತಿಳಿದ ಸುದ್ದಿ (4)
9.ಪಾತ ಒಳಗೊಂಡ ನಿರಾಕರಿಸಲ್ಪಟ್ಟದ್ದು (4)
11.ಮಂದ ಬುದ್ಧಿಯವ ಅಲ್ಲಿಗೇ ತಂದ ಚಾಪೆ (4)
13.ಅತಿಯಾದ ವಜನು ಎಂಬರ್ಥದ ಶಬ್ದ (4)
15.ಅಕ್ಕಪಕ್ಕವಿಲ್ಲಿ ತಿರುಗಿ ಕಾಣುತ್ತಿದೆ (4)
16.ಅತ್ಯಂತ ಸೂಕ್ಷ್ಮವಾದ ಚಿಕ್ಕ ಪ್ರಮಾಣ (4)

ಮೇಲಿನಿಂದ ಕೆಳಕ್ಕೆ
1.ಈ ಜಗತ್ತಿನಲ್ಲಿ ಜನಿಸಿದವನು (4)
2.ಅನುಗ್ರಹಿಸುವವಳು ತಲೆಕೆಳಗಾಗಿದ್ದಾಳೆ (4)
5.ಪುಸ್ತಕ-ಬಟ್ಟೆಗಳನ್ನಿಡುವ ದೊಡ್ಡ ಕಪಾಟು (2)
6.ಉಲ್ಟಾ ಕಂಡ ರಸಾಯನಿಕ-ಭೌತಿಕತೆ ಕಾಯ್ದುಕೊಂಡ ಚಿಕ್ಕ ಕಣ (2)
8. ತುಂಗ-ಭದ್ರಾ ನದಿಗಳು ಸಂಗಮಿಸುವ ಸ್ಥಳ (3)
10. ಇಲಿಗೆ ಹಾಕುವ ವಿಷವಿದು (3)
11. ಮೆಲುವಾಗಿ ಬೀಸುತ್ತಿರುವ ಗಾಳಿ (4)
12. ಕೊರಳಲ್ಲಿ ಧರಿಸುವ ಚಿನ್ನದ ಆಭರಣ (4)
13. ಸಿಹಿಯಾದ ಮನಸ್ಸನ್ನು ಹೊಂದಿದವಳು (4)
14. ಲೋಹವನ್ನು ಚಿನ್ನವಾಗಿಸುವ ಕಲೆ (4)

5908 ಉತ್ತರ

ಎಡದಿಂದ ಬಲಕ್ಕೆ:
1.ಸಕಾಲ 3.ಅಮರಣಾಂತ
5.ನಲಿವು 7.ಕಟ್ಟಿಗೆ
8.ಹಾಜರಿ 9.ಅಧೀರ
10.ಸುರಭಿ 11.ಗಾಯಕ
12.ಯಮುನಾ 13.ರವಿಜ
15.ಹಣದಭಾವ 16.ಕಸಬು

ಮೇಲಿನಿಂದ ಕೆಳಕ್ಕೆ :
2.ಕಾವಲಿ 3.ಅಧಿಕಾರಿ
4.ತದಿಗೆ 6.ನಾಗರಹಾವು
7.ಕನಸುಗಾರ 11.ಕಲರವ
12.ಹರೆಯ 14.ವಿಶ್ವಾಸ

ರಾಷ್ಟ್ರಸೇವೆಯಲ್ಲಿ 60 ರಾಷ್ಟ್ರೋತ್ಥಾನ



ರಾಷ್ಟ್ರೋತ್ಥಾನ ಪರಿಷತ್ತಿನ ಸೇವಾಕಾರ್ಯ 4 ಆಯಾಮಗಳಲ್ಲಿ

ಶಿಕ್ಷಣ





ಸಾಹಿತ್ಯ

ಸಂವಿತ್ - ಸಂಶೋಧನಾ ಪ್ರತಿಷ್ಠಾನ
- ವಿಭಾಗಗಳು 4
- ಪಠ್ಯಪುಸ್ತಕಗಳು 72
- ಪಠ್ಯಪೂರಕ ಪುಸ್ತಕಗಳು 45
- ತಲುಪಿರುವ ಶಾಲೆಗಳು 414

ಸಿಬಿಎಸ್‌ಇ ಪಠ್ಯಕ್ರಮ
- 20 ಶಾಲೆಗಳು
- 18000 ವಿದ್ಯಾರ್ಥಿಗಳು
- 800 ಶಿಕ್ಷಕರು

ರಾಜ್ಯ ಪಠ್ಯಕ್ರಮ
- 9 ಶಾಲೆಗಳು
- 6500 ವಿದ್ಯಾರ್ಥಿಗಳು
- 250 ಶಿಕ್ಷಕರು





ರಾಷ್ಟ್ರೋತ್ಥಾನ 1972ರಲ್ಲಿ ಶಿಕ್ಷಣಕ್ಷೇತ್ರವನ್ನು ಪ್ರವೇಶಿಸಿತು. ಶೈಕ್ಷಣಿಕ ಕ್ಷೇತ್ರದಲ್ಲಿ ಭಾರತೀಯತೆ ಹಾಗೂ ಭಾರತೀಯ ಬೋಧನಾಕ್ರಮವನ್ನು ಮೇಳೈಸುವ ಸಂಸ್ಥೆಗಳ ಆವಶ್ಯಕತೆಯನ್ನು ಪರಿಷತ್ ಮನಗಂಡಿತು. ಪಂಚಮುಖಿ ಶಿಕ್ಷಣದ ಮೂಲಕ ಪ್ರತಿಯೊಬ್ಬ ವಿದ್ಯಾರ್ಥಿಯ ಸಮಗ್ರ ವ್ಯಕ್ತಿತ್ವವಿಕಾಸವನ್ನು ಸಾಧಿಸುವುದು ರಾಷ್ಟ್ರೋತ್ಥಾನ ಶಾಲೆಗಳ ಸಂಕಲ್ಪ. ಮಕ್ಕಳ ದೈಹಿಕ, ಬೌದ್ಧಿಕ, ಮಾನಸಿಕ, ಭಾವನಾತ್ಮಕ ಹಾಗೂ ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸಿ, ತನ್ಮೂಲಕ ಪಠ್ಯಪುಸ್ತಕ-ಪರೀಕ್ಷೆಗಳಾಚೆಗೂ ಕಲಿಕೆ ಸಾಗುವಂತಾಗಿ, ವಿದ್ಯಾರ್ಥಿಗಳನ್ನು ಸಮೃದ್ಧ ಬದುಕಿಗೆ ಸಜ್ಜುಗೊಳಿಸಲು ಈ ವಿಶಿಷ್ಟ ಪಠ್ಯಕ್ರಮ ರೂಪಿಸಲಾಗಿದೆ. ರಾಜ್ಯ ಪಠ್ಯಕ್ರಮವನ್ನು ಅನುಸರಿಸುವ ಶಾಲೆಗಳಾಗಿ ರಾಷ್ಟ್ರೋತ್ಥಾನ ವಿದ್ಯಾಲಯಗಳಿವೆ. ಹಗರಿಬೊಮ್ಮನಹಳ್ಳಿ, ದಾವಣಗೆರೆ, ಚಿತ್ರದುರ್ಗ, ಧಾರವಾಡ, ಹೊಳೆಹೊನ್ನೂರು, ಶ್ರೀರಾಂಪುರ, ಕಲ್ಯಾಣನಗರ (ಬೆಂಗಳೂರು) ಹಾಗೂ ಮುಂಗಾನಹಳ್ಳಿಯಲ್ಲಿ ಇವುಗಳನ್ನು ಕಾಣಬಹುದು. ಸಿಬಿಎಸ್‌ಇ ಪಠ್ಯಕ್ರಮವನ್ನು ಅನುಸರಿಸುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರಗಳು (ರಾವಿಕೇ) 2005ರಲ್ಲಿ ಪ್ರಾರಂಭವಾದವು. ಬೆಂಗಳೂರಿನಲ್ಲಿ ಅರ್ಕಾವತಿ, ರಾಮಮೂರ್ತಿನಗರ, ಬನಶಂಕರಿ, ಸೋಮನಹಳ್ಳಿ, ಹುಲಿಮಂಗಲ, ಹುರಳಿಚಿಕ್ಕನಹಳ್ಳಿ; ಮೈಸೂರಿನಲ್ಲಿ ವಿಜಯನಗರ, ಶ್ರೀನಗರ; ಧಾರವಾಡದಲ್ಲಿ ಗರಗ, ಸತ್ತೂರ; ಹಗರಿಬೊಮ್ಮನಹಳ್ಳಿ, ದಾವಣಗೆರೆ, ಕಲಬುರಗಿ, ಮಂಗಳೂರು, ಬಾಗಲಕೋಟೆಯಲ್ಲಿ ಕೆರೂರ, ಬಳ್ಳಾರಿ, ಹಾಸನ, ಉಡುಪಿ, ಹಾನಗಲ್, ಹಾವೇರಿಯಲ್ಲಿ ವಿದ್ಯಾಕೇಂದ್ರಗಳಿವೆ.

ದಾವಣಗೆರೆ, ಉಡುಪಿ ಹಾಗೂ ಧಾರವಾಡ ಈ ಮೂರೂ ಕಡೆಗಳಲ್ಲಿ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜುಗಳಿವೆ. ವಿದ್ಯಾರ್ಥಿಗಳಿಗೆ ವಸತಿಸೌಲಭ್ಯವನ್ನೂ ಕಲ್ಪಿಸಲಾಗಿದೆ.

ಸಂವಿತ್ - ಸಂಶೋಧನಾ ಪ್ರತಿಷ್ಠಾನ: ಶಿಕ್ಷಣಸಂಸ್ಥೆಗಳು ಸಂತಸಮಯ ಕಲಿಕೆಯ ಮೂಲಕ ಶೈಕ್ಷಣಿಕ ಉನ್ನತಿಯನ್ನು ಸಾಧಿಸಲು ನೆರವಾಗುವ ಉದ್ದೇಶದಿಂದ 2019ರಲ್ಲಿ ಆರಂಭವಾದ ಸಂವಿತ್ ಸಂಶೋಧನಾ ಪ್ರತಿಷ್ಠಾನವು -2020ಕ್ಕೆ ಅನುಗುಣವಾಗಿ ಪಠ್ಯಪುಸ್ತಕಗಳು, ಕಿಟ್ (ಬೋಧನಾ ಕಲಿಕಾ ಸಾಮಗ್ರಿ), ಶಿಕ್ಷಕರ ಕೈಪಿಡಿಗಳು, ಇ-ಸಂಪನ್ಮೂಲಗಳು ಮುಂತಾದ ಭಾರತಕೇಂದ್ರಿತ ಸಮಗ್ರ ಶಿಕ್ಷಣ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುತ್ತಿದೆ. ಸಂವಿತ್ ಸಂಶೋಧನಾ ಪ್ರತಿಷ್ಠಾನವು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯಿಂದ ಅಂಗೀಕೃತವಾದ ಭಾರತೀಯ ಜ್ಞಾನ ಪದ್ಧತಿಯ (ಐಕೆಎಸ್) ಕಲಿಕಾ ಕೇಂದ್ರವೂ ಆಗಿದೆ.

ತಪಸ್ ಸಾಧನಾ: ಭಾರತದ ಸರ್ವಾಂಗೀಣ ಉನ್ನತಿಗೆ ಎಲ್ಲ ಸ್ತರಗಳ ಯುವ ಸಮುದಾಯ ಉನ್ನತ ಶಿಕ್ಷಣವನ್ನು ಹೊಂದುವುದು ಅನಿವಾರ್ಯ ಹಾಗೂ ಅಗತ್ಯ ಕೂಡ. ಆದರೆ ಪ್ರತಿಭಾವಂತರಾಗಿದ್ದರೂ ಆರ್ಥಿಕವಾಗಿ ಸಬಲರಲ್ಲದ ಮಕ್ಕಳಿಗೆ ಇದು ಸಾಧ್ಯವಾಗದೇ ಇದ್ದುದನ್ನು ಮನಗಂಡು ಆ ಉನ್ನತ ಶಿಕ್ಷಣವನ್ನು ಆಗು ಮಾಡಿ ಅವರನ್ನೂ ಭವಿಷ್ಯದ ಸಮರ್ಥ ನೇತಾರರನ್ನಾಗಿಸುವ ಉದ್ದೇಶದೊಂದಿಗೆ ತಪಸ್-ಸಾಧನಾ ಯೋಜನೆಗಳ ಪ್ರಾರಂಭವಾಯಿತು. ಅವಕಾಶವಂಚಿತ ಪ್ರತಿಭಾನ್ವಿತ ಗಂಡುಮಕ್ಕಳಿಗೆ ಸಮಗ್ರ ಮಾದರಿಯಲ್ಲಿ ಜೆಇಇ ತರಬೇತಿ ನೀಡುವ ಉಚಿತ ದ್ವೈವಾರ್ಷಿಕ ವಸತಿಸಹಿತ ಪ್ರಕಲ್ಪ ತಪಸ್ 2012ರಲ್ಲಿ ಆರಂಭವಾಯಿತು. ಐಐಟಿ ಮುಂತಾದ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳನ್ನು ಸೇರ ಬಯಸುವ ವಿದ್ಯಾರ್ಥಿಗಳ ಕನಸುಗಳನ್ನು ಸಾಕಾರಗೊಳಿಸುವುದು ಈ ಯೋಜನೆಯ ಉದ್ದೇಶ. ಈವರೆಗೆ 180 ವಿದ್ಯಾರ್ಥಿಗಳು ಮೆರಿಟ್ ಸೀಟುಗಳನ್ನು ಪಡೆದಿದ್ದಾರೆ. 2017ರಲ್ಲಿ ಆರಂಭವಾದ ಸಾಧನಾ, ವೈದ್ಯಕೀಯ ಶಿಕ್ಷಣವನ್ನು ಪಡೆಯಬಯಸುವ, ಆರ್ಥಿಕವಾಗಿ ಸಬಲರಲ್ಲದ ಪ್ರತಿಭಾನ್ವಿತ ಹೆಣ್ಣುಮಕ್ಕಳಿಗಾಗಿಯೇ ರೂಪಿಸಲಾದ, ಸಮಗ್ರ ಮಾದರಿಯಲ್ಲಿ ನೀಟ್ ತರಬೇತಿ ನೀಡುವ ಉಚಿತ ದ್ವೈವಾರ್ಷಿಕ ವಸತಿಸಹಿತ ಪ್ರಕಲ್ಪ. ಇದು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಇತರ ಪ್ರತಿಷ್ಠಿತ ವಿದ್ಯಾಲಯಗಳಲ್ಲಿ ಮೆರಿಟ್ ಸೀಟುಗಳನ್ನು ಪಡೆಯಲು ಅವರನ್ನು ಸಿದ್ಧಗೊಳಿಸುತ್ತದೆ. ಇಲ್ಲಿಯವರೆಗೆ 145 ವಿದ್ಯಾರ್ಥಿನಿಯರು ಮೆರಿಟ್ ಸೀಟುಗಳನ್ನು ಪಡೆದಿದ್ದಾರೆ.

ಸಂದ ಪ್ರಶಸ್ತಿ ಮತ್ತು ಗೌರವಗಳು
- ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅಂಕಿತ ದತ್ತಿ ಪ್ರಶಸ್ತಿ
- ತೋರ್ಬೆರಳು, ಅಜೇಯ, ಅದಮ್ಯ, ಶತಮಾನದ ತಿರುವಿನಲ್ಲಿ ಭಾರತ, ಗಾಂಧೀಯ ಅರ್ಥಶಾಸ್ತ್ರ ಕೃತಿಗಳಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಪುಸ್ತಕ ಬಹುಮಾನಗಳು
- ಸಾಮಾಜಿಕ ಕ್ರಾಂತಿಸೂರ್ಯ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಕೃತಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಿಂದ ಅತ್ಯುತ್ತಮ ಅನುವಾದ ಪ್ರಶಸ್ತಿ
- ಉತ್ಕರ್ಷಪಥ ಕೃತಿಗೆ ಗಾಂಧಿ ಸಾಹಿತ್ಯ ಸಂಘದಿಂದ ಸಿದ್ದವನಹಳ್ಳಿ ಕೃಷ್ಣಶರ್ಮಾ ದತ್ತಿ ಪ್ರಶಸ್ತಿ
- ಕನ್ನಡ ಪುಸ್ತಕ ಪ್ರಾಧಿಕಾರದಿಂದ 2021ನೇ ಸಾಲಿನ ಅತ್ಯುತ್ತಮ ಪ್ರಕಾಶನ ಗೌರವ ಪ್ರಶಸ್ತಿ

ಇದುವರೆಗಿನ ಪ್ರಕಟಣೆಗಳು
- 182 ರಾಷ್ಟ್ರೋತ್ಥಾನ ಸಾಹಿತ್ಯ
- 130 ಸಾಹಿತ್ಯ ಸಿಂಧು ಪ್ರಕಾಶನ
- 610 ಭಾರತ-ಭಾರತಿ (ಕನ್ನಡ)
- 225 ಭಾರತ-ಭಾರತಿ (ಇಂಗ್ಲಿಷ್)
- ಭಾರತ-ಭಾರತಿ ಪುಸ್ತಕಗಳ ಮಾರಾಟ 2 ಕೋಟಿಗೂ ಅಧಿಕ

ಭಾರತದ ನೈಜ ಇತಿಹಾಸ, ಸಂಸ್ಕೃತಿ ಮತ್ತು ಪರಂಪರೆಗಳ ಅನ್ವೇಷಣೆಗಾಗಿ ಸಾಹಿತ್ಯ. ಕನ್ನಡದಲ್ಲಿ ರಾಷ್ಟ್ರೀಯ ಸಾಹಿತ್ಯದ ಪರಂಪರೆಯನ್ನು ಮುಂದುವರಿಸುವ ಹಾಗೂ ಭಾರತದ ನೈಜ ಇತಿಹಾಸ, ಸಂಸ್ಕೃತಿಗಳನ್ನು ಕುರಿತು ಭಾರತೀಯರಲ್ಲಿ ಹೆಮ್ಮೆಯನ್ನು ಮೂಡಿಸುವಂತಹ ಸಾಹಿತ್ಯ ಪ್ರಕಟಣೆ ಮತ್ತು ಪ್ರಸರಣ ಮಾಡುವ ಉದ್ದೇಶದಿಂದ 1965ರಲ್ಲಿ ರಾಷ್ಟ್ರೋತ್ಥಾನ ಸಾಹಿತ್ಯ ಕಾರ್ಯಾರಂಭ ಮಾಡಿತು.

ಇದುವರೆಗೆ ಇತಿಹಾಸ, ಸಂಸ್ಕೃತಿ, ಪರಂಪರೆ, ಆರೋಗ್ಯ, ಜೀವನಚರಿತ್ರೆ, ಆರ್ಥಿಕತೆ, ಪರಿಸರ, ವಿಜ್ಞಾನ, ವ್ಯಕ್ತಿತ್ವವಿಕಸನ ಮೊದಲಾದ ಹಲವು ವಿಷಯ-ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು ಪ್ರಕಟವಾಗಿವೆ. ರಾಷ್ಟ್ರೋತ್ಥಾನ ಉಪನ್ಯಾಸಮಾಲಾ ಹಾಗೂ ಮಂಥನ ವೇದಿಕೆಗಳಲ್ಲಿ ನೀಡಲಾದ ಪ್ರಮುಖ ಉಪನ್ಯಾಸಗಳು ರಾಷ್ಟ್ರೋತ್ಥಾನ ಸಾಹಿತ್ಯದ ಮೂಲಕ ಪುಸ್ತಕರೂಪ ಪಡೆದಿವೆ.

ಕಳೆದ 60 ವರ್ಷಗಳಲ್ಲಿ ವಿವಿಧ ಪುಸ್ತಕಗಳ ಲೋಕಾರ್ಪಣ ಕಾರ್ಯಕ್ರಮಗಳಿಗೆ ದೇಶದ ಅಗ್ರಮಾನ್ಯ ನಾಯಕರು, ಸಾಹಿತಿಗಳು, ಸ್ವಾತಂತ್ರ್ಯ ಹೋರಾಟಗಾರರು ಆಗಮಿಸಿದ್ದಾರೆ. ಭಗತ್ ಸಿಂಗ್ ಅವರ ತಾಯಿ ವಿದ್ಯಾವತಿದೇವಿ, ತಿ.ತಾ. ಶರ್ಮಾ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕುವೆಂಪು, ದ.ರಾ. ಬೇಂದ್ರೆ, ಶಿವರಾಮ ಕಾರಂತ, ದುರ್ಗಾ ಭಾಗವತ್, ಡಾ. ಸುನೀತಿಚೌಧರಿ ಘೋಶ್, ಶಚೀಂದ್ರನಾಥ ಬಕ್ಷಿ, ಅನಕೃ, ನಿರಂಜನ, ಖಾದ್ರಿ ಶಾಮಣ್ಣ, ಎಲ್.ಕೆ. ಅಡ್ವಾಣಿ, ಸ್ವಾಮಿ ಚಿನ್ಮಯಾನಂದ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ಪ್ರೊ. ಜಿ. ವೆಂಕಟಸುಬ್ಬಯ್ಯ, ಚಂದ್ರಶೇಖರ ಕಂಬಾರ, ಎಚ್.ಎಸ್. ವೆಂಕಟೇಶಮೂರ್ತಿ, ಡಾ. ಎಸ್.ಎಲ್. ಭೈರಪ್ಪ, ಡಾ. ಸಿದ್ದಲಿಂಗಯ್ಯ, ಜಗಮೋಹನ್, ಗೊ.ರು. ಚನ್ನಬಸಪ್ಪ, ಡಾ. ನವರತ್ನ ಎಸ್. ರಾಜಾರಾಂ ಸೇರಿದಂತೆ ಹಲವರು ಖ್ಯಾತನಾಮರ ಮೂಲಕ ರಾಷ್ಟ್ರೋತ್ಥಾನ ಪ್ರಕಾಶನ ವಿಭಾಗದ ಪ್ರಕಟಣೆಗಳು ಲೋಕಾರ್ಪಣೆಯಾಗಿವೆ.

ರಾಷ್ಟ್ರೋತ್ಥಾನ ಮುದ್ರಣಾಲಯ: ರಾಷ್ಟ್ರೋತ್ಥಾನ ಸಾಹಿತ್ಯವನ್ನು ಅಚ್ಚುಕಟ್ಟಾಗಿ, ಕೈಗೆಟುಕುವ ದರದಲ್ಲಿ ಮುದ್ರಿಸುವ ಉದ್ದೇಶದೊಂದಿಗೆ 1967ರಲ್ಲಿ ರಾಷ್ಟ್ರೋತ್ಥಾನ ಮುದ್ರಣಾಲಯವನ್ನು ಪ್ರಾರಂಭಿಸಲಾಯಿತು. ಬೇರೆ ಬೇರೆ ಪ್ರಕಾಶಕರ ಸದಭಿರುಚಿಯ ಸಾಹಿತ್ಯ ಮುದ್ರಣಕ್ಕೂ ಅದೇ ಆಶಯ ವಿಸ್ತಾರದೊಂದಿಗೆ ಅವಕಾಶ ಮಾಡಿಕೊಡಲಾಯಿತು. ಪ್ರಸ್ತುತ, ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಸೌಲಭ್ಯಗಳಿರುವ ಕರ್ನಾಟಕದ ಪ್ರತಿಷ್ಠಿತ ಮುದ್ರಣಾಲಯಗಳಲ್ಲಿ ಒಂದೆನಿಸಿದೆ.

ಉತ್ಥಾನ ಕನ್ನಡ ಮಾಸಪತ್ರಿಕೆ: ಕನ್ನಡದ ವಿಶಿಷ್ಟ ಕೌಟುಂಬಿಕ ಮಾಸಪತ್ರಿಕೆ ಉತ್ಥಾನ. 1965ರ ವಿಜಯದಶಮಿಯಂದು ಮೊದಲ ಸಂಚಿಕೆ ಅನಾವರಣಗೊಂಡಿತು. ಇದರ ಮೊದಲ ಸಂಪಾದಕರು ಡಾ. ಸೂರ್ಯನಾಥ ಕಾಮತ್. ಅನಂತರದ ದಿನಗಳಲ್ಲಿ ಎಸ್. ವೆಂಕಟರಾವ್, ಪಿ.ಆರ್. ಆನಂದರಾವ್ ಹಾಗೂ ಶಿವರಾಮು ಅವರು ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ, ನಾಡೋಜ ಎಸ್.ಆರ್. ರಾಮಸ್ವಾಮಿ ಅವರು ಉತ್ಥಾನದ ಗೌರವ ಪ್ರಧಾನ ಸಂಪಾದಕರಾಗಿದ್ದಾರೆ. ಕನ್ನಡದ ಹಲವಾರು ಖ್ಯಾತ ಲೇಖಕರಿಗೆ ಅವರ ಆರಂಭಿಕ ದಿನಗಳಲ್ಲಿ ವೇದಿಕೆಯಾಗಿದ್ದು ಉತ್ಥಾನ.

ಭಾರತ - ಭಾರತಿಯ ದಾಖಲೆ: ಮಕ್ಕಳಿಗೆ ಅಚ್ಚುಮೆಚ್ಚಾಗಿರುವ, ಅಂಗೈ ಅಗಲದ ಪುಸ್ತಕ ಮಾಲಿಕೆ ಭಾರತ-ಭಾರತಿ. ಭಾರತ-ಭಾರತಿ ಮೊದಲ ಹತ್ತು ಪುಸ್ತಕಗಳ ಅನಾವರಣ ಸಮಾರಂಭದ ದಿವಸವೇ 1,30,000 ಪ್ರತಿಗಳು ಮಾರಾಟವಾದವು. ಇದು ಮಕ್ಕಳ ಸಾಹಿತ್ಯ ಎಂದು ಕಲ್ಪಿತವಾದ ಯೋಜನೆಯಾದರೂ ಪರಿಣಾಮದಲ್ಲಿ ಅನುಪಮ ಆಕರ ಸಾಹಿತ್ಯವಾಗಿ ಪರಿಣಮಿಸಿತು. ಇವತ್ತಿಗೆ ಕನ್ನಡದಲ್ಲಿ 610 ಹಾಗೂ ಇಂಗ್ಲಿಷಿನಲ್ಲಿ 225 ಶೀರ್ಷಿಕೆಗಳಲ್ಲಿ ಪ್ರಕಟವಾಗಿರುವ ಈ ಸಾಹಿತ್ಯಸರಣಿ ಒಟ್ಟಾರೆ 2 ಕೋಟಿಗೂ ಹೆಚ್ಚು ಪುಸ್ತಕಗಳ ಮಾರಾಟ ಕಂಡಿರುವುದೊಂದು ಸಾರ್ವಕಾಲಿಕ ದಾಖಲೆ.



ರಾಷ್ಟ್ರೋತ್ಥಾನ
ಸ್ವಸ್ಥ-ಸುಸ್ಥಿರ ಸಮಾಜ ನಿರ್ಮಾಣ

ಭಾರತೀಯ ಜೀವನಮೌಲ್ಯಗಳನ್ನು ಜನಮನದಲ್ಲಿ ಬೇರೂರಿಸುವ ಸಾಹಿತ್ಯ ನಿರ್ಮಾಣ ಮತ್ತು ಪ್ರಸಾರ; ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸಕ್ಕೆ ಪೂರಕವಾದ ಸಂಸ್ಕಾರಯುಕ್ತ, ರಾಷ್ಟ್ರನಿಷ್ಠ ಶಿಕ್ಷಣದ ಮೂಲಕ ಸಾಮಾಜಿಕ ಪರಿವರ್ತನೆ; ಸಮಾಜದ ಅಗತ್ಯಗಳ ಪೂರೈಕೆಗಾಗಿ ಯೋಗ, ಆರೋಗ್ಯ ಮತ್ತು ವಿವಿಧ ಸೇವಾ ಚಟುವಟಿಕೆಗಳು; ಈ ಎಲ್ಲಾ ಚಟುವಟಿಕೆಗಳಲ್ಲೂ ಉತ್ಕೃಷ್ಟ ಕಾರ್ಯಮಾದರಿಗಳ ಸೃಷ್ಟಿ ಮತ್ತು ಅವುಗಳ ವ್ಯಾಪಕ ಅಳವಡಿಕೆಗೆ ಪ್ರೋತ್ಸಾಹ ನೀಡುವ ಧ್ಯೇಯಗಳೊಂದಿಗೆ ರಾಷ್ಟ್ರೋತ್ಥಾನ ಪರಿಷತ್ ಪ್ರಮುಖವಾಗಿ ನಾಲ್ಕು ಆಯಾಮಗಳಲ್ಲಿ ಚಟುವಟಿಕೆಗಳನ್ನು ನಡೆಸುತ್ತಿದೆ.







ಸಮಾಜ ಸಬಲೀಕರಣ

ಸೇವಾವಸತಿ
- ಸ್ಲಂ/ ಕೊಳೆಗೇರಿಗಳು 200+
- ಫಲಾನುಭವಿಗಳು 56,000+
- ಶಿಕ್ಷಣ ಕೇಂದ್ರಗಳು 370+
- ಮಕ್ಕಳು 13,000+
- ಸ್ವಸಹಾಯ ಗುಂಪುಗಳು 224
- ಸದಸ್ಯರು 2,000+
- ಸ್ವಾಸ್ಥ್ಯ ಚಟುವಟಿಕೆಗಳ ಫಲಾನುಭವಿಗಳು 25,000+

ಮಾಧವ ಸೃಷ್ಟಿ
- ಒಟ್ಟು ವಿಸ್ತೀರ್ಣ ಎಕರೆ 110
- ಗೋವುಗಳು 600+
- ಕೃಷಿಕರಿಗೆ ನೀಡಿದ ಎತ್ತುಗಳು 500+
- ಕಾಡು ಬೆಳೆಸಿದ ಜಾಗ ಎಕರೆ 35
- ಮರಗಳು 15,500+







ಸುಸ್ಥಿರತೆ ಹಾಗೂ ಸಬಲೀಕರಣ, ಸ್ವಸ್ಥಸಮಾಜದ ಅವಿಭಾಜ್ಯ ಅಂಶಗಳು. ಅವುಗಳನ್ನು ಸಾಧಿಸಲು ಸಮಾಜದ ಎಲ್ಲರ ಸಹಕಾರ ಹಾಗೂ ಜವಾಬ್ದಾರಿಯ ನಿರ್ವಹಣೆಯಲ್ಲಿ ಎಲ್ಲರ ಸಹಭಾಗಿತ್ವ ಆವಶ್ಯಕ. ಇದನ್ನು ಮನಗಂಡು, ಸಮಾಜದ ಅವಕಾಶವಂಚಿತರನ್ನು ಮೇಲೆತ್ತುವ ಸಲುವಾಗಿ, ಅವರನ್ನೂ ಸಕ್ರಿಯವಾಗಿ ತೊಡಗಿಸುವಂತಹ ಚಟುವಟಿಕೆಗಳನ್ನು ಆರಂಭಿಸಲಾಯಿತು.

ಸ್ಲಂಗಳ ಸರ್ವಾಂಗೀಣ ಅಭಿವೃದ್ಧಿಗೆ ಸೇವಾವಸತಿ: ಶಾಲೆಯಿಂದ ಹೊರಗುಳಿದ ಮಕ್ಕಳ ಶಿಕ್ಷಣ, ಸ್ತ್ರೀಯರ ಹಾಗೂ ಯುವಜನತೆಯ ಸ್ವಾವಲಂಬನೆ ಹಾಗೂ ಎಲ್ಲರ ಸ್ವಾಸ್ಥ್ಯವನ್ನು ಸಾಧಿಸುವ ಮೂಲಕ ಸ್ಲಂ ನಿವಾಸಿಗಳ ಜೀವನಮಟ್ಟವನ್ನು ಸುಧಾರಿಸುವುದಕ್ಕಾಗಿ 1989ರಲ್ಲಿ ಸೇವಾವಸತಿ (ಈ ಮೊದಲು ಜಾಗರಣ) ಪ್ರಕಲ್ಪ (ಕಾರ್ಯಕ್ರಮ) ಆರಂಭಿಸಲಾಯಿತು. ಬೆಂಗಳೂರಿನ ಸುಮಾರು 200ಕ್ಕೂ ಹೆಚ್ಚು ಸ್ಲಂಗಳಲ್ಲಿ ಈ ಚಟುವಟಿಕೆಗಳು ನಡೆಯುತ್ತಿವೆ. 2021ರ ವೇಳೆಗೆ ಜಾಗರಣ ಯೋಜನೆಯ ವ್ಯಾಪ್ತಿ ಬೆಳೆದು ಸೇವಾವಸತಿ ಎನ್ನುವ ಹೆಸರಿನಲ್ಲಿ ಶಿಕ್ಷಣ, ಸ್ವಾವಲಂಬನೆ ಮತ್ತು ಸ್ವಾಸ್ಥ್ಯ ಕ್ಷೇತ್ರಗಳಲ್ಲಿ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.

ಮಾಧವಸೃಷ್ಟಿ: ಶ್ರೀಗುರೂಜಿ ಗೋಳ್ವಲ್ಕರ್ ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ (2006) ದೇಸೀ ಜಾನುವಾರು ತಳಿಗಳ ಸಂರಕ್ಷಣೆಗಾಗಿ, ದೊಡ್ಡಬಳ್ಳಾಪುರದ ಶ್ರೀ ಘಾಟಿ ಸುಬ್ರಹ್ಮಣ್ಯ ದೇವಸ್ಥಾನದ ಸಮೀಪದಲ್ಲಿ ಮಾಧವಸೃಷ್ಟಿ ಎಂಬ ಹೆಸರಿನಲ್ಲಿ ಗೋಶಾಲೆ ಪ್ರಾರಂಭಿಸಲಾಯಿತು. ಇಲ್ಲೀಗ, 35 ಎಕರೆ ವಿಸ್ತೀರ್ಣದಲ್ಲಿ 15,500+ ಮರಗಳನ್ನು ಹೊಂದಿರುವ ವೃಂದಾವನ ನಿರ್ಮಿಸಲಾಗಿದೆ. ಸುಸ್ಥಿರ ಕೃಷಿ-ಅರಣ್ಯ ಸಾಗುವಳಿ ಕೇಂದ್ರವಾಗಿ ನೈಸರ್ಗಿಕ ಸುಸ್ಥಿರತೆಗೆ ಕೊಡುಗೆ ನೀಡುತ್ತಿದೆ. ಗೋಶಾಲೆಯು ಈಗ ರೈತರು ಮತ್ತು ಜನಸಾಮಾನ್ಯರಿಗೆ ಸಾವಯವ ಕೃಷಿ ವಿಧಾನಗಳನ್ನು ಕುರಿತು ತರಬೇತಿ ನೀಡುವ ಕೇಂದ್ರವಾಗಿ ರೂಪುಗೊಂಡಿದೆ. ಗೀರ್, ಸಾಹಿವಾಲ್, ಕಾಂಕ್ರೇಜ್, ಥಾರ್ಪಾರ್ಕರ್, ದೇವನಿ, ಹಳ್ಳಿಕಾರ್, ಮಲೆನಾಡುಗಿಡ್ಡ, ಓಂಗೋಲ್, ಅಮೃತಮಹಲ್ ಗೋ ತಳಿಗಳನ್ನು ಸಂರಕ್ಷಿಸಲಾಗುತ್ತಿದೆ.

ಸ್ವಾಸ್ಥ್ಯ





ಯೋಗಕೇಂದ್ರಗಳು, ರಕ್ತಕೇಂದ್ರಗಳು ಹಾಗೂ ಆಸ್ಪತ್ರೆಯ ಮೂಲಕ ಸಮಾಜದ ನಿತ್ಯನೂತನ ಆರೋಗ್ಯ ಮತ್ತು ಸ್ವಾಸ್ಥ್ಯಸಂಬಂಧಿತ ಆವಶ್ಯಕತೆಗಳನ್ನು ರಾಷ್ಟ್ರೋತ್ಥಾನ ಪರಿಷತ್ ಪೂರೈಸುತ್ತಿದೆ. ಈ ನಿಟ್ಟಿನಲ್ಲಿ, ಅಷ್ಟಾಂಗಯೋಗ ಹಾಗೂ ತತ್ಸಂಬಂಧಿತ ಭಾರತೀಯ ಮೂಲದ ದೇಹ, ಆತ್ಮ ಮತ್ತು ಮನಸ್ಸುಗಳ ಸಾಮರಸ್ಯ ತಂತ್ರಗಳು ಹಾಗೂ ಸಮಗ್ರ ವ್ಯಕ್ತಿತ್ವವಿಕಸನದ ತರಬೇತಿಗಳನ್ನು ನೀಡುವ ಉದ್ದೇಶದಿಂದ ರಾಷ್ಟ್ರೋತ್ಥಾನ ಯೋಗವಿಜ್ಞಾನ ಹಾಗೂ ಸಂಶೋಧನಾ ಕೇಂದ್ರ (ಈ ಹಿಂದೆ - ರಾಷ್ಟ್ರೋತ್ಥಾನ ಶಾರೀರಿಕ ಶಿಕ್ಷಣ ಕೇಂದ್ರ) 1972ರಲ್ಲಿ ಬೆಂಗಳೂರಿನ ಜಯನಗರದಲ್ಲಿ ಪ್ರಾರಂಭವಾಯಿತು.

ರುಗ್ಣ (ರಕ್ತ) ಸೇವಾ ಭಂಡಾರ, ರಕ್ತದಾನಿಗಳ ವಿವರಗಳ ನಿರ್ವಹಣೆ ಹಾಗೂ ಅಗತ್ಯವಿರುವವರಿಗೆ ವೈದ್ಯಕೀಯ ಉಪಕರಣಗಳನ್ನು ಒದಗಿಸುವ ಮೂಲಕ ರಾಷ್ಟ್ರೋತ್ಥಾನ ಪರಿಷತ್ 1987ರಲ್ಲಿ ವೈದ್ಯಕೀಯ ಸೇವಾಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿತು. 1993ರ ವೇಳೆಗೆ ರೋಗಿಗಳಿಗೆ ಸುರಕ್ಷಿತ ರಕ್ತ ಒದಗಿಸುವುದಕ್ಕಾಗಿಯೇ ಬೆಂಗಳೂರಿನಲ್ಲಿ ರಕ್ತಕೇಂದ್ರ ಆರಂಭಿಸಲಾಯಿತು. 2010ರಲ್ಲಿ ರಕ್ತಕೇಂದ್ರದ ಎರಡನೆಯ ಘಟಕ ಹುಬ್ಬಳ್ಳಿಯಲ್ಲಿ ಕೆಲಸ ಪ್ರಾರಂಭಿಸಿತು. ರಕ್ತವನ್ನು ಸಮರ್ಪಕವಾಗಿ ಸಂಸ್ಕರಿಸಲು ಹಾಗೂ ಸಂರಕ್ಷಿಸಲು ಅತ್ಯಾಧುನಿಕ ತಾಂತ್ರಿಕ ಸೌಲಭ್ಯಗಳನ್ನು ಹೊಂದಿರುವ ಈ ಎರಡೂ ರಕ್ತಕೇಂದ್ರಗಳು ಪ್ರತಿವರ್ಷವೂ ಅತಿಹೆಚ್ಚು ರಕ್ತಸಂಗ್ರಹ ಮಾಡುವ ಹೆಗ್ಗಳಿಕೆಗೆ ಪಾತ್ರವಾಗಿವೆ.

ತಲಸ್ಸೆಮಿಯಾ ಪೀಡಿತರ ಬೆಳಕು ಸಂರಕ್ಷಾ ತಲಸ್ಸೆಮಿಯಾ ಪೀಡಿತರಿಗಾಗಿ ಸಮಗ್ರರೂಪದ ಚಿಕಿತ್ಸೆ ಹಾಗೂ ನಿರ್ವಹಣೆಯ ಕೇಂದ್ರವಾಗಿ 2013ರಿಂದ ಸಂರಕ್ಷಾ ಕಾರ್ಯನಿರ್ವಹಿಸುತ್ತಿದೆ. ಈ ನಿಟ್ಟಿನಲ್ಲಿ ಇದು ಮೊದಲ ಸರ್ಕಾರೇತರ ವ್ಯವಸ್ಥೆಯೆನಿಸಿದೆ. ಸಂರಕ್ಷಾದ ಮೂಲಕ 400ಕ್ಕೂ ಹೆಚ್ಚು ಕಡುಬಡತನದಲ್ಲಿರುವ ಕುಟುಂಬಗಳ ಮಕ್ಕಳು ತಲಸ್ಸೆಮಿಯಾ ಚಿಕಿತ್ಸೆಗಾಗಿ ನೆರವು ಪಡೆಯುತ್ತಿದ್ದಾರೆ. ರಾಷ್ಟ್ರೋತ್ಥಾನ ಪರಿಷತ್ 2022ರಲ್ಲಿ ಸಮಾಜದ ಎಲ್ಲ ಸ್ತರಗಳ ಜನರಿಗೆ ಉತ್ತಮ ಗುಣಮಟ್ಟದ ವೈದ್ಯಕೀಯ ಸೌಲಭ್ಯಗಳನ್ನು ಕೈಗೆಟುಕುವಂತೆ ಒದಗಿಸುವ ಉದ್ದೇಶದಿಂದ ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ ಸ್ಥಾಪಿಸುವ ಮೂಲಕ ತನ್ನ ಸ್ವಾಸ್ಥ್ಯಸಂಬಂಧಿತ ಪ್ರಕಲ್ಪಗಳಲ್ಲಿ ಹೊಸ ಮೈಲುಗಲ್ಲೊಂದನ್ನು ಸ್ಥಾಪಿಸಿತು. ಅದು ಪ್ರಾರಂಭಗೊಂಡ 3 ವರ್ಷಗಳ ಒಳಗೇ ಎನ್‌ಎಬಿಎಚ್ 6ನೇ ಆವೃತ್ತಿಯ ಪೂರ್ಣ ಮಾನ್ಯತೆ ಪಡೆದಿದೆ.

ರಾಷ್ಟ್ರೋತ್ಥಾನ ಯೋಗವಿಜ್ಞಾನ ಹಾಗೂ ಸಂಶೋಧನಾ ಕೇಂದ್ರ
- ಕೇಂದ್ರಗಳು 25
- ದಿನನಿತ್ಯದ ತರಗತಿಗಳು 250+
- ದಿನನಿತ್ಯದ ಅಭ್ಯಾಸಿಗಳು 4,000+
- ಯೋಗಶಿಕ್ಷಿತರು 1.5 ಲಕ್ಷ+
- ಶಿಕ್ಷಕರು 250

ರಾಷ್ಟ್ರೋತ್ಥಾನ ರಕ್ತಕೇಂದ್ರ
- ಫಲಾನುಭವಿಗಳು 5 ಲಕ್ಷ+
- ರಕ್ತದಾನಿಗಳು 11.5 ಲಕ್ಷ+
- ಸಂಗ್ರಹವಾದ ಯುನಿಟ್‌ಗಳು 5 ಲಕ್ಷ+
- ರಕ್ತದಾನ ಶಿಬಿರಗಳು 6,000+

ಜಯದೇವ ಸ್ಮಾರಕ ರಾಷ್ಟ್ರೋತ್ಥಾನ ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರ
- ಹಾಸಿಗೆಗಳು 162
- ಕ್ಲಿನಿಕ್ ಆನ್ ವ್ಹೀಲ್ಸ್ ಫಲಾನುಭವಿಗಳು (72 ಸ್ಲಂಗಳಿಂದ) 20,000+
- ಹೊರರೋಗಿಗಳು 2 ಲಕ್ಷ+
- ಒಳರೋಗಿಗಳು 12,000+
- ತಲಸ್ಸೆಮಿಯಾ ರೋಗಿಗಳು 400+

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ

ದಕ್ಷಿಣ ಕನ್ನಡ 33° 22° | ಉಡುಪಿ 31° 23°

ಹೊಸ ದಿಗಂತ ಸಂಗಮ

ರಾಷ್ಟ್ರ ಜಾಗೃತಿಯ ದೈನಿಕ

ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 28, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU



ಪುಟ 5

ಬಹುಭಾಷೆಗಳ ಸೊಗಡೇ ಕರಾವಳಿಯ ನೈಜ ಅಸ್ಮಿತೆ: ಡಾ.ಬಿಳಿಮಲೆ



ಪುಟ 6

ಉಡುಪಿಯಲ್ಲಿ ಉಪಲೋಕಾಯುಕ್ತರ 'ಸರ್ಜಿಕಲ್ ಸ್ಟ್ರೈಕ್'

ಮಹಿಳೆಯರ ಕ್ರಾಸ್‌ಕಂಟ್ರಿ ಚಾಂಪಿಯನ್‌ಶಿಪ್‌ನಲ್ಲಿ ಮಿಂಚಿದ ಮಂಗಳೂರು ವಿಶ್ವವಿದ್ಯಾನಿಲಯ



ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಅಸೋಸಿಯೇಷನ್ ಆಫ್ ಇಂಡಿಯನ್ ಯುನಿವರ್ಸಿಟಿಸ್ ಸಹಯೋಗದಲ್ಲಿ ಮೂಡುಬಿದಿರೆಯ ಆಳ್ವಾಸ್ ಕಾಲೇಜ್ ಆಶ್ರಯದಲ್ಲಿ ಶುಕ್ರವಾರ ನಡೆದ ಅಖಿಲ ಭಾರತ ಅಂತರ್ ವಿವಿ ಮಹಿಳೆಯರ ಕ್ರಾಸ್‌ಕಂಟ್ರಿ ಚಾಂಪಿಯನ್‌ಶಿಪ್‌ನಲ್ಲಿ ಮಂಗಳೂರು ವಿವಿಯನ್ನು ಪ್ರತಿನಿಧಿಸಿದ್ದ ಆಳ್ವಾಸ್‌ನ ಮಹಿಳೆಯರ ತಂಡ ಸಮಗ್ರ ಚಾಂಪಿಯನ್ಸ್ ಪಟ್ಟ ಪಡೆಯಿತು.

ಸುತ್ತಮುತ್ತ

ಮೂಲ್ಕಿಯಲ್ಲಿ ಕಾರಿಗೆ ಬಸ್ ಡಿಕ್ಕಿ: ಹೆದ್ದಾರಿ ಸಂಚಾರ ಅಸ್ತವ್ಯಸ್ತ

ಮುಲ್ಕಿ: ರಾಷ್ಟ್ರೀಯ ಹೆದ್ದಾರಿ 66ರ ಮುಲ್ಕಿ ವಿಜಯ ಸನ್ನಿಧಿ ಜಂಕ್ಷನ್ ಬಳಿ ಕಾರಿಗೆ ಬಸ್ ಡಿಕ್ಕಿಯಾಗಿ ವಾಹನ ಸಂಚಾರ ಅಸ್ತವ್ಯಸ್ತಗೊಂಡ ಘಟನೆ ಶುಕ್ರವಾರ ಮಧ್ಯಾಹ್ನ ನಡೆದಿದೆ. ಕಾರ್ನಾಡ್ ಒಳ ಪೇಟೆಯಿಂದ ಹೆದ್ದಾರಿ ಕ್ರಾಸ್ ಮಾಡಿ ಉಡುಪಿ ಕಡೆಗೆ ಹೋಗುತ್ತಿದ್ದ ಕಾರಿಗೆ ಅದೇ ದಿಕ್ಕಿನಲ್ಲಿ ಕಾರ್ನಾಡ್ ಒಳಪೇಟೆಯಿಂದ ಉಡುಪಿ ಕಡೆಗೆ ಹೋಗುತ್ತಿದ್ದ ಸರ್ವಿಸ್ ಬಸ್ ಡಿಕ್ಕಿ ಹೊಡೆದಿದೆ. ಅಪಘಾತಕ್ಕೆ ಕಾರಿನ ಟಯರ್ ಪಂಚರ್ ಆಗಿದ್ದು, ಹೆದ್ದಾರಿ ಜಂಕ್ಷನ್ ಬಳಿ ಕೆಲಕಾಲ ವಾಹನ ಸಂಚಾರ ಅಸ್ತವ್ಯಸ್ತ ಉಂಟಾಯಿತು.

ಮಡಿಕೇರಿಯಲ್ಲಿ ಇಲಾಖೆಯಿಂದ ನಾಳೆ ಪೊಲೀಸ್ ಜಾಗೃತಿ ಓಟ

ಮಡಿಕೇರಿ: ಸೈಬರ್ ಅಪರಾಧ ತಡೆಗಟ್ಟುವ ನಿಟ್ಟಿನಲ್ಲಿ ಮಾದಕ ವಸ್ತುಗಳಿಂದಾಗುವ ದುಷ್ಪರಿಣಾಮದ ಕುರಿತು ಜಾಗೃತಿ ಮೂಡಿಸಲು ಮಾ.1ರಂದು ಜಿಲ್ಲಾ ಪೊಲೀಸ್ ಇಲಾಖೆಯಿಂದ ಜಾಗೃತಿ ಓಟ ನಡೆಯಲಿದೆ. ಬೆಳಗ್ಗೆ 6.30ಕ್ಕೆ ಮಡಿಕೇರಿಯ ಸುದರ್ಶನ ವೃತ್ತದಿಂದ ಜಿಲ್ಲಾ ಪೊಲೀಸ್ ಕವಾಯತು ಮೈದಾನ ತನಕ ನಡೆಯಲಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್. ಬಿಂದುಮಣಿ ತಿಳಿಸಿದ್ದಾರೆ.

ಅರಂತೋಡು ಗ್ರಾಮದಲ್ಲಿ ಮಹಿಳೆಗೆ ಕಾಡುಕೋಣ ಏಕಾಏಕಿ ದಾಳಿ: ಗಾಯ

ಸುಳ್ಯ: ಕೃಷಿ ತೋಟದಲ್ಲಿ ಮಹಿಳೆಯೊಬ್ಬರು ಕೊಕ್ಕೊ ಕೊಯ್ಯುತ್ತಿದ್ದ ವೇಳೆ ಕಾಡು ಕೋಣ ದಾಳಿ ಮಾಡಿ ಗಾಯಗೊಂಡ ಘಟನೆ ಅರಂತೋಡು ಗ್ರಾಮದ ಕರಿಂಬಿಯಲ್ಲಿ ನಡೆದಿದೆ. ಕರಿಂಬಿ ಮನೆ ಶೇಷಮ್ಮ ಗಾಯಗೊಂಡವರು. ಘಟನೆಯಲ್ಲಿ ಅವರ ತೊಡೆ ಭಾಗಕ್ಕೆ ಗಾಯವಾಗಿದ್ದು, ಸುಳ್ಯದ ಖಾಸಗಿ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ನೀಡಲಾಗಿದೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಸಿಬ್ಬಂದಿಗಳು ಆಗಮಿಸಿ ಸಮಗ್ರ ಪರಿಶೀಲನೆ ನಡೆಸಿದ್ದಾರೆ.

ಕಾಸರಗೋಡಿಗೆ ಹೀಟ್ ವೇವ್ ಅಲರ್ಟ್

ಈಗ ಬಿಸಿ ತಲೆಬಿಸಿ!

ಹಗಲು 11ರಿಂದ 3 ಹೆಚ್ಚು ಅಪಾಯಕರ

ಕಾಸರಗೋಡು: ಜಿಲ್ಲೆಯೂ ಸೇರಿದಂತೆ ರಾಜ್ಯದಲ್ಲಿ ಬೇಸಿಗೆ ಉಷ್ಣತೆ ತೀವ್ರವಾಗಿ ಹೆಚ್ಚುತ್ತಿದ್ದು, ಬಿಸಿಲಿನ ಹೊಡೆತ, ಶಾಖದ ಹೊಡೆತ ಮತ್ತು ನಿರ್ಜಲೀಕರಣದಂತಹ ಗಂಭೀರ ಆರೋಗ್ಯ ಸಮಸ್ಯೆ ಸೃಷ್ಟಿಗೆ ಕಾರಣವಾಗಬಹುದು ಎಂದು ಕೇರಳ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ.

ಈ ಅವಧಿಯಲ್ಲಿ ಎಚ್ಚರದಿಂದಿರಿ

ಬೆಳಗ್ಗೆ ಹೊತ್ತು 11 ಗಂಟೆಯಿಂದ ಮಧ್ಯಾಹ್ನ 3ರ ವರೆಗೆ ನೇರ ಸೂರ್ಯನ ಬೆಳಕಿಗೆ ದೀರ್ಘಕಾಲ ಒಡ್ಡಿಕೊಳ್ಳುವುದನ್ನು ತಪ್ಪಿಸಬೇಕು ಎಂದು ಪ್ರಾಧಿಕಾರ ಸೂಚಿಸಿದೆ. ಬಾಯಾರಿಕೆ ಇಲ್ಲದಿದ್ದರೂ ಶುದ್ಧ ನೀರು ಕುಡಿಯಬೇಕು. ಮದ್ಯ, ಕಾಫಿ, ಚಹಾ, ಕಾರ್ಬೋನೇಟೆಡ್ ಪಾನೀಯ ಸೇವನೆ ಹಗಲಲ್ಲಿ ಸಂಪೂರ್ಣ ತಪ್ಪಿಸಬೇಕು. ಬದಲಾಗಿ ಸಾಕಷ್ಟು ಹಣ್ಣುಗಳು ಮತ್ತು ತರಕಾರಿಗಳನ್ನು ಸೇವಿಸಬೇಕು ಮತ್ತು ಒಆರ್‌ಎಸ್ ದ್ರಾವಣ, ತಿಂಡಿಗಳು ಇತ್ಯಾದಿಗಳನ್ನು ಬಳಸಬೇಕು. ಹೊರಗಡೆ ತೆರಳುವಾಗ ತಿಳಿ ಬಣ್ಣದ ಹತ್ತಿ ಬಟ್ಟೆಗಳು, ಪಾದರಕ್ಷೆಗಳು, ಕೊಡೆ ಅಥವಾ ಟೋಪಿ ಧರಿಸಲು ಮರೆಯಬಾರದು ಎಂದು ಪ್ರಾಧಿಕಾರ ಸಲಹೆ ನೀಡಿದೆ.

ಕಾರ್ಮಿಕರ ಕಾಳಜಿ ಇರಲಿ

ನಿರ್ಮಾಣ, ಕೃಷಿ ಕಾರ್ಮಿಕರು, ಬೀದಿ ವ್ಯಾಪಾರಿಗಳು ತಮ್ಮ ಕೆಲಸದ ಸಮಯ ಸರಿಹೊಂದಿಸಿಕೊಳ್ಳಬೇಕು ಎಂದು ಪ್ರಾಧಿಕಾರ ಸೂಚಿಸಿದೆ. ಇದಲ್ಲದೆ ಸಾಕಷ್ಟು ವಿಶ್ರಾಂತಿ ಖಚಿತಪಡಿಸಿಕೊಳ್ಳಬೇಕು. ದ್ವಿಚಕ್ರ ವಾಹನಗಳಲ್ಲಿ ಆನ್‌ಲೈನ್‌ನಲ್ಲಿ ಆಹಾರ ತಲುಪಿಸುವವರು ಊಟದ ಸಮಯದಲ್ಲಿ ಸುರಕ್ಷಿತವಾಗಿದ್ದಾರೆ ಎಂದು ಆಯಾ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕೆಂದು ಪ್ರಾಧಿಕಾರ ಸೂಚನೆಯಲ್ಲಿ ಹೇಳಿದೆ.



ಕಾಳಜಿ ವಹಿಸಲು ಶಿಕ್ಷಣ ಸಂಸ್ಥೆಗಳಿಗೆ ಸೂಚನೆ

ಅಧಿಕಾರಿಗಳು ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರು, ತರಗತಿ ಕೋಣೆಗಳಲ್ಲಿ ಗಾಳಿಯ ಪ್ರಸರಣ ಖಚಿತಪಡಿಸಿಕೊಳ್ಳಬೇಕು. ಪರೀಕ್ಷಾ ಸಮಯವಾದ್ದರಿಂದ ನೀರಿನ ಲಭ್ಯತೆಯನ್ನು ಖಚಿತಪಡಿಸಿಕೊಳ್ಳಬೇಕು. ಮಕ್ಕಳನ್ನು ಅತಿಯಾದ ಶಾಖಕ್ಕೆ ಒಡ್ಡುವ ಸಭೆಗಳು ಮತ್ತು ಇತರ ಕಾರ್ಯಕ್ರಮಗಳನ್ನು ತಪ್ಪಿಸಬೇಕು ಅಥವಾ ಅದಕ್ಕೆ ಅನುಗುಣವಾಗಿ ಸಮಯ ನಿಗದಿಪಡಿಸಬೇಕು. ವಿಹಾರಕ್ಕೆ ತೆರಳುವ ಶಾಲೆಗಳು ಬೆಳಗ್ಗೆ 11ರಿಂದ ಮಧ್ಯಾಹ್ನ 3ರ ವರೆಗೆ ಮಕ್ಕಳು ನೇರವಾಗಿ ಶಾಖಕ್ಕೆ ಒಡ್ಡಿಕೊಳ್ಳದಂತೆ ನೋಡಿಕೊಳ್ಳಬೇಕು. ಅಂಗನವಾಡಿ ಮಕ್ಕಳು ಬಿಸಿಲಿಗೆ ಒಡ್ಡಿಕೊಳ್ಳುವುದನ್ನು ತಡೆಯುವ ವ್ಯವಸ್ಥೆಯನ್ನು ಒದಗಿಸಬೇಕು. ಹಾಸಿಗೆ ಹಿಡಿದ ರೋಗಿಗಳು, ವೃದ್ಧರು, ಗರ್ಭಿಣಿಯರು ಮತ್ತು ದಿವ್ಯಾಂಗರು ಹಗಲಲ್ಲಿ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದನ್ನು ತಪ್ಪಿಸಲು ವಿಶೇಷ ಕಾಳಜಿ ವಹಿಸಬೇಕು ಎಂದು ವಿಪತ್ತು ನಿರ್ವಹಣಾ ಪ್ರಾಧಿಕಾರ ಸ್ಪಷ್ಟ ಸೂಚನೆ ನೀಡಿದೆ.

- ಉಷ್ಣತೆಯಿಂದಾಗಿ ಕಾಡ್ಗಿಚ್ಚು ಹರಡುವ ಸಾಧ್ಯತೆ ಹೆಚ್ಚಾಗಿದ್ದು ಅರಣ್ಯ ಪ್ರದೇಶಗಳ ಬಳಿ ವಾಸಿಸುವವರು ಮತ್ತು ಪ್ರವಾಸಿಗರು ಅರಣ್ಯ ಇಲಾಖೆಯ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು
- ಮಧ್ಯಾಹ್ನದ ಬಿಸಿಲಿನಲ್ಲಿ ಸಾರ್ವಜನಿಕ ಕಾರ್ಯಕ್ರಮ, ಕೂಟಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ತಪ್ಪಿಸಬೇಕು
- ಪ್ರಯಾಣಿಕರು ತಮ್ಮ ಜೊತೆ ಯಾವಾಗಲೂ ಕುಡಿಯುವ ನೀರನ್ನು ಕೊಂಡೊಯ್ಯಬೇಕು
- ಸಾಕುಪ್ರಾಣಿಗಳನ್ನು ಮಧ್ಯಾಹ್ನದ ಬಿಸಿಲಿನಲ್ಲಿ ಹೊರಭಾಗದಲ್ಲಿ ಕಟ್ಟಿಹಾಕುವುದು ತಪ್ಪಿಸಿ
- ಅನಾರೋಗ್ಯ ಅನಿಸಿದರೆ ತಕ್ಷಣ ವಿಶ್ರಾಂತಿ ಪಡೆಯಬೇಕು ಮತ್ತು ವೈದ್ಯಕೀಯ ಸಹಾಯ ಪಡೆಯಲು ಸೂಚಿಸಲಾಗಿದೆ
- ಮಾರುಕಟ್ಟೆ, ಕಟ್ಟಡ,ಮತ್ತು ಕಸ ಸಂಗ್ರಹಣಾ ಕೇಂದ್ರಗಳಲ್ಲಿ ಬೆಂಕಿ ಅಪಾಯ ತಡೆಯಲು ಮುನ್ನೆಚ್ಚರಿಕೆ ಪಾಲಿಸಬೇಕು

ಪೊಲೀಸರ ದಿಢೀರ್ ದಾಳಿ

ಗೋವಿನ ಹತ್ಯೆ: ಮನೆಯೇ ಜಪ್ತಿ

ಸೊತ್ತು ಸಹಿತ ಮೂವರ ಸೆರೆ



ವಧೆ ನಡೆಸಲು ಬಳಸಿದ ಮನೆ ಆವರಣವೇ ಸೀಝ್

ಆರೋಪಿ ಅಬ್ದುಲ್ ರಹಿಮಾನ್ ಎಂಬವರು ಜಾನುವಾರು ವಧೆ ಮಾಡಲು ಬಳಸಿದ್ದ ಮನೆಯ ಆವರಣವನ್ನು ಜಪ್ತಿ ಮಾಡಲಾಗಿದೆ. ಆರೋಪಿ ಅಬ್ದುಲ್ ರಹಿಮಾನ್, ಆತನ ಪತ್ನಿ ರಹಿಮತ್ ಹಾಗೂ ಇನ್ನೋರ್ವ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಉಪ್ಪಿನಂಗಡಿ: ಇಲ್ಲಿಗೆ ಸಮೀಪದ ಬಾರ್‍ಯ ಗ್ರಾಮದ ಹೊಸವಕ್ಲು ಎಂಬಲ್ಲಿ ಮನೆಯೊಂದರ ಆವರಣದಲ್ಲಿ ಅಕ್ರಮವಾಗಿ ಗೋ ಹತ್ಯೆ ಮಾಡಿ ಮಾಂಸ ಮಾಡುತ್ತಿರುವುದನ್ನು ಪತ್ತೆ ಮಾಡಿದ ಉಪ್ಪಿನಂಗಡಿ ಪೊಲೀಸರು ಮನೆ ಜಪ್ತಿ ಮಾಡಿ ಆರೋಪಿ ದಂಪತಿಯ ಸಹಿತ ಮೂವರನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ.

ಮನೆ ಆವರಣದಲ್ಲಿ ಗೋ ಹತ್ಯೆ

ಗುರುವಾರ ರಾತ್ರಿ ಬಾರ್‍ಯ ಗ್ರಾಮದ ಹೊಸವಕ್ಲು ನಿವಾಸಿ ಅಬ್ದುಲ್ ರಹಿಮಾನ್ ಮನೆ ಆವರಣದಲ್ಲಿ ಗೋ ಹತ್ಯೆ ಮಾಡಿ ಮಾಂಸವನ್ನು ಪ್ಯಾಕೇಟ್ ಮಾಡಲಾಗಿ ಆಟೋ ರಿಕ್ಷಾವೊಂದಕ್ಕೆ ತುಂಬಿಸುತ್ತಿದ್ದಾಗ ದಿಢೀರ್ ದಾಳಿ ನಡೆಸಿದ ಉಪ್ಪಿನಂಗಡಿ ಪೊಲೀಸ್ ಇನ್ಸ್‌ಪೆಕ್ಟರ್ ಸುತೇಶ್ ಮತ್ತು ಸಿಬ್ಬಂದಿಗಳು ಆಟೋರಿಕ್ಷಾ, ಸುಮಾರು 56 ಕೆ.ಜಿ. ಮಾಂಸ ಹಾಗೂ ತೂಕದ ಯಂತ್ರ, ಮೊಬೈಲ್ ಇತರೇ ಸೊತ್ತುಗಳನ್ನು ವಶಕ್ಕೆ ಪಡೆದುಕೊಂಡು ಪ್ರಕರಣ ದಾಖಲಿಸಿದ್ದಾರೆ.

ದ್ವಿತೀಯ ಪಿಯು ಪರೀಕ್ಷೆ: 17,181 ವಿದ್ಯಾರ್ಥಿಗಳು

ಉಡುಪಿ: ಜಿಲ್ಲೆಯಾದ್ಯಂತ ಪ್ರಸಕ್ತ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಗಳು ಇಂದಿನಿಂದ (ಫೆ.28) ಆರಂಭಗೊಳ್ಳುತ್ತಿವೆ. ಮಾ.17 ರವರೆಗೆ ನಡೆಯಲಿರುವ ಈ ಪರೀಕ್ಷಾ ಸರಣಿಗೆ ಜಿಲ್ಲಾಡಳಿತ ಎಲ್ಲಾ ರೀತಿ ಸಿದ್ಧವಾಗಿದೆ

ಒಟ್ಟು 29 ಕೇಂದ್ರ,

ಉಡುಪಿ ಜಿಲ್ಲೆಯ ಒಟ್ಟು 29 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದ್ದು, ಕಲಾ, ವಿಜ್ಞಾನ ಹಾಗೂ ವಾಣಿಜ್ಯ ವಿಭಾಗಗಳಿಂದ ಒಟ್ಟು 17,181 ವಿದ್ಯಾರ್ಥಿಗಳು ಪರೀಕ್ಷೆ ಎದುರಿಸುತ್ತಿದ್ದಾರೆ. ಇದರಲ್ಲಿ 16,657 ಹೊಸ ವಿದ್ಯಾರ್ಥಿಗಳು, 383 ಖಾಸಗಿ ಅಭ್ಯರ್ಥಿಗಳು ಹಾಗೂ 135 ಪುನರಾವರ್ತಿತ ಅಭ್ಯರ್ಥಿಗಳು ನೋಂದಾಯಿಸಿಕೊಂಡಿದ್ದಾರೆ. ಪ್ರತಿದಿನ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ ಪರೀಕ್ಷೆಗಳು ನಡೆಯಲಿವೆ.

ಕಟ್ಟುನಿಟ್ಟಿನ ಕಣ್ಗಾವಲು: ಪರೀಕ್ಷಾ ಅಕ್ರಮಗಳನ್ನು ತಡೆಯಲು ಉಡುಪಿ ಜಿಲ್ಲಾಡಳಿತವು ಕಟ್ಟುನಿಟ್ಟಿನ ಕ್ರಮ ಕೈಗೊಂಡಿದೆ.

ಟ್ರಾಫಿಕ್ ಸಮಸ್ಯೆ ಪರಿಹಾರಕ್ಕೆ ಸಿಗ್ನಲ್ ಲೈಟ್



ನಿತ್ಯ ಟ್ರಾಫಿಕ್ ಜಾಮ್‌ನಿಂದ ಸಮಸ್ಯೆಗೊಳಗಾಗುತ್ತಿದ್ದ ನಂತೂರು -ಕದ್ರಿ ನಡುವಿನ ಪದುವ ಜಂಕ್ಷನ್‌ನಲ್ಲಿ ಸಿಗ್ನಲ್ ಅಳವಡಿಸಲಾಗಿದ್ದು ಶೀಘ್ರವೇ ಕಾರ್ಯಾರಂಭಗೊಳ್ಳಲಿದೆ.

ಸುತ್ತಮುತ್ತ

ಮಾ.2: ಕಾವೇಶ್ವರ ದೇಗುಲದ ಜಾತ್ರೆ

ಬಂಟ್ವಾಳ: ತಾಲೂಕಿನ ಬೆಳ್ಳೂರು ಶ್ರೀ ಕಾವೇಶ್ವರ ದೇವಸ್ಥಾನದ ವರ್ಷಾವಧಿ ಜಾತ್ರಾಮಹೋತ್ಸವವು ತಂತ್ರಿಗಳಾದ ನಡುವಂತಾಡಿ ಬ್ರಹ್ಮಶ್ರೀ ವೇದಮೂರ್ತಿ ಉದಯಪಾಂಗಣ್ಣಾಯ ಅವರ ನೇತೃತ್ವದಲ್ಲಿ ಮಾ.2 ರಿಂದ 6 ರವರೆಗೆ ವೈದಿಕ ವಿಧಿವಿಧಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದೊಂದಿಗೆ ನಡೆಯಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮಾ.5 ರಂದು ಸಂಜೆ ಕಡೇಚೆಂಡು,ರಥದಲ್ಲಿ ಹೂವಿನ ಪೂಜೆ ಬಳಿಕ ರಥೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಶನೈಶ್ಚರ ಪೂಜೆ

ಬಂಟ್ವಾಳ: ಬಿ.ಸಿ.ರೋಡಿನ ಅಲೆತ್ತೂರು ಮಂಗಳ ಫ್ರೆಂಡ್ಸ್ ಸರ್ಕಲ್ 27 ನೇ ವರ್ಷದ ಸಾರ್ವಜನಿಕ ಶನೈಶ್ಚರ ಪೂಜೆ ಹಾಗೂ 44ನೇ ವರ್ಷದ ವಾರ್ಷಿಕೋತ್ಸವ ಫೆ.28ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಅಂದು ಸಂಜೆ ಗಂಟೆ 5.30ರಿಂದ ಶನಿಪೂಜೆ ಪ್ರಾರಂಭ, ರಾತ್ರಿ ಗಂಟೆ 7.30ಕ್ಕೆ ಮಂಗಳಾರತಿ, ಪ್ರಸಾದ ವಿತರಣೆ, ಹಾಗೂ ಅನ್ನಸಂತರ್ಪಣೆ, 8ಕ್ಕೆ ಸಭೆ, 8.30ರಿಂದ ಸ್ಥಳೀಯ ಪ್ರತಿಭೆಗಳಿಂದ ನೃತ್ಯ ಕಾರ್ಯಕ್ರಮ, 10ರಿಂದ ತುಳು ನಾಟಕ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು 'ಇವಾಲ್ವ್' ವತಿಯಿಂದ ಬಿಝ್ ಇನ್ ಸ್ಟೈಟ್

ಮಂಗಳೂರು: ಮಹಿಳಾ ಉದ್ಯಮಿಗಳ ಸಂಘ 'ಇವಾಲ್ವ್' ವತಿಯಿಂದ 5ನೇ ವಾರ್ಷಿಕೋತ್ಸವದ ಪ್ರಯುಕ್ತ 3ನೇ ಆವೃತ್ತಿಯ ಬ್ಯುಸಿನೆಸ್ ಕಾನ್‌ಕ್ಲೇವ್ 'ಬಿಝ್ ಇನ್ ಸೈಟ್' ಫೆ.28ರಂದು ಬೆಳಗ್ಗೆ 10ಕ್ಕೆ ಕೊಡಿಯಾಲ್‌ಬೈಲ್‌ನ ಓಷಿಯನ್ ಪರ್ಲ್ ಹೊಟೇಲ್‌ನಲ್ಲಿ ನಡೆಯಲಿದೆ.

ಸಮ್ಮೇಳನದಲ್ಲಿ ಮುಖ್ಯವಾಗಿ 'ಮಂಗಳೂರಿನಲ್ಲಿ ಭವಿಷ್ಯದ ಉದ್ಯಮ'ದ ಕುರಿತು ಗುಂಪು ಚರ್ಚೆ ನಡೆಯಲಿದೆ. ಮಹಿಳಾ ಉದ್ಯಮಿಗಳಾದ ಡಿಯೋನ್ ಮೊಂತೆರೊ, ರೂಪಲಕ್ಷ್ಮೀ ಪೆದಮಲೆ, ಶರೀರ್ ಶೆಟ್ಟಿ ಬಿಂಬಾ ಮನೋಜ್, ಶ್ರೀಯಾ ಶೆಟ್ಟಿ ಮೊದಲಾವರು ಚರ್ಚೆಯಲ್ಲಿ ಪಾಲ್ಗೊಳ್ಳಲಿದ್ದು ಸಿಎ ಎಂ.ಎನ್. ಪೈ ಚರ್ಚೆ ನಡೆಸಿಕೊಡಲಿದ್ದಾರೆ. ಇದು ಉದ್ಯಮದಲ್ಲಿ ಸಂಶೋಧನೆ, ಉದ್ಯಮ ಬೆಳವಣಿಗೆಯ ತಂತ್ರ ಹಾಗೂ ವಿಶೇಷವಾಗಿ ಮಂಗಳೂರು ಭಾಗದಲ್ಲಿ ಮಹಿಳಾ ಉದ್ಯಮಿಗಳ ಪಾತ್ರ ಮೊದಲಾದವುಗಳ ಮೇಲೆ ಬೆಳಕು ಚೆಲ್ಲಲಿದೆ ಎಂದು ಸಂಘದ ಅಧ್ಯಕ್ಷೆ ಅಮೃತಾ ನಾಯಕ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಸಂಘದ ಉಪಾಧ್ಯಕ್ಷೆ ಗ್ಲ್ಯಾನ್ಸಿ ಫೆರ್ನಾಂಡಿಸ್, ಕಾರ್ಯದರ್ಶಿ ನಂದಿತಾ ರಾವ್, ಖಜಾಂಚಿ ಪೂರ್ಣಿಮಾ ಶೆಟ್ಟಿ ಜತೆ ಕಾರ್ಯದರ್ಶಿ ಯಶೋಧಾ ಪ್ರಭು ಉಪಸ್ಥಿತರಿದ್ದರು.

ಇಂದು ಮುಖ್ಯ ಗುರು ಮಾಧವ ಮೂಕಮಲೆ ಸೇವಾ ನಿವೃತ್ತಿ

ಸುಬ್ರಹ್ಮಣ್ಯ: ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ ಸುಬ್ರಹ್ಮಣ್ಯದ ಮುಖ್ಯ ಶಿಕ್ಷಕ ಮಾಧವ ಮೂಕಮಲೆ ಸುಮಾರು 36 ವರ್ಷ 21 ದಿನಗಳ ಕಾಲ ಕರ್ತವ್ಯ ನಿರ್ವಹಿಸಿ ಇಂದು ನಿವೃತ್ತರಾಗಲಿದ್ದಾರೆ.

1990ರಲ್ಲಿ ಸರಕಾರಿ ಸೇವೆ ಸೇರಿದ ಅವರು ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಮಾರ್ಗ, ಫೈಲಾರ್, ಗುತ್ತಿಗಾರು, ಹರಿಹರ ಪಲ್ಲತ್ತಡ್ಕ, ಗುತ್ತಿಗಾರು, ಬಳ್ಪ, ಕೂತ್ಕುಂಜ ಶಾಲೆಗಳಲ್ಲಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸಿದರು. ಈ ನಡುವೆ 2001ರಿಂದ



2006ರ ತನಕ ಸಮೂಹ ಸಂಪನ್ಮೂಲ ವ್ಯಕ್ತಿಯಾಗಿ ಕರ್ತವ್ಯ ನಿರ್ವಹಿಸಿದರು. 2014ರಲ್ಲಿ ಪದೋನ್ನತಿಗೊಂಡು ಮುಖ್ಯ ಶಿಕ್ಷಕರಾಗಿ ಕಂದ್ರಪ್ಪಾಡಿ, ಕೊಯಿಕುಳಿ ಪ್ರಾಥಮಿಕ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸಿ ಬಳಿಕ 2023ರಲ್ಲಿ ವರ್ಗಾವಣೆಗೊಂಡು ಸುಬ್ರಹ್ಮಣ್ಯದಲ್ಲಿ ಮುಖ್ಯ ಗುರುಗಳಾಗಿ ಕರ್ತವ್ಯ ಆರಂಭಿಸಿದರು. ಸತತ 3 ವರ್ಷಗಳ ಕಾಲ ಸುಬ್ರಹ್ಮಣ್ಯದಲ್ಲಿ ಕರ್ತವ್ಯ ನಿರ್ವಹಿಸಿ ಇಂದು ನಿವೃತ್ತರಾಗಲಿದ್ದಾರೆ.


ಪ್ರತಿಭಾ ಕಾರಂಜಿಯ ಸಂಪನ್ಮೂಲ ವ್ಯಕ್ತಿಯಾಗಿ, ತೀರ್ಪುಗಾರರಾಗಿ, ಅಂಕ ಕ್ರೋಢೀಕರಣ ವಿಭಾಗದ ಸಂಚಾಲಕರಾಗಿ ಸೇವೆ ಸಲ್ಲಿಸಿದ್ದರು. ಖೋಖೋ ಪಂದ್ಯಾಟದಲ್ಲಿ ರಾಜ್ಯ ಮಟ್ಟದ ಆಟಗಾರರಾದ ಅವರು ಜನ ಮೆಚ್ಚಿದ ಶಿಕ್ಷಕ ಪ್ರಶಸ್ತಿ ಪಡೆದಿದ್ದಾರೆ. 2011ರ ಜನಗಣತಿ ಕಾರ್ಯದ ಯಶಸ್ವಿ ನಿರ್ವಹಣೆಗಾಗಿ ಕೇಂದ್ರ ಸರಕಾರದಿಂದ ಕೊಡಮಾಡುವ ಜಿಲ್ಲಾ ಮಟ್ಟದ ಅತ್ಯುತ್ತಮ ಗಣತಿದಾರ ಪ್ರಶಸ್ತಿ, ಮೇಲಧಿಕಾರಿಗಳ ಪ್ರಶಂಸನಾ ಪ್ರಶಸ್ತಿ ಪಡೆದಿದ್ದಾರೆ.

ಕಲ್ಲುಡೇಲು ಶ್ರೀ ಸದಾಶಿವ ದೇವಸ್ಥಾನದಲ್ಲಿ ಸಂಭ್ರಮದಿಂದ ನೆರವೇರಿತು ಅಷ್ಟಬಂಧ ಬ್ರಹ್ಮಕಲಶೋತ್ಸವ

ದೇವರ ಉತ್ಸವಕ್ಕೆ ಸಾಕ್ಷಿಯಾದರು ಸಾವಿರಾರು ಸಂಖ್ಯೆ ಭಕ್ತರು

ಮಂಗಳೂರು: ನೀರುಮಾರ್ಗ ಸಮೀಪದ ಬೊಂಡಂತಿಲ ಕಲ್ಲುಡೇಲು ಶ್ರೀ ಸದಾಶಿವ ದೇವಸ್ಥಾನದಲ್ಲಿ ಶಿಬರೂರು ವೇದವ್ಯಾಸ ತಂತ್ರಿ ಅವರ ನೇತೃತ್ವದಲ್ಲಿ ಅಷ್ಟಬಂಧ ಬ್ರಹ್ಮಕಲಶೋತ್ಸವ ಗುರುವಾರ ಸಂಭ್ರಮದಿಂದ ನೆರವೇರಿತು.

ಮಧ್ಯಾಹ್ನ ಪಲ್ಲ ಪೂಜೆಯ ಬಳಿಕ ನಡೆದ ಅನ್ನಸಂತರ್ಪಣೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಬೆಳಗ್ಗೆ ಭಜನ ಸತ್ಸಂಗ, ಮಧ್ಯಾಹ್ನ ಭಕ್ತಿ ಗಾನ ಸಿಂಚನ, ಮಲ್ಲೂರಿನ ಶಿವಾಮೃತ ನಾಟ್ಯಾಲಯದಿಂದ ಭರತನಾಟ್ಯ ಹಾಗೂ ಜಾನಪದ ನೃತ್ಯ, ಸಂಜೆ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದಿಂದ ಭಕ್ತಿ ಗಾನಸುಧೆ ಪ್ರಸ್ತುತಗೊಂಡಿತು. ಬಳಿಕ ಸಭಾ ಕಾರ್ಯಕ್ರಮ ನಡೆಯಿತು. ರಾತ್ರಿ ಗಂಜಿಮಠದ ನಟನಂ ನೃತ್ಯ ವಿದ್ಯಾಲಯದಿಂದ ನವಶಕ್ತಿ ವೈಭವ ನೃತ್ಯ, ಬಳಿಕ ಪ್ರಸನ್ನ ಶೆಟ್ಟಿ ಬೈಲೂರು ನಿರ್ದೇಶನದ ಚೈತನ್ಯ ಕಲಾವಿದರು ಬೈಲೂರು ತಂಡದ ರಾಘು ಮಾಸ್ಟ್ರು ನಾಟಕ ಪ್ರದರ್ಶನಗೊಂಡಿತು.




ಈ ಸಂದರ್ಭದಲ್ಲಿ ಆಡಳಿತ ಮೊಕ್ತೇಸರ ನಾಗರಾಜ ರೈ ತಿಮಿರಿಗುತ್ತು, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಕುಸುಮೋಧರ ಡಿ. ಶೆಟ್ಟಿ ಚೆಲ್ಲಡ್ಕ, ಕಾರ್ಯಾಧ್ಯಕ್ಷ ಓಂಪ್ರಕಾಶ್ ಶೆಟ್ಟಿ, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರವಿರಾಜ್ ಶೆಟ್ಟಿ ನಿಟ್ಟೆಗುತ್ತು, ಪ್ರಧಾನ ಕಾರ್ಯದರ್ಶಿ ರಾಜ್ ಕುಮಾರ್ ಶೆಟ್ಟಿ ತಿರುವೈಲುಗುತ್ತು, ಕಾರ್ಯಾಧ್ಯಕ್ಷ ಗಿರಿಧರ್ ಶೆಟ್ಟಿ ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ ಕೆಲರಾಯಿ, ಪ್ರಧಾನ ಅರ್ಚಕ ಸದಾಶಿವ ಉಪಾಧ್ಯಾಯ, ಪ್ರಮುಖರಾದ ಭಾಸ್ಕರ್ ಕೆ., ತಿರುವೈಲುಗುತ್ತು ನವೀನ್ ಚಂದ್ರ ಆಳ್ವ, ತಿರುವೈಲುಗುತ್ತು ಪ್ರವೀಣ್‌ಚಂದ್ರ ಆಳ್ವ, ಪದ್ಮನಾಭ ಕೋಟ್ಯಾನ್, ಪ್ರಸಾದ್ ಮಲ್ಲಿ, ಶಿವಪ್ರಸಾದ್ ಚೌಟ, ನವೀನ್ ಚೌಟ, ಉಮೇಶ್ ಕಾಪೆಟ್ಟು, ಕಿರಣ್ ಪಕ್ಕಳ, ಗೋಕುಲ್‌ದಾಸ್ ಶೆಟ್ಟಿ ಪಡು, ಉಮೇಶ್ ರೈ ಮೇಗಿನಮನೆ, ಯತಿರಾಜ್ ಶೆಟ್ಟಿ, ವ್ಯವಸ್ಥಾಪನ ಸಮಿತಿಯ ಶರತ್ ಹೊಳ್ಳ, ಡಾ. ಅಶ್ವಿನ್ ಶೆಟ್ಟಿ ಬೊಡಂತಿಲಗುತ್ತು, ಸೌಮ್ಯಾ ದಯಾನಂದ, ಚೆನ್ನಪ್ಪ ಅಮೀನ್, ದೀಪಕ್ ಶೆಟ್ಟಿ ಲಿಂಗಮಾರುಗುತ್ತು, ಜಯಂತಿ ಮಹಾಬಲ ಶೆಟ್ಟಿ, ವಿಶ್ವನಾಥ ಮುಖಾರಿ, ಲಕ್ಷ್ಮಣ್, ತುಕಾರಾಮ್, ದಿನೇಶ್ ಕಲ್ಲುಡೇಲು, ಶೋಭಾ ಅಮರನಾಥ ಶೆಟ್ಟಿ ಲಿಂಗಮಾರುಗುತ್ತು, ಸನತ್ ಕುಮಾರ್ ರೈ ಬೊಂಡಂತಿಲ ಹಾಗೂ ಭಜನ ಸಮಿತಿ, ಮಹಿಳಾ ಸಮಿತಿ, ಗ್ರಾಮ ಸಮಿತಿಗಳ ಸದಸ್ಯರು ಉಪಸ್ಥಿತರಿದ್ದರು.

300 ಪರಿಕಲಶ ಸಹಿತ ಬ್ರಹ್ಮಕಲಶಾಭಿಷೇಕ

ಬೆಳಗ್ಗಿನಿಂದಲೇ ವಿವಿಧ ಧಾರ್ಮಿಕ, ವೈದಿಕ ವಿಧಿ ವಿಧಾನಗಳು ನಡೆಯಿತು. ಬೆಳಗ್ಗೆ 9ಗಂಟೆಗೆ ಬ್ರಹ್ಮಕಲಶೋತ್ಸವದ ಪ್ರಕ್ರಿಯೆಗಳು ಆರಂಭವಾಗಿ 11.26ರ ಸುಮುಹೂರ್ತದಲ್ಲಿ 300 ಪರಿಕಲಶ ಸಹಿತ ಬ್ರಹ್ಮಕಲಶಾಭಿಷೇಕ ನಡೆಯಿತು. ಈ ಅಪೂರ್ವ ಕ್ಷಣವನ್ನು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಕಣ್ತುಂಬಿಕೊಂಡರು. ಇದಾದ ಬಳಿಕ ರುದ್ರಯಾಗ, ಪಾರ್ವತಿ ಕಲಶಾಭಿಷೇಕ, ರಾತ್ರಿ ರಂಗಪೂಜೆ ನೆರವೇರಿತು.

ಮಾ.1: ಪುತ್ತೂರಿನಲ್ಲಿ ಅಂತರ್ ಜಿಲ್ಲಾ ಗಾಣಿಗರ ಸಂಗಮ

ಪುತ್ತೂರು: ಕಳೆದ 3 ತಿಂಗಳ ಹಿಂದೆಯಷ್ಟೇ ಅಸ್ತಿತ್ವಕ್ಕೆ ಬಂದ ಪುತ್ತೂರು ಗಾಣಿಗರ ಯಾನೆ ಸಪಲಿಗರ ಸಂಘದ ಆಶ್ರಯದಲ್ಲಿ ಮಾ.1ರಂದು ಪುತ್ತೂರಿನ ಸಾಲ್ಮರದ ಕೋಟೇಚಾ ಸಭಾಂಗಣದಲ್ಲಿ ಅಂತರ್ ಜಿಲ್ಲಾ ಗಾಣಿಗರ ಸಂಗಮ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಪುತ್ತೂರು ಗಾಣಿಗರ ಯಾನೆ ಸಪಲಿಗರ ಸಂಘದ ಅಧ್ಯಕ್ಷ ಲಕ್ಷ್ಮೀಪ್ರಸಾದ್ ಬೆಟ್ಟ ತಿಳಿಸಿದ್ದಾರೆ.

ಅವರು ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗಾಣಿಗರ ಸಮುದಾಯದಲ್ಲಿ ಸಂಘಟನೆಯ ಕೊರತೆ ಇದೆ. ಈ ತನಕ ಪುತ್ತೂರಿನಲ್ಲಿ ಸಕ್ರೀಯವಾದ ಸಮುದಾಯದ ಸಂಘಟನೆ ಇರಲಿಲ್ಲ, ಹಾಗಾಗಿ ಗಾಣಿಗ ಸಂಗಮ ಕಾರ್ಯಕ್ರಮದ ಮೂಲಕ ಸಮಾಜವನ್ನು ಒಟ್ಟು ಸೇರಿಸುವ ಚಿಂತನೆ ನಡೆಸಲಾಗಿದೆ. ಈ ಸಮುದಾಯದ ಕಟ್ಟಕಡೆಯ ವ್ಯಕ್ತಿಗೆ ನೆರವು ನೀಡುವ, ಸರ್ಕಾರಿ ಸೌಲಭ್ಯಗಳನ್ನು ಕಲ್ಪಿಸುವ ಹಾಗೂ ವಿದ್ಯಾಭ್ಯಾಸದ ಅಗತ್ಯತೆ ಬಗ್ಗೆ ಅರಿವು ಮೂಡಿಸುವ ಕೆಲಸ ಸಂಘಟನೆಯ ಮೂಲಕ ನಡೆಸಲಾಗುವುದು ಎಂದು ಹೇಳಿದರು.

ಮೋದಿ ಸಹೋದರ ಭಾಗಿ

ಬೆಳಗ್ಗೆ 10 ಗಂಟೆಗೆ ನಡೆಯುವ ಸಭೆಯಲ್ಲಿ ಪ್ರಧಾನಿ ಮೋದಿ ಅವರ ಸಹೋದರ ಪ್ರಹ್ಲಾದ್ ದಾಮೋದರದಾಸ್ ಮೋದಿ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ಗಾಣಿಗ ಯಾನೆ ಸಪಲಿಗರ ಸಂಘದ ಅಧ್ಯಕ್ಷ ಲಕ್ಷ್ಮೀಪ್ರಸಾದ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಂಬೈಯ ಸಾಫಲ್ಯ ಸೇವಾ ಸಂಘದ ಅಧ್ಯಕ್ಷ ಶ್ರೀನಿವಾಸ ಪಿ. ಸಫಲ್ಯ ಕಾರ್ಯಕ್ರಮ ಉದ್ಘಾಟಿಸಿ ಪ್ರಧಾನ ಭಾಷಣ ಮಾಡಲಿದ್ದಾರೆ. ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್. ಸುದರ್ಶನ್, ಸಂಸದ ಬ್ರಿಜೇಶ್ ಚೌಟ, ಶಾಸಕರಾದ ಅಶೋಕ್ ರೈ, ಕಿಶೋರ್ ಕುಮಾರ್ ಪುತ್ತೂರು, ಯಶ್ಪಾಲ್ ಸುವರ್ಣ, ಅಖಿಲ ಕರ್ನಾಟಕ ಗಾಣಿಗ ಸಂಘದ ಅಧ್ಯಕ್ಷ ಎಂ.ಆರ್. ರಾಜಶೇಖರ್ ಗಾಣಿಗ, ರಾಜ್ಯ ಗಾಣಿಗರ ಅಭಿವೃದ್ಧಿ ಕಾರ್ಪೋರೇಶನ್ ಅಧ್ಯಕ್ಷ ವಿಶ್ವಾಸ್ ಕುಮಾರ್ ದಾಸ್, ಅಖಿಲ ಕರ್ನಾಟಕ ಜ್ಯೋತಿನಗರ್ ವೈಶ್ಯ ಗಾಣಿಗ ಸಂಘದ ಅಧ್ಯಕ್ಷ ಓ.ಜಿ. ವಿಜಯ ಕುಮಾರ್, ಮುಂಬಯಿ ಉದ್ಯಮಿ ವಸಂತ ಜಿ. ಸಪಲ್ಯ, ಪುತ್ತೂರು ಮಹಾಲಿಂಗೇಶ್ವರ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅವರು ವಿವರಿಸಿದರು.

ಗಾಣಿಗರ ಪ್ರಥಮ ಸಂಗಮ

ಜಿಲ್ಲೆಯಲ್ಲಿ ವಿವಿಧ ಕಡೆಗಳಲ್ಲಿ ಗಾಣಿಗರ ಸಂಘಗಳು ಕಾರ್ಯ ನಿರ್ವಹಿಸುತ್ತಿದ್ದರೂ ಜಿಲ್ಲಾ ಮಟ್ಟದಲ್ಲಿ ಗಾಣಿಗರ ಸಮಾವೇಶ ಇದುವರೆಗೆ ನಡೆದಿಲ್ಲ. ಇದೀಗ ಪುತ್ತೂರಿನಲ್ಲಿ ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಜಿಲ್ಲೆಗಳ ಗಾಣಿಗರನ್ನು ಒಟ್ಟುಗೂಡಿಸುವ ಪ್ರಥಮ ಪ್ರಯತ್ನ ನಡೆಯುತ್ತಿದೆ. ಕಾರ್ಯಕ್ರಮದಲ್ಲಿ ಗಾಣಿಗ ಸಮಾಜದ ಸಾಧಕರನ್ನು ಹಾಗೂ ಪಾರಂಪರಿಕವಾಗಿ ಕೊಂಬು ಚೆಂಡೆ ವಾದನ ನಡೆಸುವವರನ್ನು ಸನ್ಮಾನಿಸಲಾಗುವುದು. ಪುತ್ತೂರಿನಲ್ಲಿ ಸುಮಾರು 2 ಸಾವಿರಕ್ಕೂ ಮಿಕ್ಕಿದ ಜನಸಂಖ್ಯೆಯನ್ನು ಹೊಂದಿರುವ ಗಾಣಿಗ ಸಮಾಜದ ಯುವಕ-ಯುವತಿಯರಿಗೆ ವಧು ವರ ಅನ್ವೇಷಣಾ ನೋಂದಣಿಯನ್ನೂ ಈ ಕಾರ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಕಾರ್ಯಕ್ರಮದ ವಿಶೇಷ ಆಕರ್ಷಣೆಯಾಗಿ ಬೆಳಗ್ಗೆ 9 ಗಂಟೆಯಿಂದ 10 ಗಂಟೆ ತನಕ ಕಾರ್ಯಕ್ರಮದ ಸಭಾಂಗಣಕ್ಕೆ ಬಂದು ಉಪಸ್ಥಿತರಿರುವ 20 ವರ್ಷ ಮೇಲ್ಪಟ್ಟ ಮಹಿಳೆಯರಿಗೆ ಸೀರೆ ವಿತರಣೆ ನಡೆಸಲಾಗುವುದು ಎಂದು ಸಂಘದ ಕಿರಣ್ ಕುಮಾರ್ ಸಪಲ್ಯ ಮುಂಬೈ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗಾಣಿಗ ಯಾನೆ ಸಪಲಿಗರ ಸಂಘದ ಸಂದೀಪ್ ನೆಲ್ಲಿಕಟ್ಟೆ, ಪ್ರದೀಪ್ ಬೊಳುವಾರು, ಹೇಮಚಂದ್ರ ಬೊಳುವಾರು ಹಾಜರಿದ್ದರು.

ಡ್ಯಾನ್ಸ್ ಗಾಣಿಗ ಡ್ಯಾನ್ಸ್

ಕಾರ್ಯಕ್ರಮದಲ್ಲಿ ಗಾಣಿಗ ಸಮಾಜದವರಿಗಾಗಿ 'ಡ್ಯಾನ್ಸ್ ಗಾಣಿಗ ಡ್ಯಾನ್ಸ್' ಸ್ಪರ್ಧಾ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ. ಸೆಮಿ ಕ್ಲಾಸಿಕಲ್, ಜಾನಪದ ನೃತ್ಯ ಹಾಗೂ ಸಂಸ್ಕಾರಯುತ ಚಲನಚಿತ್ರ ಗೀತೆಗಳ ನೃತ್ಯಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ವಿಜೇತರಿಗೆ ಮೊದಲ ಬಹುಮಾನ ರೂ.10 ಸಾವಿರ, ದ್ವಿತೀಯ ರೂ.5 ಸಾವಿರ ಹಾಗೂ ತೃತೀಯ ಬಹುಮಾನ ರೂ.3 ಸಾವಿರ ಮತ್ತು ಗಾಣಿಗ ಟ್ರೋಫಿ ನೀಡಲಾಗುವುದು ಎಂದು ಜಯಂತ ಉರ್ಲಾಂಡಿ ತಿಳಿಸಿದರು.

ನಿರಂಜನರ ಜನ್ಮ ಶತಮಾನೋತ್ಸವ ವಿಚಾರ ಸಂಕಿರಣ ಉದ್ಘಾಟಿಸಿದ ಧರ್ಮ ಬಣ್ಣನೆ

ಸಮಸಮಾಜದ ಚಿಂತಕರಾಗಿದ್ದರು ನಿರಂಜನ

ಕೊಣಾಜೆ: ಕೇಂದ್ರ ಸಾಹಿತ್ಯ ಅಕಾಡೆಮಿ ಮತ್ತು ಮಂಗಳೂರು ವಿವಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆ ಸಹಯೋಗದಲ್ಲಿ ಸಾಹಿತಿ, ಪತ್ರಕರ್ತ ಹಾಗೂ ಹೋರಾಟಗಾರ ನಿರಂಜನರ ಜನ್ಮ ಶತಮಾನೋತ್ಸವದ ಅಂಗವಾಗಿ ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಪ್ರೊ. ಬಿ.ಎ. ವಿವೇಕ ರೈ ವಿಚಾರ ವೇದಿಕೆಯಲ್ಲಿ ಒಂದು ದಿನದ ವಿಚಾರ ಸಂಕಿರಣವು ಶುಕ್ರವಾರ ನಡೆಯಿತು.

ವಿವಿ ಕುಲಪತಿ ಪ್ರೊ.ಪಿ.ಎಲ್. ಧರ್ಮ ಅವರು ಮಾತನಾಡಿ, ಸಾಹಿತಿ ನಿರಂಜನರು ಕಾರ್ಮಿಕರ ಪರ, ಬಡವರ ಪರ, ರೈತಪರ ಹೋರಾಟಗಾರ, ಸಮಸಮಾಜದ ಚಿಂತಕರಾಗಿದ್ದರು ಜೊತೆಗೆ ಸಮಾಜದಲ್ಲಿ ಮಾನವತಾ ಮೌಲ್ಯವನ್ನು ಬಿತ್ತುವ ಕೆಲಸ ಮಾಡಿದ್ದರು. ಬಂಡವಾಳಶಾಹಿಯ ಬೇರು ಬೇರೆ ಬೇರೆ ರೀತಿಯಲ್ಲಿ ಗಟ್ಟಿಗೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ ಸಾಹಿತಿ ನಿರಂಜನ ಅವರ ಸಾಹಿತ್ಯ ಚಿಂತನೆಯ ವಿಚಾರಸಂಕಿರಣವು ವೈಚಾರಿಕತೆ ಪ್ರಜ್ಞೆಯನ್ನು ವಿಸ್ತರಿಸಲಿದೆ ಎಂದು ಹೇಳಿದರು.

ಸಮಾನತೆಯ ಭಾವ ಬಿತ್ತಿದರು

ಎಸ್‌ವಿಪಿ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷ ಡಾ. ನಾಗಪ್ಪ ಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ,



ಸಾಹಿತ್ಯದ ಒಳಗಡೆ ಸಮಸಮಾಜ, ಸಮಾನತೆಯ ಭಾವವನ್ನು ಬಿತ್ತಿದ ಅನೇಕ ಮಹನೀಯರಿದ್ದಾರೆ. ಇಂತವರ ಸಾಲಿನಲ್ಲಿ ನಿರಂಜನರು ಪ್ರಮುಖವಾಗಿ ಗುರುತಿಸುವ ಸಾಹಿತಿಯಾಗಿದ್ದಾರೆ. ವಿದ್ಯಾರ್ಥಿಗಳು ನಿರಂಜನರ ವ್ಯಕ್ತಿತ್ವ ಹಾಗೂ ಅವರ ಹೋರಾಟಗಳು, ಸಮಾಜಕ್ಕೆ ನೀಡಿರುವ ಕೊಡುಗೆಗಳ ಬಗ್ಗೆ ಅರಿವನ್ನು ಹೆಚ್ಚಿಸಿಕೊಳ್ಳುವ ಉದ್ದೇಶದಿಂದ ಈ ವಿಚಾರ ಸಂಕಿರಣವನ್ನು ಆಯೋಜಿಸಿಕೊಳ್ಳಲಾಗಿದೆ ಎಂದರು.

ಮಾದರಿ ಮಾನೋಭಾವ

ಕೇಂದ್ರ ಸಾಹಿತ್ಯ ಅಕಾಡೆಮಿಯ ಸಲಹಾ ಸಮಿತಿ ಸದಸ್ಯರಾದ ಮನು ಬಳಿಗಾರ್ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ಶ್ರೇಷ್ಠ ಸಾಹಿತ್ಯ ರತ್ನಗಳಲ್ಲಿ ನಿರಂಜನ್ ಅವರೂ ಒಬ್ಬರು. ವಿಶ್ವಕ್ಕೆ ಮಾದರಿಯಾಗುವಂತಹ ಮನೋಭಾವ ಅವರದ್ದು. ಕರ್ನಾಟಕ ಸರ್ಕಾರವು ನಿರಂಜನ ಅವರ ಹೆಸರಲ್ಲಿ ಟ್ರಸ್ಟ್ ರಚಿಸಬೇಕು ಹಾಗೂ ಅವರ ಸಮಗ್ರ ಸಾಹಿತ್ಯವನ್ನು ಕನ್ನಡ ಸಂಸ್ಕೃತಿ ಇಲಾಖೆ ಪ್ರಕಟ ಮಾಡಬೇಕು ಎಂಬುದು ನಮ್ಮ ಒತ್ತಾಯವಾಗಿದೆ ಎಂದರು. ಸಾಹಿತ್ಯ ಅಕಾಡೆಮಿ ಸಂಯೋಜಕ ಚಂದ್ರಶೇಖರರಾಜು ಟಿ.ಎಸ್. ಇದ್ದರು.

ಚಿದಾನಂದ ಸಾಲಿ ಸ್ವಾಗತಿಸಿದರು. ಪ್ರಾಧ್ಯಾಪಕ ಪ್ರೊ.ಸೋಮಣ್ಣ ಹೊಂಗಳ್ಳಿ ವಂದಿಸಿದರು. ಉಪನ್ಯಾಸಕ ಡಾ.ಯಶುಕುಮಾರ್ ನಿರೂಪಿಸಿದರು. ವಿಚಾರಸಂಕಿರಣದಲ್ಲಿ ಜಿ.ಎನ್. ಮೋಹನ್, ಡಾ.ಧನಂಜಯ ಕುಂಬ್ಳೆ, ಸಿದ್ದನಗೌಡ ಪಾಟೀಲ, ಡಾ.ಚೇತನ ಸೋಮೇಶ್ವರ ಅವರು ನಿರಂಜನರ ಕುರಿತ ವಿಷಯಗಳಲ್ಲಿ ಪ್ರಬಂಧ ಮಂಡಿಸಿದರು.

ಮರೋಳಿ: ಮಂಗಳೂರು ಮನಪಾ ವಾರ್ಡ್‌ನ ರಸ್ತೆ ಅಭಿವೃದ್ಧಿಗೆ ಚಾಲನೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ ಮರೋಳಿ ಸೂರ್ಯ ನಾರಾಯಣ ದೇವಸ್ಥಾನ ಸಮೀಪದ 37ನೇ ವಾರ್ಡಿನ ಶಾಂತಿನಗರ ರುಕ್ಕಯ್ಯ ದೇವಾಡಿಗ ಮನೆ ಪರಿಸರದ ರಸ್ತೆ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆಯು ಶಾಸಕ ವೇದವ್ಯಾಸ್ ಕಾಮತ್ ಅವರ ನೇತೃತ್ವದಲ್ಲಿ ನಡೆಯಿತು.

ಈ ವೇಳೆ ಮಾತನಾಡಿದ ಶಾಸಕರು, ಸ್ಥಳೀಯರ ಮನವಿ ಮೇರೆಗೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಿಂದ ಸುಮಾರು 28 ಲಕ್ಷ ರೂ. ವೆಚ್ಚದಲ್ಲಿ ರಸ್ತೆ, ಚರಂಡಿ ಹಾಗೂ ತಡೆಗೋಡೆ ನಿರ್ಮಾಣ ಕಾಮಗಾರಿಯು ನಡೆಯಲಿದೆ. ಇದು ತುರ್ತಾಗಿ ನಡೆಯಬೇಕಿರುವ ಕಾಮಗಾರಿಯಾಗಿದ್ದು ಈ ಹಿಂದೆಯೇ ಗುದ್ದಲಿ ಪೂಜೆ ನಡೆದಿದ್ದರೂ ಅರ್ಧಕ್ಕೆ ನಿಂತಿತ್ತು. ಇದೀಗ ಮತ್ತೆ ಪ್ರಕ್ರಿಯೆ ಆರಂಭವಾಗಿದ್ದು ಕಾಮಗಾರಿ ಸುಸೂತ್ರವಾಗಿ ಮುಂದುವರಿಯಲು ತಮ್ಮ ಒಂದಿಷ್ಟು ಸ್ಥಳವನ್ನು ಬಿಟ್ಟು ಕೊಟ್ಟು ಸಹಕರಿಸಿದ ಎಲ್ಲರಿಗೂ ಈ ಸಂದರ್ಭದಲ್ಲಿ ವಿಶೇಷ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಎಂದರು.

ಪ್ರಮುಖರಾದ ಕಿರಣ್ ದೇವಾಡಿಗ, ಜಗದೀಶ್ ಶೆಣೈ, ರಾಘವೇಂದ್ರ, ಪ್ರಶಾಂತ್ ಪ್ರಭು, ಅರುಣ್ ಶೆಟ್ಟಿ, ಪ್ರಶಾಂತ್, ಅನಿತಾ, ಮಾಲತಿ, ಮಮತ, ರಾಜೇಶ್ ಅಲಂಗಾರ್, ಮ್ಯಾಕ್ಸಿ ಡಿಸೋಜ, ಜಾನ್ ಡಿಸೋಜ, ಆಗ್ನೇಸ್, ನಾಗೇಶ್ ಸರಳ, ಲಕ್ಷ್ಮಣ, ರುಕ್ಕಯ್ಯ, ಸುಲೋಚನ, ರಾಜೇಶ್, ದೀಪಕ್, ಸೇರಿದಂತೆ ವಾರ್ಡಿನ ಕಾರ್ಯಕರ್ತರು, ಸ್ಥಳೀಯರು ಉಪಸ್ಥಿತರಿದ್ದರು.

ಮುಗುಳಿಯ ದೇಗುಲ ವಾರ್ಷಿಕೋತ್ಸವ ಸಂಭ್ರಮ: ಸೋಲಾರ್ ದೀಪ ಉದ್ಘಾಟನೆ



ಬಂಟ್ವಾಳ: ಸಜೀಪ ಮುನ್ನೂರು ಗ್ರಾಮದ ಮುಗುಳಿಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವಾರ್ಷಿಕೋತ್ಸವ ಹಾಗೂ ಕೆನರಾ ಬ್ಯಾಂಕ್ ವತಿಯಿಂದ ದೇಗುಲಕ್ಕೆ ಕೊಡುಗೆಯಾಗಿ ನೀಡಲಾದ ಶುದ್ಧ ಕುಡಿಯುವ ನೀರಿನ ಘಟಕ ಮತ್ತು ಸೋಲಾರ್ ದೀಪವನ್ನು ಉದ್ಘಾಟಿಸಲಾಯಿತು.

ವಾರ್ಷಿಕೋತ್ಸವದ ಅಂಗವಾಗಿ ಸಜೀಪ ಮಾಗಣೆತಂತ್ರಿ ಎಂ. ಸುಬ್ರಹ್ಮಣ್ಯ ಭಟ್ ಅವರ ನೇತೃತ್ವದಲ್ಲಿ ಶ್ರೀದೇವರಿಗೆ ಪುಣ್ಯಾಹ, ಗಣಯಾಗ, ಪವಮಾನ ಸೂಕ್ತ ಅಭಿಷೇಕ, ಫಲಪಂಚಾಮೃತ ಅಭಿಷೇಕ, ನಾಗದೇವರಿಗೆ ಸಯಸಾಸ್ತರ, ದೇವರಿಗೆ ವಿಶೇಷ ಪೂಜೆ, ಭಜನಾ ಸಂಕೀರ್ತನೆ, ಸಾಮೂಹಿಕ ಸತ್ಯನಾರಾಯಣ ಪೂಜೆ ಅನ್ನದಾನ, ಅಶ್ವತ್ಥಕಟ್ಟೆ ವೃಕ್ಷಪೂಜೆ, ಭರತನಾಟ್ಯ ಕಾರ್ಯಕ್ರಮ, ದೇವರಿಗೆ ರಂಗ ಪೂಜೆಯೊಂದಿಗೆ ಸಂಪನ್ನಗೊಂಡಿತು.

ಇದೇ ವೇಳೆ ಕೆನರಾ ಬ್ಯಾಂಕ್ ವತಿಯಿಂದ ದೇವಳಕ್ಕೆ ನೀಡಿದ ಶುದ್ಧ ಕುಡಿಯುವ ನೀರಿನ ಘಟಕ ಹಾಗೂ ಸೋಲಾರ್ ದೀಪವನ್ನು ಉದ್ಘಾಟಿಸಲಾಯಿತು. ಸುಮಾರು ಒಂದುವರೆ ಕೋಟಿ ರೂ. ವೆಚ್ಚದಲ್ಲಿ ದೇವಳದ ಪ್ರಾಂಗಣದಲ್ಲಿ ನಿರ್ಮಾಣಗೊಳ್ಳಲಿರುವ ಸುಸಜ್ಜಿತ ಸಭಾ ಭವನದ ವಿಜ್ಞಾಪನಪತ್ರ ಬಿಡುಗಡೆಗೊಳಿಸಲಾಯಿತು.

ದೇಗುಲದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಜಯಶಂಕರ ಬಾಸ್ರಿತ್ತಾಯ, ಅರ್ಚಕ ಕೃಷ್ಣ ಭಟ್, ಎನ್.ಕೆ. ಶಿವ, ಹರಿಪ್ರಸಾದ್ ಭಂಡಾರಿ,ರಾಜು ಪೂಜಾರಿ, ಶ್ರೀನಿವಾಸ್ ನಾಯಕ್, ರವೀಂದ್ರ ಕಂಬಳಿ, ದೇವಿ ಪ್ರಸಾದ್ ಪೂಂಜಾ, ವೆಂಕಟೇಶ್ವರ ಭಟ್, ಡಾ. ಸುಬ್ರಾಯ ಹೊಳ್ಳ, ಶಿವರಾಮ ಮಯ್ಯ, ಸುಬ್ರಾಯ ಕಾರಂತ,ನಾರಾಯಣ ಭಟ್, ಧನೇಶ್ವರ ರಾವ್, ಪರಮೇಶ್ವರ ಮೊದಲಾದವರು ಉಪಸ್ಥಿತರಿದ್ದರು.



ದಕ್ಷಿಣ ಏಷ್ಯಾ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾಟದಲ್ಲಿ ಭಾರತೀಯ ಮಹಿಳಾ ತಂಡದ ನಾಯಕಿಯಾಗಿ ಪ್ರಥಮ ಸ್ಥಾನ ಮತ್ತು ಚಿನ್ನದ ಪದಕ ಗಳಿಸಿದ ಕ್ರೀಡಾಪಟು ಜಯಲಕ್ಷ್ಮೀ ಗಾಣಿಗ ಕಡೇಶ್ವಾಲ್ಯ ಅವರನ್ನು ಮಾಜಿ ಸಚಿವ ಬಿ. ರಮಾನಾಥ ರೈ ದಂಪತಿ ಗೌರವಿಸಿದರು. ಸಹೋದರ ಅಶೋಕ್ ಗಾಣಿಗ, ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಉಮೇಶ್ ಬೋಳಂತೂರು, ದೇಹದಾರ್ಢ್ಯ ಪಟು ಗಣೇಶ್ ಪೂಜಾರಿ, ಎಂಪಿಎಂಸಿ ಮಾಜಿ ಸದಸ್ಯ ಚಂದ್ರಶೇಖರ ಇದ್ದರು.

ವಿವೇಕಾನಂದ ವಿದ್ಯಾರ್ಥಿಗಳು ಪ್ರಥಮ



ಪುತ್ತೂರು: ಬೆಂಗಳೂರಿನನಲ್ಲಿ ಸೇವಾ ಇನ್ ಆಕ್ಷನ್ ಹಾಗೂ ಕ್ವಿಚೇಬಲ್ಡ್ ಫೌಂಡೇಶನ್ ವತಿಯಿಂದ ಆಯೋಜಿಸಲಾಗಿದ್ದ ಸೃಜನಾತ್ಮಕ ಕಲಿಕಾ ಚಟುವಟಿಕೆಗಳು ಹಾಗೂ ಮಾದರಿ ತಯಾರಿ 'ಇನ್ನೋವೇಟಿವ್ ಲರ್ನಿಂಗ್ ಆಕ್ಟಿವಿಟಿ ಆಂಡ್ ಪ್ರಾಜೆಕ್ಟ್ ಕಂಟೆಸ್ಟ್'(ಐಎಲ್‌ಎಪಿ)ನಲ್ಲಿ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ಅನ್ವೇಷ್ ಕೆ.ಎಚ್.(ಕೆ.ಜಿ. ಹರೀಶ್ ಕುಮಾರ್, ಜಯಮಾಲಾ ಪಿ.ಎನ್. ದಂಪತಿ ಪುತ್ರ), ಮಯೂರಿ ಕೆ. (ಉದಯರವಿ ಕೆ., ಶ್ವೇತಾ ಕೆ. ದಂಪತಿ ಪುತ್ರಿ) ಪ್ರಥಮ ಸ್ಥಾನ ಗಳಿಸಿ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ಫಲಕ, ಪ್ರಮಾಣ ಪತ್ರ ಹಾಗೂ ರೂ.10 ಸಾವಿರ ನಗದು ಬಹುಮಾನವನ್ನು ಒಳಗೊಂಡಿತ್ತು.

ಬಜೆಟ್ ಪೂರ್ವಭಾವಿ 2ನೇ ಸುತ್ತಿನ ಸಾರ್ವಜನಿಕ ಸಮಾಲೋಚನಾ ಸಭೆ | ನಗರದಲ್ಲಿ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಮಾಡಲು ನಾಗರಿಕರ ಒತ್ತಾಯ

ನಗರಸಭೆಯ ಖಾಲಿ ಇರುವ ಕಟ್ಟಡಗಳ ಕೊಠಡಿಗಳಿಗೆ ಮರು ಟೆಂಡರ್ ಮಾಡಲು ಆಗ್ರಹ

ಪುತ್ತೂರು: ನಗರಸಭೆಯ 2026-27ನೇ ಸಾಲಿನ ಆಯವ್ಯಯ ತಯಾರಿಸುವ ಸಂಬಂಧ ಸಾರ್ವಜನಿಕವಾಗಿ ಸಮಾಲೋಚನೆ ಮಾಡಲು ನೋಂದಾಯಿತ ಸ್ಥಳೀಯ ಸಂಘ ಸಂಸ್ಥೆಗಳು, ನೋಂದಾಯಿತ ಸರಕಾರೇತರ ಸಂಘ ಸಂಸ್ಥೆಗಳು, ವಾಣಿಜ್ಯ ಮತ್ತು ಕೈಗಾರಿಕಾ ಸಂಘಗಳು ಹಾಗೂ ಇತರೆ ಸಂಘ ಸಂಸ್ಥೆಗಳ ಪ್ರತಿನಿಗಳು ಒಳಗೊಂಡಂತೆ 2ನೇ ಸುತ್ತಿನ 'ಸಾರ್ವಜನಿಕ ಸಮಾಲೋಚನಾ ಸಭೆ'ಯನ್ನು ಶುಕ್ರವಾರ ನಗರಸಭಾ ಸಭಾಂಗಣದಲ್ಲಿ ನಡೆಸಲಾಯಿತು.

ನಗರಸಭಾ ಪೌರಾಯುಕ್ತೆ ವಿದ್ಯಾ ಕಾಳೆ ಅಧ್ಯಕ್ಷತೆ ವಹಿಸಿದ್ದರು. ಆನ್ಲೈನ್ ಪಾವತಿ ವ್ಯವಸ್ಥೆಗಳನ್ನು ಸಮರ್ಪಕಗೊಳಿಸಬೇಕು. ಸಿಬಂದಿ ಭರ್ತಿಮಾಡಿ ಸಮರ್ಪಕ ಸೇವೆ ನೀಡಬೇಕು. ವಿವಿಧ ತೆರಿಗೆಗಳನ್ನು ಕಟ್ಟಿದವರಿಗಿಂತ ಕಟ್ಟದವರ ಸಂಖ್ಯೆ ಹೆಚ್ಚಾಗಿದ್ದು



ಅದರ ವಸೂಲಾತಿಗೆ ಕ್ರಮ ಕೈಗೊಳ್ಳಬೇಕು. ನಗರದಲ್ಲಿ ಸಮರ್ಪಕ ಮಾರುಕಟ್ಟೆ ವ್ಯವಸ್ಥೆ ಮಾಡಬೇಕು. ನಗರಸಭೆಯ ಖಾಲಿ ಇರುವ ಕಟ್ಟಡಗಳ ಕೊಠಡಿಗಳಿಗೆ ಮರು ಟೆಂಡರ್ ಮಾಡಿ ಆದಾಯದ ಮೂಲವಾಗಿರಬೇಕು ಮೊದಲಾದ ಸಲಹೆಗಳು ಸಭೆಯಲ್ಲಿ ಬಂದವು.

ಲೈಸನ್ಸ್ ಪಡೆದು, ತೆರಿಗೆ ಪಾವತಿಸಿ ವ್ಯವಹಾರ ನಡೆಸುವವರಿಗೆ ಸಮಸ್ಯೆಯಾಗಬಾರದು. ಸಿಬಂದಿ ಕೊರತೆಯಿಂದ ನಗರಸಭಾ ಕೆಲಸಗಳು ವಿಳಂಬವಾಗುತ್ತಿದ್ದು, ಖಾಯಂ ಸಿಬಂದಿ ನೇಮಕಕ್ಕೆ ಸಂಬಂಧಿಸಿದಂತೆ ಶಾಸಕರ ಮೂಲಕ ಒತ್ತಡ ಹೇರಬೇಕು. ಲೈಸನ್ಸ್ ಮಾಡುವಾಗ ಪ್ರತಿ ಬಾರಿಯೂ ಆಧಾರ್ ದಾಖಲೆ ಕೇಳುತ್ತಿರುವುದು ಸರಿಯಲ್ಲ. ಬೇಸಿಗೆಯಲ್ಲೂ ನಗರಗಳ ಚರಂಡಿಗಳಲ್ಲಿ ಕೊಳಚೆ ನೀರು ಹರಿಯುತ್ತಿರುವುದು ಅಪಾಯಕಾರಿಯಾಗಿದೆ. ಜಲಸಿರಿ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಿಸಬೇಕು. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ನಗರದಲ್ಲಿ ಹಣ್ಣುಗಳ ಮಾರಾಟದ ಕುರಿತು ತಪಾಸಣೆ, ನಿಗಾ ವಹಿಸುವ ಕಾರ್ಯ ಆಗಬೇಕು ಎನ್ನುವ ಆಗ್ರಹ ವ್ಯಕ್ತವಾಯಿತು.

ಅಬ್ದುಲ್ ರಹಿಮಾನ್ ಮಾತನಾಡಿ, ಬೀದಿ ಶ್ವಾನಗಳ ಕಾಟದಿಂದ ಮಕ್ಕಳು ಸೇರಿದಂತೆ ಸಾರ್ವಜನಿಕರಿಗೆ ಅಪಾಯವಿದೆ. ಈ ಕುರಿತು ನಗರಸಭೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇದಕ್ಕೆ ಉತ್ತರಿಸಿದ ಪೌರಾಯುಕ್ತೆ ವಿದ್ಯಾ ಕಾಳೆ, ಗೈಡ್ ಲೈನ್ ಪ್ರಕಾರ ಬೀದಿ ಶ್ವಾನಗಳ ಸಂತಾನಹರಣ ಮಾಡಬೇಕಾಗುತ್ತದೆ. ಕಠಿಣ ನಿಯಮಗಳಿಂದ ಯಾರೂ ಟೆಂಡರ್ ವಹಿಸುತ್ತಿಲ್ಲ. ಈ ನಿಟ್ಟಿನಲ್ಲಿ ನಗರಸಭೆಯಿಂದ ನಿರಂತರ ಪ್ರಯತ್ನ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳು ಶ್ವಾನಗಳ ಶೆಡ್ ನಿರ್ಮಿಸಲು ಜಾಗ ನಿಗದಿಪಡಿಸಲು ಸೂಚಿಸಿದ್ದಾರೆ ಎಂದು ಹೇಳಿದರು.

ಶೌಚಾಲಯ ನಿರ್ಮಿಸಲು ಆಗ್ರಹ

ನಾರಾಯಣ ನಾಯ್ಕ ಅವರು ಮಾತನಾಡಿ, ನೆಹರೂನಗರ ವ್ಯಾಪ್ತಿಯಲ್ಲಿ ಅಗತ್ಯವಾಗಿ ಸಾರ್ವಜನಿಕ ಶೌಚಾಲಯ ನಿರ್ಮಿಸಬೇಕು. ಕಾಲೇಜು ಪರಿಸರ ಹಾಗೂ ದಿನಂಪ್ರತಿ ಸಾವಿರಾರು ಮಂದಿ ಓಡಾಡುವುದರಿಂದ ಇಲ್ಲಿ ಸಾರ್ವಜನಿಕ ಶೌಚಾಲಯದ ಅವಶ್ಯಕತೆ ಇದೆ ಎಂದರು. ಮುಂದಿನ ಶೌಚಾಲಯ ಅನುದಾನದಲ್ಲಿ ನೆಹರೂನಗರಕ್ಕೆ ಮೊದಲ ಆದ್ಯತೆ ನೀಡಲಾಗುವುದು ಎಂದರು.

ವರ್ತಕ ಸಂಘದಿಂದ ರವಿಕೃಷ್ಣ ಕಲ್ಲಾಜೆ, ಉಲ್ಲಾಸ್ ಪೈ, ಮಾಜಿ ಪುರಸಭಾಧ್ಯಕ್ಷ ಗಣೇಶ್, ನಗರಸಭಾ ನಿಕಟಪೂರ್ವ ಸದಸ್ಯ ಯೂಸುಫ್ ಮತ್ತಿತರರು ಅಭಿಪ್ರಾಯಗಳನ್ನು ತಿಳಿಸಿದರು.

ಸಭೆಗೆ ಗೈರು

ಸಭೆಯಲ್ಲಿ ವರ್ತಕ ಸಂಘದ ಪ್ರತಿನಿಧಿಗಳು, 2 ಮಂದಿ ಸಾರ್ವಜನಿಕರು, ಇಬ್ಬರು ನಿಕಟಪೂರ್ವ ಸದಸ್ಯರು ಮಾತ್ರ ಸಭೆಯಲ್ಲಿ ಭಾಗವಹಿಸಿ ಸಲಹೆಗಳನ್ನು ನೀಡಿದರು. ವರ್ಷವಿಡೀ ನಗರಸಭೆಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಟೀಕಿಸುವವರು, ನಗರಸಭಾ ಮಾಜಿ ಸದಸ್ಯರೂ ಬಜೆಟ್ ಪೂರ್ವ ಸಾರ್ವಜನಿಕ ಸಭೆಯಲ್ಲಿ ಭಾಗವಹಿಸದಿರುವುದು ವಿಪರ್ಯಾಸ.

ಸುತ್ತಮುತ್ತ

ಇಂದು ಅಲೆತ್ತೂರಿನಲ್ಲಿ ಸಾರ್ವಜನಿಕ ಶನೈಶ್ಚರ ಪೂಜೆ

ಬಂಟ್ವಾಳ: ಬಿ.ಸಿ.ರೋಡಿನ ಅಲೆತ್ತೂರು ಮಂಗಳ ಫ್ರೆಂಡ್ಸ್ ಸರ್ಕಲ್ ಇದರ 27 ನೇ ವರ್ಷದ ಸಾರ್ವಜನಿಕ ಶನೈಶ್ಚರ ಪೂಜೆ ಹಾಗೂ 44 ನೇ ವರ್ಷದ ವಾರ್ಷಿಕೋತ್ಸವ ಫೆ.28 ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಅಂದು ಸಂಜೆ ಗಂಟೆ 5.30ರಿಂದ ಶನಿಪೂಜೆ ಪ್ರಾರಂಭ, ರಾತ್ರಿ ಗಂಟೆ 7.30ಕ್ಕೆ ಮಂಗಳಾರತಿ, ಹಾಗೂ ಅನ್ನಸಂತರ್ಪಣೆ, 8 ಕ್ಕೆ ಸಭಾ ಕಾರ್ಯಕ್ರಮ 8.30 ರಿಂದ ಸ್ಥಳೀಯ ಪ್ರತಿಭೆಗಳಿಂದ ನೃತ್ಯ ಕಾರ್ಯಕ್ರಮ,10.00 ರಿಂದ ತುಳು ನಾಟಕ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮಾ. 1: ಬೀಚ್ ಸ್ವಚ್ಛತಾ ಮಹಾ ಅಭಿಯಾನ

ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲುವಿನ ಶ್ರೀ ಭಗವತೀ ದೇವಸ್ಥಾನದಲ್ಲಿ ಮಾ. 4ರಿಂದ 8ರ ತನಕ ನಡೆಯಲಿರುವ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಮಾ.1ರಂದು ಬೀಚ್ ಸ್ವಚ್ಛತಾ ಮಹಾ ಅಭಿಯಾನ ಮತ್ತು ಕ್ಯಾಪ್ಸ್ ಫೌಂಡೇಶನ್ ಬೆಂಗಳೂರಿನ ಸಹಕಾರದೊಂದಿಗೆ ಪ್ಲಾಸ್ಟಿಕ್ ಮುಕ್ತ ಅಭಿಯಾನಕ್ಕೆ ಚಾಲನೆ ನೀಡಲಾಗುವುದು.
ಮಾ. 1 ರಂದು ಬೆಳಿಗ್ಗೆ 7.30 ರಿಂದ ಶ್ರೀ ಸಸಿಹಿತ್ಲು ಭಗವತೀ ದೇವಸ್ಥಾನದ ಮುಖ್ಯ ದ್ವಾರದ ಬಳಿಯಿಂದ ಬೀಚ್ ಸ್ವಚ್ಛತಾ ಮಹಾ ಅಭಿಯಾನ ನಡೆಯಲಿದೆ ಎಂದು ದೇವಳ ಬ್ರಹ್ಮಕಲಶ ಸಮಿತಿ ಪ್ರಕಟಣೆ ತಿಳಿಸಿದೆ.

ಮಾ.11ರಿಂದ ಅಡೂರು ಕ್ಷೇತ್ರದಲ್ಲಿ ವರ್ಷಾವಧಿ ಜಾತ್ರೆ

ಮುಳ್ಳೇರಿಯ: ಅಡೂರು ಶ್ರೀ ಮಹಾತೋಭಾರ ಶ್ರೀ ಮಹಾಲಿಂಗೇಶ್ವರ ಮಹಾವಿಷ್ಣು ವಿನಾಯಕ ಕ್ಷೇತ್ರದ ವರ್ಷಾವಧಿ ಜಾತ್ರೋತ್ಸವ ಮಾರ್ಚ್ 11ರಿಂದ 20ರ ವರೆಗೆ ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಇದರ ಅಂಗವಾಗಿ ಗೊನೆ ಕಡಿಯುವ ಕಾರ್ಯಕ್ರಮ ಮಾರ್ಚ್ 2ರಂದು ಜರಗಲಿದೆ. ಶ್ರೀ ಕ್ಷೇತ್ರದಲ್ಲಿ ಮಾರ್ಚ್ 23ರಿಂದ 25ರ ತನಕ ಶ್ರೀ ಮಹಾಗಣಪತಿ ಮತ್ತು ಶ್ರೀ ಮಹಾವಿಷ್ಣು ದೇವರ ಪುನರ್ ಪ್ರತಿಷ್ಠಾ ಕಲಶೋತ್ಸವವು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರ ದಿವ್ಯ ಉಪಸ್ಥಿತಿಯಲ್ಲಿ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವಾಸುದೇವ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ ಜರಗಲಿದೆ.

ಮೂಲ್ಕಿ ತಾ.ಸಾಹಿತ್ಯ ಸಮ್ಮೇಳನ ಸಾಹಿತ್ಯ ಸ್ಪರ್ಧೆಗಳ ವಿಜೇತರು

ಕಟೀಲು : ಮಾರ್ಚ್ 1ರಂದು ಕಟೀಲು ದೇಗುಲದ ನಂದಿನೀ ನದಿಯ ಕುದ್ರುವಿನಲ್ಲಿ ನಡೆಯಲಿರುವ ಮೂಲ್ಕಿ ತಾಲೂಕು ಮೂರನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ನಡೆಸಲಾದ ಸಾಹಿತ್ಯ ಸ್ಪರ್ಧೆಗಳ ವಿಜೇತರ ಪಟ್ಟಿ ಹೀಗಿದೆ.

ಸಾರ್ವಜನಿಕ ವಿಭಾಗ

ಸಣ್ಣ ಕಥೆ : ಪ್ರಥಮ: ಆಜ್ಞಾಸೋಹಮ್(ಮೌನದ ವಿಳಾಸ), ದ್ವಿತೀಯ: ಜಯಂತಿ ಕಟೀಲು (ತಿರುಗುಬಾಣ), ತೃತೀಯ : ಶ್ರೇಯಾ ಮೂಲ್ಕಿ (ಮಲೆನಾಡ ಮಡಿಲಲ್ಲಿ) ಕವನ ಸ್ಪರ್ಧೆ : ಪ್ರಥಮ: ಪ್ರೇಮಾ ಆರ್. ಶೆಟ್ಟಿ ಮೂಲ್ಕಿ (ಸೂಕ್ಷ್ಮ ಗ್ರಹಿಕೆ), ದ್ವಿತೀಯ: ಶ್ರೇಯಾ ಮೂಲ್ಕಿ (ಗಟ್ಟಿಗಿತ್ತಿ ನಾರಿ) ತೃತೀಯ : ರಾಧಿಕಾ ಗಣೇಶ್ ಅತಿಕಾರಿಬೆಟ್ಟು (ಕನಸಿನ ಕನ್ನಡಿ) ನಾನು ಓದಿದ ಉತ್ತಮ ಪುಸ್ತಕ: ಪ್ರಥಮ : ಗಾಯತ್ರೀ ಎನ್.ಆರ್., ದ್ವಿತೀಯ: ಪ್ರಸಾದ್ ಎಸ್., ಕಾರ್ನಾಡು, ತೃತೀಯ : ಮೋಹನದಾಸ ಕಡಂದಲೆ, ಹಾಸ್ಯಬರಹ : ಪ್ರಥಮ: ಪ್ರೇಮಾ ಆರ್. ಶೆಟ್ಟಿ ದ್ವಿತೀಯ : ಸುಲೋಚನಾ ವಿ.ವೈ. ಆಚಾರ್ಯ, ಅಜಾರು ಪ್ರೌಢಶಾಲೆ ವಿಭಾಗ ನಾನು ಓದಿದ ಉತ್ತಮ ಪುಸ್ತಕ : ಪ್ರಥಮ : ಪುಣ್ಯಶ್ರೀ ಆಚಾರ್ಯ, ದುರ್ಗಾಪರಮೇಶ್ವರೀ ಕಟೀಲು ಶಾಲೆ, ದ್ವಿತೀಯ: ಧನ್ವಿ ಕೆ. ಶೆಟ್ಟಿ ವಾಣಿಶ್ರೀ ಪಾವಂಜೆ, ತೃತೀಯ : ವಂಶಿಕಾ ವ್ಯಾಸಮಹರ್ಷಿ ಮೂಲ್ಕಿ, ಕಥಾ ಸ್ಪರ್ಧೆ: ಪ್ರಥಮ : ಸಾನ್ವಿ ಡಿ.ರಾವ್, ಕಟೀಲು ಇಂಗ್ಲಿಷ್ ಮಾಧ್ಯಮ, ದ್ವಿತೀಯ :ಅಂಕಿತಶ್ರೀ ಕಟೀಲು ಇಂಗ್ಲಿಷ್ ಮಾಧ್ಯಮ, ತೃತೀಯ : ಅವಿನಾ ಸಲ್ದಾನಃ, ಕಿನ್ನಿಗೋಳಿ ಲಿಟ್ಲ್ ಫ್ಲವರ್ ಕಾಲೇಜು ವಿಭಾಗ : ನಾನು ಓದಿದ ಉತ್ತಮ ಪುಸ್ತಕ: ಪ್ರಥಮ : ದೀಪ್ತಿ, ಮೂಲ್ಕಿ ವಿಜಯಾ ಕಾಲೇಜು, ದ್ವಿತೀಯ : ವೈಷ್ಣವಿ ಎಸ್. ದೇವಾಡಿಗ ಕಟೀಲು ಪ.ಪೂ. ಕಾಲೇಜು ಕಥೆ ಸ್ಪರ್ಧೆ : ಪ್ರಥಮ : ಅಚಿಂತ್ಯ ಜೆ. ಶರ್ಮ, ಕಟೀಲು ಪ.ಪೂ. ಕಾಲೇಜು, ದ್ವಿತೀಯ : ದೀಕ್ಷಾ ಎಸ್., ಸರಕಾರಿ ಕಾಲೇಜು ಮೂಲ್ಕಿ ಸಮ್ಮೇಳನದ ಸಮಾರೋಪದಲ್ಲಿ ಬಹುಮಾನ ವಿತರಿಸಲಾಗುವುದು ಎಂದು ಕಸಾಪ ಮೂಲ್ಕಿ ಘಟಕಾಧ್ಯಕ್ಷ ಮಿಥುನ ಕೊಡೆತ್ತೂರು ತಿಳಿಸಿದ್ದಾರೆ.

ಇಲಾಖೆಗೆ, ಶಾಸಕರಿಗೆ ಮನವಿ ಸಲ್ಲಿಸಲು ನಿಡ್ಪಳ್ಳಿ ಗ್ರಾ.ಪಂ.ನ ಗ್ರಾಮ ಸಭೆಯಲ್ಲಿ ನಿರ್ಣಯ

ಬೆಟ್ಟಂಪಾಡಿ ಗ್ರಾಮಕ್ಕೆ ಕೆ.ಪಿ.ಎಸ್.ಶಾಲೆ ಹಸ್ತಾಂತರಿಸಲು ಆಗ್ರಹ



ನಿಡ್ಪಳ್ಳಿ: ಕೆ.ಪಿ.ಎಸ್. ಶಾಲೆಯನ್ನು ಸಕಲ ವ್ಯವಸ್ಥೆ ಇರುವ ಬೆಟ್ಟಂಪಾಡಿಗೆ ನೀಡುವಂತೆ ಒತ್ತಾಯಿಸಿ ಶಿಕ್ಷಣ ಇಲಾಖೆ ಮತ್ತು ಶಾಸಕರಿಗೆ ಮನವಿಯನ್ನು ಸಲ್ಲಿಸಲು ನಿಡ್ಪಳ್ಳಿ ಗ್ರಾಮ ಪಂಚಾಯತ್‌ನ 2025-26ನೇ ಸಾಲಿನ ದ್ವಿತೀಯ ಸುತ್ತಿನ ಗ್ರಾಮ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.
ಆಡಳಿತಾಧಿಕಾರಿ ಪುತ್ತೂರು ಪಿ.ಎಂ.ಜಿ.ಎಸ್.ವೈ.ನ ಸಹಾಯಕ ಕಾರ್ಯವಾಹಕ ಅಭಿಯಂತರ ಚೇತನ್ ಕುಮಾರ್ ಎಚ್.ಎನ್. ಅವರ ಅಧ್ಯಕ್ಷತೆಯಲ್ಲಿ ಪಂ. ಸಭಾಂಗಣದಲ್ಲಿ ನಡೆದ ನಿಡ್ಪಳ್ಳಿ ಗ್ರಾ.ಪಂ.ನ ಗ್ರಾಮ ಸಭೆಯಲ್ಲಿ ಕೆ.ಪಿ.ಎಸ್. ಶಾಲೆಯ ಕುರಿತು ನಿಕಟ ಪೂರ್ವ ಅಧ್ಯಕ್ಷ ವೆಂಕಟ್ರಮಣ ಬೋರ್ಕರ್ ಪ್ರಸ್ತಾಪಿಸಿದರು. ಕೆ.ಪಿ.ಎಸ್. ಶಾಲೆಯನ್ನು ಬೆಟ್ಟಂಪಾಡಿ ಗ್ರಾಮಕ್ಕೆ ನೀಡಬೇಕು. ಇಲ್ಲಿ ಪ್ರಾಥಮಿಕ ಶಾಲೆಯಿಂದ ಪಿ.ಯು.ಸಿ.ಯವರೆಗೆ ಇದ್ದು ಅದಕ್ಕೆ ಬೇಕಾದ ಕಟ್ಟಡ, ಸ್ಥಳಾವಕಾಶ ಲಭ್ಯವಿದೆ. ಅದನ್ನು ಉಪ್ಪಳಿಗೆಗೆ ನೀಡುವ ಬಗ್ಗೆ ಮಾತು ಕೇಳಿ ಬರುತ್ತಿದೆ. ಏನೋ ರಾಜಕೀಯ ಒತ್ತಡ ಬಳಸಿ ಇಲ್ಲಿ ಇರುವ ಪ.ಪೂ. ಕಾಲೇಜನ್ನು ಉಪ್ಪಳಿಗೆಗೆ ಸ್ಥಳಾಂತರಿಸಿ ಅಲ್ಲಿ ಕೆ.ಪಿ.ಎಸ್. ಶಾಲೆ ಮಾಡುವ ಬಗ್ಗೆ ಮಾತು ಕೇಳಿ ಬರುತ್ತಿದೆ. ನಿಡ್ಪಳ್ಳಿ ಗ್ರಾಮಕ್ಕೆ ಹೊಂದಿಕೊಂಡಿರುವ ಶಾಲೆಯನ್ನು ಸ್ಥಳಾಂತರಿಸಲು ನಮ್ಮ ಆಕ್ಷೇಪ ಇದೆ. ನಾವು ಯಾವ ಕಾರಣಕ್ಕೂ ಬಿಡುವುದಿಲ್ಲ ಎಂದರು.
ಇದಕ್ಕೆ ಪ್ರತಿಕ್ರಿಯಿಸಿದ ಕುಂಬ್ರ ಕ್ಲಸ್ಟರ್ ಸಿ.ಆರ್.ಪಿ. ದೇವಪ್ಪ, ಆದಕ್ಕೆ ಶಾಸಕರ ನೇತೃತ್ವದಲ್ಲಿ ಸಮಿತಿ ಇದ್ದು ಇಲಾಖೆ ಸೇರಿ ನಿರ್ಣಯ ಮಾಡುತ್ತಾರೆ ಎಂದರು. ಮಾರ್ಗದರ್ಶಿ ಅಧಿಕಾರಿ ಮಾತನಾಡಿ, ಈ ಕುರಿತು ಇಲಾಖೆಗೆ ಮತ್ತು ಶಾಸಕರಿಗೆ ಸಭೆಯಲ್ಲಿ ನಿರ್ಣಯ ಮಾಡಿ ಮನವಿ ಮಾಡುವ ಎಂದರು.
ಅರಣ್ಯ ಇಲಾಖೆಯಿಂದ ಅಧಿಕಾರಿ ಮದನ್ ಮಾಹಿತಿ ನೀಡುತ್ತಿದ್ದ ವೇಳೆ ಮಾತನಾಡಿದ ಗ್ರಾಮಸ್ಥ ಕೃಷ್ಣ ಡೊಂಬಟೆಬರಿ ಕಾಲನಿ ಪ್ರದೇಶದಲ್ಲಿ ಹಲವಾರು ವರ್ಷಗಳಿಂದ ವಾಸ್ತವ್ಯ ಹೊಂದಿದ್ದಾರೆ. ಆದರೆ, ಅವರಿಗೆ ಕೃಷಿ ಮಾಡಬೇಕಾದರೆ ಅಲ್ಲಿರುವ ಮರಗಳನ್ನು ಕಡಿಯಬೇಕು. ಅದಕ್ಕೆ ನೀವು ಅನುಕೂಲ ಮಾಡಿ ಕೊಡಬೇಕು ಎಂದರು. ಅದಕ್ಕೆ ಉತ್ತರಿಸಿದ ಮದನ್, ಆ ಬಗ್ಗೆ ನಮಗೆ ಏನೂ ಮಾಡಲು ಸಾಧ್ಯವಿಲ್ಲ. ಇಲಾಖೆಯ ಮೇಲಧಿಕಾರಿಗಳಿಂದ ಬಂದ ಆದೇಶ ಮಾತ್ರ ಪಾಲಿಸಬಹುದು. ಅದಕ್ಕೆ ಶಾಸಕರ ಮೂಲಕ ಮಾತನಾಡಿ ಏನಾದರೂ ಕಾನೂನು ತಂದರೆ ಆಗಬಹುದು ಎಂದರು.
ಮೆಸ್ಕಾಂ ಇಲಾಖೆ ಜೆ.ಇ. ಪುತ್ತು ಜೆ. ಮಾಹಿತಿ ನೀಡುವ ಸಂದರ್ಭ ವಿಷಯ ಪ್ರಸ್ತಾಪಿಸಿದ ವೆಂಕಟ್ರಮಣ ಬೋರ್ಕರ್, ಈಗೀಗ ವೋಲ್ಟೇಜ್ ಕಡಿಮೆಯಾಗುತ್ತಿದೆ. ಒತ್ತಡವನ್ನು ಕಡಿಮೆ ಮಾಡಲು ಪಾಣಾಜೆಗೆ ಪ್ರತ್ಯೇಕ ಫೀಡರ್ ಅಳವಡಿಸಿದರೆ ಬಹಳ ಒಳ್ಳೆಯದು ಎಂದರು. ಪಿಡಿಒ ಜಯಪ್ರಕಾಶ್ ಮಾತನಾಡಿ, ಇಡೀ ತಾಲೂಕಿನಲ್ಲಿ ಸಂಪೂರ್ಣ ಬಿಲ್ಲು ಕಟ್ಟಿದ ಪಂ. ಇದ್ದರೆ ಅದು ನಿಡ್ಪಳ್ಳಿ ಪಂಚಾಯತ್. ಬಿಲ್ಲು ಏನಾದರೂ ವ್ಯತ್ಯಾಸ ಬಾರದ ಹಾಗೆ ಬಿಲ್ಲು ರೀಡಿಂಗ್ ಬರುವಾಗ ನಮಗೆ ತಿಳಿಸಿ. ನಾವು ಓರ್ವ ಸಿಬ್ಬಂದಿಯನ್ನು ಕಳುಹಿಸುತ್ತೇವೆ ಎಂದರು.
ಡೊಂಬಟೆಬರಿ ವ್ಯಾಪ್ತಿಯಿಂದ ಶಾಲೆಗೆ ಬರುವ ರಸ್ತೆ ಸಂಪೂರ್ಣ ಹಾಳಾಗಿದ್ದು ವಾಹನ ಸಂಚರಿಸಲು ಕಷ್ಟವಾಗಿದೆ ಎಂದು ಸ್ಥಳೀಯರು ಹೇಳಿದರು. ದುರಸ್ತಿಗಾಗಿ ಪ್ರಸ್ತಾವನೆ ಕಳಿಸಲು ನಿರ್ಣಯಿಸಲಾಯಿತು. ಗ್ರಾಮಸ್ಥ ಚಂದ್ರಶೇಖರ ಪ್ರಭು, ಗ್ರಾಮದಲ್ಲಿ ನಾಯಿಗಳ ಉಪಟಳ ಜಾಸ್ತಿಯಾಗುತ್ತಿದ್ದು ಬಹಳ ಸಮಸ್ಯೆಯಾಗುತ್ತಿದೆ. ಇದಕ್ಕೆ ಸಂತಾನ ಹರಣ ಶಸ್ತ್ರಚಿಕಿತ್ಸೆ ಮಾಡಬೇಕು ಎಂದರು. ಉತ್ತರಿಸಿದ ಪಶುಸಂಗೋಪನೆ ಇಲಾಖೆ ಡಾ. ಪ್ರಕಾಶ್, ಅದಕ್ಕೆ ಅಧಿಕ ವೆಚ್ಚ ತಗಲುತ್ತದೆ. ತಾಲೂಕಿನಲ್ಲಿ ಆಯೋಜಿಸಲಾಗುವ ಶಿಬಿರದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಬಹುದು ಎಂದರು.
ನಿಮ್ಮೆಲ್ಲರ ಸಹಕಾರದಿಂದ ಕ್ಷಯರೋಗ ಮುಕ್ತ ಗ್ರಾ.ಪಂ. ಎಂದು ಕಂಚಿನ ಪದಕ ಪಡೆದು ಇದೀಗ ಬೆಳ್ಳಿ ಪದಕಕ್ಕೆ ಆಯ್ಕೆಯಾಗಿದೆ ಎಂದು ಆರೋಗ್ಯ ಇಲಾಖೆಯ ಸಿ.ಎಚ್.ಒ. ಛಲವಾದಿ ಲಕ್ಷ್ಮೀ ಹೇಳಿದರು. ಆರೋಗ್ಯ ಇಲಾಖೆ ಸಿಬ್ಬಂದಿಗಳು ಉತ್ತಮ ರೀತಿಯಲ್ಲಿ ಸೇವೆ ನೀಡುತ್ತಿದ್ದಾರೆ. ಮುಂದೆ ಚಿನ್ನದ ಪದಕ ಪಡೆಯುವಂತಾಗಲಿ ಎಂದು ವೆಂಕಟ್ರಮಣ ಬೋರ್ಕರ್ ಆಶಿಸಿದರು.
ನಿಡ್ಪಳ್ಳಿಯಲ್ಲಿ ನಿರ್ಮಿಸಿರುವ ಅಂಬೇಡ್ಕರ್ ಭವನದ ಕಟ್ಟಡ ಮಾತ್ರ ಪೂರ್ತಿಯಾಗಿದ್ದು ಅವಶ್ಯಕವಾದ ನೀರಿನ ವ್ಯವಸ್ಥೆ ಶೌಚಾಲಯ ಮೊದಲಾದ ವ್ಯವಸ್ಥೆ ಆಗದಿರುವುದರಿಂದ ಅದನ್ನು ಒದಗಿಸುವಂತೆ ಗ್ರಾಮಸ್ಥ ಕೃಷ್ಣ ಒತ್ತಾಯಿಸಿದರು.
ಮನೆ ನಿವೇಶನಕ್ಕಾಗಿ ನಿಡ್ಪಳ್ಳಿ ಗ್ರಾಮದವರಲ್ಲದೆ ಹೊರ ಗ್ರಾಮದವರೂ ಅರ್ಜಿ ಸಲ್ಲಿಸಿದ್ದಾರೆ ಎಂದು ಪಿಡಿಒ ಸಭೆಯ ಗಮನಕ್ಕೆ ತಂದರು. ಪಂಚಾಯತ್ ನಿ.ಪೂ. ಸದಸ್ಯರಾದ ಅವಿನಾಶ್ ರೈ, ಸತೀಶ್ ಶೆಟ್ಟಿ, ಬಾಲಚಂದ್ರ ನಾಯ್ಕ ಮತ್ತಿತರರಿದ್ದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಂದನ ವಿ. ಶೆಟ್ಟಿ, ಗ್ರಾಮ ಲೆಕ್ಕಾಕಾರಿ ಸುನೀತಾ ಮಾಹಿತಿ ನೀಡಿದರು. ಅರಣ್ಯಪಾಲಕ ಸುನಿಲ್ ಉಪಸ್ಥಿತರಿದ್ದರು. ಪಂ. ಸಿಬ್ಬಂದಿ ರೇವತಿ ವರದಿಯನ್ನು, ಸಂಶೀನಾ ವಾರ್ಡ್ ಸಭೆಯಲ್ಲಿ ಬಂದ ಬೇಡಿಕೆಗಳ ಪಟ್ಟಿ ವಾಚಿಸಿದರು. ಪಿಡಿಒ ಜಯಪ್ರಕಾಶ್ ಎಂ. ಸ್ವಾಗತಿಸಿ, ಸಿಬ್ಬಂದಿ ಜಯ ಕುಮಾರಿ ವಂದಿಸಿದರು. ಸಿಬ್ಬಂದಿ ವಿನೀತ್ ಕುಮಾರ್, ಗ್ರಂಥ ಪಾಲಕಿ ಪವಿತ್ರ ಜೆ., ಪಶು ಸಖಿ ತೇಜಸ್ವಿನಿ, ಸ್ಥಳೀಯ ಸಂಪನ್ಮೂಲ ವ್ಯಕ್ತಿ ಚಿತ್ರಕಲಾ ಸಹಕರಿಸಿದರು.

> **ತೆರಿಗೆ ಪಾವತಿಸಿ**
> ಗ್ರಾಮಸ್ಥರು ಮನೆ ತೆರಿಗೆ, ನೀರಿನ ತೆರಿಗೆ ಕ್ರಮವತ್ತಾಗಿ ಪಾವತಿಸಿ ಗ್ರಾಮದ ಅಭಿವೃದ್ಧಿಗೆ ಸಹಕರಿಸಬೇಕು. ಇಲ್ಲಿ ಪ್ರಧಾನ ಮಂತ್ರಿ ವಂದನ್ ಯೋಜನೆ ಆರಂಭ ಮಾಡುವ ಯೋಜನೆ ಇದೆ. ಇದರಿಂದ ಸುಮಾರು 20 ಮಂದಿಗೆ ಉದ್ಯೋಗ ಲಭಿಸಲಿದೆ. ಬಿಲ್ಲು ಸಂಗ್ರಹಿಸಲು ಸ್ವಾದಂ ತಂತ್ರಾಂಶ ಅಳವಡಿಸಲಾಗಿದ್ದು, ಗ್ರಾಮದ ಅಭಿವೃದ್ಧಿ ಕಾರ್ಯಗಳಲ್ಲಿ ಗ್ರಾಮಸ್ಥರು ಸಹಕಾರ ನೀಡಬೇಕು.
> ● ಜಯಪ್ರಕಾಶ್ , ಪಿಡಿಒ, ನಿಡ್ಪಳ್ಳಿ ಗ್ರಾ.ಪಂ

ದೊರಕದ ವೇತನ: ನೀರಾವರಿ ಕಚೇರಿಯ ಎದುರು ಗುತ್ತಿಗೆ ಸಿಬ್ಬಂದಿಗಳಿಂದ ಪ್ರತಿಭಟನೆ



ಕುಶಾಲನಗರ: ಕಳೆದ ಮೂರು ತಿಂಗಳುಗಳಿಂದ ವೇತನ ದೊರಕದ ಹಿನ್ನೆಲೆಯಲ್ಲಿ ಹಾರಂಗಿ ಜಲಾಶಯದ ಉದ್ಯಾನವನ ನಿರ್ವಹಣೆಯ ಕಾರ್ಯದಲ್ಲಿ ತೊಡಗಿರುವ ಗುತ್ತಿಗೆ ಆಧಾರದ ಸಿಬ್ಬಂದಿಗಳು ಗುರುವಾರ ಕೆಲಸ ಸ್ಥಗಿತಗೊಳಿಸಿ ಹಾರಂಗಿ ನೀರಾವರಿ ನಿಗಮದ ಕಾರ್ಯಪಾಲಕ ಅಭಿಯಂತರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.
ಹಾರಂಗಿ ಉದ್ಯಾನವನ , ಸಂಗೀತ ಕಾರಂಜಿ ನಿರ್ವಹಣೆ, ಮುಖ್ಯ ದ್ವಾರದಲ್ಲಿ ಟಿಕೆಟ್ ಹಂಚುವಿಕೆ ಸೇರಿದಂತೆ ಇತರೆ ಕೆಲಸಗಳನ್ನು ನಿರ್ವಹಿಸುವ ಗುತ್ತಿಗೆ ಆಧಾರದ 20 ಸಿಬ್ಬಂದಿಗಳು ಕೂಲಿ ಕಾರ್ಮಿಕರು ಮತ್ತು ಬಡ ಕುಟುಂಬದಿಂದ ಬಂದವರಾಗಿದ್ದು ಕಳೆದ ಮೂರು ತಿಂಗಳುಗಳಿಂದ ಗುತ್ತಿಗೆದಾರರು ವೇತನ ಪಾವತಿಸಿಲ್ಲ ಎನ್ನಲಾಗಿದೆ.
ಕೆಲಸ ಸ್ಥಗಿತಗೊಳಿಸಿದ ಸಿಬ್ಬಂದಿ ಗಳು ಹಾರಂಗಿ ನೀರಾವರಿ ನಿಗಮದ ಕಾರ್ಯ ಪಾಲಕ ಅಭಿಯಂತರರ ಕಚೇರಿ ಎದುರು ಪ್ರತಿಭಟನೆ ನಡೆಸುವ ಮೂಲಕ ಸಂಬಳ ನೀಡುವಂತೆ ಸಂಬಂಧಿಸಿದಂತೆ ಟೆಂಡರ್‌ದಾರರಿಗೆ ಇಲಾಖೆ ಮೂಲಕ ಒತ್ತಾಯಿಸಿದರು.
ಇದಕ್ಕೆ ಸಂಬಂಧಿಸಿದಂತೆ ಹಾರಂಗಿ ನೀರಾವರಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಐ.ಕೆ. ಪುಟ್ಟಸ್ವಾಮಿ ಮಾತನಾಡಿ, ಈಗಾಗಲೇ ಟೆಂಡರ್‌ದಾರರ ಗಮನಕ್ಕೆ ತರಲಾಗಿದೆ. ನಿಗಮದಿಂದ ಹಣ ಬಿಡುಗಡೆಗೊಂಡ ತಕ್ಷಣ ನೀಡಲಾಗುವುದು ಎಂದರು.

ಗುತ್ತಿಗೆ ಸಿಬ್ಬಂದಿಗಳ ಸಮಸ್ಯೆಗೆ ಸ್ಪಂದಿಸಿ

ಗುತ್ತಿಗೆ ಸಿಬ್ಬಂದಿಗಳ ಸಮಸ್ಯೆಗೆ ಇಲಾಖೆಯರು ಸ್ಪಂದಿಸುವಂತೆ ಸ್ಥಳೀಯರಾದ ಕೂಡುಮಂಗಳೂರು ಗ್ರಾ.ಪಂ.ಮಾಜಿ ಅಧ್ಯಕ್ಷ ಭಾಸ್ಕರ್ ನಾಯಕ್ ಹಾಗೂ ಸದಸ್ಯ ಮಣಿ ಹಾಜರಿದ್ದು ಆಗ್ರಹಿಸಿದರು. ಗುತ್ತಿಗೆ ಸಿಬ್ಬಂದಿಗಳಾದ ಅನಂತ, ಪೂರ್ಣೇಶ್, ಹರೀಶ್, ರಾಣಿ, ಅಂಜಲಿ, ವೆಂಕಮ್ಮ ಮತ್ತಿರರಿದ್ದರು.

ಮಾ.1ರಿಂದ ಮಂಗಳೂರು-ಮಸ್ಕತ್ ನೇರ ವಿಮಾನಯಾನ ಸೇವೆ ಪುನರಾರಂಭ: ಚೌಟ

ಮಂಗಳೂರು: ದಕ್ಷಿಣ ಕನ್ನಡ, ಉಡುಪಿ ಹಾಗೂ ನೆರೆಯ ಕೇರಳ ರಾಜ್ಯದ ಪ್ರಯಾಣಿಕರು ಮತ್ತು ಅನಿವಾಸಿ ಭಾರತೀಯರ ಬಹುಕಾಲದ ಬೇಡಿಕೆಯಂತೆ ಮಂಗಳೂರು ಮತ್ತು ಮಸ್ಕತ್ ನಡುವಿನ ನೇರ ವಿಮಾನಯಾನ ಸೇವೆ ಮಾ. 1 ರಿಂದ ಅಧಿಕೃತವಾಗಿ ಪುನರಾರಂಭಗೊಳ್ಳಲಿದೆ.
ಏರ್ ಇಂಡಿಯಾ ಎಕ್ಸ್‌ಪ್ರೆಸ್ ವತಿಯಿಂದ ಈ ವಿಮಾನ ಹಾರಾಟ ನಡೆಯಲಿದ್ದು, ಕರಾವಳಿ ಭಾಗದಿಂದ ಹೆಚ್ಚಿನ ಸಂಖ್ಯೆಯ ಜನರು ಉದ್ಯೋಗ ಮತ್ತು ವ್ಯಾಪಾರ ನಿಮಿತ್ತ ಮಸ್ಕತ್‌ಗೆ ಪ್ರಯಾಣಿಸುತ್ತಿರುವ ಹಿನ್ನೆಲೆಯಲ್ಲಿ ಈ ಸೇವೆಗೆ ಹೆಚ್ಚಿನ ಒತ್ತಾಯ ಕೇಳಿಬಂದಿತ್ತು. ಈ ಹಿನ್ನೆಲೆ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು ಕೇಂದ್ರ ನಾಗರಿಕ ವಿಮಾನಯಾನ ಸಚಿವಾಲಯಕ್ಕೆ ಪತ್ರ ವ್ಯವಹಾರ ನಡೆಸಿ, ವಿಮಾನಯಾನ ಪುನಾರಂಭಿಸುವಂತೆ ಮನವಿ ಸಲ್ಲಿಸಿದ್ದರು.
ಸದ್ಯದ ವೇಳಾಪಟ್ಟಿಯ ಪ್ರಕಾರ, ವಾರದಲ್ಲಿ ಎರಡು ದಿನ ಅಂದರೆ ಪ್ರತಿ ಭಾನುವಾರ , ಮಂಗಳವಾರ ಏರ್ ಇಂಡಿಯಾ ಎಕ್ಸ್ ಪ್ರೆಸ್ ವಿಮಾನ ಹಾರಾಟ ನಡೆಸಲಿದೆ. ಈ ನೇರ ಸೇವೆಯಿಂದ ಪ್ರಯಾಣದ ಸಮಯ ಉಳಿತಾಯವಾಗುವುದಲ್ಲದೆ, ಅನಿವಾಸಿ ಭಾರತೀಯರಿಗೆ ತಮ್ಮ ಊರುಗಳಿಗೆ ನೇರ ಪ್ರಯಾಣಿಸಲು ಅನುಕೂಲವಾಗಲಿದೆ.

ಪ್ರಧಾನಿ ಮೋದಿಗೆ ಧನ್ಯವಾದ

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಂಸದರು 'ಮಂಗಳೂರು-ಮಸ್ಕತ್' ನೇರ ವಿಮಾನಯಾನ ಸೇವೆ ಅಚಾನಕ್ ಆಗಿ ಸ್ಥಗಿತಗೊಂಡ ಕಾರಣ ಮಸ್ಕತ್‌ನಲ್ಲಿ ನೆಲೆಸಿರುವ ನಮ್ಮ ಕರಾವಳಿ ಭಾಗದ ಸಾವಿರಾರು ಪ್ರಯಾಣಿಕರಿಗೆ ತೀವ್ರ ಸಂಕಷ್ಟ ಎದುರಾಗಿತ್ತು. ಮಸ್ಕತ್‌ನಿಂದ ಮಂಗಳೂರಿಗೆ ಬರಬೇಕಾದವರು ದೆಹಲಿ, ಮುಂಬೈ ಅಥವಾ ಕಣ್ಣೂರು ಮೂಲಕ ಸುತ್ತಿ ಬಳಸಿ ಪ್ರಯಾಣಿಸಬೇಕಾದ ಅನಿವಾರ್ಯತೆ ಇತ್ತು. ಈ ಗಂಭೀರ ಸಮಸ್ಯೆ ಮನಗಂಡು ನಾವು ನಡೆಸಿದ ನಿರಂತರ ಪ್ರಯತ್ನ , ಮನವಿಗೆ ಸ್ಪಂದಿಸಿ, ಮಾರ್ಚ್ 1 ರಿಂದ ಈ ಸೇವೆ ಪುನರಾರಂಭಿಸಲು ಕ್ರಮ ಕೈಗೊಂಡ ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರಕ್ಕೆ ಹಾಗೂ ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಕಿಂಜರಾಪು ಅವರಿಗೆ ಸಮಸ್ತ ಅನಿವಾಸಿ ಕರಾವಳಿಗರ ಪರ ನಾನು ಧನ್ಯವಾದ ಅರ್ಪಿಸುತ್ತೇನೆ. ಈ ನೇರ ವಿಮಾನ ಸೇವೆ ನಮ್ಮ ದಕ್ಷಿಣ ಕನ್ನಡ, ಉಡುಪಿ ಹಾಗೂ ಕೇರಳದ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಮಾಡಿಕೊಡಲಿದೆ ಎಂದು ಹೇಳಿದ್ದಾರೆ.

ಧರ್ಮಾಚರಣೆ ಬದುಕು ನಡೆಸುವುದು ಇಂದಿನ ಅತ್ಯಗತ್ಯ: ಮಾಣಿಲ ಶ್ರೀ



ವಿಟ್ಲ: ಯುವಜನಾಂಗ ಜಾಗೃತಗೊಂಡು, ಮತಾಂತರ, ಧರ್ಮದ ಮೇಲಣ ಆಕ್ರಮಣಗಳ ತಡೆಯಬೇಕಾಗಿದೆ. ಕರ್ಮ ಸಿದ್ಧಾಂತ ಅಳವಡಿಸಿಕೊಂಡು ಧರ್ಮದ ಆಚರಣೆ ಬದುಕು ನಡೆಸುವ ಅಗತ್ಯ ಏದೆ. ಮನೋದೌರ್ಬಲ್ಯ ಮೀರಿ ನಿಂತಾಗ ಸಮಾಜದ ಉದ್ಧಾರ ಸಾಧ್ಯ ಎಂದು ಮಾಣಿಲ ಶ್ರೀಧಾಮ ಶ್ರೀ ದುರ್ಗಾಮಹಾಲಕ್ಷ್ಮೀ ಕ್ಷೇತ್ರದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಹೇಳಿದರು.
ಮಾಣಿಲ ಶ್ರೀಧಾಮ ಶ್ರೀ ದುರ್ಗಾ ಮಹಾಲಕ್ಷ್ಮೀ ಕ್ಷೇತ್ರದಲ್ಲಿ ಶ್ರೀ ದುರ್ಗಾ ಮಹಾಲಕ್ಷ್ಮೀ, ವಿಠೋಭಾ ರುಕುಮಾಯಿ ಮತ್ತು ನಾಗದೇವರ ಪ್ರತಿಷ್ಠಾ ವರ್ಧಂತಿ ಪ್ರಯುಕ್ತ ನಡೆದ ಧರ್ಮಸಭೆಯನ್ನು ಉದ್ಘಾಟಿಸಿ ಆಶೀರ್ವಚನ ನೀಡಿದರು.
ಆರೋಗ್ಯ ಸಮಸ್ಯೆ ಸಮಾಜವನ್ನು ಕಾಡುತ್ತಿದ್ದು ಋತು ಸಂಬಂಧಿ, ಸತ್ವಯುತ ಆಹಾರ ಸೇವನೆ ಅಗತ್ಯ ಇದೆ. ದಿನದಲ್ಲಿ ಒಮ್ಮೆಯಾದರೂ ಕುಟುಂಬದ ಸದಸ್ಯರು ಒಟ್ಟಿಗೆ ಕುಳಿತು ಆಹಾರ ಸೇವನೆ ಮಾಡುವುದನ್ನು ರೂಢಿಸಿಕೊಳ್ಳಬೇಕು. ಡ್ರಗ್ಸ್ ದಂಧೆ, ಮಾದಕ ದ್ರವ್ಯ ಸೇವನೆ ಮೊದಲಾದ ಅನಾಚಾರಗಳ ಬಗ್ಗೆ ಎಚ್ಚೆತ್ತುಕೊಳ್ಳಬೇಕಾಗಿದೆ ಎಂದರು.
ಮಾಜಿ ಸಚಿವ ಕೃಷ್ಣ ಜೆ. ಪಾಲೇಮಾರ್, ಮಂಗಳೂರು ಕಾಲೇಜು ಪ್ರಾಂಶುಪಾಲ ವಿಠಲ ಎ., ಪ್ರಮುಖರಾದ ಜಗದೀಶ್ ವಾಲ್ತಾಜೆ, ಸೂರಜ್ ಮಂಗಳೂರು, ಪ್ರದೀಪ್ ನರಿಕೊಂಬು, ಸಂತೋಷ್, ಮಹಾಲಕ್ಷ್ಮೀ ಮಹಿಳಾ ಮಂಡಳಿ ಗೌರವಾಧ್ಯಕ್ಷೆ ರೇವತಿ ಪೆರ್ನೆ, ಅಧ್ಯಕ್ಷೆ ವನಿತಾ ವಿ. ಶೆಟ್ಟಿ ಮತ್ತಿತರರಿದ್ದರು.
ನಳಿನಿ ಪ್ರಾರ್ಥಿಸಿ, ಟ್ರಸ್ಟಿ ಚಂದ್ರಶೇಖರ ಮೂಲ್ಯ ಸ್ವಾಗತಿಸಿದರು. ಧಾರ್ಮಿಕ ಪರಿಷತ್ ಸದಸ್ಯ ದೇವಪ್ಪ ಕುಲಾಲ್ ಕಾರ್ಯಕ್ರಮ ನಿರೂಪಿಸಿದರು.

ವಿವಿಧ ಧಾರ್ಮಿಕ ಕಾರ್ಯಕ್ರಮ:

ಬೆಳಿಗ್ಗೆ 12 ಕಾಯಿ ಗಣಯಾಗ, ನವಗ್ರಹ ಶಾಂತಿ ಹವನ, ಚಂಡಿಕಾ ಯಾಗ, ದುರ್ಗಾ ಮಹಾಲಕ್ಷ್ಮೀ, ವಿಠೋಭಾ ರುಕುಮಾಯಿ, ನಾಗ ಹಾಗೂ ದೈವಗಳ ಸಾನಿಧ್ಯದಲ್ಲಿ ನವಕ ಕಲಶ ನಡೆಯಿತು. ಚಂಡಿಕಾ ಯಾಗದ ಪೂರ್ಣಾಹುತಿ, ಪ್ರಸನ್ನ ಮಹಾಪೂಜೆ ಜರಗಿತು. ಸಂಜೆ ದುರ್ಗಾ ನಮಸ್ಕಾರ ಪೂಜೆ ನಡೆಯಿತು. ಶ್ರೀಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ವೈದಿಕ ಕಾರ್ಯಕ್ರಮಗಳು ನಡೆದವು. ಕಟೀಲು ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ದಶಾವತಾರ ಮೇಳದಿಂದ 'ಶ್ರೀ ದೇವಿ ಮಹಾತ್ಮೆ' ಯಕ್ಷಗಾನ ಬಯಲಾಟ ಜರಗಿತು.

ಪೆರ್ನೆ ಕಾಲೇಜಿನಲ್ಲಿ ಅಕ್ಷಯ ಕಾಲೇಜಿನ ವಾರ್ಷಿಕ ವಿಶೇಷ ಶಿಬಿರ, ಸೇವಾ ಪುರಸ್ಕಾರ



ಪುತ್ತೂರು: ಸಂಪ್ಯದ ಅಕ್ಷಯ ಕಾಲೇಜಿನ ನೇತೃತ್ವದಲ್ಲಿ 'ನನ್ನ ಭಾರತಕ್ಕಾಗಿ ಯುವ ಜನತೆ-ಡಿಜಿಟಲ್ ಸಾಕ್ಷರತೆಗಾಗಿ ಯುವ ಜನತೆ' ಎಂಬ ಶಿರೋನಾಮೆಯಲ್ಲಿ ಪೆರ್ನೆಯ ಆಯೋಧ್ಯಾ ನಗರದ ಶ್ರೀ ರಾಮಚಂದ್ರ ಪ.ಪೂ. ವಿದ್ಯಾಲಯದಲ್ಲಿ ಏರ್ಪಡಿಸಲಾಗಿರುವ ವಾರ್ಷಿಕ ವಿಶೇಷ ಶಿಬಿರದಲ್ಲಿ ಸೇವಾ ಪುರಸ್ಕಾರ ನೆರವೇರಿತು.

ಅಕ್ಷಯ ಸೇವಾ ಪುರಸ್ಕಾರ ಪ್ರದಾನ

ವಿವಿಧ ಕ್ಷೇತ್ರಗಳ ಸಾಧಕರ ಸೇವೆ ಗುರುತಿಸಿ ಅಕ್ಷಯ ಸೇವಾ ಪುರಸ್ಕಾರ ಪ್ರದಾನ ಮಾಡಲಾಯಿತು. ದೈವ ನರ್ತಕ ಲೋಕಯ್ಯ ಶೇರ (ಜನಪದ ಕ್ಷೇತ್ರ), ಪ್ರಹ್ಲಾದ್ ಶೆಟ್ಟಿ ಜೆ. (ಶಿಕ್ಷಣ) ಹರೀಶ್ ಪೆರ್ಗಡೆ (ಸಮಾಜ ಸೇವೆ), ಮೋನಪ್ಪ ಗೌಡ ಕಳೆಂಜ (ಕೃಷಿ), ಡಾ. ಯಾಕೂಬ್ ಕಡಂಬು(ವೈದ್ಯಕೀಯ), ವಿದ್ಯಾ ಸನತ್ ಶೆಟ್ಟಿ (ಕಲೆ), ಜಯಾನಂದ ಪೆರಾಜೆ (ಸಾಹಿತ್ಯ), ನಿವೃತ್ತ ಸೈನಿಕ ವಿದ್ಯಾಧರ್ ಪೂಜಾರಿ (ರಾಷ್ಟ್ರ ಸೇವೆ), ರೋಹಿಣಿ ಬಿ. (ಕ್ರೀಡೆ), ಬಾಲಕೃಷ್ಣ ಸಾಲ್ಯಾನ್(ಸಮಾಜಮುಖಿ ಸೇವೆ) ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.
ಪೆರ್ನೆಯ ಹಾಲು ಉತ್ಪಾದಕರ ಸಹಕಾರಿ ಸಂಘದ ಅಧ್ಯಕ್ಷ ನವೀನ್ ಪದಬರಿ ಅಧ್ಯಕ್ಷತೆಯನ್ನು ವಹಿಸಿ ಶುಭ ಹಾರೈಸಿದರು. ಅತಿಥಿಗಳಾಗಿ ಗೋಕರ್ಣನಾಥೇಶ್ವರ ಶಿಕ್ಷಣ ಸಂಸ್ಥೆಗಳ ನಿವೃತ್ತ ಡೀನ್ ಡಾ. ಉಮ್ಮಪ್ಪ ಪೂಜಾರಿ ಪಿ., ವಾಣಿಜ್ಯ ತೆರಿಗೆ ಇಲಾಖೆಯ ನಿವೃತ್ತ ಅಧಿಕಾರಿ ಗಂಗಾಧರ್ ರೈ ನಿಸರ್ಗ ವಡ್ಯದಗಯ ಪೆರ್ನೆ, ಯುವ ವಾಹಿನಿಯ ಮಾಣಿ ಘಟಕದ ಅಧ್ಯಕ್ಷ ಶಿವರಾಜ್ ಪಿ.ಆರ್. ಶುಭಾಶಂಸನೆಗೈದರು. ಅಕ್ಷಯ ಕಾಲೇಜಿನ ಪ್ರಾಂಶುಪಾಲ ಸಂಪತ್ ಕೆ. ಪಕ್ಕಳ, ಅಕ್ಷಯ ಸಮೂಹ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ಟ್ರಸ್ಟಿ ಡಾ. ಅಕ್ಷಯ್ ನಡುಬೈಲು ವೇದಿಕೆಯಲ್ಲಿ ಉಪಸ್ಥಿತರಿದ್ದರು.
ಲಿಖಿತ ಸ್ವಾಗತಿಸಿ, ವೈಭವಿ ವಂದಿಸಿದರು. ಕೃಪ ಕೆ. ಸನ್ಮಾನ ಪತ್ರವನ್ನು ವಾಚಿಸಿದರು. ವೀಕ್ಷಾ ನಿರೂಪಿಸಿದರು. ವಿದ್ಯಾರ್ಥಿಗಳಿಂದ ಅಕ್ಷಯ ಕಲಾ ವೈಭವ 'ವಿಶ್ವ ಗುರು ಭಾರತ' ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕೋಡಿ ಬ್ಯಾರೀಸ್ ಪ್ರಥಮ ದರ್ಜೆ ಕಾಲೇಜು -ಎಂಎಸ್‌ಡಿಸಿ ನಡುವೆ ಶೈಕ್ಷಣಿಕ ಒಪ್ಪಂದ



ಕುಂದಾಪುರ: ಕೋಡಿ ಬ್ಯಾರೀಸ್ ಪ್ರಥಮ ದರ್ಜೆ ಕಾಲೇಜು ಮತ್ತು ಮಣಿಪಾಲದ ಡಾ. ಟಿ.ಎಂ.ಎ ಪೈ ಫೌಂಡೇಶನ್‌ನ ಅಂಗಸಂಸ್ಥೆಯಾದ ಮಣಿಪಾಲ್ ಸ್ಕಿಲ್ ಡೆವಲಪ್‌ಮೆಂಟ್ ಸೆಂಟರ್ (ಎಂ.ಎಸ್.ಡಿ.ಸಿ) ನಡುವೆ ಶೈಕ್ಷಣಿಕ ಒಪ್ಪಂದದ ಸಹಿ ಸಮಾರಂಭ ಬ್ಯಾರೀಸ್ ನಾಲೆಡ್ಜ್ ಕ್ಯಾಂಪಸ್‌ನ ಬೀಹೈವ್ ಕನ್ವೆನ್ಷನ್ ಹಾಲ್‌ನಲ್ಲಿ ಜರುಗಿತು.
ಅತಿಥಿಯಾಗಿದ್ದ ಎಂ.ಎಸ್.ಡಿ.ಸಿ ಮಣಿಪಾಲದ ಅಧ್ಯಕ್ಷ ಬ್ರಿಗೇಡಿಯರ್ ಡಾ. ಸುರ್ಜಿತ್ ಸಿಂಗ್ ಪಬ್ಲಾ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೌಶಲ್ಯದ ಮಹತ್ವದ ಬಗ್ಗೆ ಮಾತನಾಡಿ, ಭವಿಷ್ಯದಲ್ಲಿ ಜಿಎಸ್ಟಿ, ಲೆಕ್ಕಪತ್ರ ನಿರ್ವಹಣೆ ಮತ್ತು ವಿಜ್ಞಾನ, ವೀಡಿಯೊ, ವೆಬ್ ವಿನ್ಯಾಸ ಮತ್ತು ಗ್ರಾಫಿಕ್ಸ್, ಸೈಬರ್ ಭದ್ರತೆ, ಇನ್ನೂ ಹೆಚ್ಚಿನ ಕೋರ್ಸ್‌ಗಳನ್ನು ನಿಮಗೆ ಅವಕಾಶ ಸಿಕ್ಕಾಗಲೆಲ್ಲಾ ಸದುಪಯೋಗ ಮಾಡಿಕೊಳ್ಳಿ, ಏಕಕಾಲದಲ್ಲಿ ಪದವಿಯೊಂದಿಗೆ ಹಲವಾರು ಆನ್‌ಲೈನ್ ಕೋರ್ಸ್‌ಗಳನ್ನು ನಾವು ಪಡೆದುಕೊಳ್ಳಬಹುದು ಎಂದರು.
ಅಧ್ಯಕ್ಷತೆಯನ್ನು ಬ್ಯಾರೀಸ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಟ್‌ನ ಅಧ್ಯಕ್ಷ ಅಬ್ದುಲ್ ರೆಹಮಾನ್ ಬ್ಯಾರಿ ವಹಿಸಿದ್ದರು. ಎಂಎಸ್‌ಡಿಸಿ ಮಣಿಪಾಲದ ರಿಜಿಸ್ಟ್ರಾರ್ ಡಾ. ಅಂಜಯ್ಯ ದೇವಿನೇನಿ, ಸ್ಕೂಲ್ ಆಫ್ ಐಟಿ ಸ್ಕಿಲ್ಸ್‌ನ ಮುಖ್ಯಸ್ಥೆ ರಾಜಲಕ್ಷ್ಮೀ ಶುಭಾಶಂಸನೆಗೈದರು. ಕಾಲೇಜಿನ ಪ್ರಾಂಶುಪಾಲರಾದ ಶಬೀನಾ ಎಚ್., ಬ್ಯಾರೀಸ್ ಸಮೂಹ ಸಂಸ್ಥೆಯ ನಿರ್ದೇಶಕಿ ಅಶ್ವಿನಿ ಶೆಟ್ಟಿ, ಉಪ ಪ್ರಾಂಶುಪಾಲೆ ಆಫ್ರಿನ್ ಖಾನ್, ಗಣಕ ವಿಭಾಗದ ಮುಖ್ಯಸ್ಥೆ ನೂತನ್ ಎಸ್., ವಾಣಿಜ್ಯ ವಿಭಾಗದ ಮುಖ್ಯಸ್ಥೆ ವಿನುತ ಉಪಸ್ಥಿತರಿದ್ದರು.
ವಿದ್ಯಾರ್ಥಿನಿ ಆಯಿಷಾ ಇಸ್ಬಾ ಸ್ವಾಗತಿಸಿ, ಬ್ಯಾರೀಸ್ ಸಮೂಹ ಸಂಸ್ಥೆಗಳ ಟ್ರಸ್ಟಿ ಡಾ. ಆಸಿಫ್ ಬ್ಯಾರಿ ಪ್ರಸ್ತಾವನೆಗೈದರು, ಕಾರ್ಯಕ್ರಮ ಸಂಯೋಜಕ ನಾಗರಾಜ್, ಜಯಂತ್ ಶೆಟ್ಟಿಗಾರ್ , ಅಹ್ಮದ್ ಖಲೀಲ್ ನಿರ್ವಹಿಸಿದರು. ವಿದ್ಯಾರ್ಥಿನಿ ಮರಿಯಂ ಆಯುಬ್ ನಿರೂಪಿಸಿದರು. ವಿದ್ಯಾರ್ಥಿನಿ ಸುಹಾನ ಪರ್ವೀನ್ ವಂದಿಸಿದರು.

ರಾಮಕೃಷ್ಣ ಮಠ: ಯೋಗ ಶಿಬಿರ ಸಂಪನ್ನ



ಮಂಗಳೂರು: ನಗರದ ಮಂಗಳಾದೇವಿ ಸಮೀಪದಲ್ಲಿರುವ ಶ್ರೀ ರಾಮಕೃಷ್ಣ ಮಠದಲ್ಲಿ ಹಿರಿಯ ಯೋಗಗುರು ಗೋಪಾಲಕೃಷ್ಣ ದೇಲಂಪಾಡಿ ಅವರ ಮಾರ್ಗದರ್ಶನದಲ್ಲಿ ಫೆಬ್ರವರಿ ತಿಂಗಳ ಎರಡು ವಾರಗಳ ಕಾಲ ಜರಗಿದ ಯೋಗ ಶಿಬಿರ ಸಮಾರೋಪಗೊಂಡಿತು.
ಈ ಸಂದರ್ಭ ಮಾತನಾಡಿದ ದೇಲಂಪಾಡಿ, ಯೋಗವು ಮೂಲತಃ ಆಧ್ಯಾತ್ಮದ ತಳಹದಿ ಹೊಂದಿರುವ ಒಂದು ಸೂಕ್ಷ್ಮವಾದ ವಿಜ್ಞಾನದ ಶಾಖೆಯಾಗಿದ್ದು, ದೇಹ ಮತ್ತು ಮನಸ್ಸುಗಳ ಜೊತೆ ಹೊಂದಾಣಿಕೆಯನ್ನು ತರಲು ಬೆಳಕು ಹರಡುವಂತದ್ದು. ಯೋಗ ಮಾನವರಿಗೆ ದೈಹಿಕ ಮಾನಸಿಕ ಮತ್ತು ಆಧ್ಯಾತ್ಮಿಕ ಬೆಂಬಲ ನೀಡಿದೆ ಎಂದರು. ಆಸನಗಳ ಅಭ್ಯಾಸವು ಸೆಳೆತಕ್ಕೆ ಸಂಬಂಧಿಸಿದ ಅಸ್ವಸ್ಥತೆಯನ್ನು ನಿವಾರಿಸಲು ಸಹಾಯ ಮಾಡುತ್ತದೆ. ಅಂಗಾಂಶಗಳಿಗೆ ಆಮ್ಲಜನಕಯುಕ್ತ ರಕ್ತದ ಹರಿವನ್ನು ಹೆಚ್ಚಿಸಲು ಕೆಲಸ ಮಾಡುತ್ತದೆ. ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಮಾನಸಿಕ ಗಮನವನ್ನು ಹೆಚ್ಚಿಸುತ್ತದೆ ಎಂದು ಅವರು ತಿಳಿಸಿದರು.
ಶಿಬಿರಾರ್ಥಿಯಾಗಿ ಮಂಗಳೂರು ವಿಶ್ವವಿದ್ಯಾಲಯ ನಿವೃತ್ತ ಕುಲಸಚಿವ 84 ವರ್ಷದ ಡಾ. ಜನಾರ್ದನ ಅನಿಸಿಕೆಗಳನ್ನು ತಿಳಿಸಿದರು. ದೇಲಂಪಾಡಿ ಶಿಷ್ಯರಾದ ಸುಮಾ ಹಾಗೂ ಚಂದ್ರಹಾಸ ಬಾಳ ಸಹಕರಿಸಿದರು. ಯೋಗ ತರಬೇತಿ ನೀಡಿದ ದೇಲಂಪಾಡಿ ಅವರನ್ನು ಶಿಬಿರಾರ್ಥಿಗಳು ಗೌರವಿಸಿದರು.

ಕೇರಳ ಕನ್ನಡ ಚುಟುಕು ಸಾಹಿತ್ಯ ಪರಿಷತ್‌ನ ವಾರ್ಷಿಕೋತ್ಸವ | ಕಾಸರಗೋಡು - ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನ

ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರದ್ದು: ಎಡನೀರು ಶ್ರೀ

ಕಾಸರಗೋಡು: ಪುರಾತನ ಭಾಷೆಗಳಲ್ಲೊಂದಾದ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಜವಾಬ್ದಾರಿ ನಮ್ಮೆಲ್ಲರಿಗಿದೆ. ಗಡಿನಾಡು ಕಾಸರಗೋಡಿನಲ್ಲಿ ಕನ್ನಡ ಭಾಷೆ, ಸಂಸ್ಕೃತಿಗೆ ಗದಾಪ್ರಹಾರ ಬೀಳುತ್ತಿದ್ದರೂ ಅವುಗಳನ್ನೆಲ್ಲಾ ಮೆಟ್ಟಿನಿಂತು ಕನ್ನಡ ಭಾಷೆ, ಸಂಸ್ಕೃತಿ ಉಳಿಸಲು ವಿವಿಧ ಯೋಜನೆಗಳನ್ನು ಕಾರ್ಯಗತಗೊಳಿಸುವ ಕನ್ನಡ ಭವನದ ಕನ್ನಡ ಕಾಯಕ ಅಭಿನಂದನಾರ್ಹ ಎಂದು ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಶ್ರೀಪಾದಂಗಳವರು ಹೇಳಿದ್ದಾರೆ.
ಕನ್ನಡ ಭವನ ಮತ್ತು ಗ್ರಂಥಾಲಯದ ನೇತೃತ್ವದಲ್ಲಿ ಕೇರಳ ರಾಜ್ಯ ಕನ್ನಡ ಚುಟುಕು ಸಾಹಿತ್ಯ ಪರಿಷತ್‌ನ ವಾರ್ಷಿಕೋತ್ಸವದ ಅಂಗವಾಗಿ ಕನ್ನಡ ಭವನದಲ್ಲಿ ಆಯೋಜಿಸಿದ ಕಾಸರಗೋಡು - ಕರ್ನಾಟಕ ಚುಟುಕು ಸಾಹಿತ್ಯ ಸಮ್ಮೇಳನದಲ್ಲಿ ಅವರು ಆಶೀರ್ವಚನ ನೀಡಿದರು.



ಲಕ್ಷೇಶ್ವರ ಗೋನಾಳದ ಶ್ರೀ ರಮೇಶ ಮಹಾಸ್ವಾಮಿಗಳು ಆಶೀರ್ವಚನ ನೀಡಿದರು. ಸಮ್ಮೇಳನದಲ್ಲಿ ಸ್ವಾಮೀಜಿ ದ್ವಯರಿಗೆ ಶಾಲು, ಫಲಪುಷ್ಪ, ಸ್ಮರಣಿಕೆ, ಫಲಕಗಳಿಂದ ಗೌರವಾರ್ಪಣೆ ಮಾಡಲಾಯಿತು. ಕನ್ನಡ ಭವನ ನಿರ್ದೇಶಕ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ ದೀಪ ಪ್ರಜ್ವಲನೆಗೈದರು.
ಕಾರ್ಯಕ್ರಮವನ್ನು ಕನ್ನಡ ಚುಟುಕು ಸಾಹಿತ್ಯ ಪರಿಷತ್ ದಕ್ಷಿಣ ಕನ್ನಡ ಜಿಲ್ಲಾ ಘಟಕ ಅಧ್ಯಕ್ಷ ಡಾ.ಕೊಳ್ಚಪ್ಪೆ ಗೋವಿಂದ ಭಟ್ ಉದ್ಘಾಟಿಸಿದರು. ನಾಡೋಜ ಡಾ.ಕೃಷ್ಣಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಸಾಹಿತ್ಯ ಪರಿಷತ್ತು ದ.ಕ. ಜಿಲ್ಲೆಯ ನಿಕಟಪೂರ್ವ ಅಧ್ಯಕ್ಷ ಪ್ರದೀಪ್‌ಕುಮಾರ್ ಕಲ್ಕೂರ, ಕನ್ನಡ ಕಟ್ಟಾಳು ನಂ. ವಿಜಿ ಕುಮಾರ್, ಸಾಹಿತಿ ಡಾ.ಸುರೇಶ್ ನೆಗಳಗುಳಿ, ಚುಟುಕು ಸಾಹಿತ್ಯ ಪರಿಷತ್ ದ.ಕ. ಜಿಲ್ಲೆ ಗೌರವಾಧ್ಯಕ್ಷ ಇರಾ ನೇಮು ಪೂಜಾರಿ, ಕನ್ನಡ ಭವನ ಗದಗ ಜಿಲ್ಲಾಧ್ಯಕ್ಷ ಡಾ.ಸಂ.ವೆಂ. ತಮ್ಮನ ಗೌಡ, ಜಯಾನಂದ ಪೆರಾಜೆ, ಡಾ.ಶಾಂತಾ ಪುತ್ತೂರು, ದ.ಕ.ಜಿಲ್ಲಾ ಕನ್ನಡ ಚುಟುಕು ಸಾಹಿತ್ಯ ಪರಿಷತ್‌ನ ಗೌರವಾಧ್ಯಕ್ಷೆ ಸತ್ಯವತಿ ಭಟ್ ಕೊಳಚಪ್ಪು, ಕೊಡಗು ಜಿಲ್ಲಾ ಚು.ಸಾ.ಪ. ಅಧ್ಯಕ್ಷೆ ರುಬೀನಾ ಎಂ.ಎ., ಪಿ.ವಿ.ಪ್ರದೀಪ್‌ಕುಮಾರ್, ರೇಖಾ ಸುಧೇಶ್ ರಾವ್, ಸಂಘಟನಾ ಕಾರ್ಯದರ್ಶಿ ಶಾರದಾ ಮೊಳೆಯಾರ್ ಮೊದಲಾದವರು ಉಪಸ್ಥಿತರಿದ್ದರು.
ಕನ್ನಡ ಭವನ ಸಂಸ್ಥಾಪಕ ಡಾ.ವಾಮನ್ ರಾವ್ ಬೇಕಲ್ ಪ್ರಸ್ತಾವಿಸಿ, ಕಾಸರಗೋಡು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷ ವಿರಾಜ್ ಅಡೂರು ನಿರೂಪಿಸಿದರು, ವಿಶಾಲಾಕ್ಷ ಪುತ್ರಕಳ ಸ್ವಾಗತಿಸಿದರು. ಸಮ್ಮೇಳನಕ್ಕೆ ಮೊದಲು ಭಿಕ್ಷು ಲಕ್ಷ್ಮಣಾನಂದ ಸರಸ್ವತೀ ಮಹಿಳಾ ಭಜನಾ ವೃಂದ ಅಣಂಗೂರು ಇವರಿಂದ ಭಜನೆ ಸಂಕೀರ್ತನೆ ನಡೆಯಿತು.ನಗರದ ಶ್ರೀ ಧೂಮಾವತಿ ದೈವಸ್ಥಾನ ಪರಿಸರದಿಂದ ಮೆರವಣಿಗೆ ಜರಗಿತು.

ಸಮಾರೋಪ ಸಮಾರಂಭ

ಗಡಿನಾಡ ಚೇತನ ಪ್ರಶಸ್ತಿ ಪುರಸ್ಕೃತ, ಹಿರಿಯ ಸಾಹಿತಿ ರಾಧಾಕೃಷ್ಣ ಕೆ. ಉಳಿಯತ್ತಡ್ಕ ಅಧ್ಯಕ್ಷತೆಯಲ್ಲಿ ನಡೆದ ಸಮಾರೋಪದಲ್ಲಿ ಬಿಜೆಪಿ ಕಲ್ಲಿಕೋಟೆ ವಲಯ ಅಧ್ಯಕ್ಷ ವಕೀಲ ಕೆ.ಶ್ರೀಕಾಂತ್ ಅತಿಥಿಯಾಗಿ ಭಾಗವಹಿಸಿ ಕನ್ನಡದ ಅಸ್ತಿತ್ವಕ್ಕಾಗಿ ಹೋರಾಡಿದವನ್ನು ನೆನಪಿಸಿಕೊಂಡರು. 20 ಮಂದಿ ಕವಿಗಳಿಗೆ ಚುಟುಕು ಸಿರಿ ರತ್ನ ಪ್ರಶಸ್ತಿ ನೀಡಲಾಯಿತು.

> **20 ಕವಿಗಳಿಗೆ ಪ್ರಶಸ್ತಿ ಗೌರವ**
> ಎರಡು ಪುಸ್ತಕಗಳ ಬಿಡುಗಡೆ ಹಾಗೂ 20 ಕವಿಗಳನ್ನು ಕವಿ ಕಾವ್ಯ ವಿಭೂಷಣ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಗುರುರಾಜ್ ಕಾಸರಗೋಡು ಸಾರಥ್ಯದ ಗಡಿನಾಡ ಸಾಂಸ್ಕೃತಿಕ ಕಲಾ ವೇದಿಕೆ ತಂಡ ದಿಂದ ನೃತ್ಯ ವೈಭವ ಜರಗಿತು. ವಿರಾಜ ಅಡೂರು ಅಧ್ಯಕ್ಷತೆಯಲ್ಲಿ ಸುಮಾರು 50 ಮಂದಿ ಕವಿಗಳಿಂದ ಅಂತಾರಾಜ್ಯ ಕವಿಗೋಷ್ಠಿ ನಡೆಯಿತು.

ಸುತ್ತ ಮುತ್ತ

ಇಂದು ಲಯನ್ಸ್ ಪ್ರಾಂತೀಯ ಸಮ್ಮೇಳನ

ಮಂಗಳೂರು: ಅಂತಾರಾಷ್ಟ್ರೀಯ ಲಯನ್ಸ್ ಜಿಲ್ಲೆ 317 ಡಿ ಪ್ರಾಂತ್ಯ 5ರ ಪ್ರಾಂತೀಯ ಸಮ್ಮೇಳನ 'ಪ್ರಶಾಂ' ಫೆ.28ರಂದು ಮಧ್ಯಾಹ್ನ 3.30ರಿಂದ ಮುಡಿಪು ಹೊಟೇಲ್ ಸೂರ್ಯ ಸಭಾಂಗಣದಲ್ಲಿ ನಡೆಯಲಿದೆ. ಸಮ್ಮೇಳನದಲ್ಲಿ ಕೇಮಾರು ಕ್ಷೇತ್ರದ ಶ್ರೀ ಈಶ ವಿಠಲದಾಸ ಸ್ವಾಮೀಜಿ ಆಶೀರ್ವಚನ ನೀಡುವರು. ವಿಶ್ರಾಂತ ಕುಲಪತಿ ಡಾ.ಕೆ. ಚಿನ್ನಪ್ಪ ಗೌಡ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಲಯನ್ಸ್ ಪ್ರಾಂತ್ಯ 5ರಲ್ಲಿ 2 ವಲಯಗಳಿದ್ದು, 1ನೇ ವಲಯದಲ್ಲಿ ಭೋಟಾ ಮಂಗಳೂರು, ಪೆರ್ಮನ್ನೂರು, ಮಂಗಳೂರು ಸೋಮೇಶ್ವರ ಹಾಗೂ ವಲಯ 2ರಲ್ಲಿ ಮಂಗಳಗಂಗೋತ್ರಿ, ವಿಟ್ಲ ಸಿಟಿ, ಮುಡಿಪು ಕುರ್ನಾಡು ಕ್ಲಬ್ ಒಳಗೊಂಡಿದೆ. ಭೋಟಾ ಮಂಗಳೂರು ಲಯನ್ಸ್ ಕ್ಲಬ್ ಆತಿಥ್ಯದಲ್ಲಿ ಪ್ರಾಂತೀಯ ಸಮ್ಮೇಳನ ಆಯೋಜಿಸಲಾಗಿದೆ ಎಂದು ಲಯನ್ಸ್ ಪ್ರಾಂತ್ಯ 5ರ ಪ್ರಾಂತೀಯ ಅಧ್ಯಕ್ಷೆ ಮಲ್ಲಿಕಾ ಸತೀಶ್ ಭಂಡಾರಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಲಯನ್ಸ್ ಕ್ಲಬ್ ಭೋಟಾ ಮಂಗಳೂರು ಪ್ರತಿ ತಿಂಗಳು ಉಚಿತ ಆರೋಗ್ಯ ಶಿಬಿರ, ಆರೋಗ್ಯ ಸಂಬಂಧಿ ಸೇವೆ, ಅನಾಥ ಮತ್ತು ವಿಶೇಷ ಚೇತನ ಮಕ್ಕಳಿಗೆ ನಿರಂತರ ಸೇವೆ ನಡೆಸುತ್ತಿದೆ ಎಂದರು. ಪ್ರಾಂತೀಯ ಸಮ್ಮೇಳನ ಸಮಿತಿ ಅಧ್ಯಕ್ಷ ಪ್ರಸಾದ್ ರೈ ಕಲ್ಲಿಮಾರ್, ಪ್ರಮುಖರಾದ ಸತೀಶ್ ಭಂಡಾರಿ, ಸಂದೀಪ್ ಹೆಗ್ಡೆ ವಿದ್ಯಾಧರ ಶೆಟ್ಟಿ ಹರಿಣಾಕ್ಷಿ ಉಪಸ್ಥಿತರಿದ್ದರು.

ಇಂದಿನಿಂದ ಕೊಳವೂರು ತೇರೆಜಾಲ್ ದೊಂಪದ ಬಲಿ

ಕೈಕಂಬ: ಕೊಳವೂರು ತೇರೆಜಾಲು ದೊಂಪದಬಲಿ ಸಮಿತಿಯ ನೇತೃತ್ವದಲ್ಲಿ ತೇರೆಜಾಲು ದೊಂಪದಬಲಿಯು ಫೆ.28ರಿಂದ ಮಾ. 2ರ ವರೆಗೆ ನಡೆಯಲಿದೆ. 28ರಂದು ಬೆಳಗ್ಗೆ 7 ಗಂಟೆಗೆ ಕೋಳಿ ಕುಂಟ ಮತ್ತು ಕಂಬ ಮುಹೂರ್ತ, 10 ಗಂಟೆಯಿಂದ ಪಲ್ಗುಣಿ ನದಿ ತೀರದ ಪವಿತ್ರ ಅಶ್ವತ್ಥ ಕಟ್ಟೆಯಲ್ಲಿ ಸಾರ್ವಜನಿಕ ಸತ್ಯನಾರಾಯಣ ಪೂಜೆ, ಅನ್ನಸಂತರ್ಪಣೆ, ರಾತ್ರಿ ನವಕ ಪ್ರಧಾನ, ಮಾರಿ ಪೂಜೆ, ಮಾ. 1ರಂದು ಸೂರ್ಯೋದಯದ ವೇಳೆ ಧೂಮಾವತಿ ಮತ್ತು ಕಲ್ಲಾಲ್ಯ ದೈವಗಳ ಭಂಡಾರ ಏರುವುದು. ರಾತ್ರಿ 10ಗಂಟೆಗೆ ಶ್ರೀ ಮಹಿಸಂದಾಯ ಮತ್ತು ಧೂಮಾವತಿ ದೈವದ ನೇಮ, ಮಾ.2ರ ಸಂಜೆ 6.30ರಿಂದ ಧೂಮಾವತಿ ಕಲ್ಲಾಲ್ಯ ಯೂತ್ ಕ್ಲಬ್ ಕುಲವೂರು ಇದರ 14ನೇ ವರ್ಷದ ವಾರ್ಷಿಕೋತ್ಸವದ ಪ್ರಯುಕ್ತ ಉಡುಪಿಯ ಅಭಿನಯ ಕಲಾವಿದರಿಂದ ಶಾಂಭವಿ ನಾಟಕ. ರಾತ್ರಿ 11ಕ್ಕೆ ಕಲ್ಲಾಲ್ಯ ದೈವದ ನೇಮ ಮತ್ತು ಕಲ್ಕುಡ ಕಾಳಮ್ಮ ದೈವಗಳ ಕೋಲ ನಡೆಯಲಿದೆ ಎಂದು ಸಮಿತಿಯ ಪ್ರಕಟಣೆ ತಿಳಿಸಿದೆ.

ಸರಗಳ್ಳತನ: ಶಂಕಿತ ಆರೋಪಿಯ ಚಹರೆ ಪತ್ತೆ

ಬಂಟ್ವಾಳ: ಇಲ್ಲಿನ ಗ್ರಾಮಾಂತರ ಠಾಣಾ



ವ್ಯಾಪ್ತಿಯಲ್ಲಿ ನಡೆದ ಸರಗಳ್ಳತನ ಪ್ರಕರಣವೊಂದರ ಶಂಕಿತ ಆರೋಪಿತನ ಮುಖಚಹರೆ ಪತ್ತೆಯಾಗಿದೆ. ಈ ಅಪರಿಚಿತ ವ್ಯಕ್ತಿಯ ಗುರುತು ಅಥವಾ ಇರುವಿಕೆ ಕಂಡುಬಂದಲ್ಲಿ ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ ಅಥವಾ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯನ್ನು ಸಂಪರ್ಕಿಸುವಂತೆ ಪೊಲೀಸ್ ಇಲಾಖೆಯ ಪ್ರಕಟಣೆ ತಿಳಿಸಿದೆ.

ನಾಳೆ ರಾಷ್ಟ್ರೀಯ ತುಳು ವಿಚಾರಗೋಷ್ಠಿಯ ಪೂರ್ವಭಾವಿ ಸಭೆ

ಮುಲ್ಕಿ: ತುಳುವ ಮಹಾಸಭೆ ಇಂಟರ್ನ್ಯಾಷನಲ್ ಮುಲ್ಕಿ ತಾಲೂಕು ವತಿಯಿಂದ 'ಅಪ್ಪೆ ಬೇರ್ ದ ತುಳುನಾಡ್' ರಾಷ್ಟ್ರೀಯ ತುಳು ವಿಚಾರಗೋಷ್ಠಿಯು ಮುಲ್ಕಿ ಬಂಟರ ಸಂಘ ಸಹಭಾಗಿತ್ವದೊಂದಿಗೆ ನಡೆಯಲಿದ್ದು ಪೂರ್ವಭಾವಿಯಾಗಿ ಫೆ.28ರಂದು ಮುಲ್ಕಿ ಪುನರೂರು ಟೂರಿಸ್ಟ್ ಹೋಮ್ ಸಭಾಭವನದಲ್ಲಿ ಸ್ವಾಗತ ಸಮಿತಿ ಮತ್ತು ರೂಪೀಕರಣ ಸಭೆ ನಡೆಯಲಿದೆ ಎಂದು ತುಳುವ ಮಹಾಸಭೆ ಇಂಟರ್ನ್ಯಾಷನಲ್ ನ ಸಂಚಾಲಕಿ ಭಾನುಮತಿ ಶೆಟ್ಟಿ ಕಕ್ವಗುತ್ತು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಾಕಿಪಟು ಕೊಡವ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ ಘೋಷಣೆ

ಮಡಿಕೇರಿ: ಕೊಡವ ಹಾಕಿ ಅಕಾಡೆಮಿಯು ಕೊಡವ ಹಾಕಿ ಇತಿಹಾಸದಲ್ಲಿ ಮೊದಲ ಬಾರಿಗೆ ಮೈಸೂರಿನ ಆರ್.ವಿ. ವಿಶ್ವವಿದ್ಯಾಲಯ ಕ್ಯಾಂಪಸ್‌ನ ಸಹಯೋಗದೊಂದಿಗೆ ಕೊಡವ ಹಾಕಿ ಆಟಗಾರ ವಿದ್ಯಾರ್ಥಿಗಳಿಗೆ ಶೇ.100ರ ವಿದ್ಯಾರ್ಥಿ ವೇತನವನ್ನು ಘೋಷಿಸಿದೆ. ದೇಶದ ಪ್ರಮುಖ ವಿಶ್ವವಿದ್ಯಾಲಯಗಳಲ್ಲಿ ಒಂದಾದ ಮೈಸೂರು ಆರ್.ವಿ ವಿಶ್ವವಿದ್ಯಾಲಯದಲ್ಲಿ ತಂತ್ರಜ್ಞಾನ ಪದವಿ, ವಿಜ್ಞಾನ ಪದವಿ, ವಾಣಿಜ್ಯ ಪದವಿ ಇತರ ಪದವಿ (ಬಿಬಿಎ, ಬಿಸಿಎ) ವ್ಯಾಸಂಗ ಮಾಡುವ ಕೊಡವ ಹಾಕಿ ಆಟಗಾರ ವಿದ್ಯಾರ್ಥಿಯು ಶೇ.100ವರೆಗೆ ವಿದ್ಯಾರ್ಥಿ ವೇತನವನ್ನು ಪಡೆಯಲು ಅರ್ಹರಾಗುತ್ತಾರೆ. ಕೊಡವ ಹಾಕಿ ಉತ್ಸವದಲ್ಲಿ ಯುವ ಪ್ರತಿಭಾನ್ವಿತ ಆಟಗಾರರನ್ನು ವರ್ಷಾನುವರ್ಷ ಆಯ್ಕೆ ಮಾಡಲಾಗುತ್ತದೆ. ಆಯ್ಕೆಯಾದ ಆಟಗಾರರನ್ನು ಆರ್‌ವಿ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ಪ್ರವೇಶ ಪಡೆಯಲು ಕೊಡವ ಹಾಕಿ ಅಕಾಡೆಮಿಯು ಶಿಫಾರಸ್ಸು ಮಾಡುತ್ತದೆ ಮತ್ತು ಅವರು ತಮ್ಮ ಪದವಿ ಮತ್ತು ಸ್ನಾತಕೋತ್ತರ ಕಾರ್ಯಕ್ರಮಕ್ಕೆ ಬೋಧನಾ ಶುಲ್ಕದ 100ವರೆಗೆ ವಿದ್ಯಾರ್ಥಿ ವೇತನವನ್ನು ಪಡೆಯುತ್ತಾರೆ ಎಂದು ಅಕಾಡೆಮಿಯ ಪರವಾಗಿ ಮುದ್ದಂಡ ರಾಶಿನ್ ಸುಬ್ಬಯ್ಯ ಅವರು ತಿಳಿಸಿದ್ದಾರೆ.

ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಐಎಎಸ್-ಐಪಿಎಸ್ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ

ಪೊಲೀಸರಿಗೆ ಮಾಹಿತಿ ಕಾರ್ಯಾಗಾರ ರಾಜ್ಯದಲ್ಲೇ ಪ್ರಥಮ

ಪುತ್ತೂರು: ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸುವ ಪ್ರತಿಭಾನ್ವಿತ ಸಿಬಂದಿಗಳು, ಅಧಿಕಾರಿಗಳು ಐಎಎಸ್, ಐಪಿಎಸ್ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉತ್ತೀರ್ಣರಾಗಿ ಜಿಲ್ಲಾಧಿಕಾರಿಗಳಾಗಿ, ಪೊಲೀಸ್ ವರಿಷ್ಠಾಧಿಕಾರಿಗಳಾಗಿ ಉನ್ನತ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುವ ಅವಕಾಶ ಸಿಗಬಾರದೇಕೆ...?

ಇದೇ ಚಿಂತನೆಯಲ್ಲಿ ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಪೊಲೀಸ್ ಠಾಣೆಯ ಸಿಬಂದಿಗೆ ಇಂತಹ ಒಂದು ತರಬೇತಿ ಕಾರ್ಯಾಗಾರವನ್ನೇ ಏರ್ಪಡಿಸಿತ್ತು. ಒಂದು ಪೊಲೀಸ್ ಠಾಣೆಯಲ್ಲಿ ಪೊಲೀಸ್ ಸಿಬ್ಬಂದಿಗಳಿಗಾಗಿ ಐಎಎಸ್, ಐಪಿಎಸ್ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ಕಾರ್ಯಾಗಾರ ನಡೆದಿರುವುದು ರಾಜ್ಯದಲ್ಲೇ ಪ್ರಥಮ ಎನ್ನಬಹುದು. ಪೊಲೀಸ್ ಇಲಾಖೆಯ ಸಿಬ್ಬಂದಿಗಳ ವೃತ್ತಿಪರ ಹಾಗೂ ವೈಯಕ್ತಿಕ ಬೆಳವಣಿಗೆಯನ್ನು ಉತ್ತೇಜಿಸುವ ಉದ್ದೇಶದಿಂದ 'ಕನ್ನಡದಲ್ಲೂ ಐಎಎಸ್ ಬರೆಯಿರಿ' ಅಭಿಯಾನದಂಗವಾಗಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಐಎಎಸ್, ಐಪಿಎಸ್ ತತ್ಸಮಾನ ಸ್ಪರ್ಧಾತ್ಮಕ



ಪರೀಕ್ಷೆಗಳ ಕುರಿತು ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಕಾರ್ಯಾಗಾರವನ್ನು ಏರ್ಪಡಿಸಿತ್ತು.

ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನೇತೃತ್ವದಲ್ಲಿ ರೋಟರಿ ಕ್ಲಬ್ ಪುತ್ತೂರು ಯುವ ಸಹಕಾರದಲ್ಲಿ ಪುತ್ತೂರು ಸಂಚಾರಿ ಪೊಲೀಸ್ ಠಾಣೆಯಲ್ಲಿ ಆಯೋಜಿಸಲಾದ ಮಾಹಿತಿ ಕಾರ್ಯಾಗಾರದಲ್ಲಿ ವಿವಿಧ ವಿಷಯಗಳ ಕುರಿತು ತರಬೇತಿ, ಮಾರ್ಗದರ್ಶನವನ್ನು ನೀಡಲಾಯಿತು.

ಪುತ್ತೂರು ನಗರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಜಾನ್ಸನ್ ಕಿರಣ್ ಡಿ'ಸೋಜಾ ಮಾತನಾಡಿ, ಯುವ ಪೊಲೀಸ್ ಸಿಬ್ಬಂದಿಗಳು ಹಾಗೂ ಹಿರಿಯ ಪೊಲೀಸ್ ಸಿಬ್ಬಂದಿಗಳ ಮಕ್ಕಳು ಮುಂದಿನ ದಿನಗಳಲ್ಲಿ ಐಎಎಸ್ ಐಪಿಎಸ್ ಅಧಿಕಾರಿಗಳಾಗಿ ಹೊರ ಹೊಮ್ಮುವ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತು ಆಯೋಜಿಸಿದ ಈ ಕಾರ್ಯಾಗಾರ ಬಹಳ ಉಪಯುಕ್ತವಾಗಿದೆ. ಪೊಲೀಸ್ ಸಿಬ್ಬಂದಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಐಎಎಸ್ 'ದರ್ಶನ್' ಸಂಸ್ಥೆಯ ಮುಖ್ಯಸ್ಥ ದರ್ಶನ್ ಗರ್ತಿಕೆರೆ, ಐಎಎಸ್, ಐಪಿಎಸ್ ಸೇರಿದಂತೆ ತತ್ಸಮಾನ ಸ್ಪರ್ಧಾತ್ಮಕ ಪರೀಕ್ಷೆಗಳ ವಿಧಾನ, ಅಧ್ಯಯನ ರೂಪರೇಷೆ, ಸಮಯ ನಿರ್ವಹಣೆ, ಹಾಗೂ ಯಶಸ್ಸಿನ ಮಂತ್ರಗಳ ಕುರಿತು ಅವರು ವಿವರಿಸಿ, ಐಎಎಸ್, ಐಪಿಎಸ್ ಪರೀಕ್ಷೆ ಬರೆಯಲು ಆಸಕ್ತಿ ಇರುವ ಪೊಲೀಸ್ ಸಿಬ್ಬಂದಿಗಳಿಗೆ ಉಚಿತ ತರಬೇತಿ ಹಾಗೂ ಮಾರ್ಗದರ್ಶನ ನೀಡಲಾಗುವುದು ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ರೋಟರಿ ಕ್ಲಬ್ ಪುತ್ತೂರು ಯುವ ಇದರ ಅಧ್ಯಕ್ಷ ಕುಸುಮ್‌ರಾಜ್, ಪುತ್ತೂರು ನಗರ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಚಕ್ರಪಾಣಿ, ರೋಟರಿ ಕ್ಲಬ್ ಪುತ್ತೂರು ಯುವ ಇದರ ನಿಯೋಜಿತ ಅಧ್ಯಕ್ಷೆ ವಚನ ಜಯರಾಮ್ ಮಾತನಾಡಿ ಶುಭ ಹಾರೈಸಿದರು. ರೋಟರಿ ಯುವ ಪೂರ್ವಾಧ್ಯಕ್ಷರಾದ ಅಶ್ವಿನಿ ಕೃಷ್ಣ ಮುಳಿಯ, ಡಾ ಚೇತನ್ ಪ್ರಕಾಶ್, ಡಾ ಹರ್ಷ ಕುಮಾರ್ ರೈ, ನರಸಿಂಹ ಪೈ, ರತ್ನಾಕರ್ ರೈ ಮತ್ತಿತರರು ಉಪಸ್ಥಿತರಿದ್ದರು.

ಪೊಲೀಸ್ ಸಿಬ್ಬಂದಿ ದಿನೇಶ್ ಪ್ರಾಸ್ತಾವಿಸಿದರು. ರೋಟರಿ ಯುವದ ಕಾರ್ಯದರ್ಶಿ ಕಾರ್ಯದರ್ಶಿ ಅಭೀಷ್ ವಂದಿಸಿದರು. ಪುತ್ತೂರು ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪುತ್ತೂರು ಉಮೇಶ್ ನಾಯಕ್ ಕಾರ್ಯಕ್ರಮ ನಿರ್ವಹಿಸಿದರು.

ಸಾಧಕರಿಗೆ ಸನ್ಮಾನ

ಕಳೆದ ಮೂರೂವರೆ ವರ್ಷಗಳಿಂದ ಪುತ್ತೂರಿನ ಸಾವಿರಾರು ವಿದ್ಯಾರ್ಥಿಗಳಲ್ಲಿ ಐಎಎಸ್, ಐಪಿಎಸ್ ಕನಸಿನ ಬೀಜವನ್ನು ಬಿತ್ತಿ ಇದೀಗ ಬೆಂಗಳೂರಿಗೆ ತೆರಳುತ್ತಿರುವ ದರ್ಶನ್ ಗರ್ತಿಕೆರೆ ಹಾಗೂ ಕಳೆದ 37 ವರ್ಷಗಳಿಂದ ಪೊಲೀಸ್ ಇಲಾಖೆಯಲ್ಲಿ ಉತ್ತಮ ಸೇವೆ ನೀಡಿರುವ ಸಂಚಾರಿ ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಚಕ್ರಪಾಣಿ ಅವರನ್ನು ರೋಟರಿ ಕ್ಲಬ್ ಯುವ ವತಿಯಿಂದ ಗೌರವಿಸಲಾಯಿತು.

ಬಂಟ್ವಾಳ ತಾಲೂಕಿನ 3,000 ವಿದ್ಯಾರ್ಥಿಗಳಿಗೆ 'ಸ್ವಾಸ್ಥ್ಯ ಸಂಕಲ್ಪ'



ಬಂಟ್ವಾಳ: ವ್ಯಸನ ಮುಕ್ತ ಸಮಾಜ ನಿರ್ಮಾಣಕ್ಕಾಗಿ ಪ್ರಸ್ತುತ ವಿದ್ಯಾರ್ಥಿಗಳು ದುಶ್ಚಟದಿಂದ ಅನುಭವಿಸುತ್ತಿರುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ವೀರೇಂದ್ರ ಹೆಗ್ಗಡೆಯವರು ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಆಯೋಜಿಸುತ್ತಿದ್ದು ತಾಲೂಕಿನಲ್ಲಿ ಈ ವರ್ಷ 14 ಶಾಲಾ-ಕಾಲೇಜುಗಳಲ್ಲಿ ಕಾರ್ಯಕ್ರಮ ಮಾಡಲಾಗಿದ್ದು ಸುಮಾರು 3,000 ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದೆ ಎಂದು ತಾಲೂಕು ಜನಜಾಗೃತಿ ವೇದಿಕೆ ಅಧ್ಯಕ್ಷ ರೊನಾಲ್ಡ್ ಡಿಸೋಜ ಹೇಳಿದ್ದಾರೆ.

ಬಂಟ್ವಾಳದ ಕಾಮಾಜೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಜನಜಾಗೃತಿ ವೇದಿಕೆ ಹಾಗೂ ಯುವ ರೆಡ್ ಕ್ರಾಸ್ ಮಾದಕ ದ್ರವ್ಯ ತಡೆ ಸಮಿತಿ ಇದರ ಸಹಯೋಗದಲ್ಲಿ ನಡೆದ ಕಾರ್ಯಕ್ರಮದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂಚರ ಫೌಂಡೇಶನ್ ಮಂಗಳೂರು ಇದರ ಮಾರ್ಕೆಟಿಂಗ್ ಮ್ಯಾನೇಜರ್ ಮಲ್ಲಿಕಾ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಕಾಮಾಜೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಪ್ರಕಾಶ್ ಚಂದ್ರ ಬಿ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ., ವಲಯ ಒಕ್ಕೂಟ ಅಧ್ಯಕ್ಷ ಜಯಲಕ್ಷ್ಮಿ ಬಿ.ಸಿ. ರೋಡು, ಒಕ್ಕೂಟದ ಅಧ್ಯಕ್ಷ ಹೇಮಾವತಿ, ಇಂಚರ ಫೌಂಡೇಶನ್ ಸುರೇಶ ಇದ್ದರು. ಚೈತ್ರ ನಿರೂಪಿಸಿದರು. ಗಿರೀಶ್ ಸ್ವಾಗತಿಸಿದರು. ಸೇವಾ ಪ್ರತಿನಿಧಿಯಾದ ವನಿತಾ ವಂದಿಸಿದರು.

ಬಂಟಕಲ್ಲು ಇಂಜಿನಿಯರಿಂಗ್ ಕಾಲೇಜಿನಲ್ಲಿ ವಾರ್ಷಿಕ ಕ್ರೀಡಾಕೂಟ



ಶಿರ್ವ: ಬಂಟಕಲ್ಲು ಶ್ರೀ ಮಧ್ವ ವಾದಿರಾಜ ತಾಂತ್ರಿಕ ಮಹಾವಿದ್ಯಾಲಯದ ವಾರ್ಷಿಕ ಕ್ರೀಡಾಕೂಟವನ್ನು ಆಯೋಜಿಸಲಾಗಿತ್ತು.

ಹಳೆವಿದ್ಯಾರ್ಥಿ, ದೇಹದಾಢ್ಯ ಪಟು ಮಿಸ್ಟರ್ ಇಂಡಿಯಾ 2024 ಚಿನ್ನದ ಪದಕ ವಿಜೇತ, ಆಲ್ ಇಂಡಿಯಾ ಇಂಟರ್ ರೈಲ್ವೆ ಚಾಂಪಿಯನ್ ವಿಘ್ನೇಶ್ ಚಾಲನೆ ನೀಡಿ ಮಾತನಾಡಿ, ಕ್ರೀಡೆ ಮತ್ತು ಶಿಕ್ಷಣದಲ್ಲಿ ಶ್ರೇಷ್ಠತೆಯನ್ನು ಸಾಧಿಸುವಲ್ಲಿ ಸಂಸ್ಥೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಪಾತ್ರದ ಬಗ್ಗೆ ಶ್ಲಾಘಿಸಿದರು.

ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್ ಐತಾಳ್ ಅಧ್ಯಕ್ಷತೆ ವಹಿಸಿ ಮಾತನಾಡಿ ಕ್ರೀಡೆಗಳು ಶಿಸ್ತಿನ ಜೀವನವನ್ನು ರೂಪಿಸುವಲ್ಲಿ ಮತ್ತು ನಾಯಕತ್ವದ ಗುಣವನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ ಎಂದರು.

ಕ್ರೀಡಾ ಕಾರ್ಯದರ್ಶಿ ಆನಿಶ್ ರಾವ್ ಕ್ರೀಡಾ ಪ್ರತಿಜ್ಞೆಯನ್ನು ಬೋಧಿಸಿದರು. ಕ್ರೀಡಾಕೂಟವು ಆಕರ್ಷಕ ಪಥಸಂಚಲನದೊಂದಿಗೆ ಆರಂಭವಾಯಿತು. ಪಥಸಂಚಲನದಲ್ಲಿ ನಿರಾಮಯ ಕಾಲೇಜ್ ಆಫ್ ನರ್ಸಿಂಗ್ ಮತ್ತು ಅಲೈಡ್ ಸೈನ್ಸ್‌ನ ವಿದ್ಯಾರ್ಥಿಗಳು ಪ್ರಥಮ ಸ್ಥಾನ ಪಡೆದರೆ ಗಣಕಯಂತ್ರ ವಿಭಾಗದ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದರು.

ಸಮಾರೋಪ ಸಮಾರಂಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ರತ್ನಕುಮಾರ್, ಸೋದೆ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ರಾಧಾಕೃಷ್ಣ ಎಸ್ ಐತಾಳ್, ಆಡಳಿತ ಮಂಡಳಿಯ ಸದಸ್ಯ ಹರಿಶ್ ಬೆಳ್ಮಣ್ ಉಪಸ್ಥಿತರಿದ್ದರು. ಸಂಸ್ಥೆಯ ದೈಹಿಕ ಶಿಕ್ಷಣ ನಿರ್ದೇಶಕ ಪೌಲ್ ಸೂರಜ್ ಕ್ರೀಡಾಕೂಟವನ್ನು ನಡೆಸಿ ಕೊಟ್ಟರು.

ಮಾ.10ರೊಳಗೆ ಸರ್ಕಾರಿ ವೈದ್ಯರ ಬೇಡಿಕೆ ಈಡೇರದಿದ್ದರೆ ಹೋರಾಟ

ಮಂಗಳೂರು: ರಾಜ್ಯದ ಸರಕಾರಿ ವೈದ್ಯರು ರಾಜ್ಯ ಸರಕಾರಕ್ಕೆ ಈಗಾಗಲೇ ಸಲ್ಲಿಸಿರುವ ಬೇಡಿಕೆಗಳನ್ನು ಮಾ. 10ರೊಳಗೆ ಈಡೇರಿಸಬೇಕು. ಇಲ್ಲವಾದಲ್ಲಿ ಮಾ. 11ರಿಂದ 15ರವರೆಗೆ ಕಪ್ಪು ಪಟ್ಟಿ ಧರಿಸಿ ಕೇವಲ ತುರ್ತು ಸೇವೆಯನ್ನು ಮಾತ್ರ ಸರಕಾರಿ ಆಸ್ಪತ್ರೆಗಳಲ್ಲಿ ಒದಗಿಸಲಾಗುವುದು. ಮಾ. 16ರಿಂದ ಸರಕಾರಿ ಆಸ್ಪತ್ರೆಗಳಲ್ಲಿ ಸಂಪೂರ್ಣವಾಗಿ ಸೇವೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಸರಕಾರಿ ವೈದ್ಯರ ಸಂಘದ ದಕ್ಷಿಣ ಕನ್ನಡ ಜಿಲ್ಲಾ ಘಟಕ ತಿಳಿಸಿದೆ.

ನಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಕಳೆದ ಎಂಟು ತಿಂಗಳಿನಿಂದ ರಾಜ್ಯ ಸರಕಾರಕ್ಕೆ ಮನವಿ ಸಲ್ಲಿಸಲಾಗಿದೆ. ವೀಡಿಯೋ ಕಾನ್ಫರೆನ್ಸ್ ಮೂಲಕವೂ ಸರಕಾರದ ಗಮನ ಸೆಳೆಯಲಾಗಿದೆ. ಆದರೆ ಯಾವುದೇ ಒಂದೂ ಬೇಡಿಕೆಯನ್ನೂ ಸರಕಾರ ಈಡೇರಿಸಿಲ್ಲ. ಮಾ. 10ರವರೆಗೆ ಸರಕಾರಕ್ಕೆ ಸಮಯಾವಕಾಶ ನೀಡುತ್ತಿದ್ದು ಬಳಿಕ ಪ್ರತಿಭಟನೆ ನಡೆಸುವುದಾಗಿ ಸರಕಾರಿ ವೈದ್ಯಾಧಿಕಾರಿಗಳ ಸಂಘದ ದ.ಕ. ಜಿಲ್ಲಾ ಘಟಕದ ಅಧ್ಯಕ್ಷ ಡಾ. ದೀಪಕ್ ರೈ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇಲಾಖೆಯ ವರ್ಗಾವಣೆಯ ಕಾಯ್ದೆಯಲ್ಲಿನ ನ್ಯೂನತೆಗಳನ್ನು ಸರಿಪಡಿಸದೆ ಅವೈಜ್ಞಾನಿಕ ಕೌನ್ಸೆಲಿಂಗ್ ವರ್ಗಾವಣೆ ಮಾಡಲಾಗುತ್ತಿದೆ. ಇದಕ್ಕೆ ಸರಕಾರ ಅವಕಾಶ ನೀಡಬಾರದು. ಇದು ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ ಎಂದು ಅವರು ಹೇಳಿದರು.

ಎಲ್ಲಾ ಸರಕಾರಿ ಆಸ್ಪತ್ರೆಗಳಿಗೆ ಕಾಲ ಕಾಲಕ್ಕೆ ಇಲಾಖೆಯಿಂದ ಔಷಧಿ ಸರಬರಾಜು ಮಾಡಬೇಕು. ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ಮಾಡಬೇಕು, ಇಲಾಖೆಯ ಎಲ್ಲ ವೃಂದಗಳ ಜೇಷ್ಠತಾ ಪಟ್ಟಿಯನ್ನು ಕಾಲಕಾಲಕ್ಕೆ ಪ್ರಕಟಿಸಬೇಕು. ಅಧಿಕಾರಿ, ನೌಕರರಿಗೆ ಮುಂಬಡ್ತಿ ನೀಡಬೇಕು, ನಿಯಮದಲ್ಲಿರುವಂತೆ ಸೇವಾ ನಿರತ ವೈದ್ಯರು, ಅಧಿಕಾರಿ ನೌಕರರ ಉನ್ನತ ವ್ಯಾಸಂಗ, ಸ್ನಾತಕೋತ್ತರ ವ್ಯಾಸಂಗಕ್ಕೆ ಅವಕಾಶ ನೀಡಬೇಕು, ವೈದ್ಯಕೀಯ ಶಿಕ್ಷಣ ಇಲಾಖೆಯ ಸ್ವಾಯತ್ತ ಸಂಸ್ಥೆಗಳಲ್ಲಿ ಹಾಗೂ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ಮಹಾನಗರ ಪಾಲಿಕೆ ಹಾಗೂ ನಗರ ಪಾಲಿಕೆಗಳಲ್ಲಿ ಮಂಜೂರಾಗಿರುವ ಆರೋಗ್ಯ ಇಲಾಖೆಯ ಎನ್ ಕೇಡರ್ ಹುದ್ದೆಗಳಿಗೆ ನೇಮಕಾತಿ, ಮುಂಬಡ್ತಿ ಮತ್ತು ವರ್ಗಾವಣೆಗಳಿಗೆ ಆರೋಗ್ಯ ಇಲಾಖೆಯ ವೈದ್ಯರು, ಅಧಿಕಾರಿ- ನೌಕರರನ್ನೇ ನಿಯೋಜಿಸುವುದು. ಕೇಂದ್ರ ಪುರಸ್ಕೃತ ಯೋಜನೆಯಡಿ ಕಾರ್ಯನಿರತ ಅಧಿಕಾರಿ ನೌಕರರಿಗೆ ಮೂರ್ನಾಲ್ಕು ತಿಂಗಳಿಗೊಮ್ಮೆ ವೇತನ ಭತ್ಯೆ ನೀಡಲಾಗುತ್ತಿದ್ದು ಇದನ್ನು ಪ್ರತಿ ತಿಂಗಳ ಮೊದಲ ವಾರ ಒದಗಿಸಬೇಕು. ವೈದ್ಯರು, ತಜ್ಞ ವೈದ್ಯರು, ಇತರ ಸಿಬ್ಬಂದಿಗೆ ಸಿ.ಜಿ.ಎಚ್.ಎಸ್ ಅಥವಾ ಎ.ಐ.ಸಿ.ಟಿ.ಇ. ಮಾದರಿ ವೇತನ ನೀಡುವುದು, ಸರಕಾರಿ ವೈದ್ಯರ ಕರ್ತವ್ಯದ ಅವಧಿಯ ನಂತರ ಖಾಸಗಿ ಸೇವೆಗೆ ಅವಕಾಶ ನೀಡಬೇಕು ಎಂಬ ಬೇಡಿಕೆಗಳನ್ನು ಮಾ. 10ರೊಳಗೆ ಈಡೇರಿಸಬೇಕು ಎಂದರು.

ಸಂಘದ ಕಾರ್ಯದರ್ಶಿ ಡಾ. ಅಕ್ಷತಾ, ಉಪಾಧ್ಯಕ್ಷ ಡಾ. ರಾಜೇಶ್, ಡಾ. ತುಫೈಲ್, ಡಾ. ಶರತ್ ಬಾಬು, ಮಹಾಲಕ್ಷ್ಮಿ ಯೋಗೇಶ್ ಉಪಸ್ಥಿತರಿದ್ದರು.

ಸಸಿಹಿತ್ಲು: ಶ್ರೀ ಭಗವತಿ ದೇವಸ್ಥಾನಕ್ಕೆ ಧರ್ಮಸ್ಥಳದಿಂದ ರೂಪಾಯಿ 5 ಲಕ್ಷ ನೆರವು



ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತಿ ದೇವಸ್ಥಾನದಲ್ಲಿ ನಡೆಯಲಿರುವ ಬ್ರಹ್ಮಕಲಶೋತ್ಸವದ ಜೀರ್ಣೋದ್ಧಾರದ ಕಾರ್ಯಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ವೀರೇಂದ್ರ ಹೆಗ್ಗಡೆಯವರು ಕ್ಷೇತ್ರದಿಂದ ಕೊಡ ಮಾಡಿದ 5 ಲಕ್ಷ ರೂಪಾಯಿಯ ಚೆಕ್ಕನ್ನು ಬ್ರಹ್ಮಕಲಶ ಸಮಿತಿಯ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ರವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ್ ಹಸ್ತಾಂತರಿಸಿದರು.

ಈ ಸಂದರ್ಭ ಕ್ಷೇತ್ರದ ಪ್ರಧಾನ ಅರ್ಚಕ ಶ್ರೀನಿವಾಸಯಾನೆ ಅಪ್ಪು ಪೂಜಾರಿ, ಕ್ಷೇತ್ರದ ಆಡಳಿತ ಮುಕ್ತೇಸರ ಚಂದ್ರಶೇಖರ ಬೆಳ್ಚಡ ಗಂಪಮನೆ ಕಟೀಲು, ಅರಸು ವೆಲ್ಫೇರ್ ಟ್ರಸ್ಟ್‌ನ ಅಧ್ಯಕ್ಷ ಗೌತಮ್ ಜೈನ್, ಯೋಜನಾಧಿಕಾರಿ ಗಿರೀಶ್ ಎಂ., ಮಾತೃಮಂಡಳಿಯ ಅಧ್ಯಕ್ಷೆ ಕಸ್ತೂರಿ ಪಂಜ, ಸಂಚಾಲಕರದ ಗೀತಾ ಪಿ ಕುಮಾರ್ , ವಲಯ ಅಧ್ಯಕ್ಷ ಪುಷ್ಪರಾಜ್ ಶೆಟ್ಟಿ ಚೇಳಾಯರು , ವಲಯ ಜನಜಾಗೃತಿ ಅಧ್ಯಕ್ಷ ವಿನೋದ್ ಸಾಲ್ಯಾನ್ ಬೆಳ್ಳಾಯರು, ಹಳೆಯಂಗಡಿ ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷೆ ಪೂರ್ಣಿಮಾ, ಮೊಗವೀರ ಮಹಾಸಭಾ ಅಧ್ಯಕ್ಷ ಶೋಭೇಂದ್ರ ಸಸಿಹಿತ್ಲು, ಮೊಗವೀರ ಮಹಿಳಾ ಸಭಾದ ಅಧ್ಯಕ್ಷರಾದ ಸವಿತಾ, ವಲಯ ಮೇಲ್ವಿಚಾರಕಿ ನಿಶ್ಮಿತಾ ಶೆಟ್ಟಿ ಮತ್ತು ಸೇವಾ ಪ್ರತಿನಿಧಿಗಳು ಉಪಸ್ಥಿತರಿದ್ದರು.

ಎಲೆಕ್ಟ್ರಿಕ್ ಮ್ಯಾಪಿಂಗ್, ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ: ಸುಳ್ಯದಲ್ಲಿ ಸಭೆ



ಸುಳ್ಯ: ಸುಳ್ಯ ವಿಧಾನಸಭಾ ಕ್ಷೇತ್ರ 206ರ ಮತಗಟ್ಟೆ ಅಕಾರಿಗಳು ಮತ್ತು ಮೇಲ್ವಿಚಾರಕರ ಸಭೆಯು ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆಯಿತು.

ಸಭೆಯಲ್ಲಿ ಎಲೆಕ್ಟ್ರಿಕ್ ಮ್ಯಾಪಿಂಗ್ ಪ್ರಾಜೆಕ್ಟ್ ಮ್ಯಾಪಿಂಗ್ ಹಾಗೂ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕುರಿತು ಮಾಹಿತಿ ನಿಡಲಾಗಿ ಬಳಿಕ ಸ್ಥಳದಲ್ಲಿಯೇ ಗುಂಪು ರಚಿಸಿ ಮ್ಯಾಪಿಂಗ್ ಮಾಡಿಸುವ ಬಗ್ಗೆ ತಿಳಿಸಲಾಯಿತು.

ಕ್ಷೇತ್ರ 207 ಸುಳ್ಯದಲ್ಲಿ ಇಲೆಕ್ಟಿಕ್ ಮ್ಯಾಪಿಂಗ್ 73.93 ಆಗಿದ್ದು ಜೊತೆಗೆ ಪ್ರಾಜೆಕ್ಟ್ ಮ್ಯಾಪಿಂಗ್ 97.77 ಆಗಿದೆ. ಉತ್ತಮ ಸಾಧನೆಯ ಮೂಲಕ ಮೇಲ್ವಿಚಾರಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಸಮಸ್ಯೆಗಳು ಉದ್ಭವಿಸಿದಾಗ ಅವುಗಳನ್ನು ಜಿಲ್ಲೆ ಹಾಗೂ ರಾಜ್ಯ ಮಟ್ಟಕ್ಕೆ ಕಳುಹಿಸಿ ಇತ್ಯರ್ಥ ಪಡಿಸಲಾಗುತ್ತಿದೆ. ಮ್ಯಾಪಿಂಗ್ ಮಾಡಲು ಮತಗಟ್ಟೆ ಅಧಿಕಾರಿಗಳು ಸಾರ್ವಜನಿಕರ ಬಳಿಗೆ ಬಂದಾಗ ಸಂಪೂರ್ಣ ದಾಖಲೆಗಳ ಜೊತೆಗೆ ಸಹಕರಿಸುವಂತೆ ತಹಶೀಲ್ದಾರ್ ಮಂಜುಳಾ ಎಂ. ಕೋರಿದ್ದಾರೆ.

ವೇದಿಕೆಯಲ್ಲಿ ಕ್ಷೇತ್ರ ಶಿಕ್ಷಣಾಕಾರಿ ಯಮನೂರಪ್ಪ ಸಿದ್ಧಪ್ಪ ಹರಗಿ, ಉಪ ತಹಶಿಲ್ದಾರ್ ಚಂದ್ರಕಾಂತ್ ಎಂ.ಆರ್., ಶಿಶು ಅಭಿವೃದ್ಧಿ ಇಲಾಖೆ ಮೇಲ್ವಿಚಾರಕಿ, ಬಿಎಲ್‌ಎಗಳು ಉಪಸ್ಥಿತರಿದ್ದರು.

ಸಮಾನತೆಯ ಸಮಾಜಕ್ಕೆ ನಾರಾಯಣ ಗುರು ತತ್ವದರ್ಶನ ಮುನ್ನುಡಿ: ಮಧುಸೂದನ್ ಸುವರ್ಣ



ಬಂಟ್ವಾಳ: 'ವಿದ್ಯೆಯಿಂದ ಸ್ವತಂತ್ರರಾಗಿ, ಸಂಘಟನೆಯಿಂದ ಬಲಿಷ್ಠರಾಗಿ' ಎಂಬ ಮಂತ್ರದೊಂದಿಗೆ ಸಂಸ್ಕಾರಯುತ ಶಿಕ್ಷಣಕ್ಕೆ ಒತ್ತು ನೀಡಿದ ಬ್ರಹ್ಮಶ್ರೀ ನಾರಾಯಣ ಗುರುಗಳು, ಮಾನವ ಕುಲದ ಸಂಘಟನೆಯೇ ಬಲಿಷ್ಠ ಸಮಾಜದ ಅಡಿಪಾಯವೆಂದು ಸಾರಿದವರು ಎಂದು ಶಿಕ್ಷಕ ಮಧುಸೂದನ್ ಸುವರ್ಣ ತಿಳಿಸಿದರು.

ನರಿಕೊಂಬು ಮೊಗರ್ನಾಡು ವಿವೇಕಪುರದ ರಂಜಿತ್ ಪೂಜಾರಿ ಅವರ 'ಬೃಂದಾವನ' ನಿವಾಸದಲ್ಲಿ ನಡೆದ 'ಗುರುತತ್ವವಾಹಿನಿ ಭಜನಾ ಸಂಕೀರ್ತನೆ-68' ಕಾರ್ಯಕ್ರಮದಲ್ಲಿ ಅವರು ಗುರುಸಂದೇಶ ನೀಡಿದರು.

ಆಧ್ಯಾತ್ಮಿಕ ಚಿಂತನೆ, ಸಾಮಾಜಿಕ ಸಮಾನತೆ ಮತ್ತು ಶೈಕ್ಷಣಿಕ ಪ್ರಗತಿಯ ಮೂಲಕ ಸಮಾಜದಲ್ಲಿ ಮಹತ್ತರ ಬದಲಾವಣೆ ತಂದ ಗುರುಗಳು, 'ಜಾತಿ ಒಂದೇ, ಮತ ಒಂದೇ, ದೇವರು ಒಬ್ಬನೇ' ಎಂಬ ಮಾನವತಾವಾದದ ಮೂಲಕ ಕ್ರಾಂತಿ ಮಾಡಿದರು. ಅಸ್ಪೃಶ್ಯತೆ ಮತ್ತು ಅಂಧಶ್ರದ್ಧೆಗಳನ್ನು ತೊಡೆದುಹಾಕಲು ಅವರು ನಡೆಸಿದ ಈ ತ್ರಿವಿಧ ಕ್ರಾಂತಿಯು ಇಂದಿಗೂ ಮನುಕುಲದ ಏಳಿಗೆಗೆ ದಾರಿದೀಪವಾಗಿದೆ ಎಂದರು.

ಬಂಟ್ವಾಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬೇಬಿ ಕುಂದರ್, ಬಂಟ್ವಾಳ ತಾಲೂಕು ಬಿಲ್ಲವ ಸಮಾಜ ಸೇವಾ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ ಪೂಜಾರಿ ಮೆಲ್ಕಾರ್, ಯುವವಾಹಿನಿ ಬಂಟ್ವಾಳ ಘಟಕದ ಅಧ್ಯಕ್ಷ ನಾಗೇಶ್ ಪೂಜಾರಿ ನೈಬೇಲು, ಕಾರ್ಯದರ್ಶಿ ಮಧುಸೂದನ್ ಮದ್ವ, ಉಪಾಧ್ಯಕ್ಷ ನಿಕೇಶ್ ಕೋಟ್ಯಾನ್, ಸಲಹೆಗಾರರಾದ ರಾಮಚಂದ್ರ ಸುವರ್ಣ ತುಂಬೆ, ಮಾಜಿ ಅಧ್ಯಕ್ಷರು ನಿರ್ದೇಶಕರು ಸದಸ್ಯರು ಉಪಸ್ಥಿತರಿದ್ದರು.

ಯುವವಾಹಿನಿ ಬಂಟ್ವಾಳ ಘಟಕದ ನಾರಾಯಣಗುರು ತತ್ವ ಪ್ರಚಾರ ಅನುಷ್ಠಾನ ನಿರ್ದೇಶಕ ಹರೀಶ್ ಸಾಲ್ಯಾನ್ ಅಜೆಕಲ ವಂದಿಸಿದರು. ಸಮಾಜ ಸೇವಾ ನಿರ್ದೇಶಕ ಪ್ರಜಿತ್ ಅಮೀನ್ ಏರಮಲೆ ಕಾರ್ಯಕ್ರಮ ನಿರೂಪಿಸಿದರು.

ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರಿಗೆ ಆದಾಯ ತೆರಿಗೆ, ಜಿಎಸ್‌ಟಿ ಮಾಹಿತಿ ಬಗ್ಗೆ ರಾಜ್ಯ ಮಟ್ಟದ ವಿಶೇಷ ಕಾರ್ಯಾಗಾರ

ಕೊಡಗಿನ ಎಲ್ಲ ಸಹಕಾರ ಸಂಘಗಳು ಪಾರದರ್ಶಕ ಆಡಳಿತ ನೀಡಲಿ: ಗಣಪತಿ

ಮಡಿಕೇರಿ: ಸಹಕಾರ ಸಂಘಗಳು ಪ್ರತಿವರ್ಷ ಕಡ್ಡಾಯವಾಗಿ ಲೆಕ್ಕಪತ್ರ ಪರಿಶೋಧನೆ (ಆಡಿಟಿಂಗ್) ಗೆ ಒಳಪಡಿಸುವ ಮೂಲಕ ಪಾರದರ್ಶಕ ಆಡಳಿತವನ್ನು ನೀಡಬೇಕು ಎಂದು ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಅಧ್ಯಕ್ಷ ಕೆ.ಪಿ.ಗಣಪತಿ (ಬಾಂಡ್) ಕರೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ಮತ್ತು ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಂಯುಕ್ತಾಶ್ರಯದಲ್ಲಿ ನಗರದ ಖಾಸಗಿ ಹೊಟೇಲ್ ಸಭಾಂಗಣದಲ್ಲಿ ನಡೆದ ಜಿಲ್ಲೆಯ ಸಹಕಾರ ಸಂಘಗಳ ಅಧ್ಯಕ್ಷರುಗಳಿಗೆ ಆದಾಯ ತೆರಿಗೆ, ಜಿಎಸ್‌ಟಿ ಮಾಹಿತಿ ಹಾಗೂ ಪದಾಧಿಕಾರಿಗಳ ಕರ್ತವ್ಯ, ಜವಾಬ್ದಾರಿ ಕುರಿತ ರಾಜ್ಯ ಮಟ್ಟದ ವಿಶೇಷ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಹಿರಿಯರ ಮಾರ್ಗದರ್ಶನದಲ್ಲಿ ಯಶಸ್ವಿಯಾಗಿ ನಡೆದುಕೊಂಡು ಬಂದಿರುವ ಕೊಡಗು ಜಿಲ್ಲೆಯ ಸಹಕಾರಿ ಕ್ಷೇತ್ರಕ್ಕೆ 115 ವರ್ಷಗಳ ಇತಿಹಾಸವಿದೆ. ಉತ್ತಮ ಸಹಕಾರಿ ಸಂಘಗಳಿರುವ ಹೆಗ್ಗಳಿಕೆಯನ್ನು ಹೊಂದಿರುವ ಜಿಲ್ಲೆ ರಾಜ್ಯದಲ್ಲಿಯೇ ಮುಂಚೂಣಿಯಲ್ಲಿದೆ ಮತ್ತು ಮಾದರಿ ಎನಿಸಿದೆ. ಈ ಖ್ಯಾತಿ ಹೀಗೆ ಮುಂದುವರಿಯಬೇಕಾದರೆ ಪಾರದರ್ಶಕ ಆಡಳಿತ ನಡೆಸುವುದು ಮುಖ್ಯ ಎಂದರು.

ಜಿಲ್ಲೆಯಲ್ಲಿರುವ ಒಟ್ಟು ಸಹಕಾರಿ ಸಂಘಗಳಲ್ಲಿ 103 ಮಾತ್ರ ಲಾಭದಲ್ಲಿದ್ದು, ಉಳಿದವು ನಷ್ಟದಲ್ಲಿವೆ. ಈ ಹಿಂದೆ ಇದ್ದ 115 ದವಸ ಭಂಡಾರಗಳಲ್ಲಿ ಪ್ರಸ್ತುತ 76 ಮಾತ್ರ ಕಾರ್ಯನಿರ್ವಹಿಸುತ್ತಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಪಿ.ಯು.ರಾಬಿನ್ ದೇವಯ್ಯ, ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಪಟ್ಟಣ ಸಹಕಾರ ಸಂಘ, ದವಸ ಭಂಡಾರ ಸೇರಿದಂತೆ ಸಹಕಾರಿ ಕ್ಷೇತ್ರದ ವಿವಿಧ ವಿಭಾಗಗಳಲ್ಲಿ ಸಣ್ಣ ಸಣ್ಣ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸಹಕಾರಿ ಕಾಯ್ದೆ ಮತ್ತು ತೆರಿಗೆ ಪದ್ಧತಿಯ ಕುರಿತು ಸಹಕಾರಿಗಳಿಗೆ ಮನದಟ್ಟು ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ರಾಜ್ಯ ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ ವೀರಾಜಪೇಟೆಯ ಹಿರಿಯ ಸಹಕಾರಿ ಬಿ.ಬಿ.ನಾಣಯ್ಯ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಯಾಗಿದ್ದ ಬೆಂಗಳೂರಿನ ಸನ್ನದು ಲೆಕ್ಕಿಗ ಸಿ.ಎ.ಅನಿಲ್ ಭಾರದ್ವಾಜ್ ಅವರು ಆದಾಯ ತೆರಿಗೆ, ಸರಕು ಮತ್ತು ಸೇವಾ ತೆರಿಗೆಯ ಕುರಿತು ಮಾಹಿತಿ ನೀಡಿದರು. ವಿಶೇಷ ಆಹ್ವಾನಿತರಾಗಿ ಕೊಡಗು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನ ಉಪಾಧ್ಯಕ್ಷ ಹೆಚ್.ಕೆ.ಮಾದಪ್ಪ, ಮುಖ್ಯ ಅತಿಥಿಗಳಾಗಿ ಕೊಡಗು ಜಿಲ್ಲಾ ಸಹಕಾರ ಯೂನಿಯನ್ ನಿರ್ದೇಶಕರಾದ ಕೆ.ಟಿ.ಪರಮೇಶ್, ಬಲ್ಲಾರಂಡ ಮಣಿ ಉತ್ತಪ್ಪ, ಎಂ.ಟಿ.ಸುಬ್ಬಯ್ಯ, ಎಂ.ಎಂ.ಶ್ಯಾಮಲಾ, ಅಮೃತ್ ವಿ.ಸಿ., ಎಸ್.ಆರ್.ಸುನಿಲ್ ರಾವ್, ಹೆಚ್.ಎಂ.ರಮೇಶ್, ಕೊಡಗು ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕ ಹೆಚ್.ಡಿ.ರವಿಕುಮಾರ್, ಕೆಐಸಿಎಂನ ಪ್ರಾಂಶುಪಾಲ ಮತ್ತು ಸಮನ್ವಯಾಕಾರಿ ಪುಟ್ಟಸ್ವಾಮಿ, ಕೊಡಗು ಜಿಲ್ಲಾ ಸಹಕಾರ ಯೂನಿಯನ್ ಸಿಇಒ ಯೋಗೇಂದ್ರ ನಾಯಕ್ ಇದ್ದರು.

ಸುತ್ತಮುತ್ತ

ಇಂದು ಪಾವೂರು ಪೆರ್ಮನಂಜಿಯಲ್ಲಿ ಪ್ರತಿಷ್ಠಾ ಕಲಶಾಭಿಷೇಕ

ಮಂಜೇಶ್ವರ: ಪಾವೂರು ಪೆರ್ಮನಂಜಿ ಶ್ರೀ ನಾಗಬ್ರಹ್ಮ, ರಕ್ತೇಶ್ವರಿ, ಗುಳಿಗ ಸಾನಿಧ್ಯ ಕುಕ್ಕೊಳಿಗೆ ಪುನರ್ ಪ್ರತಿಷ್ಠಾ ಕಲಶಾಭಿಷೇಕ ಫೆ.28ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಿಗ್ಗೆ 6ರಿಂದ ಗಣಪತಿ ಹೋಮ ಹಾಗೂ ವಿವಿಧ ವೈದಿಕ ಕಾರ್ಯಕ್ರಮ, 7.30ರಿಂದ ಶ್ರೀ ನಾಗಬ್ರಹ್ಮ, ರಕ್ತೇಶ್ವರಿ, ಗುಳಿಗ ಸಾನಿಧ್ಯದಲ್ಲಿ ಪುನರ್ ಪ್ರತಿಷ್ಠಾ ಕಲಶಾಭಿಷೇಕ, ಆಶ್ಲೇಷ ಬಲಿಪೂಜೆ, ವಟು ಆರಾಧನೆ, ಮಧ್ಯಾಹ್ನ 11.50ಕ್ಕೆ ಮಾಣಿಲ ಶ್ರೀಧಾಮದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿಯವರು ಕ್ಷೇತ್ರಕ್ಕೆ ಆಗಮನ, ಮಧ್ಯಾಹ್ನ 12ಕ್ಕೆ ಮಹಾಪೂಜೆ, ದರ್ಶನ ಸೇವೆ, ಪ್ರಸಾದ ವಿತರಣೆ, ಮಧ್ಯಾಹ್ನ 2ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ಜರಗಲಿದೆ.

ಇಂದು ಯಕ್ಷಗಾನ ಕಲಾ ಸಂಘದ ವಾರ್ಷಿಕೋತ್ಸವ

ಮಂಜೇಶ್ವರ: ಪಾವೂರು ಪೊಯ್ಯೆ ಶ್ರೀ ಚಾಮುಂಡೇಶ್ವರೀ ಕೃಪಾಪೋಷಿತ ಯಕ್ಷಗಾನ ಕಲಾ ಸಂಘದ 42ನೇ ವಾರ್ಷಿಕೋತ್ಸವ ಮತ್ತು ಶ್ರೀ ಚಾಮುಂಡೇಶ್ವರೀ ಮಂದಿರದ ವಾರ್ಷಿಕ ದಿನಾಚರಣೆ ಫೆ.28ರಂದು ವಿವಿಧ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಬೆಳಿಗ್ಗೆ 8ಗಂಟೆಗೆ ಗಣಪತಿಹೋಮ, ಕಲಶಾಭಿಷೇಕ, ಮಧ್ಯಾಹ್ನ 12.30ಕ್ಕೆ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ, ಸಂಜೆ 6.30ರಿಂದ ವಾರ್ಷಿಕ ಮಹಾಪೂಜೆ, ರಾತ್ರಿ 7ಗಂಟೆಗೆ ಪುಟಾಣಿಗಳಿಂದ ವಿವಿಧ ವಿನೋದಾವಳಿಗಳು, 7.30ರಿಂದ ಸಭಾ ಕಾರ್ಯಕ್ರಮ, 8ರಿಂದ 11.30ರ ತನಕ ಯಕ್ಷಗಾನ ಬಯಲಾಟ ಪ್ರದರ್ಶನಗೊಳ್ಳಲಿದೆ.

ಸೋಂಕಾಲ್: ಮನೆ ಅಂಗಳದಲ್ಲಿ ಐದು ನಾಯಿ ಮರಿ ಸತ್ತ ಸ್ಥಿತಿಯಲ್ಲಿ ಪತ್ತೆ

ಉಪ್ಪಳ: ಬೀದಿ ನಾಯಿಯ ಐದು ಮರಿಗಳು ನೂತನವಾಗಿ ನಿರ್ಮಿಸಿದ ವಾಸವಿಲ್ಲದ ಮನೆಯ ಅಂಗಳದಲ್ಲಿ ಸತ್ತು ಬಿದ್ದು ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದ್ದು ದುರ್ವಾಸನೆಯಿಂದ ಪರಿಸರ ನಿವಾಸಿಗಳಲ್ಲಿ ಆತಂಕ ಸೃಷ್ಟಿಯಾಗಿದೆ. ಮಂಗಲ್ಪಾಡಿ ಪಂಚಾಯತ್‌ನ 20ನೇ ವಾರ್ಡ್ ಪ್ರತಾಪನಗರ ರಸ್ತೆಯ ಸೋಂಕಾಲಿನಲ್ಲಿ ಈ ಘಟನೆ ನಡೆದಿದೆ. ಬಾಯಾರು ನಿವಾಸಿಯೋರ್ವರದ್ದು ನೂತನವಾಗಿ ನಿರ್ಮಿಸಿ ಕೆಲಸ ಪೂರ್ತಿಕೊಂಡು ಮನೆ ಗೃಹಪ್ರವೇಶವಾಗದ ಈ ಮನೆಯ ಅಂಗಳದ ವಿವಿಧೆಡೆ ಹಾಗೂ ವರಾಂಡದಲ್ಲಿ ಒಟ್ಟು ಸುಮಾರು ಐದು ನಾಯಿ ಮರಿಗಳು ಎರಡು ದಿನಗಳ ಹಿಂದೆ ಸತ್ತು ಹೋಗಿ ಕೊಳೆತ ಸ್ಥಿತಿಯಲ್ಲಿ ಸ್ಥಳೀಯರ ಗಮನಕ್ಕೆ ಬಂದಿದೆ. ಇದರಿಂದ ದುರ್ವಾಸನೆಯಿಂದ ಪರಿಸರದ ಕುಟುಂಬಕ್ಕೆ ಹಾಗೂ ಪಾದಚಾರಿಗಳು ಸಮಸ್ಯೆಗೊಳಗಾಗಿದ್ದಾರೆ. ಹಲವು ದಿನಗಳಿಂದ ಈ ಬೀದಿ ನಾಯಿ ಮರಿಗಳು ಮತ್ತು ಇತರ ನಾಯಿ ಈ ಪರಿಸರದಲ್ಲಿ ಟಿಕಾಣಿ ಹೂಡಿತ್ತು. ದಿಢೀರನೆ ಸತ್ತು ಬಿದ್ದಿರುವುದು ಸ್ಥಳೀಯರಲ್ಲಿ ಆತಂಕ ಮೂಡಿಸುವಂತಾಗಿದೆ. ಈ ಬಗ್ಗೆ ಪಂಚಾಯತ್ ಸದಸ್ಯರಿಗೆ ಮಾಹಿತಿ ನೀಡಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ತನಿಖೆ ನಡೆಸಲು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ರಂಗ ಚಿನ್ನಾರಿಯಲ್ಲಿ ಪ್ರತಿಭಾನಂದಿನಿ: ಭರತನಾಟ್ಯ ಶಿವಾರ್ಪಣಂ

ಕಾಸರಗೋಡು: ರಂಗ ಚಿನ್ನಾರಿ ಕಾಸರಗೋಡು ಸಾಮಾಜಿಕ ಸಾಹಿತ್ಯಕ ಸಾಂಸ್ಕೃತಿಕ ಸಂಸ್ಥೆ, ಸ್ವರ ಚಿನ್ನಾರಿ ಸಂಗೀತ ಘಟಕ, ನಾರಿಚಿನ್ನಾರಿ ಮಹಿಳಾ ಘಟಕ ಏರ್ಪಡಿಸುವ ಪ್ರತಿಭಾ ನಂದಿನಿ ಕರಂದಕ್ಕಾಡು



ಪದ್ಮಗಿರಿ ಕಲಾಕುಟೀರದಲ್ಲಿ ಜರಗಿತು. ನಾರಿಚಿನ್ನಾರಿ ಅಧ್ಯಕ್ಷೆ ಕೆ.ಸವಿತಾ ಟೀಚರ್ ಅಧ್ಯಕ್ಷತೆ ವಹಿಸಿದ್ದರು. ನಗರಸಭಾ ಸದಸ್ಯೆ ದಿವ್ಯಾಸಂದೀಪ್ ಉದ್ಘಾಟಿಸಿದರು. ನೀರ್ಚಾಲು ಶಾಲೆ ಸಂಸ್ಕೃತ ಅಧ್ಯಾಪಿಕೆ ಅಕ್ಷತಾ ಭಟ್ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದರು. ತುದಿಗಾಲಲ್ಲಿ ನಿಲ್ಲುವ ಸ್ಪರ್ಧೆಯಲ್ಲಿ ಇಂಡಿಯಾ ಬುಕ್ ಆಫ್ ರೆಕಾರ್ಡ್ ಪಡೆದ ಆಶಿತಾ ಅವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ವಿಜಯಲಕ್ಷ್ಮೀ ಶಾನುಭೋಗ್, ಲಕ್ಷ್ಮೀ ಕೆ., ದಿವ್ಯಾಗಟ್ಟಿ ಪರಕ್ಕಿಲ, ಸೌಮ್ಯಾ ಪ್ರವೀಣ್, ಸರ್ವಮಂಗಳ ಜಯ ಪುಣಿಂಚಿತ್ತಾಯ ಕವನವಾಚನ ಮಾಡಿದರು. ಪ್ರಣಮ್ಯ ಕೆ.ಎಸ್. ಏಕಪಾತ್ರಾಭಿನಯದ ಮೂಲಕ ಗಮನಸೆಳೆದರು. ವಿದುಷಿ ಅಶ್ವಿನಿ ಕೆ.ಎಂ. ಹಾಗೂ ವಿದುಷಿ ವಿಷಯಾ ಬಾಲಕೃಷ್ಣನ್ ಅವರಿಂದ ಶಿವಾರ್ಪಣೆ ಭರತನಾಟ್ಯ ಜನಮನಸೂರೆಗೊಂಡಿತು.

ಕಾಸರಗೋಡಿನಲ್ಲಿ ಕನ್ನಡ ಅಸ್ಮಿತೆಯ ಕುರಿತು ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ವಿಚಾರ ಸಂಕಿರಣ

ಬಹುಭಾಷೆಗಳ ಸೊಗಡೇ ಕರಾವಳಿಯ ನೈಜ ಅಸ್ಮಿತೆ: ಡಾ.ಬಿಳಿಮಲೆ

ಮಂಜೇಶ್ವರ: ಬಹುಭಾಷಾ ಅಸ್ತಿತ್ವದ ಮೇಲೆಯೇ ನಮ್ಮ ಅಸ್ಮಿತೆ ರೂಪುಗೊಳ್ಳುತ್ತದೆ. ಅದುವೇ ಕರಾವಳಿಯ ನೈಜ ಅಸ್ಮಿತೆ. ಆ ಮೂಲಕ ಕನ್ನಡದ ಅಸ್ಮಿತೆಯನ್ನು ಗಟ್ಟಿಗೊಳಿಸಬೇಕು ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.



ಕನ್ನಡ ಅಭಿವೃದ್ಧಿ ಪ್ರಾಧಿಕಾರ ಬೆಂಗಳೂರು ಮತ್ತು ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಸಹಯೋಗದಲ್ಲಿ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಕನ್ನಡ ವಿಭಾಗ ಮತ್ತು ಗಿಳಿವಿಂಡು ಕನ್ನಡ ಸಾಹಿತ್ಯಕ ಮತ್ತು ಸಾಂಸ್ಕೃತಿಕ ವೇದಿಕೆಯ ಸಹಕಾರದೊಂದಿಗೆ ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನಲ್ಲಿ ಗುರುವಾರ ನಡೆದ 'ಕಾಸರಗೋಡಿನಲ್ಲಿ ಕನ್ನಡ ಅಸ್ಮಿತೆ ಯುವಶಕ್ತಿ ಮತ್ತು ಭವಿಷ್ಯ' ವಿಷಯದ ಕುರಿತು ಒಂದು ದಿನದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಅಧ್ಯಕ್ಷ ಡಾ.ರಮಾನಂದ ಬನಾರಿ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಸಂತೋಷ ಹಾನಗಲ್ಲ, ಸಾಹಿತಿ,ಪತ್ರಕರ್ತ ರಾಧಾಕೃಷ್ಣ ಕೆ.ಉಳಿಯತ್ತಡ್ಕ ಅತಿಥಿಗಳಾಗಿದ್ದರು.

ನಂದಿನಿ, ವಿದ್ಯಾಲಕ್ಷ್ಮಿ ಪ್ರಾರ್ಥನೆ ಹಾಡಿದರು. ಮಂಜೇಶ್ವರ ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಪ್ರಾಂಶುಪಾಲ ಡಾ.ಮಹಮ್ಮದಾಲಿ ಪ್ರಸ್ತಾವನೆಗೈದರು. ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಕಾರ್ಯದರ್ಶಿ ಡಾ.ಕಿಶೋರ್‌ಕುಮಾರ್ ರೈ ಶೇಣಿ ಸ್ವಾಗತಿಸಿ, ಕೋಶಾಧಿಕಾರಿ ವಿಶಾಲಾಕ್ಷ ಪುತ್ರಕಳ ವಂದಿಸಿ, ಗೋವಿಂದ ಪೈ ಸ್ಮಾರಕ ಸರಕಾರಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಶಿವಶಂಕರ ಪಿ. ನಿರೂಪಿಸಿದರು.

ಬಳಿಕ ಕಾಸರಗೋಡಿನ ಕನ್ನಡದ ಇತಿಹಾಸ ಮತ್ತು ಸವಾಲುಗಳ ಬಗ್ಗೆ ವಿಚಾರಗೋಷ್ಠಿ ನಡೆಯಿತು. ಆಕಾಶವಾಣಿ ವಿಶ್ರಾಂತ ನಿರ್ದೇಶಕ ಡಾ. ಸದಾನಂದ ಪೆರ್ಲ (ಕಾಸರಗೋಡಿನ ಕನ್ನಡ ಹೋರಾಟದ ಇತಿಹಾಸ), ಕಾಸರಗೋಡು ಸರಕಾರಿ ಕಾಲೇಜಿನ ಪ್ರಾಧ್ಯಾಪಕ ರಾಧಾಕೃಷ್ಣ ಬೆಳ್ಳೂರು (ಕನ್ನಡ ಸಾಹಿತ್ಯ ಮತ್ತು ಕನ್ನಡ ಅಸ್ಮಿತೆ), ಡಾ.ಬಾಲಕೃಷ್ಣ ಹೊಸಂಗಡಿ (ಶೈಕ್ಷಣಿಕ ಮತ್ತು ಔದ್ಯೋಗಿಕ ಸವಾಲುಗಳು) ಡಾ.ಶ್ರೀಧರ ಎನ್. (ಸಾಂಸ್ಕೃತಿಕ ಮತ್ತು ರಾಜಕೀಯ ಸವಾಲುಗಳು), ದೀಕ್ಷಿತಾ (ಕನ್ನಡ ವಿದ್ಯಾರ್ಥಿಗಳ ಸಮಸ್ಯೆಗಳು), ಅನಿರುದ್ಧ (ಕನ್ನಡದ ಅಸ್ತಿತ್ವ – ವಿದ್ಯಾರ್ಥಿಗಳ ಪಾತ್ರ) ಪ್ರಬಂಧ ಮಂಡನೆ ಮಾಡಿದರು. ಸಹಾಯಕ ಪ್ರಾಧ್ಯಾಪಕ ಡಾ.ಸುಜೀಶ್ ಎಸ್. ಸಮನ್ವಯಕಾರರಾಗಿದ್ದರು.

ಅಪರಾಹ್ನ ಸಾಂಸ್ಕೃತಿಕ ವಲಯದ ಕನ್ನಡ ಅಸ್ಮಿತೆ ಕುರಿತು ಸಂವಾದ ಕಾರ್ಯಕ್ರಮ ನಡೆಯಿತು. ಸಾಹಿತಿ ಡಾ.ಮಹೇಶ್ವರಿ ಯು.,ಯಕ್ಷಗಾನ ಗುರು ಶಿವಶಂಕರ ದಿವಾಣ, ರಂಗ ನಿರ್ದೇಶಕ ಉದಯ ಸಾರಂಗ್, ಗಮಕಿ ಶಶಿರಾಜ ನೀಲಂಗಳ, ವಿದುಷಿ ಅನುಪಮಾ ರಾಘವೇಂದ್ರ ಉಡುಪುಮೂಲೆ, ಶ್ರೀಧರ ರೈ ಕಾಸರಗೋಡು ಸಂಪನ್ಮೂಲ ವ್ಯಕ್ತಿಗಳಾಗಿ ಮಾತನಾಡಿದರು. ಕಾರ್ತಿಕ್ ಪಿ.ಕೆ., ದೇವಿಕಾ ಪಿ., ಆದಿಶ್ರೀ ಎಸ್.ಎನ್., ಎ.ವಿವೇಕ್, ಮನೀಶ್, ಪೂಜಾ, ಶಿವಾನಿ ಕೆ., ಕೃಷ್ಣ ಪ್ರಣಾಮ್ ಸಂವಾದದಲ್ಲಿದ್ದರು.

ಸಮಾರೋಪ ಸಮಾರಂಭ

ಸಂಜೆ ನಡೆದ ಸಮಾರೋಪ ಸಮಾರಂಭದಲ್ಲಿ ಖ್ಯಾತ ವಿಮರ್ಶಕ ಡಾ.ಎಸ್.ಆರ್.ವಿಜಯಶಂಕರ್ ಬೆಂಗಳೂರು ಸಮಾರೋಪ ಭಾಷಣ ಮಾಡಿದರು. ಕಾಸರಗೋಡು ಜಿಲ್ಲಾ ಕನ್ನಡ ಲೇಖಕರ ಸಂಘದ ಕಾರ್ಯಾಧ್ಯಕ್ಷ ಪ್ರೊ.ಪಿ.ಎನ್.ಮೂಡಿತ್ತಾಯ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಸಮಿತಿ ಅಧ್ಯಕ್ಷ ಮುರಳೀಧರ ಬಳ್ಳಕ್ಕುರಾಯ, ಕನ್ನಡ ಸಾಹಿತ್ಯ ಪರಿಷತ್‌ನ ಕೇರಳ ಗಡಿನಾಡ ಘಟಕ ಅಧ್ಯಕ್ಷ ಡಾ.ಜಯಪ್ರಕಾಶ್ ನಾರಾಯಣ ತೊಟ್ಟೆತ್ತೋಡಿ, ಕೇರಳ ಪ್ರಾಂತ್ಯ ಕನ್ನಡ ಮಾಧ್ಯಮ ಅಧ್ಯಾಪಕರ ಸಂಘದ ಅಧ್ಯಕ್ಷ ಸುಕೇಶ ಎ. ಮಾತನಾಡಿದರು. ಸಹಾಯಕ ಪ್ರಾಧ್ಯಾಪಕಿ ಜಯಂತಿ ಕೆ. ಸ್ವಾಗತಿಸಿ, ವಾಗ್ಮಿ ಆಯಿಶಾ ಪೆರ್ಲ ವಂದಿಸಿದರು.

ಕೃತಿ ಸರಣಿಯ ಆರನೇ ಸಂಚಿಕೆ ಬಿಡುಗಡೆ

ಖ್ಯಾತ ಸಾಹಿತಿ ಡಾ. ರಮಾನಂದ ಬನಾರಿ ಅವರ ಸಾರಥ್ಯದಲ್ಲಿ ಪ್ರಕಟಗೊಳ್ಳುತ್ತಿರುವ 'ಕನ್ನಡಿಯಲ್ಲಿ ಕನ್ನಡಿಗ' ಕೃತಿ ಸರಣಿಯ ಆರನೇ ಸಂಚಿಕೆಯನ್ನು ಸಾಹಿತಿ, ನಿವೃತ್ತ ಪ್ರಾಧ್ಯಾಪಿಕೆ ಡಾ.ಪ್ರಮೀಳಾ ಮಾಧವ್ ಬಿಡುಗಡೆಗೊಳಿಸಿದರು.

ಪರಪ್ಪ ಬ್ಲಾಕ್ ಪಂ.ಅಭಿವೃದ್ಧಿ ವಿಚಾರ ಸಂಕಿರಣ: ಕೃಷಿ, ಆರೋಗ್ಯಕ್ಕೆ ಆದ್ಯತೆ



ಕಾಸರಗೋಡು: ಪರಪ್ಪ ಬ್ಲಾಕ್ ಪಂಚಾಯತ್ ಅಭಿವೃದ್ಧಿ ವಿಚಾರ ಸಂಕಿರಣ ನಡೆಯಿತು. ವಿಚಾರ ಸಂಕಿರಣದಲ್ಲಿ ಕೃಷಿ ಮತ್ತು ಆರೋಗ್ಯ ವಲಯಗಳಿಗೆ ಆದ್ಯತೆ ನೀಡಲಾಯಿತು. ಪಾಳುಭೂಮಿ ಮುಕ್ತ ಬ್ಲಾಕ್ ಯೋಜನೆ, ಎಲ್ಲಾ ಶಾಲೆಗಳಲ್ಲಿ ಕೃಷಿ ಯೋಜನೆ, ಮಿಶ್ರ ಕೃಷಿಗೆ ಬೆಂಬಲ, ಹೈನುಗಾರಿಕಾ ಗುಂಪುಗಳಿಗೆ ಮಿನಿ ಡೈರಿ ಫಾರ್ಮ್ ನೆರವು, ಹಾಲಿನ ಎಟಿಎಂ, ಮೊಬೈಲ್ ಪಶುವೈದ್ಯಕೀಯ ಘಟಕ, ಮೇವು ಕೃಷಿ, ಹಾಲು ಸಬ್ಸಿಡಿ, ಪಶು ಆಹಾರ ಇತ್ಯಾದಿ ಯೋಜನೆಗಳ ಅನುಮೋದಿಸಲಾಯಿತು.

ಆರೋಗ್ಯ ವಲಯದಲ್ಲಿ ಪಲ್ಸ್ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮ, ಡಯಾಲಿಸಿಸ್ ಕೇಂದ್ರಗಳ ಕಾರ್ಯಾಚರಣೆ, ಮೂತ್ರಪಿಂಡ ಕಸಿ ಯೋಜನೆಯಡಿ ಔಷಧಿಗಳನ್ನು ಒದಗಿಸುವುದು, ಆಸ್ಪತ್ರೆಗಳಲ್ಲಿ ಔಷಧಿ ಗಳ ಖರೀದಿ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ವಿವಿಧ ಯೋಜನೆಗಳಿಗೆ ಆದ್ಯತೆ ನೀಡಲಾಯಿತು.

ಬ್ಲಾಕ್ ಪಂಚಾಯತ್ ಅಧ್ಯಕ್ಷೆ ಬಿಂದು ಕೃಷ್ಣನ್ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿದರು. ಬ್ಲಾಕ್ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಉಪಾಧ್ಯಕ್ಷೆ ಟಿ.ಕೆ.ದೀಪಾ ವಹಿಸಿದ್ದರು. ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ಕೆ.ಪಿ.ಚಿತ್ರಲೇಖಾ ಕರಡು ಯೋಜನೆ ಮಂಡಿಸಿದರು. ಗ್ರಾ.ಪಂ. ಅಧ್ಯಕ್ಷ ಎ.ಲತಾ, ಎಂ.ರಾಜನ್, ಟಿ.ವಿ.ಜಯಚಂದ್ರನ್, ಕೆ.ರಜಿತಾ, ಪಿ.ರಘುನಾಥ್, ಬ್ಲಾಕ್ ಪಂ. ಆರೋಗ್ಯ ಮತ್ತು ಶಿಕ್ಷಣ ಸ್ಥಾಯೀ ಸಮಿತಿ ಅಧ್ಯಕ್ಷ ಪರಕೋಲ್ ರಾಜನ್, ಕ್ಷೇಮಕಾರ್ಯ ಸ್ಥಾಯೀ ಸಮಿತಿ ಅಧ್ಯಕ್ಷ ಜೆ.ಸಿ.ಚಾಕೊ, ಯೋಜನಾ ಸಮಿತಿ ಉಪಾಧ್ಯಕ್ಷ ಎ.ಕೃಷ್ಣರಾಜ್ ಮಾತನಾಡಿದರು. ಬ್ಲಾಕ್ ಪಂಚಾಯತ್ ಕಾರ್ಯದರ್ಶಿ ಕೆ.ಸುನಿಲ್ ಕುಮಾರ್ ಸ್ವಾಗತಿಸಿದರು. ಜಂಟಿ ಬಿಡಿಒ ಕೆ.ಜಿ.ಬಿಜು ಕುಮಾರ್ ವಂದಿಸಿದರು.

ಜಿಲ್ಲಾಧಿಕಾರಿ ಇನ್ಬಶೇಖರ್ ವರ್ಗಾವಣೆ: ಅರ್ಜುನ್ ಪಾಂಡಿಯನ್ ನೂತನ ಡೀಸಿ

ಕಾಸರಗೋಡು: ವಿಧಾನಸಭಾ ಚುನಾವಣೆಗೂ ಮುನ್ನ ರಾಜ್ಯದ ಐಎಎಸ್ ಅಧಿಕಾರಿಗಳ ಸ್ಥಾನಗಳಲ್ಲಿ ಪ್ರಮುಖ ಬದಲಾವಣೆ ಮಾಡಲಾಗಿದೆ. ಕಾಸರಗೋಡು ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರನ್ನು ವರ್ಗಾವಣೆ ಮಾಡಲಾಗಿದೆ. ಪ್ರಸ್ತುತ ತೃಶೂರು ಜಿಲ್ಲಾಧಿಕಾರಿಯಾಗಿರುವ ಅರ್ಜುನ್ ಪಾಂಡಿಯನ್ ಅವರನ್ನು ಕಾಸರಗೋಡಿನ ನೂತನ ಜಿಲ್ಲಾಧಿಕಾರಿಯಾಗಿ ಸರಕಾರ ನೇಮಿಸಿದೆ.

ಹೊಸ ಹುದ್ದೆ ನೇಮಕವಾಗಿಲ್ಲ

ಪ್ರವಾಸೋದ್ಯಮ ನಿರ್ದೇಶಕಿ ಶಿಖಾ ಸುರೇಂದ್ರನ್ ಅವರನ್ನು ತೃಶೂರು ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ. ವರ್ಗಾವಣೆಗೊಂಡ ಕಾಸರಗೋಡು ಜಿಲ್ಲಾಧಿಕಾರಿ ಕೆ.ಇನ್ಬಶೇಖರ್ ಅವರ ಹೊಸ ಹುದ್ದೆ ಎಲ್ಲಿದೆ ಎಂದು ಸರಕಾರಿ ಆದೇಶದಲ್ಲಿ ಇನ್ನೂ ನಿರ್ದಿಷ್ಟಪಡಿಸಿಲ್ಲ.

ಅರ್ಜುನ್ ಸಾಧನೆಗಳು ಗಮನಾರ್ಹ

ನಾಗರಿಕ ಸೇವೆಯ ಹೊರತಾಗಿ ಪರ್ವತಾರೋಹಣ ಕ್ಷೇತ್ರದಲ್ಲಿ ಅರ್ಜುನ್ ಪಾಂಡಿಯನ್ ಅವರ ಸಾಧನೆಗಳು ಬಹಳ ಗಮನಾರ್ಹವಾಗಿವೆ. ಆಫ್ರಿಕಾದ ಅತ್ಯುನ್ನತ ಶಿಖರವಾದ ಕಿಲಿಮಾಂಜಾರೋ ಮತ್ತು ಯುರೋಪ್‌ನ ಅತ್ಯುನ್ನತ ಶಿಖರವಾದ ಮೌಂಟ್ ಎಲ್ಬ್ರಸ್‌ನ್ನು ಏರಿದ ಮೊದಲ ಐಎಎಸ್ ಅಧಿಕಾರಿ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ. ಅರ್ಜುನ್ ಪಾಂಡಿಯನ್ 2024–25ನೇ ಸಾಲಿನ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಅತ್ಯುತ್ತಮ ಕಲೆಕ್ಟರ್ ಪ್ರಶಸ್ತಿಯನ್ನು ಕೂಡಾ ಗೆದ್ದಿದ್ದಾರೆ.

ಐಎಎಸ್‌ಗೆ ಟೀ ಬ್ಯಾಗ್ ನೆರವು



ಇಡುಕ್ಕಿ ಜಿಲ್ಲೆಯ ಎಲಪ್ಪರ ಬೊನಾಮಿನಲ್ಲಿ ಜನಿಸಿದ ಅರ್ಜುನ್ ಪಾಂಡಿಯನ್ ಅವರು 2017ರ ಬ್ಯಾಚ್ ಕೇರಳ ಕೇಡರ್ ಐಎಎಸ್ ಅಧಿಕಾರಿಯಾಗಿದ್ದಾರೆ. ತೀವ್ರ ಆರ್ಥಿಕ ತೊಂದರೆಗಳನ್ನು ದಾಟಿ ಅವರು ನಾಗರಿಕ ಸೇವಾ ಅಧಿಕಾರಿಯಾಗುವ ಕನಸನ್ನು ಸಾಧಿಸಿದವರು. ಟೀ ಬ್ಯಾಗ್ ಹೊತ್ತು ಮತ್ತು ಮಕ್ಕಳಿಗೆ ಟ್ಯೂಷನ್ ತೆಗೆದುಕೊಳ್ಳುವ ಮೂಲಕ ಅವರು ತಮ್ಮ ಅಧ್ಯಯನಕ್ಕಾಗಿ ಹಣವನ್ನು ಗಳಿಸಿದರು. ಅವರ ಜೀವನ ಯಶಸ್ಸು ಯುವ ಪೀಳಿಗೆಗೆ ಒಂದು ದೊಡ್ಡ ಸ್ಫೂರ್ತಿಯಾಗಿದೆ.

ಶ್ರೀ ಚೀರುಂಬಾ ಭಗವತೀ, ಪರಿವಾರ ದೈವಗಳ ಬ್ರಹ್ಮಕಲಶ, ನೃತ್ಯ ಬಲಿ ಉತ್ಸವ



ಕಾಸರಗೋಡು: ತೆರುವತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಬ್ರಹ್ಮಕಲಶ – ನಡಾವಳಿ ಮಹೋತ್ಸವದ ಅಂಗವಾಗಿ ಶ್ರೀ ಕ್ಷೇತ್ರದಲ್ಲಿ ಶುಕ್ರವಾರ ಮಹಾಗಣಪತಿ ಹೋಮ, ಕಲಶಪೂಜೆ, ಶ್ರೀ ಚೀರುಂಬಾ ಭಗವತೀ ಹಾಗೂ ಪರಿವಾರ ದೈವಗಳ ಬ್ರಹ್ಮಕಲಶೋತ್ಸವ, ಮಹಾಪೂಜೆ, ಸಾಮೂಹಿಕ ಪ್ರಾರ್ಥನೆ, ಪ್ರಸಾದ ವಿತರಣೆ ಜರಗಿತು. ತಚ್ಚಂಗಾಡು ಲಕ್ಷ್ಮೀಕಾಂತ ಅಗ್ಗಿತ್ತಾಯ ಮತ್ತು ಶಿಷ್ಯರಿಂದ ದೇವರ ನೃತ್ಯ ಬಲಿ ಉತ್ಸವ, ಸಂಜೆ ಶ್ರೀ ಲಲಿತ ಸಹಸ್ರನಾಮಾವಳಿ, ರಾತ್ರಿ ಶ್ರೀ ಕ್ಷೇತ್ರ ಭಂಡಾರ ಮನೆಯಿಂದ ವಾದ್ಯಘೋಷಗಳೊಂದಿಗೆ ಶ್ರೀ ಕ್ಷೇತ್ರಕ್ಕೆ ಭಂಡಾರ ಮೆರವಣಿಗೆ, ಹುಲ್ಪೆ ಮೆರವಣಿಗೆ, ರಾತ್ರಿ ದೇವರ ನೃತ್ಯ ಬಲಿ ಉತ್ಸವ ಇತ್ಯಾದಿಗಳು ಜರಗಿತು.

ಮಿಂಚಿಪದವು ಶ್ರೀ ದೇವಸ್ಥಾನದಲ್ಲಿ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ



ಕಾಸರಗೋಡು: ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ಕ್ಷೇತ್ರದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಿತು.

ಶುಕ್ರವಾರ ಬೆಳಿಗ್ಗೆ 108 ತೆಂಗಿನಕಾಯಿ ಗಣಪತಿ ಹೋಮ, ಶ್ರೀಕೃಷ್ಣ ಭಜನಾ ಮಂಟಪದಲ್ಲಿ ಭಜನಾಮೃತ ನಡೆಯಿತು. ತಂತ್ರಿವರ್ಯರಾದ ಬ್ರಹ್ಮಶ್ರೀವಾಸುದೇವತಂತ್ರಿಕುಂಟಾರು, ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರ ನೇತೃತ್ವದಲ್ಲಿ 11.55ರ ವೃಷಭ ಲಗ್ನ ಸುಮೂಹೂರ್ತದಲ್ಲಿ ಶ್ರೀ ಮಹಾಲಿಂಗೇಶ್ವರ ದೇವರ ಹಾಗೂ ಶ್ರೀ ಕಾವೇರಿಯಮ್ಮನ ಪುನರ್ ಪ್ರತಿಷ್ಠೆ, ಬ್ರಹ್ಮಕಲಶ, ಪ್ರತಿಷ್ಠಾ ಬಲಿ ಜರಗಿತು.

ಮಧ್ಯಾಹ್ನ ಮಹಾಪೂಜೆ, ನಿತ್ಯ ನೈಮಿತ್ತ್ಯಾದಿಗಳ ನಿರ್ಣಯ ಮಹಾ ಮಂತ್ರಾಕ್ಷತೆ, ಪ್ರಸಾದ ವಿತರಣೆ ಜರಗಿತು. ಸಂಜೆ ಯಕ್ಷಗಾನ ಬಯಲಾಟ, ರಾತ್ರಿ ರಂಗಪೂಜೆ, ಶಿವಕಾವೇರಿ ಕಲಾವೇದಿಕೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಜರಗಿತು.

ರಾ.ಹೆ.ಮೇಲ್ಸೇತುವೆ ನಿರ್ಮಾಣದ ಕನಿಲ, ಐಲ ಪ್ರದೇಶಗಳಿಗೆ ಬಿಜೆಪಿ ಜಿಲ್ಲಾಧ್ಯಕ್ಷೆ ಭೇಟಿ



ಮಂಜೇಶ್ವರ: ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಪಾದಚಾರಿಗಳಿಗೆ ನಡೆಯಲು ನಿರ್ಮಾಣವಾಗಲಿರುವ ಮೇಲ್ಸೇತುವೆಗೆ ಅವಕಾಶ ನೀಡಲಾದ ಕನಿಲ ಮತ್ತು ಐಲ ಪ್ರದೇಶಗಳಿಗೆ ಬಿಜೆಪಿ ಕಾಸರಗೋಡು ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ ಮತ್ತು ಬಿಜೆಪಿ ಮುಖಂಡರು ಭೇಟಿ ನೀಡಿದರು.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಯ ನಂತರ ಕನಿಲ ಮತ್ತು ಐಲ ದೇವಾಲಯಗಳಲ್ಲಿ ಜನತೆಗೆ ಉತ್ಸವ ಮೆರವಣಿಗೆಗಳು ನಡೆಸಲು ಅಡ್ಡಿಯಾಗುತ್ತಿದೆ ಎಂದು ಸೂಚಿಸಿ ಬಿಜೆಪಿ ಕಾಸರಗೋಡು ಜಿಲ್ಲಾ ಸಮಿತಿ ನೇತೃತ್ವವು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಕೇಂದ್ರ ರಸ್ತೆ ಮತ್ತು ಹೆದ್ದಾರಿ ಸಚಿವಾಲಯವನ್ನು ಸಂಪರ್ಕಿಸಿತ್ತು. ಅದರಂತೆ ಈ ಎರಡು ಕಡೆಗಳಲ್ಲಿ ಪಾದಚಾರಿಗಳಿಗೆ ನಡೆದಾಡಲು ಅನುಕೂಲವಾಗಲು ಮೇಲ್ಸೇತುವೆಗೆ ಅವಕಾಶ ನೀಡಲಾಗಿದೆ.

ಅವಕಾಶ

ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಪಾದಚಾರಿಗಳಿಗೆ ಅನುಕೂಲವಾಗಲು ಮೇಲ್ಸೇತುವೆಗೆ ಅವಕಾಶ ನೀಡಲಾಗಿದೆ.

ಐಲ ದೇವಾಲಯದ ಟ್ರಸ್ಟಿ ನಾರಾಯಣ ಹೆಗ್ಡೆ ಐಲ ಮತ್ತು ಕನಿಲ ದೇವಾಲಯದ ಪದಾಧಿಕಾರಿಗಳು, ಸಮಿತಿ ಸದಸ್ಯರು, ಬಿಜೆಪಿ ಮಂಜೇಶ್ವರ ಸಮಿತಿ ಅಧ್ಯಕ್ಷ ಆದರ್ಶ್ ಬಿ.ಎಂ., ಕುಂಬಳೆ ಮಂಡಲ ಪ್ರಧಾನ ಕಾರ್ಯದರ್ಶಿ ವಸಂತ ಕುಮಾರ್ ಮಯ್ಯ, ಒಬಿಸಿ ಮೋರ್ಚಾ ಜಿಲ್ಲಾಧ್ಯಕ್ಷ ವಲ್ಸರಾಜ್ ಕೆ.ಪಿ., ಹಿರಿಯ ನಾಯಕರಾದ ವೀರಪ್ಪ ಅಂಬಾರ್, ಮೋಹನದಾಸ್ ಐಲ, ಕಿಶೋರ್ ಕುಮಾರ್ ಬಿ., ಮಾಳಿಗ ಅಬ್ದುಲ್ಲಾ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ವಾರ್ಷಿಕ ಜಾತ್ರಾ ಸಂಭ್ರಮ: ಧ್ವಜಾರೋಹಣ

ಕಾಸರಗೋಡು: ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಾಲಯದ ವಾರ್ಷಿಕ ಜಾತ್ರಾ ಮಹೋತ್ಸವವು ಶುಕ್ರವಾರ ಆರಂಭಗೊಂಡಿದ್ದು ಮಾ.5ರ ತನಕ ವಿವಿಧ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ. ಶುಕ್ರವಾರ ರಾತ್ರಿ ಧ್ವಜಾರೋಹಣ ಮತ್ತು ಭೂತಬಲಿ ಜರಗಿತು.



ಫೆ.28ರಂದು ಬೆಳಿಗ್ಗೆ 7.30ಕ್ಕೆ ಮಲ್ಲ ಶ್ರೀ ದುರ್ಗಾಪರಮೇಶ್ವರೀ ಯಕ್ಷಗಾನ ಕಲಾ ಮಂಡಳಿಯಿಂದ ಯಕ್ಷಗಾನ ಬಯಲಾಟ, 9 ಗಂಟೆಗೆ ಭೂತಬಲಿ, ಪಾಲಕಿ ಸೇವೆ, ನೃತ್ಯ ನಡೆಯಲಿದೆ. ಮಾ.1ರಂದು ಬೆಳಗ್ಗೆ 7.30ಕ್ಕೆ ಭೂತಬಲಿ, ತುಲಾಭಾರ ಸೇವೆ, ಮಹಾಪೂಜೆ, ಸಂಜೆ 6.45ರಿಂದ ವಿದುಷಿ ಅಂಕಿತಾ ಬದಿಯಡ್ಕ – ತಪಸ್ಯಾ ನಾಟ್ಯಾಲಯ ಇವರಿಂದ ಭರತನಾಟ್ಯ, ರಾತ್ರಿ 7.45ರಿಂದ ಭಜನೆ, 9 ಗಂಟೆಗೆ ಭೂತಬಲಿ, ಪಾಲಕಿ ಸೇವೆ, ನೃತ್ಯ ನಡೆಯಲಿದೆ. ಮಾ.2ರಂದು ಬೆಳಿಗ್ಗೆ 7.30ಕ್ಕೆ ಭೂತಬಲಿ, ಭಜನೆ, ತುಲಾಭಾರ ಸೇವೆ, ಮಹಾಪೂಜೆ, ರಾತ್ರಿ 7ರಿಂದ ಕಲಾತಪಸ್ವಿ ಬಿರುದಾಂಕಿತ ನಾಟ್ಯಗುರು ಬಾಲಕೃಷ್ಣ ಮಾಸ್ಟರ್ ಮಂಜೇಶ್ವರ ಅವರ ಶಿಷ್ಯವೃಂದದವರಿಂದ ಶಾಸ್ತ್ರೀಯ ನೃತ್ಯ ಸಂಗಮ, 9ಕ್ಕೆ ಭೂತಬಲಿ, ಅಮ್ಮಂಗೋಡು ಕಟ್ಟೆಪೂಜೆ (ನಡು ದೀಪೋತ್ಸವ), ಪಾಲಕಿ ಸೇವೆ, ನೃತ್ಯ ನಡೆಯಲಿದೆ.

ಮಾ.3ರಂದು ಬೆಳಗ್ಗೆ 7.30ಕ್ಕೆ ಭೂತಬಲಿ, ತುಲಾಭಾರ ಸೇವೆ, ಮಹಾಪೂಜೆ, ರಾತ್ರಿ 7.30ರಿಂದ ಮಲ್ಲ ಶ್ರುತಿನಿಲಯ ಸಂಗೀತ ಶಾಲೆಯ ಗಾನಭೂಷಣ ಮುರಲಿ ಮಾಧವ ಪೆರಂಜೆ ಮತ್ತು ಶಿಷ್ಯವೃಂದವರಿಂದ ಸಂಗೀತಾರ್ಚನೆ, 8.15ರಿಂದ ವನದುರ್ಗಾ ಕಲಾ ಸಂಘ ಮಲ್ಲ ಇವರಿಂದ ಭಕ್ತಿಸಂಗೀತ, 10 ಗಂಟೆಯಿಂದ ಭೂತಬಲಿ, ಸುಡುಮದ್ದು ಪ್ರದರ್ಶನ, ರಥೋತ್ಸವ, ನೃತ್ಯ, ಶಯನ ನಡೆಯಲಿದೆ.

ಶ್ರೀ ದೈವದ ಧೂಮಾವತಿ ನೇಮ

ಮಾ.4ರಂದು ಮುಂಜಾನೆ ಶಯನೋದ್ಘಾಟನೆ, ಮಂಗಳಾಭಿಷೇಕ, ಭೂತಬಲಿ, ಅವಭೃತ ಸ್ನಾನ, ಬಟ್ಟಲು ಕಾಣಿಕೆ, ಧ್ವಜಾವರೋಹಣ, ಮಂತ್ರಾಕ್ಷತೆ ನಡೆಯಲಿದೆ. ಮಾ.5ರಂದು ಬೆಳಿಗ್ಗೆ 10 ಕ್ಕೆ ಶ್ರೀ ದೈವದ ಧೂಮಾವತಿ ನೇಮ ನಡೆಯಲಿದೆ.



ಕಾಟುಕುಕ್ಕೆ ಸಮೀಪ ಮೊಗೇರು ಶ್ರೀ ದುರ್ಗಾಪರಮೇಶ್ವರಿ ದೇವಳದಲ್ಲಿ ಪ್ರತಿಷ್ಠಾ ವರ್ಧಂತಿ ಮಹೋತ್ಸವ ವಿವಿಧ ಕಾರ್ಯಕ್ರಮಗಳೊಂದಿಗೆ ಸಂಪನ್ನಗೊಂಡಿತು. ಮಹೋತ್ಸವದ ಅಂಗವಾಗಿ ದ್ವಾದಶ ನಾರಿಕೇಳ ಗಣಪತಿ ಹವನ, ಸೀಯಾಳಾಭಿಷೇಕ, ನಾಗ ದೇವರಿಗೆ ಪಂಚಾಮೃತಾಭಿಷೇಕ, ತಂಬಿಲ ಸೇವೆ, ದೈವಗಳ ಆರಾಧನೆ, ಸೋಮವಾರ ಚಂಡಿಕಾ ಹವನ, ಪೂರ್ಣಾಹುತಿ, ರಾತ್ರಿ ವಿಶೇಷ ಹೂವಿನ ಪೂಜೆ, ರಂಗಪೂಜೆ, ಪಲ್ಲಕ್ಕಿ ಉತ್ಸವ, ವಸಂತಕಟ್ಟೆ ಪೂಜೆ, ಸುಡುಮದ್ದು ಪ್ರದರ್ಶನ, ಮಂಗಳವಾರ ಮಂತ್ರಾಕ್ಷತೆ ನವಕ ಕಲಶ, ಅವಭೃತ ಸ್ನಾನದೊಂದಿಗೆ ಸಮಾಪ್ತಿಗೊಂಡಿತು.

ಮಿಂಚಿಪದವು ಶ್ರೀ ದೇವಸ್ಥಾನದ ಬ್ರಹ್ಮಕಲಶ | ಧಾರ್ಮಿಕ ಸಭೆಯಲ್ಲಿ ಉಪನ್ಯಾಸ

ಜೀವಜಂತುಗಳಲ್ಲಿ ಮಾನವ ಜನ್ಮವೇ ಶ್ರೇಷ್ಠವಾದುದು: ಪಣಿಕ್ಕರ್

ಮುಳ್ಳೇರಿಯ: ಜಂತುಗಳಲ್ಲಿ ಮಾನವನಾಗಿ ಜನಿಸುವುದೇ ಪುಣ್ಯ. ಶರೀರವೇ ದೇಗುಲ ಇದರ ಪರಿಶುದ್ಧತೆ ಕಾಪಾಡಿಕೊಳ್ಳಬೇಕು ಎಂದು ಪಿಲಿಕ್ಕೋಡ್ ಮಧುಸೂಧನನ್ ಪಣಿಕ್ಕರ್ ಹೇಳಿದ್ದಾರೆ.





ಮಿಂಚಿಪದವು ಶ್ರೀ ಕಾವೇರಿಯಮ್ಮ ಮಹಾಲಿಂಗೇಶ್ವರ ದೇವಾಲಯದ ಪುನರ್ ಪ್ರತಿಷ್ಠೆ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಗುರುವಾರ ನಡೆದ ಧಾರ್ಮಿಕ ಸಭೆಯಲ್ಲಿ ಧಾರ್ಮಿಕ ಉಪನ್ಯಾಸ ನೀಡಿ ಅವರು ಮಾತನಾಡಿದರು.

ವಕೀಲ ದಾಮೋದರ ಅಧ್ಯಕ್ಷತೆ ವಹಿಸಿದ್ದರು. ಕುಕ್ಕಾಜೆ ಸ್ವಾಮೀಜಿ ಆಶೀರ್ವಚನ ನೀಡಿದರು. ಮಾಜಿ ಶಾಸಕಿ ಶಕುಂತಳಾ ಶೆಟ್ಟಿ, ಅಕ್ಷಯ್ ಕೆ.ಸಿ. ಸುಳ್ಯ, ಡಾ.ಲೀಲಾಧರ್, ವಕೀಲ ಸಂಕಪ್ಪ ಪೂಜಾರಿ, ಪ್ರಸಾದ್ ಭಂಡಾರಿ ಎಡಮೊಗರುಗುತ್ತು, ವಕೀಲ ರಾಮಪ್ರಸಾದ್ ಶೆಟ್ಟಿ, ವಕೀಲ ಚಿದಾನಂದ ಕೆದಿಲ್ಲಾಯ, ನಿತ್ಯಾನಂದ ಮಣಿಯಾಣಿ ಬಜ ಉಪಸ್ಥಿತರಿದ್ದರು. ಉದ್ಯಮಿ ನಾರಾಯಣ ಕೇಕಡ್ಕ ಸ್ವಾಗತಿಸಿ, ವೇಣು ಲಿಯೋ ವಂದಿಸಿದರು. ಯತೀಶ್ ಕುಮಾರ್ ರೈ ಕಾರ್ಯಕ್ರಮ ನಿರೂಪಿಸಿದರು. ಗ್ರೀಷ್ಮಾ ಮತ್ತು ಕಾವ್ಯ ಪ್ರಾರ್ಥನೆ ಹಾಡಿದರು.

ಪೇಜಾವರ ಸ್ವಾಮೀಜಿ ಭೇಟಿ

ಸಂಜೆ ವೇಳೆ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ ಅವರು ದೇಗುಲಕ್ಕೆ ಭೇಟಿ ನೀಡಿ, ಆಶೀರ್ವಚನವನ್ನು ನೀಡಿದರು.

ವಿವಿಧ ವೈದಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು. ವೈದಿಕ ಕಾರ್ಯಕ್ರಮಗಳಲ್ಲಿ ಗಣಪತಿ ಹೋಮ, ಸಂಹಾರ ತತ್ವಹೋಮ, ತತ್ವಕಲಶ ಪೂಜೆ, ಕುಂಭೇಶ ಕರ್ಕರಿ ಪೂಜೆ, ಅಧಿವಾಸ ಹೋಮದ ಅಗ್ನಿ ಜನನ, ತತ್ವಕಲಶಾಭಿಷೇಕ, ಜೀವಕಲಶ ಪೂಜೆ, ಜೀವೋದ್ವಾಸನೆ, ಜೀವಕಲಶ, ಶಯ್ಯೋನ್ನಯನ ನಡೆಯಿತು.

ಸಾಂಸ್ಕೃತಿಕ ಕಾರ್ಯಕ್ರಮ

ಭಗವದ್ಗೀತೆ ಪಾರಾಯಣ, ಜಾಸ್ ಮತ್ತು ಮ್ಯೂಸಿಕ್ ಬೆಳ್ಳಾರೆ ಇವರಿಂದ ಭಕ್ತಿ ರಸಮಂಜರಿ, ರಾಮಕೃಷ್ಣ ಕಾಟುಕುಕ್ಕೆ ಅವರಿಂದ ದಾಸ ಸಂಕೀರ್ತನೆ, ವಿದ್ಯಾಶ್ರೀ ಶಿಕ್ಷಣ ಕೇಂದ್ರದ ಮಕ್ಕಳಿಂದ ಭಕ್ತಿಗಾನ ಮೇಳ, ಮಹಿಳೆಯರಿಂದ ಮೇಘಾ ತಿರುವಾದಿರ, ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿತು.

ಬೀದಿ ನಾಯಿಗಳ ಕಡಿತಕ್ಕೊಳಗಾಗುವವರಿಗೆ ಇನ್ನು ಆಯಾ ಜಿಲ್ಲೆಗಳಲ್ಲೇ ನಷ್ಟ ಪರಿಹಾರ

ಕಾಸರಗೋಡು: ಬೀದಿ ನಾಯಿಗಳ ಕಡಿತಕ್ಕೊಳಗಾದವರಿಗೆ ಇನ್ನು ಆಯಾ ಜಿಲ್ಲೆಗಳಲ್ಲೇ ನಷ್ಟ ಪರಿಹಾರ ಲಭಿಸಲಿದೆ. ಅದಕ್ಕಾಗಿ ಆಯಾ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ (ಲೀಗಲ್ ಸರ್ವೀಸ್ ಅಥೋರಿಟಿ) ವಿವಿಧ ಅಧ್ಯಕ್ಷರಾಗಿರುವ ಸ್ಟ್ರೇ ಡೋಗ್ ವಿಕ್ಟಿಮ್ ಕಾಂಪನ್‌ಸೇಶನ್ ರೆಕಮಂಡೇಶನ್ ಸಮಿತಿ (ಎಸ್‌ಡಿವಿಸಿಆರ್‌ಸಿ – ಬೀದಿ ನಾಯಿ ಕಡಿತ ಸಂತ್ರಸ್ತರ ನಷ್ಟ ಪರಿಹಾರ ಶಿಫಾರಸು ಸಮಿತಿ)ಗೆ ಎಲ್ಲಾ ಜಿಲ್ಲೆಗಳಲ್ಲೂ ರೂಪು ನೀಡಲಾಗುತ್ತಿದೆ. ಅದರಲ್ಲಿ ಆಯಾ ಜಿಲ್ಲೆಗಳ ಜಿಲ್ಲಾ ವೈದ್ಯಾಧಿಕಾರಿಗಳು, ಜಿಲ್ಲಾ ಪಶು ಸಂಗೋಪನಾ ಅಧಿಕಾರಿ ಮತ್ತು ಸ್ಥಳೀಯಾಡಳಿತ ಸಂಸ್ಥೆಯ ಜಿಲ್ಲಾ ಜಂಟಿ ನಿರ್ದೇಶಕರು ಈ ಸಮಿತಿಯ ಇತರ ಸದಸ್ಯರಾಗಿದ್ದಾರೆ.

ಬೀದಿ ನಾಯಿಗಳ ಕಡಿತಕ್ಕೊಳಗಾದವರು ದೂರುಗಳನ್ನು ಆಯಾ ಜಿಲ್ಲೆಗಳ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರಕ್ಕೆ ನೇರ ಅಥವಾ ಅಂಚೆ ಮೂಲಕ ಕಳುಹಿಸಿಕೊಡಬಹುದು.

ಬೀದಿ ನಾಯಿಗಳ ಕಡಿತಕ್ಕೊಳಗಾಗುವ ಕುರಿತಾದ ದೂರುಗಳನ್ನು ಆಯಾ ರಾಜ್ಯಗಳ ಹೈಕೋರ್ಟ್‌ಗಳಲ್ಲಿ ಪರಿಶೀಲಿಸಬೇಕೆಂದು 2024ನೇ ಮೇ 9 ರಂದು ಸುಪ್ರೀಂಕೋರ್ಟ್ ನಿರ್ದೇಶನ ನೀಡಿತ್ತು. ಅದರಂತೆ ಪ್ರಾಣಿಗಳು, ಉರಗಗಳಿಂದ ದಾಳಿಗೊಳಗಾಗುವ ಸಂತ್ರಸ್ತರಿಗೆ ನಷ್ಟ ಪರಿಹಾರ ನೀಡುವ ಅಗತ್ಯದ ಮಾರ್ಗಸೂಚಿಗೆ ಕೇರಳ ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಸಮಾಲೋಚನೆ ನಡೆಸಿ ರೂಪು ನೀಡುವಂತೆ ರಾಜ್ಯ ಹೈಕೋರ್ಟ್ 2024ನೇ ಡಿಸೆಂಬರ್ 18ರಂದು ರಾಜ್ಯ ಸರಕಾರಕ್ಕೆ ನಿರ್ದೇಶ ನೀಡಿತ್ತು. ಅದರ ಆಧಾರದಲ್ಲಿ ಬೀದಿ ನಾಯಿ ಕಡಿತಕ್ಕೊಳಗಾಗುವವರಿಗೆ ನಷ್ಟಪರಿಹಾರ ಆಯಾ ಜಿಲ್ಲೆಗಳಲ್ಲೇ ವಿತರಿಸುವ ತೀರ್ಮಾನ ಈಗ ಕೈಗೊಳ್ಳಲಾಗಿದೆ.

ಸುತ್ತ ಮುತ್ತ

ಪಾಂಡೇಶ್ವರ ಹಾಲು ಉತ್ಪಾದಕರ ಮಹಿಳಾ ಸಹಕಾರಿ ಸಂಘಕ್ಕೆ ಆಯ್ಕೆ

ಕೋಟ:ಇಲ್ಲಿನ ಪಾಂಡೇಶ್ವರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಐದು ವರ್ಷಗಳ ಅವಧಿಗೆ ನಡೆದ ಚುನಾವಣೆಯಲ್ಲಿ ವಲೇರಿನ್ ಡಿಸೋಜ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದರು.



ಉಪಾಧ್ಯಕ್ಷರಾಗಿ ಶ್ಯಾಮಲಾ ದೇವಾಡಿಗ ಹಾಗೂ ನಿರ್ದೇಶಕರಾಗಿ ಜಲಜ ಪೂಜಾರಿ, ದಾಕ್ಷಾಯಿಣಿ ರಾವ್, ದಯಾನಾ ಪಿಂಟೋ, ಲಲಿತ ಪೂಜಾರಿ, ಜಯಂತಿ ಪೂಜಾರಿ, ನಾಗರತ್ನ ಮಡಿವಾಳ, ಪಿ.ಎಸ್ ವಸುಧಾ ಬಾಯಿರಿ, ಮೈನಾ ಬಿ.ಸಾಲಿಯಾನ್ ಆಯ್ಕೆಯಾದರು.ಚುನಾವಣಾ ಪ್ರಕ್ರಿಯೆಯನ್ನು ಸುನೀಲ ನಿರ್ವಹಿಸಿದರು, ಸಂಘದ ಕಾರ್ಯದರ್ಶಿ ಶ್ಯಾಮಲಾ ಆಯ್ಕೆ ಪ್ರಕ್ರಿಯೆಯನ್ನು ನೆಡೆಸಿಕೊಟ್ಟರು.

ಮಾ. 4: ಉಡುಪಿ ಕಂಬಳದ ಶಂಕುಸ್ಥಾಪನೆ

ಉಡುಪಿ: ಉಡುಪಿ ಜಿಲ್ಲಾಡಳಿತ ಮತ್ತು ಯುವಜನ ಸಬಲೀಕರಣ ಇಲಾಖೆ ವತಿಯಿಂದ 80 ಬಡಗಬೆಟ್ಟು ಇಲ್ಲಿ ನಡೆಯಲಿರುವ ಉಡುಪಿ ಕಂಬಳದ ಶಂಕುಸ್ಥಾಪನೆಯನ್ನು ರಾಜ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಆರ್ ಹೆಬ್ಬಾಳ್ಕರ್ ಅವರು ಮಾರ್ಚ್ 4 ರಂದು ನೆರವೇರಿಸಲಿದ್ದು, ಕಾಪು ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಜನಪ್ರತಿನಿಧಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ ಎಂದು ಆಯೋಜಕರ ಮತ್ತು ಜಿಲ್ಲಾಡಳಿತ ಪ್ರಕಟಣೆ ತಿಳಿಸಿದೆ.

ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಗೆ ಸಹಾಯಧನ

ಉಡುಪಿ: ಪ್ರವಾಸೋದ್ಯಮ ಇಲಾಖೆ ವತಿಯಿಂದ ಎಸ್.ಸಿ.ಎಸ್.ಪಿ, ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಐವತ್ತು ಪರಿಶಿಷ್ಟ ಪಂಗಡದ ಸಣ್ಣ ಉದ್ಯಮದಾರರನ್ನು ಉತ್ತೇಜಿಸಲು ಒಂದು ತಿಂಗಳ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಮೊಬೈಲ್ ಕ್ಯಾಂಟೀನ್ ವಾಹನ ಖರೀದಿಸಲು ಶೇ. 70% ಮೊತ್ತ ಅಥವಾ ಗರಿಷ್ಠ ರೂ. 5.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ. ತರಬೇತಿ ಹಾಗೂ ಸಹಾಯಧನಕ್ಕಾಗಿ ಪರಿಶಿಷ್ಟ ಜಾತಿಗೆ ಸೇರಿದ 4 ಅಭ್ಯರ್ಥಿಗಳು ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದ 3 ಅಭ್ಯರ್ಥಿಗಳು ಸೇರಿದಂತೆ ಒಟ್ಟು 7 ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ತರಬೇತಿ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕನಿಷ್ಠ 10 ನೇ ತರಗತಿ ಉತ್ತೀರ್ಣರಾಗಿದ್ದು, 20ರಿಂದ 55 ವರ್ಷ ವಯೋಮಿತಿಯವರಾಗಿರಬೇಕು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮಾರ್ಚ್ 13. ಅರ್ಜಿ ನಮೂನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ, ಉಡುಪಿ ಜಿಲ್ಲೆ ಜಿಲ್ಲಾಧಿಕಾರಿಗಳ ಕಚೇರಿ ಸಂಕೀರ್ಣ, ಎ ಬ್ಲಾಕ್, 2 ನೇ ಮಹಡಿ, ಮಣಿಪಾಲ, ದೂರವಾಣಿ ಸಂಖ್ಯೆ: 0820-2574868 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಜಿಲ್ಲೆಯ ಅಗ್ನಿಶಾಮಕರಿಗೆ ಮುಖ್ಯಮಂತ್ರಿಗಳ ಚಿನ್ನದ ಪದಕ

ಉಡುಪಿ: ಬೈಂದೂರು ಅಗ್ನಿಶಾಮಕ ಠಾಣೆಯ ಸಹಾಯಕ ಅಗ್ನಿಶಾಮಕ ರಾಜೇಶ್ ಹಾಗೂ ಉಡುಪಿ ಅಗ್ನಿಶಾಮಕ ಠಾಣೆಯ ಸತೀಶ ಇವರು ಇಲಾಖೆಯಲ್ಲಿನ ತಮ್ಮ ಉತ್ತಮ ಸೇವೆಗಾಗಿ ಮತ್ತು ತುರ್ತು ಪರಿಸ್ಥಿತಿಯಲ್ಲಿ ನೀಡಿದ ಶ್ರೇಷ್ಠ ಕಾರ್ಯಕ್ಕಾಗಿ 2025 ನೇ ಸಾಲಿನ ಮುಖ್ಯಮಂತ್ರಿಗಳ ಚಿನ್ನದ ಪದಕವನ್ನು ಪಡೆದಿದ್ದಾರೆ. ಬೆಂಗಳೂರಿನ ಆರ್.ಎ ಮುಂಡ್ಕೂರು ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ತರಬೇತಿ ಮಹಾವಿದ್ಯಾಲಯದಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಕರ್ನಾಟಕ ಸರಕಾರದ ಗೃಹ ಸಚಿವ ಡಾ. ಜಿ. ಪರಮೇಶ್ವರ್ ಪದಕಗಳನ್ನು ನೀಡಿ ಗೌರವಿಸಿದ್ದಾರೆ.

ಸಂತ ಅಂತೋನಿ ಚರ್ಚ್‌ನಲ್ಲಿ ಹಬ್ಬ

ಕುಂದಾಪುರ: ಕುಂದಾಪುರ ತಾಲೂಕಿನ ಹೊಸಂಗಡಿ, ಕೆರೆಕಟ್ಟೆ ಸಂತ ಅಂತೋನಿಯವರ ಪ್ರಸಿದ್ಧ ಪುಣ್ಯಕ್ಷೇತ್ರದಲ್ಲಿ ಸಂತ ಅಂತೋನಿ ಅವರ ವಾರ್ಷಿಕ ಹಬ್ಬವನ್ನು ವಿಶೇಷ ಶ್ರದ್ಧಾಭಕ್ತಿ ಮತ್ತು ಸಂಭ್ರಮದಿಂದ ಮಂಗಳವಾರ ಆಚರಿಸಲಾಯಿತು. ಹಬ್ಬದ ಪ್ರಯುಕ್ತ ದಿವ್ಯ ಬಲಿದಾನವನ್ನು ಅರ್ಪಿಸಿದ ಉಡುಪಿ ಧರ್ಮಪ್ರಾಂತ್ಯದ ಬಿಷಪ್ ಡಾ.ಜೆರಾಲ್ಡ್ ಐಸಾಕ್ ಲೋಬೊ ಮಾತನಾಡಿ, ನಾನು ನಿಮ್ಮನ್ನು ಪ್ರೀತಿಸುತ್ತೇನೆ, ನನ್ನನ್ನು ನೀವು ಪ್ರೀತಿಸಬೇಕು, ನನ್ನನ್ನು ಪ್ರೀತಿಸುವವರನ್ನು, ಬಡವರನ್ನು ಕಷ್ಟದಲ್ಲಿರುವವರನ್ನು ಅನಾಥರನ್ನು ಪ್ರೀತಿಸುವುದು. ಹಾಗೆ ಮಾಡಿದರೆ ನನ್ನನ್ನು ಪ್ರೀತಿಸಿದಂತೆ. ಕೇವಲ ಪ್ರೀತಿಸುವುದು ಮಾತ್ರವಲ್ಲ ನಮ್ಮ ಕೃತಿಯಲ್ಲಿ ಸಹಾಯ ಮಾಡಬೇಕು. ಬಡವರಿಗೆ ನೀಡುವಾತ ಭಾಗ್ಯವಂತ ಎಂದು ನಾವು ನೆನಪಿನಲ್ಲಿ ಇಟ್ಟು ಕೊಳ್ಳೋಣ ಎಂದು ಹೇಳಿದರು.
ಕುಂದಾಪುರ ವಲಯದ ಪ್ರಧಾನ ಧರ್ಮಗುರು ಪೌಲ್ ರೇಗೊ ಮತ್ತು ಬಸ್ರೂರು ಆಂಗ್ಲ ಮಾಧ್ಯಮ ಶಾಲೆಯ ಪ್ರಾಂಶುಪಾಲ ಧ್ವಾನ್ಸಿ ಮಾರ್ಟಿ ಶುಭ ಹಾರೈಸಿದರು. ಉಡುಪಿ ಧರ್ಮಪ್ರಾಂತ್ಯದ ವಿಕಾರ್ ಜನರಲ್, ಕಲ್ಯಾಣಪುರದ ಮಿಲಾಗ್ರಿಸ್ ಕ್ಯಾಥೆಡ್ರಲ್‌ನ ರೆಕ್ಟರ್ ಮೊನ್ಸಿಂಞೋರ್ ಫರ್ಡಿನಾಂಡ್ ಗೊನ್ಸಾಲ್ವಿಸ್ ಉಪಸ್ಥಿತರಿದ್ದರು. ಪುಣ್ಯ ಕ್ಷೇತ್ರದ ರೆಕ್ಟರ್ ಸುನಿಲ್ ವೇಗಸ್ ವಂದಿಸಿದರು. ರೊಯ್ ಲೋಬೊ ಮತ್ತು ಪ್ರಿನ್ಸಿ ರೊಡ್ರಿಗಸ್ ಜೆ.ಸಿ. ಸಹಕರಿಸಿದರು.

ಬಸ್ ನಿಲ್ದಾಣದಿಂದ ಹಿಡಿದು ನಗರಸಭೆಯವರೆಗೆ ಸರಣಿ ತಪಾಸಣೆ | ಅವ್ಯವಸ್ಥೆ ಕಂಡು ನ್ಯಾಯಮೂರ್ತಿಗಳು ಗರಂ!

ಉಡುಪಿಯಲ್ಲಿ ಉಪಲೋಕಾಯುಕ್ತರ 'ಸರ್ಜಿಕಲ್ ಸ್ಟ್ರೈಕ್'

ಉಡುಪಿ: ಜಿಲ್ಲೆಯ ಪ್ರಮುಖ ಸರ್ಕಾರಿ ಕಚೇರಿಗಳಿಗೆ ಶುಕ್ರವಾರ ಹಠಾತ್ ಭೇಟಿ ನೀಡಿದ ರಾಜ್ಯ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಹಾಗೂ ಅವರ ತಂಡ, ಅಧಿಕಾರಿಗಳ ವಿಳಂಬ ಧೋರಣೆ ಮತ್ತು ಸಾರ್ವಜನಿಕ ಸೇವೆಗಳಲ್ಲಿನ ನ್ಯೂನ್ಯತೆಗಳನ್ನು ಕಂಡು ತೀವ್ರ ಆಕ್ರೋಶ ವ್ಯಕ್ತಪಡಿಸಿತು. ಬಸ್ ನಿಲ್ದಾಣದಿಂದ ಹಿಡಿದು ನಗರಸಭೆಯವರೆಗೆ ಸರಣಿ ತಪಾಸಣೆ ನಡೆಸಿದ ತಂಡವು, ಹಲವು ಕಡೆಗಳಲ್ಲಿ ಸ್ವಯಂಪ್ರೇರಿತ ದೂರುಗಳನ್ನು ದಾಖಲಿಸಿಕೊಂಡಿದೆ.



ಬಸ್ ನಿಲ್ದಾಣದಲ್ಲಿ ದರಪಟ್ಟಿ ಕಡ್ಡಾಯ

ಬನ್ನಂಜೆಯ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ ತಂಡ, ಹೊಟೇಲ್‌ಗಳಲ್ಲಿ ಆಹಾರದ ಶುಚಿತ್ವ ಮತ್ತು ದಿನಾಂಕ ಮುಗಿದ ಪದಾರ್ಥಗಳ ಪರಿಶೀಲನೆ ನಡೆಸಿತು. ಹೊಟೇಲ್‌ಗಳಲ್ಲಿ ದರಪಟ್ಟಿ ಪ್ರದರ್ಶಿಸುವುದು ಕಡ್ಡಾಯ ಹಾಗೂ ಶೌಚಾಲಯಗಳಿಗೆ ಕ್ಯೂಆರ್ ಕೋಡ್ ಅಳವಡಿಸಲು ಸೂಚಿಸಿದರು. ಅಲ್ಲದೆ, ಗುತ್ತಿಗೆ ನೌಕರರಿಗೆ ಗುರುತಿನ ಚೀಟಿ ಮತ್ತು ಸರಿಯಾದ ವೇತನ ನೀಡುವಂತೆ ಅ ಕಾರಿಗಳಿಗೆ ತಾಕೀತು ಮಾಡಿದರು.

ಕಡತಗಳ ಅವ್ಯವಸ್ಥೆ

ತಾಲೂಕು ಕಚೇರಿ ಹಾಗೂ ಭೂ ದಾಖಲೆಗಳ ಕಚೇರಿಯಲ್ಲಿ 1500ಕ್ಕೂ ಹೆಚ್ಚು ಅರ್ಜಿಗಳು ಬಾಕಿ ಇರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, 3 ತಿಂಗಳೊಳಗೆ ಇವುಗಳನ್ನು ವಿಲೇವಾರಿ ಮಾಡಲು ಗಡುವು ನೀಡಿದರು. ವಿಶೇಷವಾಗಿ 7 ವರ್ಷಗಳಿಂದ ನಿವೃತ್ತ ಸೈನಿಕನ ಜಮೀನು ಅಳತೆ ಮಾಡದ ಅಧಿಕಾರಿಗಳ ವಿರುದ್ಧ ಕಿಡಿಕಾರಿದ ಅವರು, ಒಂದು ವಾರದೊಳಗೆ ಕೆಲಸ ಮುಗಿಸಲು ಆದೇಶಿಸಿದರು.

ಕಚೇರಿಗಳಲ್ಲಿ ಅವ್ಯವಸ್ಥೆ ದರ್ಶನ

ಜಿಲ್ಲೆಯ ವಿವಿಧ ಕಚೇರಿಗಳಿಗೆ ಭೇಟಿ ನೀಡಿದ ಉಪಲೋಕಾಯುಕ್ತ ನ್ಯಾಯಮೂರ್ತಿ ಬಿ. ವೀರಪ್ಪ ಅವರು, ಅಧಿಕಾರಿಗಳ ಬೇಜವಾಬ್ದಾರಿತನಕ್ಕೆ ಕೆಂಡವಾದರು. ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ತಪಾಸಣೆ ನಡೆಸಿದ ಸಂದರ್ಭದಲ್ಲಿ, ಅಲ್ಲಿನ ಗುತ್ತಿಗೆ ನೌಕರರ ವೈಯಕ್ತಿಕ ಬ್ಯಾಗ್‌ನಲ್ಲಿ ಕಚೇರಿಗೆ ಸಂಬಂಧಿಸಿದ ಪ್ರಮುಖ ದಾಖಲೆಗಳು ಪತ್ತೆಯಾಗಿದ್ದು, ನ್ಯಾಯಮೂರ್ತಿಗಳ ಆಕ್ರೋಶಕ್ಕೆ ಕಾರಣವಾಯಿತು. ಕಚೇರಿಯ ಅಧಿಕೃತ ಕಡತಗಳು ಖಾಸಗಿ ಬ್ಯಾಗ್ ಸೇರಿದ್ದು ಹೇಗೆ ಎಂಬ ಬಗ್ಗೆ ಸೂಕ್ತ ವಿವರಣೆ ನೀಡದ ಹಿನ್ನೆಲೆಯಲ್ಲಿ ಈ ಕುರಿತು ಪ್ರಕರಣ ದಾಖಲಿಸಲು ಅವರು ಸೂಚಿಸಿದರು. ಅಷ್ಟೇ ಅಲ್ಲದೆ, ತಾಲೂಕು ಕಚೇರಿಯ ಆಡಳಿತ ವಿಭಾಗ ಹಾಗೂ ಟಪ್ಪಾಲು ವಿಭಾಗಗಳಲ್ಲಿ ಕಡತಗಳ ನಿರ್ವಹಣೆ ಸಮರ್ಪಕವಾಗಿಲ್ಲದಿರುವುದು ಮತ್ತು ಸಿಬ್ಬಂದಿಗೆ ನಿಗದಿತ ಸಮವಸ್ತ್ರ ಧರಿಸದೇ ಕರ್ತವ್ಯ ನಿರ್ವಹಿಸುತ್ತಿರುವುದನ್ನು ಕಂಡು ಶಿಸ್ತಿನ ಪಾಠ ಮಾಡಿದ್ದಲ್ಲದೆ, ಅಲ್ಲಿಯೂ ಸ್ವಯಂಪ್ರೇರಿತ ದೂರುಗಳನ್ನು ದಾಖಲಿಸಿಕೊಂಡರು.

ಜಿಲ್ಲಾಸ್ಪತ್ರೆ ಕ್ಯಾಂಟೀನ್ ಸ್ಥಗಿತಕ್ಕೆ ಆದೇಶ

ಜಿಲ್ಲಾ ಆಸ್ಪತ್ರೆಯ ಮಹಿಳಾ ವಾರ್ಡ್, ರಕ್ತನಿಧಿ ಕೇಂದ್ರಗಳನ್ನು ಪರಿಶೀಲಿಸಿದ ತಂಡ, ಸಮರ್ಪಕವಾಗಿ ನಿರ್ವಹಿಸದ ಆಸ್ಪತ್ರೆಯ ಕ್ಯಾಂಟೀನನ್ನು ತಕ್ಷಣ ಬಂದ್ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಿತು. ನಗರಸಭೆಯ ಇ-ಆಸ್ತಿ ಮತ್ತು ತೆರಿಗೆ ಸಂಗ್ರಹದ ವಿಳಂಬದ ಬಗ್ಗೆಯೂ ದೂರು ದಾಖಲಿಸಿಕೊಳ್ಳಲಾಯಿತು.

ಜಿಲ್ಲಾಸ್ಪತ್ರೆಗೆ ಭೇಟಿ

ಇನ್ನು ಜಿಲ್ಲಾ ಆಸ್ಪತ್ರೆಯ ಭೇಟಿಯ ವೇಳೆ ಸಾರ್ವಜನಿಕ ಸೇವೆಗಳ ವಿಳಂಬದ ಬಗ್ಗೆ ಗಮನಹರಿಸಿದ ಅವರು, ಕಚೇರಿಯಲ್ಲೇ ಉಳಿದುಕೊಂಡಿರುವ ಅನೇಕ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ಕೂಡಲೇ ಸಂಬಂಧಪಟ್ಟವರಿಗೆ ಪೋಸ್ಟ್ ಮೂಲಕ ರವಾನಿಸಲು ಆದೇಶಿಸಿದರು. ನಗರಸಭೆಯಲ್ಲಿ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳ ವಿವರ, ಇ-ಆಸ್ತಿ ವಿಳಂಬ ಮತ್ತು ಆಸ್ತಿ ತೆರಿಗೆ ಸಂಗ್ರಹದಂತಹ ಗಂಭೀರ ವಿಷಯಗಳ ಬಗ್ಗೆ ಹಠಾತ್ ಆಡಿಟ್ ನಡೆಸಿದ ತಂಡವು, ಅಲ್ಲಿ ಕಂಡುಬಂದ ಪ್ರತಿ ನ್ಯೂನ್ಯತೆಗಳನ್ನೂ ಪಟ್ಟಿ ಮಾಡಿ ಕಾನೂನು ಕ್ರಮಕ್ಕೆ ಮುಂದಾಗಿದೆ. ಈ ಭೇಟಿಯು ಜಿಲ್ಲೆಯ ಸರ್ಕಾರಿ ಅಧಿಕಾರಿಗಳಲ್ಲಿ ಸಂಚಲನ ಮೂಡಿಸಿತ್ತು.

ಕೋಟ: ಪ್ರೊ. ಚಿತ್ರಪಾಡಿ ಉಪೇಂದ್ರ ಸೋಮಯಾಜಿ ಅವರ ಕೃತಿ ಬಿಡುಗಡೆ



ಕೋಟ: ಸಾಹಿತ್ಯ, ಸಂಘಟನೆ, ರಂಗಭೂಮಿ, ಶಿಕ್ಷಣ ಕ್ಷೇತ್ರದಲ್ಲಿ ತನ್ನದೇ ಆದ ಛಾಪು ಮೂಡಿಸಿರುವ ಚಿತ್ರಪಾಡಿ ಉಪೇಂದ್ರ ಸೋಮಯಾಜಿಯವರ ಸಮಗ್ರ ಕಥೆಗಳು ಮತ್ತು ಕೃತಿ ಸಂಕೀರ್ಣ ಕೃತಿಗಳು ಸಾಹಿತ್ಯ ಕ್ಷೇತ್ರಕ್ಕೆ ಈ ಕೃತಿಗಳು ಅಮೂಲ್ಯ ಕೃತಿಗಳಾಗಿವೆ ಎಂದು ಶ್ರೀ ಗುರುನರಸಿಂಹ ದೇವಸ್ಥಾನದ ಅಧ್ಯಕ್ಷ ಕೆ. ಎಸ್ ಕಾರಂತ ಅಭಿಪ್ರಾಯ ಪಟ್ಟರು.

ಇತ್ತೀಚಿಗೆ ಸಾಲಿಗ್ರಾಮದ ಗುರುನರಸಿಂಹ ದೇವಾಲಯದ ಜ್ಞಾನ ಮಂದಿರಲ್ಲಿ ಪುಸ್ತಕ ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಬ್ರಹ್ಮಾವರ ತಾಲೂಕು ಘಟಕ ಸಂಯುಕ್ತವಾಗಿ ಆಯೋಜಿಸಿದ್ದ ಮೈಸೂರಿನ ಎಂ.ಎ ಶಶಿಕುಮಾರ್ ಪ್ರಕಟಿಸಿದ ಪ್ರೊ. ಚಿತ್ರಪಾಡಿ ಉಪೇಂದ್ರ ಸೋಮಯಾಜಿಯವರ ಎರಡು ಕೃತಿಗಳನ್ನು ಬಿಡುಗಡೆ ಮಾಡಿ ಮಾತಾಡಿದರು. ಖ್ಯಾತ ಸಾಹಿತಿಗಳಾದ ಬೆಳಗೋಡು ರಮೇಶ್ ಭಟ್ಟ ಸೋಮಯಾಜಿ ಅವರ ಕೃತಿ ಸಂಕೀರ್ಣದ ಕುರಿತು ಹಾಗೂ ಖ್ಯಾತ ವಿದ್ವಾಂಸರಾದ ಡಾ ಪಾದೇಕಲ್ಲು ವಿಷ್ಣುಭಟ್ಟ ಸಮಗ್ರ ಕಥಾ ಸಾಹಿತ್ಯದ ಕೃತಿಗಳ ಪರಿಚಯ ಮಾಡಿದರು.

ಉಡುಪಿ ಜಿಲ್ಲಾ ಕಸಾಪದ ಸ್ಥಾಪಕ ಅಧ್ಯಕ್ಷ ಎಸ್‌ಎನ್ ಹೆಬ್ಬಾರ ಅಧ್ಯಕ್ಷತೆ ವಹಿಸಿದ್ದರು. ಧರ್ಮದರ್ಶಿ ಹರಿಕೃಷ್ಣ ಪುನರೂರು, ಆನಂದ ಸಿ ಕುಂದರ್, ನೀಲಾವರ ಸುರೇಂದ್ರ ಅಡಿಗ, ಪ್ರೊ.ಚಿತ್ರಪಾಡಿ ಉಪೇಂದ್ರ ಸೋಮಯಾಜಿ, ಸುಬ್ರಹ್ಮಣ್ಯ ಶೆಟ್ಟಿ ಉಪಸ್ಥಿತರಿದ್ದರು. ಮಾಲತಿ ರಮೇಶ್, ಕು .ಶ್ರಾವ್ಯ ಅವರಿಂದ ಭಾವಲಹರಿ ಕಾರ್ಯಕ್ರಮ ನಡೆಯಿತು.

ಗೀತಾನಂದ ಟ್ರಸ್ಟ್ ಪ್ರವರ್ತಕ ಆನಂದ ಸಿ ಕುಂದರ್ ಅವರು ಡಾ.ಹರಿಕೃಷ್ಣ ಪುನರೂರು ಅವರಿಗೆ ಅನಂತ ಅಡಿಗ ಉದ್ಯಮ ಪ್ರಶಸ್ತಿ ನೀಡಿ ಗೌರವಿಸಿದರು. ಕಸಾಪ ಬ್ರಹ್ಮಾವರ ತಾಲೂಕು ಅಧ್ಯಕ್ಷ ರಾಮಚಂದ್ರ ಐತಾಳ ಸ್ವಾಗತಿಸಿದರು. ಮಹಾಲಕ್ಷ್ಮಿ ಸೋಮಯಾಜಿ ಪರಿಚಯ ಮಾಡಿದರು. ಸಾಹಿತ್ಯ ಪರಿಷತ್ ಗೌರವಕಾರ್ಯದರ್ಶಿ ನರೇಂದ್ರ ಕುಮಾರ್ ಕೋಟ ನಿರೂಪಿಸಿದರು.ಸಾಹಿತ್ಯ ಪರಿಷತ್‌ನ ಜ್ಯೋತಿ ಪೂಜಾರಿ ವಂದಿಸಿದರು.

ಕಾರ್ಕಳದಲ್ಲಿ 34ನೇ ಸಂಗೀತ ಉತ್ಸವಕ್ಕೆ ಚಾಲನೆ, ಪ್ರಶಸ್ತಿ ಪ್ರದಾನ



ಕಾರ್ಕಳ: ಬಿ. ಮಂಜುನಾಥ ಪೈ ಸಾಂಸ್ಕೃತಿಕ ಸಭಾಂಗಣದಲ್ಲಿ ಶಾಸ್ತ್ರೀಯ ಸಂಗೀತ ಸಭಾ ಹಾಗೂ ಶ್ರೀ ಮಂಜುನಾಥ ಪೈ ಸಾಂಸ್ಕೃತಿಕ ಪ್ರತಿಷ್ಠಾನ ಸಹಯೋಗದಲ್ಲಿ 34ನೇ ಸಂಗೀತ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ಕಾರ್ಕಳ ಶ್ರೀ ವೆಂಕಟರಮಣ ದೇವಸ್ಥಾನದ ಟ್ರಸ್ಟಿ ಶಂಕರ ಕಾಮತ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮಂಗಳೂರು ಭರತ್ ಬೀಡಿ ವರ್ಕ್ಸ್ ಕಾರ್ಯನಿರ್ವಾಹಕ ನಿರ್ದೇಶಕ ಬಿ. ಸುಬ್ರಾಯ ಎಂ. ಪೈ ಅಧ್ಯಕ್ಷತೆ ವಹಿಸಿದರು. ವಯೊಲಿನ್ ವಿದ್ವಾಂಸ ಮೈಸೂರು ಮಂಜುನಾಥ್, ಬಾಂಸುರಿ ವಿದ್ವಾಂಸ ಪ್ರವೀಣ್ ಗೋಡ್ಖಂಡಿ, ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಅಜೆಕಾರು ಪದ್ಮಗೋಪಾಲ್ ಶಿಕ್ಷಣ ಟ್ರಸ್ಟ್ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ ಸಭಾ ಅಧ್ಯಕ್ಷ ಎಸ್. ನಿತ್ಯಾನಂದ ಪೈ ಕಾರ್ಯದರ್ಶಿ ಡಾ. ಕೆ.ಪ್ರಕಾಶ್ ಶೆಣೈ, ಮಹಾಲಕ್ಷ್ಮಿ ಶೆಣೈ ಇದ್ದರು. ಗ್ರಾಮಿ ಪ್ರಶಸ್ತಿ ವಿಜೇತ, ಪದ್ಮಭೂಷಣ ಪುರಸ್ಕೃತ ಮೋಹನ್ ವೀಣಾ ಪ್ರವರ್ತಕ ಪಂಡಿತ್ ವಿಶ್ವಮೋಹನ್ ಭಟ್‌ಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಶುಕ್ರವಾರ ನೀಹಾರಿಕಾ ದೇರಾಜೆ ಅವರಿಂದ ಹಿಂದೂಸ್ತಾನಿ ಗಾಯನ ಜರಗಿತು. ತಬಲಾದಲ್ಲಿ ರೂಪಕ್ ವೈದ್ಯ, ಹಾರ್ಮೋನಿಯಂನಲ್ಲಿ ಅಜಯ ಹೆಗ್ಡೆ ಸಹಕರಿಸಿದರು. ಸಂಗೀತ ಗುರು ವಿದ್ವಾನ್ ಬಿ. ಯೋಗೀಶ್ ಬಾಳಿಗ ಸ್ಮಾರಕ ಯುವ ಸಂಗೀತೋತ್ಸವ ಕಲಾಸಾಧನಾ ಕಾರ್ಯಕ್ರಮದಲ್ಲಿ 'ತ್ರಿವೇಣಿ ಸಂಗಮ' ಮೆಗಾ ವಾದ್ಯ ತ್ರಯ ಕಚೇರಿ ಕಾರ್ಯಕ್ರಮ ಜರಗಿತು. ಪಂಡಿತ ವಿಶ್ವಮೋಹನ್ ಭಟ್ ಅವರಿಂದ ಮೋಹನ್ ವೀಣಾ, ಮೈಸೂರು ಮಂಜುನಾಥ ಅವರಿಂದ ವೈಯಲಿನ್ ವಾದನ, ಪ್ರವೀಣ್ ಗೋಡ್ಖಿಂಡಿ ಅವರಿಂದ ಬಾಂಸುರಿ ವಾದನ. ಪಂಡಿತ್ ಹಿಮಾಂಶು ಮಹಂತ್ ತಬಲಾದಲ್ಲಿ, ಡಾ. ಪಾತ್ರಿ ಸತೀಶ್ ಕುಮಾರ್ ಮೃದಂಗದಲ್ಲಿ ಸಹಕರಿಸಿದರು.

ಇಂದಿನ ಕಾರ್ಯಕ್ರಮ

ಫೆ.28ರಂದು ಸಂಜೆ 4.30ರಿಂದ ವಿದ್ವಾನ್ ವೆಂಕಟೇಶ್ ಚಿಪ್ಳೂಣ್ಕರ್ ಅವರ ಶಿಷ್ಯರಿಂದ ಕರ್ನಾಟಕ ಸಂಗೀತ, ಚಿಲ್ಕುಂಡ ಸಹೋದರಿಯರ ಗಾಯನ ನಡೆಯಲಿದೆ. ಸಂಜೆ 7 ರಿಂದ ಕಾಶಿಯ ಮಿಶ್ರಾ ಬ್ರದರ್ಸ್ ಅವರ ಹಿಂದೂಸ್ತಾನಿ ವಾದ್ಯ ಜುಗಲ್‌ಬಂದಿ ನಡೆಯಲಿದೆ.

ಗುತ್ತಿಗೆದಾರರ ಸಭೆ: ಬಾಕಿ ಪಾವತಿ ಸಮಸ್ಯೆ ಬಗ್ಗೆ ಮಹತ್ವ ತೀರ್ಮಾನ



ಬ್ರಹ್ಮಾವರ: ಉಡುಪಿ ಜಿಲ್ಲಾ ಗುತ್ತಿಗೆದಾರರ ಸಂಘದ ಸಭೆ ಬ್ರಹ್ಮಾವರದ ಸಿಟಿ ಸೆಂಟರ್ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಜರುಗಿತು.

ಈ ಸಂದರ್ಭದಲ್ಲಿ ಗುತ್ತಿಗೆದಾರರು ಎದುರಿಸುತ್ತಿರುವ ಬಾಕಿ ಪಾವತಿ ಸಮಸ್ಯೆಗಳ ಕುರಿತು ಚರ್ಚೆ ನಡೆಸಿ ಹಲವು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಲಾಯಿತು. ಇದೇ ವೇಳೆ ಉಡುಪಿ ಜಿಲ್ಲಾ ಗುತ್ತಿಗೆದಾರರ ಸಂಘಕ್ಕೆ ನೂತನ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ ನಡೆದು, ಜಿಲ್ಲಾಧ್ಯಕ್ಷರಾಗಿ ಗೋಕುಲ್ ಶೆಟ್ಟಿ ಆಯ್ಕೆಯಾದರು.

ಸಮಸ್ಯೆಗಳ ಬಗ್ಗೆ ವಿಸ್ತೃತ ಚರ್ಚೆ

ರಾಜ್ಯದಲ್ಲಿ ಗುತ್ತಿಗೆದಾರರಿಗೆ ಸುಮಾರು 37,000 ಕೋಟಿಗೂ ಅಧಿಕ ಬಾಕಿ ಬಿಲ್‌ಗಳು ಪಾವತಿಯಾಗದೆ ಉಳಿದಿರುವುದರಿಂದ ಗುತ್ತಿಗೆದಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಬ್ಯಾಂಕ್ ಸಾಲಗಳ ಮೇಲಿನ ಬಡ್ಡಿ, ಕಾರ್ಮಿಕರ ವೇತನ, ಯಂತ್ರೋಪಕರಣಗಳ ನಿರ್ವಹಣೆ ಹಾಗೂ ನಿರ್ಮಾಣ ಸಾಮಗ್ರಿಗಳ ಬೆಲೆ ಏರಿಕೆ ಗುತ್ತಿಗೆದಾರರ ಮೇಲೆ ಭಾರಿ ಆರ್ಥಿಕ ಒತ್ತಡ ಉಂಟುಮಾಡಿದೆ ಎಂದು ಸಭೆಯಲ್ಲಿ ವಿಚಾರ ವಿನಿಯಯ ಮಂಡಿಸಲಾಯಿತು.

ಸಭೆಯಲ್ಲಿ ಕೈಗೊಂಡ ಪ್ರಮುಖ ತೀರ್ಮಾನಗಳು:

ಎಲ್ಲಾ ಬಾಕಿ ಬಿಲ್‌ಗಳನ್ನು ಮಾ.31ರೊಳಗೆ ಸಂಪೂರ್ಣ ಬಿಡುಗಡೆ ಮಾಡಬೇಕು ಎಂದು ಜವಾಬ್ದಾರಿಯುತವಾಗಿ ಆಗ್ರಹಿಸಲಾಯಿತು. ಉಡುಪಿ ಜಿಲ್ಲೆಯ ವಿವಿಧ ತಾಲೂಕುಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಗುತ್ತಿಗೆದಾರರು ಭಾಗವಹಿಸಿ, ಶೀಘ್ರದಲ್ಲೇ ಪಾದಯಾತ್ರೆ ಮೂಲಕ ಉಡುಪಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಲು ತೀರ್ಮಾನಿಸಲಾಯಿತು.

ಮಾ.6ರಂದು ಬೆಂಗಳೂರಿನಲ್ಲಿ ನಡೆಯುವ ರಾಜ್ಯವ್ಯಾಪಿ ಪ್ರತಿಭಟನೆಯಲ್ಲಿ ಉಡುಪಿ ಜಿಲ್ಲೆಯ ಗುತ್ತಿಗೆದಾರರು ಭಾರೀ ಸಂಖ್ಯೆಯಲ್ಲಿ ಭಾಗವಹಿಸಲು ನಿರ್ಧರಿಸಲಾಯಿತು. ಸಭೆಯಲ್ಲಿ ಗುತ್ತಿಗೆದಾರರು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಏಕತೆಯಿಂದ ಸಂಘಟನೆಯ ಶಕ್ತಿಯನ್ನು ಹೆಚ್ಚಿಸಬೇಕೆಂದು ಕರೆ ನೀಡಲಾಯಿತು. ಸರ್ಕಾರ ಶೀಘ್ರ ಕ್ರಮ ಕೈಗೊಳ್ಳದಿದ್ದರೆ, ಗುತ್ತಿಗೆದಾರರ ಹಕ್ಕುಗಳ ರಕ್ಷಣೆಗೆ ಹಂತ ಹಂತವಾಗಿ ತೀವ್ರ ಹೋರಾಟ ಕೈಗೊಳ್ಳಲಾಗುವುದು ಎಂದು ಸಂಘ ಎಚ್ಚರಿಕೆ ನೀಡಿದೆ. ಸಭೆಯಲ್ಲಿ ನೂತನ ಜಿಲ್ಲಾಧ್ಯಕ್ಷರಾದ ಗೋಕುಲ ಶೆಟ್ಟಿ ಬೈಂದೂರು, ಮಾಜಿ ಅಧ್ಯಕ್ಷ ವಾದಿರಾಜ್ ಶೆಟ್ಟಿ ಹೆಬ್ರಿ, ಪ್ರಮುಖರಾದ ಪವನ್ ಗೌಡ, ಎ.ಬಿ ಶೆಟ್ಟಿ ಪ್ರವೀಣ್ ಕುಮಾರ್ ಶೆಟ್ಟಿ ಚೇರ್ಕಾಡಿ ರತ್ನಾಕರ ಶೆಟ್ಟಿ ಉಪಸ್ಥಿತರಿದ್ದರು.

ಯಡಾಡಿ-ಮತ್ಯಾಡಿ: ಡಾ.ಬಿ.ಬಿ.ಹೆಗ್ಡೆ ಕಾಲೇಜಿನ ಎನೆಸ್ಸೆಸ್ ಶಿಬಿರದಲ್ಲಿ ಉಪನ್ಯಾಸ



ಕುಂದಾಪುರ: ಪುರಾಣಗಳು ಕೇವಲ ಪೌರಾಣಿಕ ಕಥೆಗಳಲ್ಲ, ಅವು ಮೌಲ್ಯಪೂರ್ಣ ಜೀವನ ನಡೆಸಲು ಮಾರ್ಗದರ್ಶನ ನೀಡುವ ಗ್ರಂಥಗಳು. ಇಂದಿಗೂ ಪುರಾಣಗಳು ಸಾರ್ವಕಾಲಿಕ ಮೌಲ್ಯವನ್ನು ಒಳಗೊಂಡಿವೆ. ವಿದ್ಯಾರ್ಥಿಗಳು ಪುರಾಣಗ್ರಂಥಗಳನ್ನು ಅಧ್ಯಯನ ಮಾಡುವುದು ವರ್ತಮಾನದ ತುರ್ತು ಎಂದು ಕುಂದಾಪುರ ಸರಕಾರಿ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕ ಉದಯ ಕುಮಾರ್ ಶೆಟ್ಟಿ ಕಾಳಾವರ ಹೇಳಿದರು.

ಕುಂದಾಪುರದ ಡಾ. ಬಿ.ಬಿ.ಹೆಗ್ಡೆ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ಆಶ್ರಯದಲ್ಲಿ ಯಡಾಡಿ-ಮತ್ಯಾಡಿಯಲ್ಲಿ ನಡೆಸಿದ ವಾರ್ಷಿಕ ವಿಶೇಷ ಶಿಬಿರದಲ್ಲಿ 'ಪುರಾಣ ಮತ್ತು ಮೌಲ್ಯಗಳು' ಎಂಬ ವಿಷಯದ ಕುರಿತು ಉಪನ್ಯಾಸ ನೀಡಿ ಅವರು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜು ಆಡಳಿತ ಮಂಡಳಿ ಸದಸ್ಯ ಕರುಣಾಕರ ಹೆಗ್ಡೆ ಅನಗಳ್ಳಿ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲ ಪ್ರೊ. ಡಾ. ಕೆ.ಉಮೇಶ ಶೆಟ್ಟಿ, ಯಡಾಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲೆ ಶೈಲಾ, ಯಡಾಡಿ-ಮತ್ಯಾಡಿಯ ಸ.ಹಿ.ಪ್ರಾ. ಶಾಲೆಯ ಎಸ್.ಡಿ.ಎಂ.ಸಿ. ಸದಸ್ಯ ಮಂಜುನಾಥ, ಉದ್ಯಮಿ ದಿಕ್ಷಿತ್ ಶೆಟ್ಟಿ ಕ್ಯಾಸನಮಕ್ಕಿ ಮೊಳಹಳ್ಳಿಯ ಉದ್ಯಮಿ ಮಧುಕರ ಮಣಿಯಾಡಿ, ಎನ್.ಎಸ್.ಎಸ್. ಶಿಬಿರಾಧಿಕಾರಿ ರಾಜೇಶ ಶೆಟ್ಟಿ ವಕ್ವಾಡಿ ಮತ್ತು ಪೂಜಾ ಕುಂದರ್ ಉಪಸ್ಥಿತರಿದ್ದರು. ಎನ್.ಎಸ್.ಎಸ್. ಸ್ವಯಂಸೇವಕರಾದ ಸೌಜನ್ಯ ಸ್ವಾಗತಿಸಿ, ನಾಗರತ್ನ ಪರಿಚಯಿಸಿ, ಗಣಪತಿ ವಂದಿಸಿ, ಶ್ರೇಯಾ ನಿರ್ವಹಿಸಿದರು.

ದಿ. ಕೋಣಿ ಶಿವಾನಂದ ಕಾರಂತರು ಸಾಹಿತ್ಯಕ್ಕೆ ದೊಡ್ಡ ಕೊಡುಗೆ ನೀಡಿದವರು

ಕುಂದಾಪುರ : ಸಾಹಿತಿ, ವಾಗ್ಮಿ, ವಿಮರ್ಶಕ, ಅಂಕಣಗಾರರಾಗಿ ಸಾಹಿತ್ಯ ಲೋಕಕ್ಕೆ ಬಹು ದೊಡ್ಡ ಕೊಡುಗೆ ನೀಡಿದವರು ಕೋಣಿ ಶಿವಾನಂದ ಕಾರಂತರು. ಅಧ್ಯಯನಶೀಲರಾಗಿ ತಮ್ಮ ಪಾಂಡಿತ್ಯದಿಂದ ಯುವಬರಹಗಾರರಿಗೆ ಪ್ರೇರಣೆ ತುಂಬುತ್ತಿದ್ದ ಕಾರಂತರು ಹಲವಾರು ಲೇಖಕರ ಕೃತಿಗಳ ವಿಮರ್ಶೆ ಮಾಡಿ ತಿದ್ದಿ ಪ್ರೋತ್ಸಾಹಿಸುವ ಮೂಲಕ ಸ್ಫೂರ್ತಿ ತುಂಬುತ್ತಿದ್ದರು. ಅವರ ಪ್ರಕಟಿತ ಕೃತಿಗಳು ಅಮೂಲ್ಯವಾಗಿದ್ದವು. ಗಂಗೊಳ್ಳಿಯಲ್ಲಿ ನಡೆದ ಕುಂದಾಪುರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ 'ಗಂಗಾವಳಿ' ಸಮಾರಂಭದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಕೋ. ಶಿವಾನಂದ ಕಾರಂತರ ಕುರಿತು ಪುಸ್ತಕ ಪ್ರಕಟಣೆ ಮಾಡಿದ್ದೆವು. ಅವರ ಅಗಲಿಕೆ ಕುಟುಂಬಕ್ಕೆ ಮಾತ್ರವಲ್ಲ ಸಮಾಜಕ್ಕೂ ದೊಡ್ಡ ನಷ್ಟ ಅವರ ಅಮೂಲ್ಯ ಮಾರ್ಗದರ್ಶನ ಸ್ಮರಣೀಯ" ಎಂದು ಉಡುಪಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ ಹೇಳಿದರು.

ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ಮಂಗಳವಾರ ನಡೆದ ಕೋಣಿ ಶಿವಾನಂದ ಕಾರಂತರಿಗೆ ಸಾರ್ವಜನಿಕ ನುಡಿ ನಮನ ಕಾರ್ಯಕ್ರಮದಲ್ಲಿ ಅವರು ಕಾರಂತರ ಸಾಧನೆ ಬಣ್ಣಿಸಿದರು.

ಕಮಲಾಕರ ಚಿಕ್ಕಮಗಳೂರು ಇವರು ಭಾವಗೀತೆ ಮೂಲಕ ಕಾರಂತರಿಗೆ ನುಡಿ ನಮನ ಸಲ್ಲಿಸಿದರು. ಗಂಗೊಳ್ಳಿ ಎಸ್. ವಿ. ಶಾಲಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಕಾಶೀನಾಥ ಪೈ, ಉಡುಪಿಯ ಸಾಹಿತಿ ಸಂಧ್ಯಾ ಶೆಣೈ, ಹಿರಿಯ ಲೇಖಕಿ, ನಿವೃತ್ತ ಪ್ರಾಧ್ಯಾಪಕಿ ರೇಖಾ ಬನ್ನಾಡಿ, ನಿವೃತ್ತ ಪ್ರಾಂಶುಪಾಲ ನಾರಾಯಣ ಹೆಬ್ಬಾರ್, ಚಲನಚಿತ್ರ ನಿರ್ದೇಶಕ ರಾಜ್ ಬಲ್ಲಾಳ್, ವರದರಾಜ್ ಪೈ, ಎಸ್. ವಿ. ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಆರ್. ಎನ್. ರೇವಣ್‌ಕರ್, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ಹಂದಕುಂದ ಸೋಮಶೇಖರ ಶೆಟ್ಟಿ ಮೊದಲಾದವರು ನುಡಿ ನಮನ ಸಲ್ಲಿಸಿದರು.

ಕೋ. ರಮಾನಂದ ಕಾರಂತ ಸ್ವಾಗತಿಸಿದರು. 'ಕುಂದಪ್ರಭ' ಸಂಸ್ಥೆಯ ಅಧ್ಯಕ್ಷ ಯು. ಎಸ್. ಶೆಣೈ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾ ಕಾದಂಬರಿ ವಂದಿಸಿದರು.

ಯಕ್ಷ, ನಾಟ್ಯ ವೈಭವ ಪ್ರದರ್ಶನ: ಮಂತ್ರಾಲಯ ಶ್ರೀಗಳಿಂದ ಪ್ರಶಂಸೆ



ಕೋಟ: ಮಂತ್ರಾಲಯ ಶ್ರೀ ರಾಘವೇಂದ್ರ ಸ್ವಾಮಿ ಸನ್ನಿಧಾನದಲ್ಲಿ ಪರಿಮಳ ಪ್ರಶಸ್ತಿ ಕಾರ್ಯಕ್ರಮದ ವೇದಿಕೆಯಲ್ಲಿ ಭರತನಾಟ್ಯ ಹಾಗೂ ಕರಾವಳಿಯ ಗಂಡುಕಲೆ ಯಕ್ಷಗಾನ ನೃತ್ಯ ನೀಡಿದ ಸಾಲಿಗ್ರಾಮದ ಲಕ್ಷ್ಮೀಕೃಷ್ಣಮೂರ್ತಿ ಮರಕಾಲ ಅವರ ಪುತ್ರಿ, ಬಹುಮುಖಿ ಪ್ರತಿಭೆ ಸುಶ್ಮಿತಾ ಅವರನ್ನು ಶ್ರೀಮತ್ಸುಬುಧೇಂದ್ರತೀರ್ಥ ಶ್ರೀಪಾದರು ಪ್ರಶಂಸಿಸಿದರು. ಈ ಸಂದರ್ಭ ಸುಶ್ಮಿತಾ ಸಾಲಿಗ್ರಾಮ ತನ್ನ ಕೈಚಳಕದಿಂದ ಶ್ರೀ ರಾಘವೇಂದ್ರಸ್ವಾಮಿಯವರ ಹಾಗೂ ಶ್ರೀ ಸುಭುದೇಂದ್ರಸ್ವಾಮಿಗಳ ನೂಲಿನ ಕಲಾ ಕಸೂತಿಯ ಚಿತ್ರವನ್ನು ರಚಿಸಿ ಸಮರ್ಪಿಸಿದರು.

ನಾಳೆ ಕೋಟ ಅಮೃತೇಶ್ವರೀ ದೇವಸ್ಥಾನದಲ್ಲಿ ಏಕಃ ಪವಿತ್ರ ನಾಗಮಂಡಲೋತ್ಸವ | ಸಾವಿರಾರು ಮಂದಿ ಭಕ್ತರ ಆಗಮನ

14 ಗ್ರಾಮಗಳಿಂದ 3 ದಿನಗಳ ಕಾಲ ಹಸಿರುವಾಣಿ ಹೊರೆಕಾಣಿಕೆ ಸಮರ್ಪಣೆ

ಕೋಟ: ಅಮೃತೇಶ್ವರೀ ದೇವಸ್ಥಾನದ ವತಿಯಿಂದ ಮಾ.1ರಂದು ನಡೆಯುವ ಏಕಃ ಪವಿತ್ರ ನಾಗಮಂಡಲೋತ್ಸವದ ಪೂರ್ವಬಾವಿಯಾಗಿ ಹೊರೆ ಕಾಣಿಕೆ ಸಮರ್ಪಣೆಯ ಸಂಭ್ರಮದ ಸತತ ಮೂರು ದಿನಗಳಿಂದ ಸಾವಿರಾರು ಮಂದಿ ಭಕ್ತರು ಆಗಮಿಸಿ ಹೊರೆ ಕಾಣಿಕೆ ಸಮರ್ಪಿಸಿದರು.



ಬುಧವಾರ, ಗುರುವಾರ, ಶುಕ್ರವಾರ ಬೆಳಗ್ಗಿಯಿಂದ ಸಂಜೆಯವರೆಗೆ ಕೋಟ ಹದಿನಾಲ್ಕು ಗ್ರಾಮಗಳಾದ ಹಾಡಿಕೆರೆ, ಅಚ್ಲಾಡಿ, ಬನ್ನಾಡಿ, ಹಿರೇದೇವಸ್ಥಾನಬೆಟ್ಟು, ಕೋಟತಟ್ಟು ಬಾರಿಕೆರೆ,ಅರ್ಚಕ ಯುವ ಸಂಘ ಕೋಟ, ತೆಕ್ಕಟ್ಟೆ ಗ್ರಾಮಸ್ಥರು ಮಣೂರು ಪಡುಕರೆ, ಮೂಡುಗಿಳಿಯಾರು, ಹಂದಟ್ಟು ಕೋಟ ಹೊಸಬೆಟ್ಟು ಕಾಸನಗುಂದು, ಕೋಟತಟ್ಟು ಪಡುಕರೆ, ಸಾಲಿಗ್ರಾಮ ಕಾರ್ಕಡ, ಪಾರಂಪಳ್ಳಿ, ಕೋಡಿ ಗ್ರಾ.ಪಂ ವ್ಯಾಪ್ತಿ, ಕೋಟ ಪಡುಹರ್ತಟ್ಟು ಮೂಡುಹಡು, ಪಾಂಡೇಶ್ವರ, ಗೋಳಿಗರಡಿ, ಕೋಟತಟ್ಟು ಪಡುಕರೆ, ಐರೋಡಿ ಬಾಳೆಕುದ್ರು, ಮಣೂರು ಮಳಲುತಾಯಿ, ಬೆಟ್ಲಕ್ಕಿ ಚಿತ್ರಪಾಡಿ, ಕಾರ್ಕಡ, ಪಾರಂಪಳ್ಳಿ,, ಕೋಟ ಅಮೃತೇಶ್ವರೀ ಮಹಿಳಾ ಮೀನುಗಾರರ ಸಹಕಾರಿ ಸಂಘ, ಆನೆಗುಡ್ಡೆ ಶ್ರೀವಿನಾಯಕ ದೇಗುಲ, ಮಣೂರು ಮಹಾಲಿಂಗೇಶ್ವರ ದೇಗುಲ ಹೀಗೆ ಅನೇಕ ಭಾಗಗಳಿಂದ ಹೊರೆ ಕಾಣಿಕೆ ಸಮರ್ಪಿಸಲಾಯಿತು.

ವೈಭವದ ಹೊರೆಕಾಣಿಕೆ ಮೆರವಣಿಗೆ

ಸತತ ಮೂರು ದಿನಗಳಿಂದ ಕೋಟದ ಹದಿನಾಲ್ಕು ಗ್ರಾಮಗಳಿಂದ ಆಗಮಿಸಿದ ಹೊರೆಕಾಣಿಕೆಯ ಮೆರವಣಿಗೆಯಲ್ಲಿ ಚಂಡೆವಾದನ, ವಾದ್ಯ ಘೋಷ,ಕುಣಿತ ಭಜನೆ, ಕೀಲು ಕುದುರೆ,ತಟ್ಟಿರಾಯ ವಿವಿಧ ಸ್ತಬ್ಧ ಚಿತ್ರಗಳು ವಿಶೇಷವಾಗಿ ಗಮನ ಸೆಳೆದವು.

ವಿವಿಧ ಭಾಗಗಳ ಗ್ರಾಮಸ್ಥರು ಹೊರೆಕಾಣಿಕೆಯಲ್ಲಿ ಸ್ವಯಂಸೇವಕರಾಗಿ ಭಾಗಿಯಾದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆನಂದ ಸಿ. ಕುಂದರ್, ಸದಸ್ಯರಾದ ರತನ್ ಐತಾಳ್, ಸುಭಾಷ್ ಶೆಟ್ಟಿ ಗಣೇಶ್ ನೆಲ್ಲಿಬೆಟ್ಟು ಶಿವ ಪೂಜಾರಿ, ಸುಧಾ ಎ. ಪೂಜಾರಿ, ಸುಬ್ರಾಯ ಜೋಗಿ, ಜ್ಯೋತಿ ಕಾಂಚನ್, ಚಂದ್ರ ಆಚಾರ್, ಮಾಜಿ ಟ್ರಸ್ಟಿ ಚಂದ್ರ ಪೂಜಾರಿ, ಸುಂದರ್, ಸುಬ್ರಾಯ ಆಚಾರ್, ಸುಶೀಲಾ ಸೋಮಶೇಖರ ,ಕೋಟ ದಿನೇಶ ಗಾಣಿಗ, ಶೇವಧಿ ಸುರೇಶ್ ಗಾಣಿಗ, ಭುಜಂಗ ಗುರಿಕಾರ, ಸುರೇಶ್ ಪಾಂಡೇಶ್ವರ, ರಾಮ ಬಂಗೇರ, ರಮೇಶ್ ಕಾರಂತ, ಜಿ.ವಿಠಲ ಪೂಜಾರಿ, ಕೆ.ವಿ ರಮೇಶ್ ರಾವ್, ಐರೋಡಿ ವಿಠ್ಠಲ ಪೂಜಾರಿ,ರಮೇಶ್ ಮೆಂಡನ್, ರಘು ಮಧ್ಯಸ್ಥ ತಿಮ್ಮ ಕಾಂಚನ್, ರಂಜಿತ್ ಬಾರಿಕೆರೆ,ರಾಜು ಮರಕಾಲ, ಒಳಮಾಡು ಸೋಮಮರಕಾಲ, ಸುರೇಶ್ ಕಾಂಚನ್,ರಾಘವೇಂದ್ರ ಕಾಂಚನ್ , ಗಣೇಶ್ ಪೂಜಾರಿ ಸೇರಿದಂತೆ ಅನೇಕ ಗಣ್ಯರು ಮೊದಲಾದವರು ಉಪಸ್ಥಿತರಿದ್ದರು.